ಮಂಗಳವಾರ, ಜನವರಿ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 25 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಜಾಣ್ಮೆ, ಶಿಸ್ತು, ಸಂಯಮ ಜೊತೆಗೆ ಮನೆಯವರ ಸಹಕಾರ ಇದ್ದಲ್ಲಿ ಮನೆಯಿಂದ ಕೆಲಸ ನಿರ್ವಹಿಸುವುದು ಮತ್ತು ಮನೆಕೆಲಸ ನಿರ್ವಹಿಸುವುದು – ಎರಡೂ ಸರಾಗ.



ಆಳ-ಅಗಲ

ಐಎಎಸ್ ಅಧಿಕಾರಿಗಳ ನಿಯೋಜನೆ: ಕೇಂದ್ರ-ರಾಜ್ಯ ಜಟಾಪಟಿ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,491	17,149	₹50,420 (ಬೆಂಗಳೂರು)	₹66,300 (ಬೆಂಗಳೂರು)	74.60

ಕೋವಿಡ್: ಕೊಂಚ ಇಳಿಮುಖ 5

ಡಿಕೆಶಿ ಜತೆ ಚರ್ಚಿಸಿ ಟಿಕೆಟ್‌ಗೆ ವ್ಯವಸ್ಥೆ ಮಾಡಿಕೊಂಡ ಸಚಿವರು: ಯತ್ನಾಳ

‘ಕಾಂಗ್ರೆಸ್‌ಗೆ ಶಾಸಕರ ವಲಸೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭಾ ಚುನಾವಣೆ ಘೋಷಣೆ ಆದ ತಕ್ಷಣವೇ ಒಂದಷ್ಟು ಸಚಿವರು, ಶಾಸಕರು ಬಿಜೆಪಿಗೆ ರಾಜಿನಾಮೆ ಕೊಟ್ಟು ಹೋಗುತ್ತಾರೆ. ಇವರು ಈಗಾಗಲೇ ಡಿ.ಕೆ.ಶಿವಕುಮಾರ್ ಜತೆಗೆ ಟಿಕೆಟ್ ಬಗ್ಗೆ ಮಾತನಾಡಿದ್ದಾರೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ನೀಡಿದ ಹೇಳಿಕೆ ರಾಜಕೀಯ ವಲಯದಲ್ಲಿ ಚರ್ಚೆಯನ್ನು ಹುಟ್ಟುಹಾಕಿದೆ.

ಬಸನಗೌಡ ಪಾಟೀಲ

ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಜತೆ ಸೋಮವಾರ ಮಧ್ಯಾಹ್ನ ಭೋಜನ ಕೂಟದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಈಗಲೇ ಸಚಿವ ಸಂಪುಟ ಪುನಾರಚನೆ ಮಾಡದಿದ್ದರೆ, ಎಲ್ಲ ಶಾಸಕರು ಬಿಜೆಪಿ ಬಿಟ್ಟು ಹೋಗಬಹುದು. ಉತ್ತರ ಪ್ರದೇಶದಲ್ಲಿ ಆದ ರೀತಿ ಇಲ್ಲೂ ಆಗಬಹುದು’ ಎಂದೂ ಎಚ್ಚರಿಕೆ ನೀಡಿದರು.

ಈ ಮಧ್ಯೆ ಹಲವು ಶಾಸಕರು ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಲೆ ಒತ್ತಡ ಹೇರಿದ್ದಾರೆ. ಆದರೆ, ಸಂಪುಟ ವಿಸ್ತರಣೆ ತೀರ್ಮಾನವನ್ನು ವರಿಷ್ಠರು ತೆಗೆದುಕೊಳ್ಳಬೇಕು ಎಂದು ಸಮಾಧಾನಪಡಿಸುವ ಯತ್ನವನ್ನು ಬೊಮ್ಮಾಯಿ ಮಾಡಿದ್ದಾರೆ.

5ನೇ ಪುಟ ನೋಡಿ

ಅಶೋಕ, ಮಾಧುಸ್ವಾಮಿಗೆ ಇಲ್ಲ ಜಿಲ್ಲಾ ಉಸ್ತುವಾರಿ

ಕೋವಿಡ್ ನಿರ್ವಹಣೆಗೆ ಸೀಮಿತವಾಗಿ ಸಂಪುಟ ಸಹೋದ್ಯೋಗಿಗಳಿಗೆ ಜಿಲ್ಲಾ ಉಸ್ತುವಾರಿ ವಹಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಹಿಂದೆ ಇದ್ದ ಹೊಣೆಗಾರಿಕೆಯನ್ನು ಬದಲಾಯಿಸಿದ್ದಾರೆ. ಕೋವಿಡ್ ನಿರ್ವಹಣೆಯ ಜತೆಗೆ ಜಿಲ್ಲಾ ಉಸ್ತುವಾರಿ ಜವಾಬ್ದಾರಿಯನ್ನು ಹಂಚಿಕೆ ಮಾಡಿದ್ದಾರೆ. ತಾವು ಪ್ರತಿನಿಧಿಸುವ ಜಿಲ್ಲೆಯ ಉಸ್ತುವಾರಿಯನ್ನು ಸಚಿವರಿಗೆ ನೀಡದೇ, ಬೇರೆ ಜಿಲ್ಲೆ ನೀಡಿರುವುದು ವಿಶೇಷ.

ಈ ಸಂಬಂಧ ಸೋಮವಾರ ಸಂಜೆ ಅಧಿಕೃತ ಆದೇಶವನ್ನೂ ಹೊರಡಿಸಲಾಗಿದೆ.ಹಿರಿಯ ಸಚಿವರಾದ ಆರ್.ಅಶೋಕ ಮತ್ತು ಜೆ.ಸಿ.ಮಾಧುಸ್ವಾಮಿ ಅವರಿಗೆ ಯಾವುದೇ ಜಿಲ್ಲೆಗಳ ಉಸ್ತುವಾರಿ ನೀಡಿಲ್ಲ. ಕೆ.ಗೋಪಾಲಯ್ಯ, ಶಂಕರಪಾಟೀಲ ಮುನೇನಕೊಪ್ಪ ಮತ್ತು ಬಿ.ಸಿ.ಪಾಟೀಲ ಅವರಿಗೆ ತಲಾ ಎರಡು ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ.

5ನೇ ಪುಟ ನೋಡಿ

‘ಸಂಪರ್ಕದಲ್ಲಿರುವವರ ಮಾಹಿತಿ ಕೊಡಲ್ಲ’



‘ಬಿಜೆಪಿ ಮತ್ತು ಇತರ ಪಕ್ಷಗಳ ನಾಯಕರು ನಮ್ಮ ಜತೆ ಸಂಪರ್ಕದಲ್ಲಿ ಇರುವ ವಿಚಾರವನ್ನು ಬಹಿರಂಗವಾಗಿ ಮಾತನಾಡಲು ಸಾಧ್ಯವಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

5ನೇ ಪುಟ ನೋಡಿ

‘ಸಂಪುಟ ವಿಸ್ತರಣೆ ವರಿಷ್ಠರ ತೀರ್ಮಾನ’

ಬೆಂಗಳೂರು: ‘ಸಂಪುಟದಲ್ಲಿ ನಾಲ್ಕು ಸ್ಥಾನಗಳು ಖಾಲಿ ಇವೆ. ಆಕಾಂಕ್ಷಿಗಳು ಸಚಿವ ಸ್ಥಾನದ ಮೇಲೆ ನಿರೀಕ್ಷೆ ಇಟ್ಟಿರುವುದರಲ್ಲಿ ತಪ್ಪೇನಿಲ್ಲ. ಅದನ್ನು ಯಾವಾಗ ಮಾಡಬೇಕು? ಯಾವ ರೀತಿ ಮಾಡಬೇಕು ಎನ್ನುವುದು ಪಕ್ಷದ ವರಿಷ್ಠರ ಗಮನದಲ್ಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ನಾನೂ ಪಕ್ಷದ ವರಿಷ್ಠ ಗಮನಕ್ಕೆ ತರುತ್ತೇನೆ. ವರಿಷ್ಠರು ಯಾವಾಗ ಕರೆದು ಮಾತನಾಡುತ್ತಾರೊ ಆಗ ಎಲ್ಲ ವಿವರಗಳನ್ನು ಕೊಡುತ್ತೇನೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

5ನೇ ಪುಟ ನೋಡಿ

ಪ್ರಶ್ನೋತ್ತರ

ಅಂಕಣ ಮತ್ತೆ ಆರಂಭವಾಗುತ್ತಿದೆ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ
ಪ್ರಮೋದ ಶ್ರೀಕಾಂತ ದೈತೋಟ ಅವರು ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ.
ಬುಧವಾರದಿಂದ ಅಂಕಣ ಆರಂಭ

ಕೇವಲ 2.10 ಲಕ್ಷ ಟನ್ ಉತ್ಪನ್ನ ಖರೀದಿಗೆ ಕೇಂದ್ರ ಸೂಚನೆ

ರಾಗಿ ಖರೀದಿ: ನೋಂದಣಿ ಸ್ಥಗಿತ

• ಆರ್. ಜಿತೇಂದ್ರ

ರಾಮನಗರ: ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರವು ರಾಜ್ಯದಿಂದ ಕನಿಷ್ಠ ಬೆಂಬಲ ಬೆಲೆ ಅಡಿ ಖರೀದಿಸುವ ರಾಗಿಗೆ ಮಿತಿ ಹೇರಿದ್ದು, ಇದರಿಂದ ರಾಜ್ಯದ ಖರೀದಿ ಕೇಂದ್ರಗಳಲ್ಲಿ ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡಿದೆ. ಕೋವಿಡ್, ಅತಿವೃಷ್ಟಿ ನಡುವೆಯೂ ರಾಗಿ ಬೆಳೆದವರು ಇದರಿಂದ ಆತಂಕಕ್ಕೆ ಒಳಗಾಗಿದ್ದಾರೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮದ ಮೂಲಕ ರಾಜ್ಯದಲ್ಲಿ ಬೆಂಬಲ ಬೆಲೆ ಯೋಜನೆಯ ಅಡಿ ಉತ್ಪನ್ನ ಖರೀದಿ ಮಾಡುತ್ತಿವೆ. ಈ ವರ್ಷ ಜನವರಿ 1ರಿಂದ ರಾಗಿ ಖರೀದಿ ಪ್ರಕ್ರಿಯೆ ಆರಂಭಿಸಿದ್ದು, ರಾಗಿ ಬೆಳೆದವರು ನೋಂದಣಿ ಮಾಡಿಕೊಳ್ಳುವಂತೆ ಸರ್ಕಾರ ಸೂಚಿಸಿತ್ತು.

5ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಬೆಲೆ ಕುಸಿತದ ಆತಂಕ

ಒಂದು ವೇಳೆ ಸರ್ಕಾರ ಬೆಂಬಲ ಬೆಲೆ ಯೋಜನೆ ಅಡಿ ರಾಗಿ ಖರೀದಿಯನ್ನು ಅರ್ಧಕ್ಕೆ ನಿಲ್ಲಿಸಿದರೆ ಮಿಕ್ಕೆಲ್ಲ ಉತ್ಪನ್ನ ಮುಕ್ತ ಮಾರುಕಟ್ಟೆ ಪ್ರವೇಶಿಸಲಿದ್ದು, ಇದರಿಂದ ಬೆಲೆ ಕುಸಿಯುವ ಆತಂಕ ಇದೆ. ಸದ್ಯ ಮುಕ್ತ ಮಾರುಕಟ್ಟೆಯಲ್ಲಿ ರಾಗಿ ಬೆಲೆ ಪ್ರತಿ ಕ್ವಿಂಟಲ್‌ಗೆ ಸರಾಸರಿ ₹2800–3000 ಇದೆ. ಕಳೆದ ವರ್ಷ ಸರ್ಕಾರವೇ ₹3295 ಬೆಲೆ ನೀಡಿ ರೈತರಿಂದ ರಾಗಿ ಖರೀದಿ ಮಾಡಿತ್ತು. ರಾಮನಗರ ಜಿಲ್ಲೆಯಲ್ಲಿ ಈ ವರ್ಷ ಅತಿವೃಷ್ಟಿ ನಡುವೆಯೂ 7,28,300 ಕ್ವಿಂಟಲ್ ರಾಗಿ ಉತ್ಪನ್ನ ಸಿಗಲಿದೆ ಎಂದು ಕೃಷಿ ಇಲಾಖೆ ಅಂದಾಜು ಮಾಡಿದೆ.

ಸರ್ಕಾರ ನಿಗದಿಪಡಿಸಿದಷ್ಟು ಪ್ರಮಾಣದ ರಾಗಿ ಖರೀದಿಗೆ ರೈತರಿಂದ ನೋಂದಣಿ ಆಗಿದೆ. ಸದ್ಯ ಈ ಪ್ರಕ್ರಿಯೆ ಸ್ಥಗಿತಗೊಂಡಿದ್ದು, ನೋಂದಣಿ ಮಾಡಿದವರಿಂದ ಖರೀದಿಸಲಾಗುವುದು

ಜಯಣ್ಣ, ಜಿಲ್ಲಾ ವ್ಯವಸ್ಥಾಪಕ ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ

3 ಎಕರೆ ಹೊಲದಲ್ಲಿ ರಾಗಿ ಬೆಳೆದಿದ್ದು, 50–60 ಕ್ವಿಂಟಲ್‌ನಷ್ಟು ಉತ್ಪನ್ನ ಸಿಗಬಹುದು. ಸರ್ಕಾರ ಖರೀದಿ ಮಾಡದೇ ನಾವೇ ಮುಕ್ತ ಮಾರುಕಟ್ಟೆಯಲ್ಲಿ ಮಾರಿದರೆ ಬೆಲೆ ಸಿಗುವುದಿಲ್ಲ

ರಮೇಶ್
ರೈತ, ಜಾಲಮಂಗಲ

ಪಿಎಸ್‌ಐ ನೇಮಕಾತಿಯಲ್ಲೂ ಅಕ್ರಮ?

ಬೆಂಗಳೂರು: ನೇಮಕಾತಿಯಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಕ್ರಮ ಆರೋಪ ಪೊಲೀಸ್ ನೇಮಕಾತಿ ವಿಭಾಗಕ್ಕೂ ಅಂಟಿಕೊಂಡಿದೆ. ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ- ಸಿವಿಲ್) 545 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಅನುಮಾನ ವ್ಯಕ್ತಪಡಿಸಿ ಹಲವು ಅಭ್ಯರ್ಥಿಗಳು ಪಿಎಸ್‌ಐ (ಸಿವಿಲ್) ನೇಮಕಾತಿ ಸಮಿತಿಯ ಅಧ್ಯಕ್ಷರಾಗಿರುವ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ (ಎಡಿಜಿಪಿ – ನೇಮಕಾತಿ) ದೂರು ನೀಡಿದ್ದಾರೆ.

5

ಪೂರ್ವ ಯುರೋಪ್‌ಗೆ ಹಡಗು, ಯುದ್ಧ ವಿಮಾನ: ನ್ಯಾಟೊ

ಬ್ರಸೆಲ್ಸ್ (ಎಎಫ್‌ಪಿ): ಉತ್ತರ ಅಟ್ಲಾಂಟಿಕ್ ಒಕ್ಕೂಟದ (ನ್ಯಾಟೊ) ಮಿತ್ರ ರಾಷ್ಟ್ರಗಳು ಸೇನೆಯನ್ನು ಸಜ್ಜಾಗಿರಿಸಿದ್ದು ಪೂರ್ವ ಯುರೋಪಿನತ್ತ ಹಡಗುಗಳು ಮತ್ತು ಯುದ್ಧ ವಿಮಾನಗಳನ್ನು ಕಳುಹಿಸಿವೆ ಎಂದು ನ್ಯಾಟೊ ಸೋಮವಾರ ಹೇಳಿದೆ.

10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸುಗಮ ಪರೀಕ್ಷಾ ವ್ಯವಸ್ಥೆಗೆ ಹೊಸ ತಂತ್ರಾಂಶ – ಸಚಿವ ಅಶ್ವತ್ಥನಾರಾಯಣ

ಅಂಕಪಟ್ಟಿ ಪೂರೈಕೆಗೆ 'ಇ-ಸಹಮತಿ'

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ವ್ಯವಸ್ಥೆಯನ್ನು ಸುಗಮಗೊಳಿಸಲು 'ಇ-ಸಹಮತಿ' ತಂತ್ರಾಂಶ ಅಭಿವೃದ್ಧಿಪಡಿಸಲಾಗಿದ್ದು, ಇದರಿಂದ ನಕಲಿ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳ ದಂಧೆಗೆ ಕಡಿವಾಣ ಬೀಳಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಹೊಸ ತಂತ್ರಾಂಶಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, 'ಈ ವ್ಯವಸ್ಥೆಯಿಂದ ವಿಶ್ವವಿದ್ಯಾಲಯಗಳು ಪರೀಕ್ಷೆ ಮತ್ತು ಅಂಕಪಟ್ಟಿಗಳಿಗಾಗಿ ಖರ್ಚು ಮಾಡುತ್ತಿದ್ದ ಸುಮಾರು ₹ 60 ಕೋಟಿ ಉಳಿತಾಯ ಆಗಲಿದೆ. ಮಾನ್ಯತೆ ಹೊಂದಿರುವ 3,400ಕ್ಕೂ ಹೆಚ್ಚು ಕಾಲೇಜುಗಳ 16 ಲಕ್ಷ ವಿದ್ಯಾರ್ಥಿಗಳಿಗೆ ಲಾಭ ಆಗಲಿದೆ' ಎಂದರು. ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ ಯೋಜನೆಯಡಿ ಇವುಗಳನ್ನು ಅಭಿವೃದ್ಧಿಪಡಿಸಲಾಗಿದೆ. 10 ಮಾಡ್ಯೂಲ್‌ಗಳನ್ನು ಒಳಗೊಂಡಿರುವ ಈ ಉನ್ನತ ಶಿಕ್ಷಣ 2021ರ ಆಗಸ್ಟ್ ಮತ್ತು ಡಿಸೆಂಬರ್ ತಿಂಗಳಲ್ಲಿ ಪ್ರವೇಶಾತಿ ಹಾಗೂ ತರಗತಿ ನಿರ್ವಹಣೆ ತಂತ್ರಾಂಶಗಳನ್ನು ಅಳವಡಿಸಲಾಗಿದೆ. ಉಳಿದವುಗಳನ್ನು ಜೂನ್ ವೇಳೆಗೆ ಅಳವಡಿಸಲಾಗುವುದು. ಇದರ ಅನುಷ್ಠಾನಕ್ಕೆ ಸಹಾಯವಾಣಿ ವ್ಯವಸ್ಥೆಯೂ ಇರಲಿದೆ. ಇಂಥ ವ್ಯವಸ್ಥೆ ಬೇರೆ ಯಾವ ರಾಜ್ಯದಲ್ಲೂ ಇಲ್ಲ' ಎಂದರು.

ಮಹಿಳಾ ವಿವಿ ಮುಚ್ಚುವುದಿಲ್ಲ

ಬೆಂಗಳೂರು: 'ವಿಜಯಪುರದಲ್ಲಿರುವ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವನ್ನು ಮುಚ್ಚುವ ಪ್ರಶ್ನೆಯೇ ಇಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅಶ್ವತ್ಥನಾರಾಯಣ, 'ಸಮಕಾಲೀನ ಜಗತ್ತಿನಲ್ಲಿ ಮಹಿಳೆಯರ ಕುರಿತ ಅಧ್ಯಯನ ವಿಸ್ತೃತವಾಗಿ ನಡೆಯಬೇಕಾಗಿದೆ. ಅದಕ್ಕೆ ತಕ್ಕಂತೆ ಈ ವಿಶ್ವವಿದ್ಯಾಲಯದ ಚಟುವಟಿಕೆಯನ್ನು ವಿಸ್ತರಿಸಲು ಚಿಂತನೆ ನಡೆಸಲಾಗುತ್ತಿದೆ. ಆದರೆ, ಕೆಲವರು ವಿನಾ ಕಾರಣ ಗುಲ್ಲೆಬ್ಬಿಸುತ್ತಿರುವುದು ವಿಷಾದನೀಯ' ಎಂದರು.

'ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹೊಸ ಕ್ಯಾಂಪಸ್ ನಿರ್ಮಿಸುವುದರಿಂದ ಹಿಂದಕ್ಕೆ ಸರಿಯುವುದಿಲ್ಲ. ಈ ವಿಶ್ವವಿದ್ಯಾಲಯ 13 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಅದಕ್ಕೊಂದು ಸ್ವತಂತ್ರ ಮತ್ತು ಸುಸಜ್ಜಿತ ಕ್ಯಾಂಪಸ್ ಇರಲಿಲ್ಲ. ನಮ್ಮ ಸರ್ಕಾರ ಅದನ್ನು ಮಾಡುತ್ತಿದೆ ಅಷ್ಟೆ' ಎಂದರು.

SAD DEMISE

DOB: 12.05.1939 DOD: 24.01.2022

We regret to inform the passing away of

Sri K V Reddy

President of

SHREE VEMANA SOUHARDA CREDIT CO-OPERATIVE LTD

Deeply mourned by

Family, friends, Staff Members and Board of Directors

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: jscbinfo@jscbl.com, ಶಾಖೆ: ವಿಜಯನಗರ

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)

ಶ್ರೀ ಲೋಕೇಶ್ ಸಿ. ಬಿನ್ ಲೇಟ್ ಚನ್ನಿಗಪ್ಪ

ಶ್ರೀಮತಿ ಮಧು W/o. ಶ್ರೀ ಲೋಕೇಶ್ ಸಿ.

ಶ್ರೀಮತಿ ಕಮಲಮ್ಮ W/o. ಲೇಟ್ ಚನ್ನಿಗಪ್ಪ,

ಕೆಳಸಹಿದಾರರು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ. ನ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು, ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗಾಗಿ ನೋಟೀಸ್‌ನಲ್ಲಿ ತಿಳಿಸಿರುವ ಸಾಲದ ಮೊತ್ತ ದಿನಾಂಕ 17.09.2021 ರಂದು ಇದ್ದಂತೆ ರೂ. 7,67,52,463/– (ಏಳು ಕೋಟಿ ಅರವತ್ತೇಳು ಲಕ್ಷದ ಐವತ್ತೆರಡು ಸಾವಿರದ ನಾಲ್ಕು ನೂರ ಅರವತ್ತಮೂರು ರೂಪಾಯಿಗಳು ಮಾತ್ರ) ಅನ್ನು ಮರುಪಾವತಿ ಮಾಡುವಂತೆ ಸಾಲಗಾರರಾದ **ಮೆ// ಮೋಹನ್ ಎಂಟರ್‌ಪ್ರೈಸಸ್**, ಇದರ ಪಾಲುದಾರರಾದ **1. ಶ್ರೀ ಲೋಕೇಶ್ ಸಿ. ಬಿನ್ ಲೇಟ್ ಚನ್ನಿಗಪ್ಪ, 2.ಶ್ರೀಮತಿ ಮಧು**, ಶ್ರೀ ಲೋಕೇಶ್ ಸಿ. ಇವರ ಪತ್ನಿ, **3. ಶ್ರೀಮತಿ ಕಮಲಮ್ಮ**, ನಂ. 112/291 ಬಿ, ಹೆಗ್ಗನಹಳ್ಳಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560 091, ಇವರಿಂದ ಪ್ರತಿನಿಧಿಸಲ್ಪಡುವುದು. ಹಾಗೂ ಶ್ರೀ ಲೋಕೇಶ್ ಸಿ. ಬಿನ್ ಲೇಟ್ ಚನ್ನಿಗಪ್ಪ, ಶ್ರೀಮತಿ ಮಧು, ಶ್ರೀ ಲೋಕೇಶ್ ಸಿ. ಇವರ ಪತ್ನಿ, ನಂ. 63, 8ನೇ "ಎ" ಮುಖ್ಯರಸ್ತೆ, ತಿಮ್ಮಯ್ಯ ಲೇಔಟ್, 4ನೇ ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು – 560 0 79, ಶ್ರೀಮತಿ ಕಮಲಮ್ಮ, ನಂ. 17/3, ಮಾಗಡಿ ಮುಖ್ಯರಸ್ತೆ, ಸುಂಕದಕಟ್ಟೆ, ಬೆಂಗಳೂರು – 560 091, ಇಲ್ಲಿನ ನಿವಾಸಿಗಳು ಇವರಿಗೆ ಕರೆ ನೀಡಿ, ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ 2002 ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ದಿನಾಂಕ 21–09–2021 ರಂದು ಡಿಮ್ಯಾಂಡ್ ನೋಟೀಸ್ ನೀಡಿದ್ದರು.

ಇದರಂತೆ ಸಾಲಗಾರರು ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13 ರ ಉಪ ಪ್ರಕರಣ (4) ರ ಅನ್ವಯ ಇವರಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ 24ನೇ ಜನವರಿ 2022 ರಂದು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಸದರಿ ಸ್ವತ್ತಿನ ಸಂಬಂಧ ಯಾರೂ ಯಾವುದೇ ವ್ಯವಹಾರಿಸಬಾರದು, ಒಂದು ವೇಳೆ ಯಾರಾದರೂ ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹರಿಸಿದ್ದೇ, ಆದರೆ, ಅದು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ ಶಾಖೆ, ಬೆಂಗಳೂರು ಇವರಿಗೆ (1) ಸಾಲದ ಸಂಖ್ಯೆ. ಬಿಎಲ್–86, ಒಡಿ – 202115@ ವಿಜಯನಗರ ಮತ್ತು ಬಿಎಲ್–72@ ಆರ್.ಆರ್. ನಗರ ಶಾಖೆಗೆ, ದಿನಾಂಕ 24–01–2022 ರಂದು ಇದ್ದಂತೆ ಸಾಲದ ಮೊತ್ತ ರೂ. 7,28,83,016/– (ಏಳು ಕೋಟಿ ಇಪ್ಪತ್ತೆಂಟು ಲಕ್ಷದ ಎಂಬತ್ತು ಮೂರು ಸಾವಿರದ ಹದಿನಾರು ರೂಪಾಯಿಗಳು ಮಾತ್ರ) ಪಾವತಿ ಮಾಡುವುದುಕ್ಕೆ ಒಳಪಟ್ಟಿರುತ್ತದೆ.

ಭದ್ರತೆಯಾಗಿ ನೀಡಿರುವ ಸ್ವತ್ತನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಕಾಲಾವಕಾಶದ ಬಗ್ಗೆ ಕಾಯ್ದೆಯ ಪ್ರಕರಣ 13 (8)ರ ಉಪಬಂಧಗಳನ್ನು ನೋಡಬೇಕಾಗಿ ಸಾಲಗಾರರಿಗೆ ಸಲಹೆ ನೀಡಲಾಗಿದೆ.

ಸಾಲಗಾರರು ಅಡಮಾನ ಮಾಡಿದ ಆಸ್ತಿಗಳ ವಿವರ ಮತ್ತು ಆಧಾರ ಮಾಡಿರುವ ಸ್ವತ್ತುಗಳ ವಿವರ

ಹೆಗ್ಗನಹಳ್ಳಿ ಮುಖ್ಯರಸ್ತೆ, ಹೆಗ್ಗನಹಳ್ಳಿ, ವಾರ್ಡ್ ನಂ. 71, ಬೆಂಗಳೂರು–560 091 ಇಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ : (251 + 289.11)2 ಅಡಿ, ಉತ್ತರದಿಂದ ದಕ್ಷಿಣಕ್ಕೆ : (443.7 + 446.3)2 ಅಡಿ ವಿಸ್ತೀರ್ಣವುಳ್ಳ, ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರಿಂದ ಪರಿವರ್ತನೆಯಾಗಿರುವ (ಪರಿವರ್ತನೆ ನಂ. ಎಎಲ್‌ಎನ್‌ಎಸ್‌ಆರ್ 224/81–82, ಎಎಲ್‌ಎನ್‌ಡಿಆರ್ 86/82–83 ದಿನಾಂಕ 01.06.1982) ಮೋಹನ್ ಥಿಯೇಟರ್ ಮತ್ತು ಕೈಗಾರಿಕಾ ಶೆಡ್‌ಗಳು ಒಳಗೊಂಡಿರುವ ನಂ. 11/1, ಬಿ.ಬಿ.ಎಂ.ಪಿ. ಖಾತಾ ನಂ. 96, 291/ಬಿ, 11/1 ಹೊಂದಿರುವ ಸ್ಥಿರಾಸ್ತಿ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ಹೆಗ್ಗನಹಳ್ಳಿ ಮುಖ್ಯರಸ್ತೆ; ಉತ್ತರಕ್ಕೆ: ಖಾಸಗಿ ಸ್ವತ್ತು; ದಕ್ಷಿಣಕ್ಕೆ: ಖಾಸಗಿ ಸ್ವತ್ತು.

ಈ ಹಿಂದಿನ ದಿನಾಂಕ 08–12–2021 ರಂದು ನೀಡಿದ ಸ್ವಾಧೀನ ನೋಟೀಸನ್ನು ಹಿಂಪಡೆಯಲಾಗಿದೆ.

ಸಹಿ/–
ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ಸ್ಥಳ : ಬೆಂಗಳೂರು
ದಿನಾಂಕ : 24/01/2022

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿ, (ಮೆಟ್ರೋ ರೈಲು ಯೋಜನೆ)
ನಂ.14/3, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560 001

ಸಂಖ್ಯೆ: ಕೆಐಎಡಿಬಿ/ಭೂಸ್ವಾ/ಮೆಟ್ರೋ/ಆರ್6–2113/2021–22 ದಿನಾಂಕ: 20.01.2022

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು 2ನೇ ಹಂತದ **"ಮೆಟ್ರೋ ರೈಲು ಯೋಜನೆಯ"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾರಂಭಿಕ ಅಧಿಸೂಚನೆಯನ್ನು ಸಂಖ್ಯೆ: **ಸಿಐ 212 ಎಸ್‌ಪಿಕ್ಯೂ(ಇ) 2021** ದಿನಾಂಕ **11.01.2022 ನ್ನು** ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ: 11–01–2022** ರಂದು ಪ್ರಕಟಣೆ ಹೊರಡಿಸಿದೆ ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ (ಮೆಟ್ರೋ) ಬೆಂಗಳೂರು ರವರ ಕಛೇರಿಯಲ್ಲಿ ದಿನಾಂಕ:**15.02.2022 ರಂದು ಬೆಳಿಗ್ಗೆ 11.30 ಗಂಟೆಗೆ** ವಿಚಾರಣೆ ನಿಗಧಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯದ ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ, ವೈಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರಧನ ನಿಗಧಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ.	ಖಾತಾದಾರರ ಹೆಸರು	ಗುರುತಿನ ಸಂಖ್ಯೆ	ಎಲ್‌ಎ/ ಸಿಟಿಎಸ್ ಸರ್ವೆ ನಂಬರ್	ಸ್ವತ್ತಿನ ಸಂಖ್ಯೆ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಚ.ಮೀ.
ವಿಚಾರಣೆ ದಿನಾಂಕ: 15–02–2022 ವಿಚಾರಣೆ ಸಮಯ: ಬೆಳಿಗ್ಗೆ 11.30 ಗಂಟೆಗೆ ಡೈರಿ ವೃತ್ತ ನಿಲ್ದಾಣ ವಾರ್ಡ್ :53 ಲಕ್ಕಸಂದ್ರ ಗ್ರಾಮ : ಆಡುಗೋಡಿ ಹೋಬಳಿ : ಬೇಗೂರು–1 ತಾಲ್ಲೂಕು : ಬೆಂಗಳೂರು ದಕ್ಷಿಣ ಜಿಲ್ಲೆ : ಬೆಂಗಳೂರು					
1.	ಕಾಂಚನದೇವಿ ಮಹೇಶ್ವರಿ	DC-R6-UG-P17A	ಸ.ನಂ.6	63	40.90
2.	ರಾಜಕುಮಾರ ಲಡ್ಡ ಮತ್ತು ಇತರರು	DC-R6-UG-P18A	ಸ.ನಂ.6	ಜೆ.ಎನ್.55 ಪಿಆರ್6/89–90	53.30
				ಒಟ್ಟು(ಎ)	**94.20**
ಮೈಕೋ ಇಂಡಸ್ಟ್ರೀಸ್ ನಿಲ್ದಾಣ ವಾರ್ಡ್: 62 ಹೊಂಬೇಗೌಡ ನಗರ ಗ್ರಾಮ: ಆಡುಗೋಡಿ ಹೋಬಳಿ : ಬೇಗೂರು–1 ತಾಲ್ಲೂಕು : ಬೆಂಗಳೂರು ದಕ್ಷಿಣ ಜಿಲ್ಲೆ : ಬೆಂಗಳೂರು					
3.	ಜೈಪ್ರಕಾಶ್ ಅಗರವಾಲ, ನರೇಶ್ ಅಗರವಾಲ	MI-R6-UG-P4A	ಸ.ನಂ.21	63–30–1/03	40.15
4.	1) ಸೈಯದ್ ಜಮೀಲುದ್ದಿನ್, 2) ಸೈಯದ್ ಮುಜೀರುದ್ದೀನ್ ಬಿನ್ ಸೈಯದ್ ಬಷೀರ್ ಮತ್ತು ಇತರರು	MI-R6-UG-P5A	ಸ.ನಂ.21	63–30–1/02	22.71
5.	ಸೈಯದ್ ಅಬ್ದುಲ್ ಮಲ್ಲಿಕ್	MI-R6-UG-P6A	ಸ.ನಂ.21	63–30/1/2–2	15.17
6.	ರಫೀಕಾ ಬೇಗಂ ಕೋಂ ಸೈಯದ್ ಹಸನ್ ಉರುಫ್ ಚಾಂದ್ ಪಾಷ	MI-R6-UG-P8A	ಸ.ನಂ.21	63–30–1/7–1	16.68
7.	1) ಕೆ. ಆಶೀಪ್, 2) ಕೆ. ಅಸ್ಲಾಂ, 3) ಕೆ. ಇಸ್ಮಾಯಿಲ್ 4) ಕೆ. ಮುಸ್ತಾಪ್ ಬಿನ್ ಅಬ್ದುಲ್ ಖಲೀಲ್	MI-R6-UG-P9A	ಸ.ನಂ.21	63–30–17/01	37.84 11.09
8.	ಲಿಯಾಕತ್ ಆಲಿಖಾನ್ ಅಲಿಯಾಸ್ ಫಾರೂಖ್	MI-R6-UG-P10A	ಸ.ನಂ.21	63–30–21/2	19.75
9.	1) ಆಧೀಲ್ ಖಾನ್ 2) ಫಜೀಲ್ ಖಾನ್ 3) ನಜೀರ್ ಖಾನ್ 4) ನಧೀರ್ ಖಾನ್ ಬಿನ್ ಓಭೇದುಲ್ಲಾ	MI-R6-UG-P11A	ಸ.ನಂ.21	63–30–1/12	16.40
10.	ರಾಮಚಂದ್ರಯ್ಯ ಜಿ.ಸಿ ಬಿನ್ ಜಿ. ಚಿನ್ನಯ್ಯ	MI-R6-UG-P20A	ಸ.ನಂ.23	62–64–1/1	41.51
11.	ಮೆ॥ ಕ್ವೀನ್ ಗ್ರೇನಿಯಾರ್ ಪ್ರೈ.ಲಿ. ರವೀಂದ್ರ ಕುಮಾರ ಗೋಯಂಕ	MI-R6-UG-P21A	ಸ.ನಂ.23	62–64–1/2	43.78
12.	ಜಬೀರ್ ಖಾನ್, ಖರೀಮ್‌ಖಾನ್ ಬಿನ್ ಅಫೀಜ್‌ಖಾನ್	MI-R6-UG-P22A	ಸ.ನಂ.23	62–65–1/1	52.26
	ವಿ. ಶಶಿಕುಮಾರ್ ಮತ್ತು ಇತರರು			62–65–1/1	55.20
13.	ಮೆ॥ ಸಪ್ತಗಿರಿ ಎಂಟರ್ ಪ್ರೈಸಸ್	MI-R6-UG-P23A	ಸ.ನಂ.23	62–63–35/2–35/3	120.37
14.	ಕೆ.ಆನಂದ್	MI-R6-UG-P31C	ಸ.ನಂ.23, ಸ.ನಂ.24	62–63–37	17.20
15.	1. ಧನಲಕ್ಷ್ಮಿ 2. ಫಮಿದಾ ಬೇಗಂ	MI-R6-UG-P38A	ಸ.ನಂ. 35	62–63–36/3	32.83 9.98
				ಒಟ್ಟು (ಬಿ)	**552.92**
				ಒಟ್ಟು (ಎ+ ಬಿ)	**647.12**

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ, (ಮೆಟ್ರೋ ರೈಲು ಯೋಜನೆ), ನೃಪತುಂಗ ರಸ್ತೆ, ಬೆಂಗಳೂರು.

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: jscbinfo@jscbl.com, ಶಾಖೆ: ಮಹಾಲಕ್ಷ್ಮೀಪುರಂ

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)



ಶ್ರೀ ಹೆಚ್.ಡಿ. ನಾರಾಯಣ್ ಬಾಬು S/o. ಹೆಚ್.ಎನ್ ದ್ವಾರಕನಾಥ್

ಶ್ರೀಮತಿ ಪೂರ್ಣಿಮ ನಾರಾಯಣ್ W/o. ಹೆಚ್.ಡಿ. ನಾರಾಯಣ್ ಬಾಬು

ಕೆಳಸಹಿದಾರರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ. ನ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು, ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗಾಗಿ ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತ ದಿನಾಂಕ 11.11.2021 ರಂದು ಇದ್ದಂತೆ ರೂ. 1,20,97,272/– (ಒಂದು ಕೋಟಿ ಇಪ್ಪತ್ತು ಲಕ್ಷದ ತೊಂಭತ್ತ ಏಳು ಸಾವಿರದ ಎರಡು ನೂರ ಎಪ್ಪತ್ತ ಎರಡು ರೂಪಾಯಿಗಳು ಮಾತ್ರ) ಮರು ಪಾವತಿ ಮಾಡುವಂತೆ ಸಾಲಗಾರರುಗಳಾದ **ಮೆ// ನಾರಾಯಣ್ ಎಂಟರ್‌ಪ್ರೈಸಸ್. ಇದರ ವ್ಯವಸ್ಥಾಪಕ ಪಾಲುದಾರರುಗಳಾದ (1) ಶ್ರೀ ಹೆಚ್.ಡಿ. ನಾರಾಯಣ್ ಬಾಬು ಬಿನ್ ಹೆಚ್.ಎನ್ ದ್ವಾರಕನಾಥ್ (2) ಶ್ರೀಮತಿ ಪೂರ್ಣಿಮ ನಾರಾಯಣ್, ಶ್ರೀ ಹೆಚ್.ಡಿ. ನಾರಾಯಣ್ ಬಾಬು ಇವರ ಪತ್ನಿ ಇವರಿಂದ ಪ್ರತಿನಿಧಿಸಲ್ಪಡುವುದು. ಇದು ತನ್ನ ನೋಂದಾಯಿತ ಕಚೇರಿ ಯೂನಿಟ್ ನಂ. 101/104, ನಂ.54, ಬ್ರಿಗೇಡ್ ಲಿಂಕ್ಸ್, 1ನೇ ಮಹಡಿ, 1ನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020** ಇಲ್ಲಿನ ನಿವಾಸಿಗಳು, ಇವರಿಗೆ ಕರೆ ನೀಡಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ 2002 ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ದಿನಾಂಕ 11–11–2021 ರಂದು ಡಿಮ್ಯಾಂಡ್ ನೋಟೀಸ್ ನೀಡಿದ್ದರು.

ಇದರಂತೆ ಸಾಲಗಾರರು ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13 ರ ಉಪ ಪ್ರಕರಣ (4) ರ ಅನ್ವಯ ಇವರಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ 21ನೇ ಜನವರಿ 2022 ರಂದು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಸದರಿ ಸ್ವತ್ತಿನ ಸಂಬಂಧ ಯಾರೂ ಯಾವುದೇ ವ್ಯವಹಾರಿಸಬಾರದು, ಒಂದು ವೇಳೆ ಯಾರಾದರೂ ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹರಿಸಿದ್ದೇ ಆದರೆ ಅದು ಜನತಾ ಸೇವಾ ಕೋಆಪರೇಟಿವ್ ಬ್ಯಾಂಕ್ ಲಿ., ಮಹಾಲಕ್ಷ್ಮೀಪುರಂ, ಬೆಂಗಳೂರು ಇವರಿಗೆ ಸಾಲದ ಸಂ. ಬಿಎಲ್/434ರ ಬಗ್ಗೆ ದಿನಾಂಕ 21.01.2022 ರಂದು ಇದ್ದಂತೆ ರೂ. 1,24,18,658/–(ಒಂದು ಕೋಟಿ ಇಪ್ಪತ್ತ ನಾಲ್ಕು ಲಕ್ಷ ಹದಿನೆಂಟು ಸಾವಿರದ ಆರುನೂರ ಐವತ್ತ ಎಂಟು ರೂಪಾಯಿಗಳು ಮಾತ್ರ) ಪಾವತಿ ಮಾಡುವುದುಕ್ಕೆ ಒಳಪಟ್ಟಿರುತ್ತದೆ.

ಭದ್ರತೆಯಾಗಿ ನೀಡಿರುವ ಸ್ವತ್ತನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಕಾಲಾವಕಾಶದ ಬಗ್ಗೆ ಕಾಯ್ದೆಯ ಪ್ರಕರಣ 13 (8)ರ ಉಪಬಂಧಗಳನ್ನು ನೋಡಬೇಕಾಗಿ ಸಾಲಗಾರರಿಗೆ ಸಲಹೆ ನೀಡಲಾಗಿದೆ.

ಸ್ಥಿರಾಸ್ತಿಯ ವಿವರ

ಷೆಡ್ಯೂಲ್–ಎ ಸ್ವತ್ತು

1ನೇ ಮುಖ್ಯ ರಸ್ತೆ, ಕಾರ್ಪೋರೇಷನ್ ವಿಭಾಗ ಸಂ. 19, ಶೇಷಾದ್ರಿಪುರಂ, ಬೆಂಗಳೂರು–560020 ಇಲ್ಲಿರುವ ಮುನಿಸಿಪಲ್ ನಂ. 66 ಹೊಂದಿರುವ ನಂತರ ನಂ. 29 ಮತ್ತು ಆನಂತರ ನಂ. 30/32 ಮತ್ತು ತದನಂತರ ನಂ. 32/54. ತರುವಾಯ ನಂ. 54/1 ಹೊಂದಿರುವ ಹಿಂಭಾಗದಲ್ಲಿ ಕಟ್ಟಡಗಳನ್ನು ಒಳಗೊಂಡಿರುವ ಮತ್ತು ಮುಂಭಾಗದಲಿ ಖಾಲಿ ನಿವೇಶನ ಇರುವ ಪೂರ್ವದಿಂದ ಪಶ್ಚಿಮಕ್ಕೆ 30.46 ಮೀಟರುಗಳು, ಪಶ್ಚಿಮಕ್ಕೆ 10.18+19.52 ಮೀಟರುಗಳು , ಉತ್ತರಕ್ಕೆ 36.63 ಮೀಟರುಗಳು ಮತ್ತು ದಕ್ಷಿಣಕ್ಕೆ 32.3+6.54 ಮೀಟರುಗಳು ಹೀಗೆ ಒಟ್ಟಾರೆ 1081 ಚದರ ಮೀಟರುಗಳು (ಅಥವಾ) 11636.06 ಚದರ ಅಡಿ ಅಂದಾಜು ವಿಸ್ತೀರ್ಣವುಳ್ಳ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: 1ನೇ ಮುಖ್ಯ ರಸ್ತೆ, ಪಶ್ಚಿಮಕ್ಕೆ: ನಂ. 54 ಸ್ವತ್ತಿನ ಭಾಗ, 1ನೇ ಮುಖ್ಯ ರಸ್ತೆ ಮತ್ತು ಸ್ವತ್ತಿನ ನಂ. 98, 2ನೇ ಮುಖ್ಯ ರಸ್ತೆ, ಉತ್ತರಕ್ಕೆ: ಖಾಸಗಿ ಸ್ವತ್ತು ನಂ. 55, ದಕ್ಷಿಣಕ್ಕೆ: ಖಾಸಗಿ ಸ್ವತ್ತು ನಂ. 55.

ಷೆಡ್ಯೂಲ್–ಬಿ ಸ್ವತ್ತು

1ನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿರುವ ಮೊದಲನೆ ಮಹಡಿಯಲ್ಲಿನ (ಕಾರ್ಪೋರೇಷನ್ ಸಬ್ ನಂ.54/14) 2350 ಚ.ಅಡಿ ವಿಸ್ತೀರ್ಣದ ಶ್ರೇಷ್ಠ ನಿರ್ಮಿತಿ ಪ್ರದೇಶವುಳ್ಳ ಫ್ಲಾಟ್ ನಂ. 104, 105 ಮತ್ತು 106 ಜೊತೆಗೆ ಷೆಡ್ಯೂಲ್ 'ಬಿ' ಸ್ವತ್ತಿನಲ್ಲಿನ ಬ್ರಿಗೇಡ್ ಲಿಂಕ್ಸ್‌ನಲ್ಲಿನ ಬೇಸ್‌ಮೆಂಟ್‌ನಲ್ಲಿ ಒಂದು ಹೊದಿಕೆಯುಳ್ಳ ಸ್ಕೂಟರ್ ನಿಲುಗಡೆ ಸ್ಥಳಾವಕಾಶ ಮತ್ತು ಆರ್‌ಸಿಸಿ ಫ್ರೇಮ್ಡ್ ಕಟ್ಟಡ ಇಟ್ಟಿಗೆ ಗೋಡೆಗಳು ಮತ್ತು ಪ್ಲಾಸ್ಟರಿಂಗ್, ಮೊಸಾಯಿಕ್ ನೆಲಗಟ್ಟು, ಆರ್‌ಸಿಸಿ ಛಾವಣಿ ಹಾಗೂ ವಿದ್ಯುತ್, ನೀರು ನೈರ್ಮಲ್ಯ ವ್ಯವಸ್ಥೆಯ ಸಾಮಾನ್ಯ ಸೇವೆಗಳು ಮತ್ತು ಶೌಚಾಲಯ ಒಳಗೊಂಡಿರುವ ಕಚೇರಿ. ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಯೂನಿಟ್ ನಂ.107; ಪಶ್ಚಿಮಕ್ಕೆ: ಬಯಲು ಪ್ರದೇಶ; ಉತ್ತರಕ್ಕೆ: ಬಯಲು ಪ್ರದೇಶ; ದಕ್ಷಿಣಕ್ಕೆ: ಬಯಲು ಪ್ರದೇಶ/ಕಾರಿಡಾರ್, ಮೇಲೆ ವಿವರಿಸಿರುವ ಷೆಡ್ಯೂಲ್ 'ಎ' ಸ್ವತ್ತಿನಲ್ಲಿನ 198.4/4300ನೇ +76/4300ನೇ+101.6/4300ನೇ ಅವಿಭಜಿತ ಪಾಲು, ಹಕ್ಕು ಪಾಲುದಾರಿಕೆ ಮತ್ತು ಆಸಕ್ತಿ.

ಸ್ಥಳ : ಬೆಂಗಳೂರು
ದಿನಾಂಕ : 21/01/2022

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ–2 (ಮೆಟ್ರೋ ರೈಲು ಯೋಜನೆ), ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಕೆಐಎಡಿಬಿ/ಭೂಸ್ವಾ/ಮೆಟ್ರೋ/ಆರ್6–2112/2021–22 ದಿನಾಂಕ: 20.01.2022

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು 2ನೇ ಹಂತದ **"ಮೆಟ್ರೋ ರೈಲು ಯೋಜನೆಯ"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾರಂಭಿಕ ಅಧಿಸೂಚನೆಯನ್ನು ಸಂಖ್ಯೆ: **ಸಿಐ 213 ಎಸ್‌ಪಿಕ್ಯೂ(ಇ) 2021** ದಿನಾಂಕ: **12.01.2022 ನ್ನು** ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ: 12.01.2022** ರಂದು ಪ್ರಕಟಣೆ ಹೊರಡಿಸಿದೆ. ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ (ಮೆಟ್ರೋ) ಬೆಂಗಳೂರು ರವರ ಕಛೇರಿಯಲ್ಲಿ ದಿನಾಂಕ: **15.02.2022 ರಂದು ಬೆಳಿಗ್ಗೆ 11.30 ಗಂಟೆಗೆ** ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರ ವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯದ ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ, ವೈಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರಧನ ನಿಗದಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ.	ಖಾತಾದಾರರ ಹೆಸರು	ಗುರುತಿನ ಸಂಖ್ಯೆ	ಎಲ್‌ಎ/ಸಿಟಿಎಸ್ ಸರ್ವೆ ನಂಬರ್	ಬಿಬಿಎಂಪಿ ಸ್ವತ್ತಿನ ಸಂಖ್ಯೆ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ–ಚ.ಮೀ.
ವಿಚಾರಣೆ ದಿನಾಂಕ: 15–02–2022 ವಿಚಾರಣೆ ಸಮಯ: ಬೆಳಿಗ್ಗೆ 11.30 ಗಂಟೆಗೆ					
ಆರ್.ಎಸ್.ಎಸ್. ನಿರ್ಮಾಣಕ್ಕಾಗಿ ಗ್ರಾಮ: ನಾಗವಾರ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ : ಬೆಂಗಳೂರು ನಗರ					
1	ಅರುಣ್ ರಾಜ್ ಬಿನ್ ಎಂ.ರಾಜಗೋಪಾಲ್	NG-RSS-1	136	-	752.00
2	ಚೇತನ್ ಬಿನ್ ಎಂ ರಾಜಗೋಪಾಲ್	NG-RSS-2	136	-	718.00
3	ಎಂ.ಎ. ರವೀಂದ್ರ ರಾಜು ಬಿನ್ ಎಂ.ಎ. ಸುಬ್ಬರಾಜು	NG-RSS-3	136	-	1900.00
4	1. ಪಿ. ಸುಬ್ರಮಣಿ ಬಿನ್ ಲೇಟ್ ಪೆರಿಯಪ್ಪ 2. ಪಿ.ರಾಮಯ್ಯ ಬಿನ್ ಲೇಟ್ ಪೆರಿಯಪ್ಪ 3. ಕಾಮಾಕ್ಷಮ್ಮ ಕೋಂ ಲೇಟ್ ಮುರುಗೇಶ್	NG-RSS-4	136	-	235.52 350.00 19.63 605.15
				Total (A)	**3975.15**
ಗ್ರಾಮ: ಹೆಣ್ಣೂರು ಹೋಬಳಿ: ಬೇಗೂರು–1 ತಾಲ್ಲೂಕು: ಬೆಂಗಳೂರು ಉತ್ತರ ಜಿಲ್ಲೆ : ಬೆಂಗಳೂರು					
5	ಸೈಯದ್ ಇಂತಿಯಾಸ್ ಅಹ್ಮದ್ ಬಿನ್ ಸೈಯದ್ ಮೆಹಮೂದ್	NG-RSS-5	81/4	-	158.44
6	ಪಹಣಿ ಪತ್ರಿಕೆಯಂತೆ ನಾರಾಯಣಸ್ವಾಮಿ ಮುನಿಯಪ್ಪ	NG-RSS-6	81/5	-	68.11
				Total (B)	**226.55**
				Total (A+B)	**4201.70**

ಸಹಿ/ ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ (ಮೆಟ್ರೋ ರೈಲು ಯೋಜನೆ), ನೃಪತುಂಗ ರಸ್ತೆ, ಬೆಂಗಳೂರು

ಆರೋಗ್ಯ ಉಚಿತ ತಪಾಸಣೆ ನಾಳೆ

ಬೆಂಗಳೂರು: ರಾಜಾಜಿನಗರದ ಕ್ಷೇಮ ಆರೋಗ್ಯ ಧಾಮವು ಗಣರಾಜ್ಯೋತ್ಸವದ ಅಂಗವಾಗಿ ಇದೇ 26 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ಸಾರ್ವಜನಿಕರ ಆರೋಗ್ಯ ಉಚಿತ ತಪಾಸಣೆ ಶಿಬಿರವನ್ನು ಆಯೋಜಿಸಿದೆ.

ಸಂಧಿವಾತ, ಆಮವಾತ ಮುಂತಾದ ಸಮಸ್ಯೆಗಳಿಗೆ ಉಚಿತ ಚಿಕಿತ್ಸೆ ನೀಡಲಾಗುವುದು. ವಿಳಾಸ: ಕ್ಷೇಮ ಆರೋಗ್ಯಧಾಮ, ನಂ 279/44, 19 ನೇ ಸಿ ಮುಖ್ಯರಸ್ತೆ, 1 ನೇ ಎನ್ ಬ್ಲಾಕ್, ರಾಜಾಜಿನಗರ ವಿದ್ಯಾವರ್ಧಕ ಕಾಲೇಜು ಎದುರು, ಬೆಂಗಳೂರು –10

ಸಂಪರ್ಕ: 9845572955

PUBLIC NOTICE

Notice is hereby given that my clients are negotiating to purchase all that land and building comprised in Municipal Corporation No.122, 6th Cross, Rajamahal Vilas Extension, Bangalore-560080 **(Schedule Property hereinbelow).**

Whereas **Sri.Nirav Dilip Shah** and **Smt.Punita Kotak Shah** have claimed to be the only and absolute co-owners thereof.

All persons having any claim in respect of, against or to the Schedule Property by way of sale, exchange, mortgage, charge, lien, gift, trust, maintenance, inheritance, possession, lease, license, easement or otherwise of whatsoever nature, howsoever, are hereby requested to make known the same in writing, to the undersigned, together with the documentary evidence in support thereof **WITHIN A PERIOD OF 10 DAYS** from the date of publication hereof, failing which such claim/s or objections, if any, shall be considered as waived and/or discharged forever. My client will proceed to conclude the negotiations and based thereon proceed to acquire the Schedule Property from the aforesaid persons, and no claims shall be entertained thereafter.

SCHEDULE PROPERTY

All that piece and parcel of land and building comprised in Municipal Corporation **No.122, 6th Cross, Rajamahal Vilas Extension, Bangalore-560080**, having PID No.99-35-4, issued by BBMP, measuring East-West : (94'.4"+ 84'.0")/2, North-South : 117'.6"+117'.9", together with all rights, appurtenances whatsoever whether underneath above the surface and bounded on:

East By : Road, **West By : Site No.117,**
North By : Site No.121, **South By : Site No.123.**

Yovini Rajesh Rohra, Advocate, Chanderkumar and Associates
No. 510, 4th Floor, Oxford Towers, 139, Old Airport Road, Kodihalli, Bangalore-560008. Ph: +91 9845016471

NATIONAL CONSUMER DISPUTES REDRESSAL COMMISSION

Under the Consumer Protection Act, 1986
Upbhokta Nyay Bhawan 'F'- Block, General Pool Office Complex, INA, NEW DELHI-110023
Telephone No.: 011-24608801-04 Fax No.: 011-24651505

Consumer Case No. 1208/2019
WITH
IA/10654/2021

CHRYSOLITE VILLA OWNERS ASSOCIATION.
...Petitioner/Appellant
Versus
M/S. KRISTAL PROJECTS (INDIA) LTD. & 13 ORS
...Opposite Party/ Respondent (s)

Consumer Case No. 1209/2019
WITH
IA/10655/2021

CHRYSOLITE VILLA OWNERS ASSOCIATION.
...Petitioner/Appellant
Versus
M/S. KRISTAL PROJECTS (INDIA) LTD. & 13 ORS
...Opposite Party/ Respondent (s)

To

Opposite Party / Respondent Name:

1. M/S. KRISTAL PROJECTS (INDIA) LTD.
   No.1,4th Cross, 29th Main BTM-II Stage, Bangalore- 560103.
1. (a). M/S. KRISTAL PROJECTS (INDIA) LTD.
   No.13, Kristal Tavern, Ambalipura Village, Bellandur Post, Outer Ring Road, Bangalore - 560037.
2. MRS. LATHA K. NAMBOODIRI,
   No.1,4th Cross, 29th Main BTM-II Stage, Bangalore- 560103.

Notice

TAKE NOTICE THAT the matter above mentioned will be listed for hearing before the Hon'ble Bench No.1 of the National Commission on **18 May, 2022 at 10.30 A.M** instead of 18.01.2022.

Dated on this 13 January 2022

Sd/-
Section Officer

ಪುರಸಭಾ ಕಾರ್ಯಾಲಯ,
ಶ್ರೀನಿವಾಸಪುರ

ಸಂ: ಪುಸಶ್ರೀ/ತಾಂತ್ರಿಕ/ಸಿಆರ್02/2021–22 ದಿನಾಂಕ: 19.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

15ನೇ ಹಣಕಾಸು ಮತ್ತು ಎಸ್.ಎಫ್.ಸಿ ಮುಕ್ತನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಕೆಟಿಪಿಪಿ ಆಧ್ಯಾದೇಶ 2000ದ ಅನ್ವಯ ಶೇಕಡ/ಐಟಂವಾರು ಧರಗಳ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳ ವಿವರಗಳನ್ನು **https://www.eproc.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ವಿವರ: **(1) DMA/2021-22/OW/WORK_INDENT126288** ಅಂದಾಜು ಮೊತ್ತ: **ರೂ.14.00 ಲಕ್ಷಗಳು.** ಇ.ಎಂ.ಡಿ: **ರೂ.35,000/-. (2) DMA/2021-22/OW/WORK_INDENT126090 (SC Reserved)** ಅಂದಾಜು ಮೊತ್ತ: **ರೂ.21.00 ಲಕ್ಷಗಳು.** ಇ.ಎಂ.ಡಿ: **ರೂ.21,000/-. (3) DMA/2021-22/OW/WORK_INDENT126316.** ಅಂದಾಜು ಮೊತ್ತ: **ರೂ.6.00 ಲಕ್ಷಗಳು.** ಇ.ಎಂ.ಡಿ: **ರೂ.15,000/-. (4) DMA/2021-22/OW/WORK_INDENT126424 (SC Reserved).** ಅಂದಾಜು ಮೊತ್ತ: **ರೂ.4.00 ಲಕ್ಷಗಳು.** ಇ.ಎಂ.ಡಿ: **ರೂ.5,000/-. (5) DMA/2021-22/OW/WORK_INDENT126426.** ಅಂದಾಜು ಮೊತ್ತ: **ರೂ.1.00 ಲಕ್ಷಗಳು.** ಇ.ಎಂ.ಡಿ: **ರೂ.2,500/-. (6) DMA/2021-22/OW/WORK_INDENT126429.** ಅಂದಾಜು ಮೊತ್ತ: **ರೂ.1.00 ಲಕ್ಷಗಳು.** ಇ.ಎಂ.ಡಿ: **ರೂ.2,500/-. (7) DMA/2021-22/BD/WORK_INDENT126445.** ಅಂದಾಜು ಮೊತ್ತ: **ರೂ.3.20 ಲಕ್ಷಗಳು.** ಇ.ಎಂ.ಡಿ: **ರೂ.8,000/-. (8) DMA/2021-22/BD/WORK_INDENT 126449 (ST Reserved).** ಅಂದಾಜು ಮೊತ್ತ: **ರೂ.1.02 ಲಕ್ಷಗಳು.** ಇ.ಎಂ.ಡಿ: **ರೂ.1,275/-. (9) DMA/2021-22/OW/WORK_INDENT 126335.** ಅಂದಾಜು ಮೊತ್ತ: **ರೂ.6.00 ಲಕ್ಷಗಳು.** ಇ.ಎಂ.ಡಿ: **ರೂ.15,000/-. (1)** ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **05.02.2022ರ ಸಂಜೆ 17.00 ಗಂಟೆಯುವರೆಗೆ ಸಲ್ಲಿಸುವುದು. (2)** ಟೆಂಡರ್ ಬಿಡ್ ದಾಖಲೆಗಳನ್ನು **https://www.eproc.karnataka.gov.in** ನಲ್ಲಿ ತೆರೆಯುವ ದಿನಾಂಕ: **08.02.2022, 11.00 ಗಂಟೆಗೆ. (3)** ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://www.eproc.karnataka.gov.in** ನಲ್ಲಿ ನೋಡಿಕೊಳ್ಳಬಹುದು.

ಸಹಿ/ ಮುಖ್ಯಾಧಿಕಾರಿ, ಪುರಸಭೆ, ಶ್ರೀನಿವಾಸಪುರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂ.342/ಎಂಸಿಎ/2021–22

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಮನೆ ಆರೈಕೆಯಲ್ಲಿದ್ದವರಿಗೆ ಪ್ರಮಾಣಪತ್ರ ನೀಡುವುದಿಲ್ಲ’

ಬೆಂಗಳೂರು: ‘ಮನೆ ಆರೈಕೆಯಲ್ಲಿದ್ದು ಗುಣಮುಖರಾದ ಕೋವಿಡ್ ರೋಗಿಗಳಿಗೆ ಪ್ರಮಾಣಪತ್ರ ನೀಡಲಾಗುವುದಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದ್ದಾರೆ.

ಕೆಲ ಖಾಸಗಿ ಸಂಸ್ಥೆಗಳು ಮನೆ ಆರೈಕೆಯಲ್ಲಿದ್ದವರಿಂದ ಪ್ರಮಾಣಪತ್ರ ಕೇಳುತ್ತಿವೆ. ಬಿಬಿಎಂಪಿಯಿಂದ ಡಿಜಿಟಲ್ ಪ್ರಮಾಣ ಪತ್ರ ನೀಡಲಾಗುತ್ತದೆಯೇ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ, ‘ನಾವು ಯಾರಿಗೂ ಪ್ರಮಾಣಪತ್ರ ನೀಡುತ್ತಿಲ್ಲ. ಕೋವಿಡ್‌ನಿಂದ ಗುಣಮುಖರಾದವರು ಕೋವಿಡ್ ದೃಢ ಪ್ರಮಾಣಪತ್ರದ ಜೊತೆಗೆ 7 ದಿನ ಮನೆ ಆರೈಕೆಯಲ್ಲಿದ್ದು ಚೇತರಿಸಿಕೊಂಡಿರುವ ಬಗ್ಗೆ ಖಾಸಗಿ ಸಂಸ್ಥೆಗಳಿಗೆ ಮಾಹಿತಿ ನೀಡಿದರೆ ಸಾಕು. ಅಗತ್ಯವಿದ್ದರೆ ಈ ಕುರಿತು ಪ್ರತ್ಯೇಕ ಆದೇಶ ಹೊರಡಿಸಲಾಗುತ್ತದೆ’ ಎಂದರು.

‘ಮೃತಪಟ್ಟಿರುವ ಅನೇಕ ವ್ಯಕ್ತಿಗಳ ಮೊಬೈಲ್‌ಗೆ ಅವರು ಲಸಿಕೆ ಹಾಕಿಸಿಕೊಂಡಿರುವ ಬಗ್ಗೆ ಸಂದೇಶಗಳನ್ನು ಕಳುಹಿಸಲಾಗಿದೆ. ಇದು ಗಮನಕ್ಕೂ ಬಂದಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಹೇಳಿದರು.

ಗುಣಮುಖರ ಸಂಖ್ಯೆ ಹೆಚ್ಚಳ: ರಾಜ್ಯದಲ್ಲಿ ಕೋವಿಡ್ ನಿಂದ ಚೇತರಿಸಿಕೊಂಡವರ ಸಂಖ್ಯೆ ಹೆಚ್ಚಳವಾಗಿದೆ. ಸೋಮವಾರ 41,703 ಜನರಿಗೆ ಕಾಯಿಲೆ ವಾಸಿಯಾಗಿದೆ. ಗುಣಮುಖರ ಒಟ್ಟು ಸಂಖ್ಯೆ 31.62 ಲಕ್ಷದಷ್ಟಿದೆ.

ಕೊರೊನಾ ಸೋಂಕಿಗೊಳಪಟ್ಟವರ ಸಂಖ್ಯೆ ಇಳಿಕೆಯಾಗಿದೆ. ಒಂದು ದಿನದಲ್ಲಿ 46,426 ಮಂದಿ ಕೋವಿಡ್ ಪೀಡಿತರಾಗಿರುವುದು ಖಾತರಿಯಾಗಿದೆ. ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 35.64 ಲಕ್ಷಕ್ಕೆ ತಲುಪಿದ್ದು, ಕೋವಿಡ್ ದೃಢ ಪ್ರಮಾಣವು ಶೇ 32.95ಕ್ಕೆ ಏರಿದೆ.

ಕೋವಿಡ್ ಪೀಡಿತರ ಪೈಕಿ ಸೋಮವಾರ 32 ಮಂದಿ ಅಸುನೀಗಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 38,614ಕ್ಕೆ ಹೆಚ್ಚಿದೆ. ಮರಣ ಪ್ರಮಾಣ ದರವು ಶೇ 0.06ರಷ್ಟಿದೆ.

ಹಿಂದಿನ 24 ಗಂಟೆಗಳಲ್ಲಿ 1.40 ಲಕ್ಷ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಸದ್ಯ 3.62 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರಿನಲ್ಲಿ ಸೋಮವಾರ 9 ಮಂದಿ ಮೃತರಾಗಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

16,07,226 ▲ ಒಟ್ಟು ಸೋಂಕಿತರು (15,85,657 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,26,385 ▼	13,64,333 ▲	16,507 ▲

ದಿನದ ಏರಿಕೆ

ಹೊಸ ಪ್ರಕರಣ	21,569 ▼
ಗುಣಮುಖ	27,008 ▲
ಸಾವು	09 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	35.32 ಕೋಟಿ ▲	3.95 ಕೋಟಿ ▲
ಸಕ್ರಿಯ ಪ್ರಕರಣ	6.66 ಕೋಟಿ ▲	22.49 ಲಕ್ಷ ▲
ಗುಣಮುಖ	28.09 ಕೋಟಿ ▼	3.68 ಕೋಟಿ ▲
ಸಾವು	56.17 ಲಕ್ಷ ▲	4.89 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	22.31 ಲಕ್ಷ ▼	3.06 ಲಕ್ಷ ▼
ಗುಣಮುಖ	13.36 ಲಕ್ಷ ▼	2.43 ಲಕ್ಷ ▼
ಸಾವು	4,877 ▼	439 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಫ್ರಾನ್ಸ್	ಅಮೆರಿಕ	ಬ್ರಿಟನ್
3.01 ಲಕ್ಷ ▼	1.97 ಲಕ್ಷ ▼	74,799

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.42 ಲಕ್ಷ
ಕೇರಳ	51,816 ▲
ತಮಿಳುನಾಡು	37,218 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಬ್ರಿಟನ್
2.66 ಕೋಟಿ ▲	63.74 ಲಕ್ಷ ▲	34.83ಲಕ್ಷ ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

75.07	ಮಹಾರಾಷ್ಟ್ರ ▲
56.43	ಕೇರಳ ▲
31.33	ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಸೋಮವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಅಚ್ಯುತಾನಂದನ್‌ಗೆ ₹10 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಾನನಷ್ಟ ಮೊಕದ್ದಮೆ ಪ್ರಕರಣ
- ಮಾಜಿ ಸಿ.ಎಂ ಉಮ್ಮನ್ ಚಾಂಡಿಗೆ ಪರಿಹಾರ

ತಿರುವನಂತಪುರಂ: ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ಉಮ್ಮನ್ ಚಾಂಡಿ ಅವರಿಗೆ ₹ 10.10 ಲಕ್ಷ ಪರಿಹಾರ ನೀಡಬೇಕು ಎಂದು ಸಿಪಿಎಂ ಪಕ್ಷದ ಹಿರಿಯ ಮುಖಂಡ, ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್ ಅವರಿಗೆ ಇಲ್ಲಿನ ಸ್ಥಳೀಯ ನ್ಯಾಯಾಲಯವು ಸೋಮವಾರ ಆದೇಶಿಸಿತು.

2013ರಲ್ಲಿ ಅಚ್ಯುತಾನಂದನ್ ಅವರು ಪ್ರತಿಪಕ್ಷದ ನಾಯಕರಾಗಿದ್ದರು. ಮುಖ್ಯಮಂತ್ರಿಯಾಗಿದ್ದ ಚಾಂಡಿ ಅವರ ವಿರುದ್ಧ ಸೋಲಾರ್ ಹಗರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಚಾನಲ್‌ಗೆ ನೀಡಿದ್ದ ಸಂದರ್ಶನದಲ್ಲಿ ಹಗರಣಕ್ಕೆ ಸಂಬಂಧಿಸಿ ಕಂಪನಿಯನ್ನು ಚಾಂಡಿ ಅವರೇ ಸ್ಥಾಪಿಸಿದ್ದಾರೆ ಎಂದು ಆರೋಪಿಸಿದ್ದರು. ಈ ಬಗ್ಗೆ ಚಾಂಡಿ ಮೊಕದ್ದಮೆ ಹೂಡಿದ್ದರು.

ಚಾಂಡಿ ಅವರು ₹ 10.10 ಲಕ್ಷ ಪರಿಹಾರ ಕೋರಿ ಮೊಕದ್ದಮೆ ದಾಖಲಿಸಿದ್ದರು. ಶೇ 6ರ ಬಡ್ಡಿಯೊಂದಿಗೆ ಪರಿಹಾರ ಮೊತ್ತವನ್ನು ಪಾವತಿಸಬೇಕು ಎಂದು ಕೋರ್ಟ್ ಆದೇಶಿಸಿದೆ.

‘ಭ್ರೂಣ ಪತ್ತೆ: ತಪ್ಪಿತಸ್ಥರ ಪರವಾನಗಿ ರದ್ದು’

ಬೆಂಗಳೂರು: ‘ರಾಜ್ಯದಲ್ಲಿ ಭ್ರೂಣ ಪತ್ತೆಗೆ ಅವಕಾಶವಿಲ್ಲ. ಭ್ರೂಣ ಪತ್ತೆ ಮಾಡುವುದು ಗೊತ್ತಾದರೆ ಕೃತ್ಯದಲ್ಲಿ ಭಾಗಿಯಾಗಿರುವ ತಜ್ಞರು, ತಾಂತ್ರಿಕ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಆಸ್ಪತ್ರೆ, ಪ್ರಯೋಗಾಲಯಗಳ ಪರವಾನಗಿ ರದ್ದುಪಡಿಸಲಾಗುತ್ತದೆ’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಎಚ್ಚರಿಸಿದ್ದಾರೆ.

ಇಂಡಿಯನ್ ಆಯಿಲ್‌ಗೆ ಪ್ರಶಸ್ತಿ

ಬೆಂಗಳೂರು: ಬೃಹತ್ ಪ್ರಮಾಣದ ಉದ್ಯಮ ವರ್ಗದಲ್ಲಿ ‘ಜಾಗತಿಕ ಆರೋಗ್ಯಕರ ಕಾರ್ಯಸ್ಥಳ ಪ್ರಶಸ್ತಿ – 2021’ಅನ್ನು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಪಡೆದುಕೊಂಡಿದೆ. ಬೃಹತ್ ಪ್ರಮಾಣದ ಉದ್ಯಮ ವರ್ಗದಲ್ಲಿ ಈ ಪ್ರಶಸ್ತಿ ಪಡೆದ ಮೊದಲ ಸರ್ಕಾರಿ ಕಂಪನಿ ಇದು.

ಕಂಪನಿಯು ಕೆಲಸದ ಸ್ಥಳದಲ್ಲಿ ಪಾಲಿಸುವ ಆರೋಗ್ಯಕರ ನಿಯಮಗಳಿಗೆ ಈ ಪ್ರಶಸ್ತಿಯು ಮಾನ್ಯತೆ ನೀಡಿದಂತೆ ಇದೆ. ಉದ್ಯೋಗಿಗಳ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಲು ಕಂಪನಿಯು ನಡೆಸುವ ಯತ್ನಗಳನ್ನು ಕೂಡ ಇದು ಮಾನ್ಯ ಮಾಡಿದಂತೆ ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ಈಚೆಗೆ ನಡೆದ ಜಾಗತಿಕ ಆರೋಗ್ಯಪೂರ್ಣ ಕಾರ್ಯಸ್ಥಳ ಶೃಂಗದಲ್ಲಿ ಈ ಪ್ರಶಸ್ತಿಯನ್ನು ಘೋಷಿಸಲಾಗಿದೆ. ಇಂಡಿಯನ್ ಆಯಿಲ್ ಕಂಪನಿಯ ಪರವಾಗಿ, ಅಧ್ಯಕ್ಷ ಎಸ್.ಎಂ. ವೈದ್ಯ ಅವರು ಪ್ರಶಸ್ತಿಯನ್ನು ಸೋಮವಾರ ಸ್ವೀಕರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಮಾಣೇಕ್ ಷಾ ಮೈದಾನದಲ್ಲಿ ಪೊಲೀಸ್ ಬಿಗಿ ಭದ್ರತೆ • ಸಾಂಸ್ಕೃತಿಕ ಕಾರ್ಯಕ್ರಮ ಇಲ್ಲ • ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ

ಗಣರಾಜ್ಯೋತ್ಸವ: ಗಣ್ಯರಿಗಷ್ಟೇ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಜನವರಿ 26ರಂದು ಮಾಣೇಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಗಣರಾಜ್ಯೋತ್ಸವದಲ್ಲಿ ಭಾಗವಹಿಸಲು ಆಯ್ದ ಗಣ್ಯರಿಗಷ್ಟೇ ಅವಕಾಶ ಕಲ್ಪಿಸಲಾಗಿದೆ.

ಈ ಬಾರಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರದ್ದು ಮಾಡಲಾಗಿದ್ದು, ಸಾರ್ವಜನಿಕರ ಪ್ರವೇಶವನ್ನೂ ನಿಷೇಧಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹಾಗೂ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಸೋಮವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ಹಾಗೂ ಭದ್ರತೆ ಕುರಿತ ಮಾಹಿತಿ ಹಂಚಿಕೊಂಡರು.

ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಮಾತನಾಡಿ, 'ಗಣರಾಜ್ಯೋತ್ಸವಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ರಾಜ್ಯಪಾಲರು ಇದೇ 26ರ ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ ನೆರವೇರಿಸಲಿದ್ದು, ಬಳಿಕ ಗೌರವ ವಂದನೆ ಸ್ವೀಕರಿಸಿ ರಾಜ್ಯದ ಜನರಿಗೆ ಸಂದೇಶ ನೀಡಲಿದ್ದಾರೆ. ಕೆಎಸ್‌ಆರ್‌ಪಿ, ಸಿಆರ್‌ಪಿಎಫ್, ಬಿಎಸ್‌ಎಫ್, ಸಿಎಆರ್, ಕೆಎಸ್‌ಐಎಸ್‌ಎಫ್, ಸಂಚಾರ ಪೊಲೀಸ್, ಮಹಿಳಾ ಪೊಲೀಸ್, ಗೃಹರಕ್ಷಕ ದಳ, ಸಂಚಾರ ವಾರ್ಡನ್, ಅಗ್ನಿಶಾಮಕ ದಳ, ಶ್ವಾನ ದಳ, ವಾದ್ಯವೃಂದ (ಬ್ಯಾಂಡ್) ಸೇರಿದಂತೆ ಒಟ್ಟು 21 ತುಕಡಿಗಳ ಸುಮಾರು 500 ಮಂದಿ ಪಥ ಸಂಚಲನದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ಮಾಹಿತಿ ನೀಡಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಮೈದಾನದ ಸುತ್ತಲೂ ಪೊಲೀಸ್ ಬಿಗಿ ಭದ್ರತೆ ಕಲ್ಪಿಸಲಾಗಿದೆ. ಈ ಪರಿಸರದಲ್ಲಿ 60 ಸಿಸಿಟಿವಿ ಕ್ಯಾಮೆರಾಗಳು ಹಾಗೂ ಎರಡು ಬ್ಯಾಗೇಜ್ ಸ್ಕ್ಯಾನರ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಗ್ನಿಶಾಮಕ ದಳದ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಆಂಬುಲೆನ್ಸ್, ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿಯೂ ಇರಲಿದ್ದಾರೆ. ನಗರದ ಹಲವು ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯ ಹಾಸಿಗೆಗಳನ್ನೂ ಕಾಯ್ದಿರಿಸಲಾಗಿದೆ' ಎಂದು ಅವರು ತಿಳಿಸಿದರು.

ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಪಾಲ್ಗೊಳ್ಳಲಿರುವ ಆಂಧ್ರಪ್ರದೇಶ ವಿಶೇಷ ಪೊಲೀಸ್ ಪಡೆಯ ಸಿಬ್ಬಂದಿ ಮಾಣೇಕ್ ಷಾ ಪರೇಡ್ ಮೈದಾನದಲ್ಲಿ ಸೋಮವಾರ ತಾಲೀಮು ನಡೆಸಿದರು (ಎಡಚಿತ್ರ), ಕವಾಯತಿನಲ್ಲಿ ಭಾಗವಹಿಸಲಿರುವ ಪೊಲೀಸ್ ಸಿಬ್ಬಂದಿಯ ಕೋವಿಡ್ ಪರೀಕ್ಷೆಗಾಗಿ ಆರೋಗ್ಯ ಸಿಬ್ಬಂದಿಯೊಬ್ಬರು ಮೂಗಿನ ದ್ರವ ಸಂಗ್ರಹಿಸಿದರು —ಪ್ರಜಾವಾಣಿ ಚಿತ್ರಗಳು

ಬಂದೋಬಸ್ತ್‌ಗೆ ನಿಯೋಜಿಸಲಾಗಿರುವ ಸಿಬ್ಬಂದಿ

11 ಡಿಸಿಪಿ
20 ಎಸಿಪಿ
60 ಪೊಲೀಸ್ ಇನ್‌ಸ್ಪೆಕ್ಟರ್
125 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು
1,400 ಇತರೆ ಅಧಿಕಾರಿ/ಸಿಬ್ಬಂದಿ, ಕೆಎಸ್‌ಆರ್‌ಪಿ, ಸಿಎಆರ್, ಗೃಹರಕ್ಷಕದಳ ಹಾಗೂ ಟ್ರಾಫಿಕ್ ವಾರ್ಡನ್‌ಗಳು

ವಾಹನ ನಿಲುಗಡೆ, ಮೈದಾನ ಪ್ರವೇಶಕ್ಕೆ ಪ್ರತ್ಯೇಕ ವ್ಯವಸ್ಥೆ

- ಬಿಳಿ ಹಾಗೂ ತಿಳಿ ಗುಲಾಬಿ (ಪಿಂಕ್) ಬಣ್ಣದ ಪಾಸ್ ಹೊಂದಿರುವ ಆಹ್ವಾನಿತರು ಕಬ್ಬನ್ ರಸ್ತೆ, ಮಣಿಪಾಲ್ ಸೆಂಟರ್‌ನಿಂದ ಕೆ.ಆರ್.ರಸ್ತೆ ಮತ್ತು ಕಬ್ಬನ್ ರಸ್ತೆ ವೃತ್ತದವರೆಗೆ, ಮೈನ್ ಗಾರ್ಡ್ ಕ್ರಾಸ್ ರಸ್ತೆ, ಸಫೀನಾ ಪ್ಲಾಜಾ ಮುಂಭಾಗ, ಕಾಮರಾಜ ರಸ್ತೆ, ಆರ್ಮಿ ಪಬ್ಲಿಕ್ ಶಾಲೆ ಮುಂಭಾಗದ ಎರಡು ಬದಿಗಳಲ್ಲಿ ವಾಹನ ನಿಲುಗಡೆ ಮಾಡಬಹುದು.
- ಬಿಳಿ ಬಣ್ಣದ ಪಾಸ್ ಹೊಂದಿರುವವರು ದ್ವಾರ ಸಂಖ್ಯೆ 2 ಹಾಗೂ ಪಿಂಕ್ ಬಣ್ಣದ ಪಾಸ್ ಹೊಂದಿರುವವರು ದ್ವಾರ ಸಂಖ್ಯೆ 3ರ ಮೂಲಕ ಮೈದಾನ ಪ್ರವೇಶಿಸಬೇಕು.
- ಸಚಿವರು, ಸರ್ಕಾರದ ಕಾರ್ಯದರ್ಶಿಗಳು, ರಕ್ಷಣಾ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಕಬ್ಬನ್ ರಸ್ತೆಯಿಂದ ದ್ವಾರ ಸಂಖ್ಯೆ 2ರ ಮೂಲಕ ಮೈದಾನ ಪ್ರವೇಶಿಸಿ ಉತ್ತರ ಹಾಗೂ ಪಶ್ಚಿಮ ಭಾಗಗಳ ಫಿಶ್ ಬೋನ್ ಬಳಿ ಪಾರ್ಕಿಂಗ್ ಮಾಡಬೇಕು.
- ಮಾಧ್ಯಮದವರು, ಪೊಲೀಸ್ ಉಪ ಆಯುಕ್ತರು ಹಾಗೂ ಇತರೆ ಇಲಾಖೆಗಳ ಮೇಲಧಿಕಾರಿಗಳು ದ್ವಾರ ಸಂಖ್ಯೆ 3ರ ಮೂಲಕ ಮೈದಾನ ಪ್ರವೇಶಿಸಿ ಪೂರ್ವ ಭಾಗದಲ್ಲಿ ವಾಹನ ನಿಲ್ಲಿಸಬೇಕು.
- ತುರ್ತು ಸೇವಾ ವಾಹನಗಳು ದ್ವಾರ ಸಂಖ್ಯೆ 2ರ ಮೂಲಕ ಒಳ ಪ್ರವೇಶಿಸಿ ಮೈದಾನದ ಪೋರ್ಟ್ ವಾಲ್ ಹಿಂಭಾಗದಲ್ಲಿ ನಿಲುಗಡೆ ಹೊಂದಬೇಕು.

ಪಥ ಸಂಚಲನಕ್ಕೆ ಆಶಿಶ್ ಚನ್ನಪ್ಪ ನೇತೃತ್ವ

'ಲೆಫ್ಟಿನೆಂಟ್ ಕರ್ನಲ್ ಆಶಿಶ್ ಚನ್ನಪ್ಪ ಹಾಗೂ ಮೇಜರ್ ಲಲಿತ್ ಕುಮಾರ್ ಮುಂದಾಳತ್ವದಲ್ಲಿ ಗಣರಾಜ್ಯೋತ್ಸವದ ಪಥ ಸಂಚಲನ ನಡೆಯಲಿದೆ. ಆಂಧ್ರಪ್ರದೇಶದ ವಿಶೇಷ ತುಕಡಿ ಸೇರಿ ಒಟ್ಟು 16 ತುಕಡಿಗಳು ಪಾಲ್ಗೊಳ್ಳಲಿವೆ. 5 ವಾದ್ಯ ವೃಂದ, 2 ಡಿ ಸ್ವಾಟ್, 4 ಕ್ಯು.ಆರ್.ಟಿ, 2 ಆರ್.ಐ.ವಿ ಹಾಗೂ 6 ಅಶ್ವಗಳನ್ನು ಒಳಗೊಂಡ ತಂಡವು ಪಥ ಸಂಚಲನದ ಮೆರುಗು ಹೆಚ್ಚಿಸಲಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

'ಬಂದೋಬಸ್ತ್‌ಗೆ ಸಾಕಷ್ಟು ಸಿಬ್ಬಂದಿ ನಿಯೋಜಿಸಲಾಗಿದೆ. ಮಫ್ತಿಯಲ್ಲೂ ಪೊಲೀಸರು ಕರ್ತವ್ಯ ನಿರ್ವಹಿಸಲಿದ್ದಾರೆ. ತುರ್ತು ಪರಿಸ್ಥಿತಿ ಎದುರಿಸಲು ಗರುಡ ಪಡೆಯ ವಾಹನಗಳನ್ನೂ ಸನ್ನದ್ಧಗೊಳಿಸಲಾಗಿದೆ. ಸಮಾರಂಭಕ್ಕೆ ಬರುವವರು ಬೆಳಿಗ್ಗೆ 8.40ರ ಒಳಗೆ ಆಸೀನರಾಗಿರಬೇಕು' ಎಂದು ಹೇಳಿದರು.

ಈ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷಿದ್ಧ

- ಸೆಂಟ್ರಲ್ ಸ್ಟ್ರೀಟ್, ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ
- ಕಬ್ಬನ್ ರಸ್ತೆ, ಸಿ.ಟಿ.ಒ ವೃತ್ತದಿಂದ ಕೆ.ಆರ್.ರಸ್ತೆ ಮತ್ತು ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ
- ಎಂ.ಜಿ.ರಸ್ತೆ, ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ

ಸಂಚಾರ ಮಾರ್ಗ ಬದಲಾವಣೆ

ಇದೇ 26ರಂದು ಬೆಳಿಗ್ಗೆ 8.30ರಿಂದ 10.30ರವರೆಗೆ ಕಬ್ಬನ್ ರಸ್ತೆ, ಬಿ.ಆರ್.ವಿ.ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗೆ ಎರಡು ದಿಕ್ಕುಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದ್ದು, ಇದಕ್ಕೆ ಬದಲಿ ಮಾರ್ಗಗಳನ್ನು ಸೂಚಿಸಲಾಗಿದೆ.

ಗುರುತಿನ ಚೀಟಿ ಕಡ್ಡಾಯ: 'ಕಾರ್ಯಕ್ರಮ ವೀಕ್ಷಿಸಲು ಬರುವ ಸ್ವಾತಂತ್ರ್ಯ ಹೋರಾಟಗಾರರು, ಅತಿಗಣ್ಯ ಹಾಗೂ ಗಣ್ಯರಿಗೆ ಒಟ್ಟು 200 ಆಸನಗಳ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ಪ್ರವೇಶ ದ್ವಾರದಲ್ಲಿರುವ ಸಿಬ್ಬಂದಿಯ ಎದುರು ಆಹ್ವಾನ ಪತ್ರಿಕೆ ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು' ಹೇಳಿದರು.

ಸುದ್ದಿ 2 ನಿಮಿಷ

ಆರ್ಥಿಕ ಅವ್ಯವಹಾರ ಆರೋಪ ಸೊಸೈಟಿ ಅರ್ಜಿ ವಜಾ

ಬೆಂಗಳೂರು: ಆರ್ಥಿಕ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುವ ನಿಟ್ಟನಲ್ಲಿ ಸಹಕಾರ ನಿಬಂಧಕರು ಹೊರಡಿಸಿದ್ದ ನೋಟಿಸ್ ಪ್ರಶ್ನಿಸಿ 'ಮೈಸೂರು ಅರ್ಥ್ ಮೂವರ್ಸ್ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್' ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ನೋಟಿಸ್ ರದ್ದುಪಡಿಸಬೇಕು ಎಂದು ಕೋರಿ ಸೊಸೈಟಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. 'ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘದ ಸದಸ್ಯರೊಬ್ಬರು ನೀಡಿದ್ದ ದೂರು ಪರಿಗಣಿಸಿ ನೋಟಿಸ್ ಜಾರಿಯಾಗಿದೆ. ಆದ್ದರಿಂದ, ಈ ಹಂತದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

ಸೊಸೈಟಿ ವಿರುದ್ಧದ ವಿಚಾರಣೆಗೆ ತಡೆ ನೀಡಿ 2015ರ ಅಕ್ಟೋಬರ್ 5ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನೂ ನ್ಯಾಯಪೀಠ ಇದೇ ವೇಳೆ ತೆರವುಗೊಳಿಸಿದೆ.

ನಾದಿನಿಯನ್ನೇ ಅಪಹರಿಸಿದಾತನ ಸೆರೆ

ಬೆಂಗಳೂರು: ಪತ್ನಿ ಇದ್ದರೂ ತನ್ನನ್ನು ಮದುವೆಯಾಗುವಂತೆ ನಾದಿನಿಯನ್ನು ಪೀಡಿಸಿ, ಅಪಹರಣ ಮಾಡಿದ್ದ ಆರೋಪದಡಿ ದೇವರಾಜ್ ಎಂಬಾತನನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ನಗರದ ಶಾಪಿಂಗ್ ಮಾಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ 20 ವರ್ಷದ ಯುವತಿಯನ್ನು ಜ. 22ರಂದು ಅಪಹರಣ ಮಾಡಲಾಗಿತ್ತು. ಈ ಬಗ್ಗೆ ಕುಟುಂಬಸ್ಥರು ದೂರು ನೀಡಿದ್ದರು. ಹಾಸನದ ಸಕಲೇಶಪುರದಲ್ಲಿದ್ದ ಆರೋಪಿ ದೇವರಾಜ್ ಹಾಗೂ ಆತನ ಸಹಚರರನ್ನು ಬಂಧಿಸಲಾಗಿದ್ದು, ಯುವತಿಯನ್ನು ರಕ್ಷಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ದೇವರಾಜ್, ಯುವತಿಯ ಅಕ್ಕನನ್ನು ನಾಲ್ಕು ವರ್ಷಗಳ ಹಿಂದೆ ಮದುವೆಯಾಗಿದ್ದ. ಯುವತಿ ಮೇಲೂ ಕಣ್ಣು ಹಾಕಿ, ಅವರನ್ನೂ ಮದುವೆಯಾಗಲು ಮುಂದಾಗಿದ್ದ. ಯುವತಿ ಹಾಗೂ ಅವರ ಕುಟುಂಬದವರನ್ನು ಪೀಡಿಸುತ್ತಿದ್ದ. ಮದುವೆಗೆ ಯುವತಿ ಒಪ್ಪಿರಲಿಲ್ಲ. ಅದೇ ವಿಚಾರವಾಗಿ ಆರೋಪಿ ಹಲವು ಬಾರಿ ಮನೆಯಲ್ಲಿ ಗಲಾಟೆ ಮಾಡಿದ್ದ. ಯುವತಿ ಕೆಲಸಕ್ಕೆ ಹೋಗುವುದನ್ನು ತಿಳಿದಿದ್ದ ಆರೋಪಿ, ಅಪಹರಣ ಮಾಡಿ ಮದುವೆಯಾಗಲು ಸಂಚು ರೂಪಿಸಿದ್ದ. ಇದಕ್ಕಾಗಿ ತನ್ನ ಸಹಚರರ ಸಹಾಯ ಪಡೆದಿದ್ದ' ಎಂದೂ ಪೊಲೀಸರು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕಾರ್ಯವೈಖರಿಗೆ ವಿದ್ಯಾರ್ಥಿಗಳ ಆಕ್ರೋಶ

ಮೌಲ್ಯಮಾಪನ ಲೋಪ: ಗರಿಷ್ಠ ಅಂಕಕ್ಕಿಂತಲೂ ಹೆಚ್ಚು ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಬಿ.ಕಾಂ. ಮೂರನೇ ಸೆಮಿಸ್ಟರ್‌ನ ವಿವಿಧ ವಿಷಯಗಳ ಪರೀಕ್ಷೆಯಲ್ಲಿ ನಿಗದಿಪಡಿಸಿದ್ದ ಗರಿಷ್ಠ ಅಂಕಗಳಿಗಿಂತಲೂ ಹೆಚ್ಚು ಅಂಕಗಳನ್ನು ನೀಡಿದೆ.

ಬಿ.ಕಾಂ. ಮೂರನೇ ಸೆಮಿಸ್ಟರ್‌ನ ಹಲವು ವಿದ್ಯಾರ್ಥಿಗಳು ವಿಶ್ವವಿದ್ಯಾಲಯವು ನಡೆಸಿದ ಮೌಲ್ಯಮಾಪನ ಕಾರ್ಯದ ಬಗ್ಗೆ ಆಘಾತ ಮತ್ತು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಇದು ವಿಶ್ವ ವಿದ್ಯಾಲಯದ ಲೋಪ ಎಂದು ದೂರಿದ್ದಾರೆ.

ಬಿ.ಕಾಂ ಪದವಿಯ 'ಟೂರಿಸಂ ಏಜೆನ್ಸಿ' ವಿಷಯದ ಪರೀಕ್ಷೆಯನ್ನು ಒಟ್ಟು 70 ಅಂಕಗಳಿಗೆ ನಡೆಸಲಾಗಿತ್ತು. ಆದರೆ, ವಿದ್ಯಾರ್ಥಿಗಳಿಗೆ 70ಕ್ಕಿಂತಲೂ ಹೆಚ್ಚು ಅಂಕಗಳು ದೊರೆತಿವೆ. ಇದು ಮೌಲ್ಯಮಾಪನದ ಗುಣಮಟ್ಟವನ್ನು ತೋರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನನಗೆ 74 ಅಂಕಗಳು ದೊರೆತಿವೆ. ಅಂಕಪಟ್ಟಿ ನೋಡಿದಾಗ ನನಗೆ ಆಘಾತ ವಾಯಿತು. ನನ್ನ ಸ್ನೇಹಿತರಿಗೂ 71, 89,73 ಅಂಕಗಳು ದೊರೆತಿವೆ' ಎಂದು ವಿದ್ಯಾರ್ಥಿಯೊಬ್ಬರು ತಿಳಿಸಿದ್ದಾರೆ.

'ಟೂರಿಸಂ ಏಜೆನ್ಸಿ' ವಿಷಯವನ್ನು ಸುಮಾರು 500 ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡುತ್ತಿದ್ದಾರೆ. 2021ರ ಆಗಸ್ಟ್‌ನಲ್ಲಿ ಈ ವಿಷಯದ ಪರೀಕ್ಷೆ ನಡೆದಿತ್ತು. ಕೆಲ ದಿನಗಳ ಹಿಂದೆ ಫಲಿತಾಂಶ ಪ್ರಕಟಿಸಲಾಗಿತ್ತು.

ಬೆಂಗಳೂರು ವಿಶ್ವವಿದ್ಯಾಲಯ

ಫಲಿತಾಂಶ ವಾಪಸ್: ಕುಲಸಚಿವ

ಈ ಬಗ್ಗೆ ಪ್ರತಿಕ್ರಿಯಿಸಿರುವ ಕುಲಸಚಿವ (ಮೌಲ್ಯಮಾಪನ) ಪ್ರೊ. ಜೆ.ಟಿ. ದೇವರಾಜು ಅವರು, 'ಈ ಫಲಿತಾಂಶವನ್ನು ವಾಪಸ್ ಪಡೆಯ ಲಾಗುವುದು. ಡಿಜಿಟಲ್ ಮೌಲ್ಯಮಾಪನ ನಡೆಸಿರುವುದರಿಂದ ಸಂಬಂಧಪಟ್ಟ ವ್ಯಕ್ತಿಗಳು ಸರಿಯಾಗಿ ಗಮನಿಸಿಲ್ಲ. ಅಂಕಗಳನ್ನು ಸರಿಪಡಿಸಿ ಹೊಸದಾಗಿ ಫಲಿತಾಂಶ ಪ್ರಕಟಿಸಲಾಗುವುದು' ಎಂದು ತಿಳಿಸಿದ್ದಾರೆ.

ಆಂಧ್ರದಲ್ಲಿ 'ಕರ್ನಾಟಕ ಮಹಿಳಾ ಶಕ್ತಿ'

ವಿಜಯವಾಡದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಲಿದೆ ಕೆಎಸ್‌ಆರ್‌ಪಿ ಮೊದಲ ಮಹಿಳಾ ಪಡೆ

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ನೆರೆಯ ಆಂಧ್ರಪ್ರದೇಶದಲ್ಲಿ ಗಣರಾಜ್ಯೋತ್ಸವ ದಿನದಂದು 'ಕರ್ನಾಟಕ ಪೊಲೀಸ್ ಧ್ವಜ' ರಾರಾಜಿಸಲಿದೆ. ಆಂಧ್ರದ ವಿಜಯವಾಡದಲ್ಲಿ ನಡೆಯುವ ದಿನಾಚರಣೆಯ ಪಥಸಂಚಲನದಲ್ಲಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮೊದಲ ಮಹಿಳಾ ಪಡೆಯ ಸದಸ್ಯೆಯರು ಭಾಗವಹಿಸಲಿದ್ದಾರೆ.

ಜನವರಿ 26ರ ಗಣರಾಜ್ಯೋತ್ಸವ ದಿನದಂದು ಆಯಾ ರಾಜ್ಯಗಳಲ್ಲಿ ಧ್ವಜಾರೋಹಣ ಹಾಗೂ ವಿವಿಧ ರಕ್ಷಣಾ ಪಡೆಗಳ ಪಥಸಂಚಲನ ಏರ್ಪಡಿಸಲಾಗುತ್ತದೆ. ಇಂಥ ಸಂದರ್ಭದಲ್ಲಿ ಕರ್ನಾಟಕ ಪೊಲೀಸ್ ಇಲಾಖೆ, ರಾಜ್ಯದ ಪೊಲೀಸ್ ಪಡೆಯೊಂದನ್ನು ನೆರೆಯ ರಾಜ್ಯಗಳಿಗೆ ಪಥಸಂಚಲನಕ್ಕಾಗಿ ಕಳುಹಿಸುವ ಪದ್ಧತಿ ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ.

ಈ ಬಾರಿ, ಕೆಎಸ್‌ಆರ್‌ಪಿ ಮಹಿಳಾ ಪಡೆಯ 59 ಪೊಲೀಸರ ತಂಡವನ್ನು ಆಂಧ್ರಪ್ರದೇಶಕ್ಕೆ ಜ. 15ಕ್ಕೆ ಕಳುಹಿಸಿಕೊಡಲಾಗಿದೆ. ಆಂಧ್ರದಲ್ಲಿ ಕರ್ನಾಟಕ ಮಹಿಳಾ ಪೊಲೀಸರ ಶಕ್ತಿ ಪ್ರದರ್ಶನವಾಗಲಿದೆ.

ವಿಜಯವಾಡದ ಇಂದಿರಾಗಾಂಧಿ ಮುನ್ಸಿಪಲ್ ಕಾರ್ಪೋರೇಷನ್ ಮೈದಾನದಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ಪಥಸಂಚಲನದಲ್ಲಿ ಪಾಲ್ಗೊಳ್ಳಲು ಕರ್ನಾಟಕದ ಮಹಿಳಾ ಪೊಲೀಸರು ಮೈದಾನದಲ್ಲಿ ತಾಲೀಮು ಆರಂಭಿಸಿದ್ದಾರೆ.

ಇದೇ ಮೊದಲ ಬಾರಿಗೆ ಹೊರರಾಜ್ಯದ ಪಥಸಂಚಲನದಲ್ಲಿ ಭಾಗವಹಿಸುತ್ತಿರುವ ಮಹಿಳಾ ಪಡೆ, ಕಠಿಣ ಅಭ್ಯಾಸದಲ್ಲಿ ತೊಡಗಿದೆ. 'ಕರ್ನಾಟಕ ಪೊಲೀಸ್...' ಎಂಬ ಉದ್ಘೋಷದ ಮೂಲಕ ಧ್ವಜ ಹಿಡಿದು ಹೆಜ್ಜೆ ಹಾಕಲಿರುವ ಈ ಪಡೆಗೆ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ (ಆರ್‌ಪಿಐ) ಶ್ರೀದೇವಿ ಕಟಕದೊಂಡ ಸಾರಥಿ ಆಗಿದ್ದಾರೆ. ಸಹಾಯಕ ಕಮಾಂಡೆಂಟ್ ನಾಗೇಂದ್ರಸ್ವಾಮಿ ಮೇಲ್ವಿಚಾರಕರಾಗಿ ಪಡೆಯ ಜೊತೆಗಿದ್ದಾರೆ.

ಶಸ್ತ್ರಾಸ್ತ್ರವನ್ನು ಕೈಯಲ್ಲಿ ಹಿಡಿದು ಸಾರಥಿಯ ಆಜ್ಞೆಯಂತೆ ಶಿಸ್ತುಬದ್ಧವಾಗಿ ಹೆಜ್ಜೆ ಇರಿಸಲು ಮಹಿಳಾ ಪೊಲೀಸರು ಸಜ್ಜಾಗುತ್ತಿದ್ದಾರೆ.

'ಕೆಎಸ್‌ಆರ್‌ಪಿಯಲ್ಲಿ ಈ ಹಿಂದೆ ಪುರುಷರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದರು. 2015–16ರಲ್ಲಿ ಮೊದಲ ಬಾರಿಗೆ ಮಹಿಳೆಯರನ್ನು ನೇಮಿಸಿಕೊಳ್ಳಲಾಯಿತು. ಬೆಳಗಾವಿಯ 2ನೇ ಬೆಟಾಲಿಯನ್ ಹಾಗೂ ಬೆಂಗಳೂರಿನ 4ನೇ ಬೆಟಾಲಿಯನ್‌ಗಳಲ್ಲಿ ಮಹಿಳಾ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಅಂಥ ಮಹಿಳೆಯರ ತಂಡವನ್ನೇ ಪಥಸಂಚಲನಕ್ಕಾಗಿ ಈ ಬಾರಿ ಆಂಧ್ರಪ್ರದೇಶಕ್ಕೆ ಕಳುಹಿಸಲಾಗಿದೆ' ಎಂದು ಕೆಎಸ್‌ಆರ್‌ಪಿ 4ನೇ ಬೆಟಾಲಿಯನ್ ಕಮಾಂಡೆಂಟ್ ಕೆ.ಎಸ್.ರಘುನಾಥ್ ಹೇಳಿದರು.

'ಪ್ರತಿ ವರ್ಷವೂ ಪುರುಷರ ತಂಡಗಳು ಹೊರ ರಾಜ್ಯಗಳಿಗೆ ಹೋಗುತ್ತಿದ್ದವು. ಈ ವರ್ಷ ಮಹಿಳಾ ಪಡೆಯನ್ನು ಕಳುಹಿಸಲು, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಎಡಿಜಿಪಿ ಅಲೋಕ್‌ಕುಮಾರ್, ಐಜಿಪಿ ಎಸ್.ರವಿ ಇಚ್ಛಿಸಿದ್ದರು. ಎಲ್ಲರ ಆಸೆಯಂತೆ ಮಹಿಳಾ ಪಡೆ ಆಂಧ್ರಕ್ಕೆ ಹೋಗಿದೆ. ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆಯೂ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಪಿ ಮಹಿಳಾ ಪಡೆಯ ಸದಸ್ಯೆಯರು, ಆಂಧ್ರಪ್ರದೇಶ ವಿಜಯವಾಡದ ಮೈದಾನದಲ್ಲಿ ಪಥಸಂಚಲದ ತಾಲೀಮು ನಡೆಸಿದರು

'ಆಂಧ್ರಪ್ರದೇಶದ ಪುರುಷ ಪಡೆ ರಾಜ್ಯಕ್ಕೆ'

ಗಣರಾಜ್ಯೋತ್ಸವ ಆಚರಣೆಯಂದು ಪಥಸಂಚಲನದಲ್ಲಿ ಪಾಲ್ಗೊಳ್ಳಲು ಆಂಧ್ರಪ್ರದೇಶದ ಪೊಲೀಸ್ ಪಡೆ ಕರ್ನಾಟಕಕ್ಕೆ ಬಂದಿದೆ. ಕರ್ನಾಟಕದ ಮಹಿಳಾ ಪಡೆಯು ಆಂಧ್ರಕ್ಕೆ ಹೋಗಿರುವುದರಿಂದ, ಅದಕ್ಕೆ ಪ್ರತಿಯಾಗಿ ಅಲ್ಲಿಯ ಪೊಲೀಸರನ್ನು ಇಲ್ಲಿಗೆ ಕಳುಹಿಸಲಾಗಿದೆ.

'ಆಂಧ್ರದಲ್ಲಿರುವ ವಿವಿಧ ಪಡೆಗಳ ಜೊತೆಯಲ್ಲಿ ಕರ್ನಾಟಕದ ಮಹಿಳಾ ಪೊಲೀಸ್ ಪಡೆಯು ಪಥಸಂಚಲನ ಮಾಡಲಿದೆ. ಆಂಧ್ರದ ಹಿರಿಯ ಪೊಲೀಸ್ ಅಧಿಕಾರಿಗಳು ಕರ್ನಾಟಕದ ತಂಡದ ತಾಲೀಮಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಉತ್ತಮ ಪಥಸಂಚಲನಕ್ಕೆ ಬಹುಮಾನಗಳೂ ಇರುತ್ತವೆ' ಎಂದೂ ಕೆಎಸ್‌ಆರ್‌ಪಿ ಅಧಿಕಾರಿಯೊಬ್ಬರು ಹೇಳಿದರು.

ಪ್ರತ್ಯೇಕ ಅಪಘಾತ ಮೂವರ ಸಾವು

ಬೆಂಗಳೂರು: ನಗರದ ಎರಡು ಕಡೆಗಳಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಮೂವರು ಮೃತಪಟ್ಟಿದ್ದಾರೆ. ಮಲ್ಲೇಶ್ವರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಬೈಕ್ ಸವಾರ ಸುರೇಶ್ ಬಾಬು ಅಸುನೀಗಿದ್ದಾರೆ.

ಇಬ್ಬರ ಸಾವು: ಡಾ. ರಾಜ್‌ಕುಮಾರ್ ಸಮಾಧಿ ಎದುರಿನ ರಸ್ತೆಯಲ್ಲಿ ಭಾನುವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ಅಸ್ಸಾಂನ ಕುಮಾರ್ ಲಿಂಬೂ ಹಾಗೂ ಸುನೀಲ್ ಮೃತರು. 'ಕುಮಾರ್ ಹಾಗೂ ಸುನೀಲ್, ಆ್ಯಪ್ ಆಧರಿತ ದ್ವಿಚಕ್ರ ವಾಹನ ಬುಕ್ಕಿಂಗ್ ಮಾಡಿದ್ದರು. ಅದೇ ವಾಹನದಲ್ಲಿ ಇಬ್ಬರೂ ಹೊರಟಿದ್ದರು. ದ್ವಿಚಕ್ರ ವಾಹನ ಹಾಗೂ ಕ್ಯಾಂಟರ್ ನಡುವೆ ಅಪಘಾತವಾಗಿ ತೀವ್ರ ಗಾಯಗೊಂಡಿದ್ದ ಕುಮಾರ್ ಸ್ಥಳದಲ್ಲೇ ಅಸುನೀಗಿದರು. ಹಿಂಬದಿಯಲ್ಲಿ ಕುಳಿತಿದ್ದ ಸುನೀಲ್, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಬಿಬಿಎಂಪಿ ಚುನಾವಣೆ ಬಿಜೆಪಿ ಸಂಘಟನಾ ಸಭೆ

ಬೆಂಗಳೂರು: ಮುಂಬರುವ ಬಿಬಿಎಂಪಿ ಚುನಾವಣೆಗೆ ಪಕ್ಷವನ್ನು ಸನ್ನದ್ಧಗೊಳಿಸಲು ಇದೇ 25 ರಿಂದ ಮೂರು ದಿನಗಳ ಕಾಲ ಸಂಘಟನಾ ಸಭೆಯನ್ನು ಬಿಜೆಪಿ ಆಯೋಜಿಸಿದೆ.

ಸಭೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ ಎಂದು ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ತಿಳಿಸಿದ್ದಾರೆ.

ಬೆಂಗಳೂರು ಉತ್ತರ ಜಿಲ್ಲೆ, ದಕ್ಷಿಣ ಜಿಲ್ಲೆ ಮತ್ತು ಕೇಂದ್ರ ಜಿಲ್ಲಾ ಪದಾಧಿಕಾರಿಗಳು, ಮಂಡಲಗಳ ಅಧ್ಯಕ್ಷರು, ಪದಾಧಿಕಾರಿಗಳು, ಶಾಸಕರು ಮತ್ತು ಚುನಾಯಿತ ಜನಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸಭೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಅಶೋಕ, ಸವದಿ ಸಭೆ: ನಿಗಮ– ಮಂಡಳಿಗಳಿಗೆ ನೇಮಕ ಮಾಡುವ ಸಂಬಂಧ ಕಂದಾಯ ಸಚಿವ ಆರ್.ಅಶೋಕ ಮತ್ತು ವಿಧಾನಪರಿಷತ್ ಸದಸ್ಯರೂ ಆಗಿರುವ ಬಿಜೆಪಿ ರಾಜ್ಯ ಘಟಕ ಉಪಾಧ್ಯಕ್ಷ ಲಕ್ಷ್ಮಣ ಸವದಿ ಸೋಮವಾರ ಮಾತುಕತೆ ನಡೆಸಿದರು.

ಎತ್ತಿನಹೊಳೆ: ಕಾಮಗಾರಿ ಅಂತ್ಯಕ್ಕೆ ಸೆಪ್ಟೆಂಬರ್ ಗಡುವು

ಬೆಂಗಳೂರು: ಎತ್ತಿನಹೊಳೆ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಬಾಕಿ ಇರುವ ಎಲ್ಲ ಕಾಮಗಾರಿಗಳನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ದೇಶನ ನೀಡಿದ್ದಾರೆ.

ವಿಶ್ವೇಶ್ವರಯ್ಯ ಜಲ ನಿಗಮದ ನಿರ್ದೇಶಕ ಮಂಡಳಿ ಸಭೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆಯಿತು.

ಎತ್ತಿನಹೊಳೆ ಯೋಜನೆ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಬೊಮ್ಮಾಯಿ, ಸೆಪ್ಟೆಂಬರ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವಂತೆ ತಾಕೀತು ಮಾಡಿದರು ಎಂದು ಮೂಲಗಳು ತಿಳಿಸಿವೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ತೊಡಕುಗಳ ಕುರಿತು ಅಧಿಕಾರಿಗಳು ಸಭೆಯಲ್ಲಿ ವಿವರಿಸಿದರು. ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಚುರುಕು ಗೊಳಿಸುವಂತೆ ಸೂಚಿಸಿದ ಮುಖ್ಯಮಂತ್ರಿ, ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು. ಭದ್ರಾ ಮೇಲ್ದಂಡೆ ಯೋಜನೆ ನೀರನ್ನು ಬಳಸಿಕೊಂಡು ಕೆರೆಗಳನ್ನು ತುಂಬಿಸುವ ₹ 48 ಕೋಟಿ ವೆಚ್ಚದ ಕಾಮಗಾರಿಗಳ ಆರಂಭಕ್ಕೆ ನಿರ್ದೇಶಕ ಮಂಡಳಿ ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ ರಾವ್ ಪೇಶ್ವೆ ಇತರರು ಸಭೆಯಲ್ಲಿ ಹಾಜರಿದ್ದರು.

ಬಜೆಟ್ ಸಿದ್ಧತೆ ಆರಂಭ: ಸಿ.ಎಂ ಬೊಮ್ಮಾಯಿ

ಬೆಂಗಳೂರು: ಬಜೆಟ್ ಮಂಡಿಸಲು ಸಿದ್ಧತೆಗಳು ಆರಂಭವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಈ ಸಂಬಂಧ ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಮಂಗಳವಾರ(ಜ.25) ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಡಿಸೆಂಬರ್‌ನಲ್ಲಿ ಹಣಕಾಸು ಮತ್ತು ಆದಾಯ ಬರುವ ಇಲಾಖೆಗಳೊಂದಿಗೆ ಆಂತರಿಕ ಸಭೆಗಳನ್ನು ನಡೆಸಲಾಗಿದೆ. ಆದಾಯ ಸಂಗ್ರಹಣೆಯ ಗುರಿ ತಲುಪಲು ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಸೂಚನೆ ನೀಡಲಾಗಿದೆ. ಮಂಗಳವಾರದ ಬಳಿಕ ಎಲ್ಲಾ ಇಲಾಖೆಗಳ ಪ್ರಸ್ತಾವನೆಗಳು, ಸಂಘ ಸಂಸ್ಥೆಗಳ ಬಗ್ಗೆ ಚರ್ಚೆ ಮಾಡಿ ಬಜೆಟ್ ಸಿದ್ಧತೆ ಆರಂಭಿಸಲಾಗುವುದು ಎಂದು ವಿವರಿಸಿದರು.

ಅತ್ಯಾಚಾರ ಆರೋಪಿಗೆ ಹೈಕೋರ್ಟ್ ಜಾಮೀನು

ಬೆಂಗಳೂರು: ಸಹೋದ್ಯೋಗಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿದ್ದ ಖಾಸಗಿ ಕಂಪನಿ ವ್ಯವಸ್ಥಾಪಕರೊಬ್ಬರಿಗೆ ಹೈಕೋರ್ಟ್ ಜಾಮೀನು ನೀಡಿದೆ.

ಈ ಕುರಿತು ಆರೋಪಿ ಎಂ.ಆರ್. ಮನೋಜ್ ಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ವಿಚಾರಣೆ ನಡೆಸಿ, 'ಸಂತ್ರಸ್ತೆ ಮತ್ತು ಆರೋಪಿಯ ನಡುವಿನ ಸಂಬಂಧವು ಒಪ್ಪಿತವಾಗಿದೆ ಎಂಬುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ. ಆದ್ದರಿಂದ, ಜಾಮೀನು ಪಡೆಯಲು ಆರೋಪಿ ಅರ್ಹರಾಗಿದ್ದಾರೆ' ಎಂದು ಆದೇಶದಲ್ಲಿ ತಿಳಿಸಿದೆ.

'ಆರೋಪಿ ಹಾಗೂ ಅದೇ ಕಂಪನಿ ಉದ್ಯೋಗಿಯಾದ ಸಂತ್ರಸ್ತೆ ನಡುವೆ ಪರಿಚಯವಿದ್ದು, ಸಂತ್ರಸ್ತೆಗೆ 27 ವರ್ಷವಾಗಿದೆ. ಗಂಡಸಿನೊಂದಿಗೆ ಲೈಂಗಿಕ ಸಂಬಂಧ ಹೊಂದಿದರೆ, ಅದರ ಪರಿಣಾಮ ಏನು ಎಂಬುದು ಆಕೆಗೆ ತಿಳಿದಿದೆ. ಲೈಂಗಿಕ ಸಂಪರ್ಕದ ಪರಿಣಾಮ ಸಂತ್ರಸ್ತೆ ಎರಡು ಬಾರಿ ಗರ್ಭಪಾತ ಮಾಡಿಸಿಕೊಂಡಿದ್ದಾರೆ. ಹೀಗಾಗಿ ಆರೋಪಿಯು, ಸಂತ್ರಸ್ತೆಯೊಂದಿಗೆ ಒತ್ತಾಯಪೂರ್ವಕವಾಗಿ ಲೈಂಗಿಕ ಸಂಪರ್ಕ ಬೆಳೆಸಿದ್ದ ಎಂಬುದನ್ನು ನಂಬಲು ಕಷ್ಟವಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

'ಮನೋಜ್ ನನ್ನನ್ನು ಮದುವೆಯಾಗುವುದಾಗಿ ನಂಬಿಸಿ ಪದೇ ಪದೇ ಲೈಂಗಿಕ ಸಂಪರ್ಕ ಬೆಳೆಸಿದ್ದ. ಅನ್ಯ ಜಾತಿಗೆ ಸೇರಿದ ಕಾರಣಕ್ಕೆ ನನ್ನ ಮದುವೆಯಾಗಲು ನಿರಾಕರಿಸಿದ್ದ' ಎಂದು ಸಂತ್ರಸ್ತೆ ಆರೋಪಿಸಿದ್ದರು. ಈ ಕುರಿತಂತೆ ನಗರದ ಬ್ಯಾಟ ರಾಯನಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಆರೋಪಿಯನ್ನು ಬಂಧಿಸಲಾಗಿತ್ತು. ನಗರದ 70ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ನಿರಾಕರಿಸಿತ್ತು. ನಂತರ ಆರೋಪಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

'16 ವರ್ಷದ ಬಾಲಕಿ, ಪೋಷಕರ ಜೊತೆ ವಾಸವಿದ್ದಳು. ಶನಿವಾರ ರಾತ್ರಿ ಪೋಷಕರು, ಪಕ್ಕದ ಮನೆಗೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಬಾಲಕಿ, ಮನೆಯ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಂಬಂಧಿಕರ ಮನೆಯಲ್ಲಿ ಆತ್ಮಹತ್ಯೆ: ರಾಜಾಜಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನುಮ್ರಾಸ್ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತುಮಕೂರಿನ ನುಮ್ರಾಸ್, ರಾಜಾಜಿನಗರದ ಸಂಬಂಧಿಕರ ಮನೆಗೆ ಬಂದಿದ್ದರು. ಪತಿ ಕಿರುಕುಳದಿಂದ ಬೇಸತ್ತಿದ್ದರು ಎನ್ನಲಾದ ಅವರು, ಅದೇ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆತ್ಮಹತ್ಯೆ ಪ್ರಕರಣದಲ್ಲಿ ಸ್ನೇಹಿತ ಬಂಧನ: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ 23 ವರ್ಷದ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಸ್ನೇಹಿತ ನಾಗರಾಜು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಯುವತಿ ಹಾಗೂ ಆರೋಪಿ, ಒಂದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಪ್ರೀತಿಸುತ್ತಿದ್ದರು. ಯುವತಿ ಜೊತೆ ಹಲವು ವರ್ಷಗಳಿಂದ ಸುತ್ತಾಡಿದ್ದ ಆರೋಪಿ, ಇತ್ತೀಚೆಗೆ ದೂರವಾಗಲು ಯತ್ನಿಸಿದ್ದ. ಇದರಿಂದ ನೊಂದು ಯುವತಿ ಆತ್ಮಹತ್ಯೆ ಮಾಡಿಕೊಂಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಕಲಿ ನೇಮಕಾತಿ ಪತ್ರ: ಆರೋಪಿ ಬಂಧನ

ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಹಣ ಪಡೆದು, ನಕಲಿ ನೇಮಕಾತಿ ಪತ್ರ ಕೊಟ್ಟು ವಂಚಿಸುತ್ತಿದ್ದ ಸಂಜೀವ್ ಗಂಗಾರಾಮ್ ಗೋರ್ಖಾ ಎಂಬಾತನನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಪುಣೆಯ ಸಂಜೀವ್, 50ಕ್ಕೂ ಹೆಚ್ಚು ಮಂದಿಯನ್ನು ವಂಚಿಸಿದ್ದಾನೆ. ವಂಚನೆಗೆ ಒಳಗಾದ ಯುವಕ ಇತ್ತೀಚೆಗೆ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
Public are informed that our client intends to purchase Converted Land in Sy.No. 22 measuring 1 Acre 12 Guntas, bearing BBMP Khatha Sl.No. 648, Sy.No.22, Municipal No.45, (converted vide Official Memorandum dated 19.07.2014 bearing No.ALN(EVH)SR 42/2014-2015, issued by the Deputy Commissioner, Bangalore District) situated at **Chikkabellanduru Village, Varthur Hobli, Bangalore East Taluk, Bangalore** and bounded on the :
East by : Remaining portion of land bearing Sy.No. 22
West by : Remaining portion of land bearing Sy.No. 22
North by : Land bearing Sy.No. 20
South by: Road.
And converted land in Sy.No.22 measuring 13.12 Guntas, bearing BBMP Khatha Sl.No.649, Sy.No.11, Municipal No. 46 (converted vide Official Memorandum dated 20.12.2014, bearing ALN(EVH)SR 211/2014-2015 issued by Deputy Commissioner, Bangalore District) situated at **Chikkabellanduru Village, Varthur Hobli, Bangalore East Taluk, Bangalore District** and bounded on the :
East by : Remaining portion of land bearing Sy.No. 22
West by : Remaining portion of land bearing Sy.No. 22
North by : Land bearing Sy.No. 20
South by : Road.
From its owner **Sri.Karthik Krishna son of Sri.M.Krishna**
Persons having any right over the said property may lodge their objections / claims with documentary evidence within **7 days** from the date of publication of this notice, to the undersigned.
K.V. Narendra & Associates, Advocates
No.557, 2nd Floor, 9th A Main, 1st Stage, Indira Nagar, Bangalore - 560 038
Ph: 9945109229, 9481868801

BUSINESS

Business Offers

Finance

NRI'S INVESTMENTS
And Finance Available On Low Interest Against Properties, Land& Buildings, Finance Sites, Flats, Converted and Agriculture Lands. Also Introducing Luxury Cars Finance @ Very Low Interest Call: 7411265189

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Cook

URGENT REQD South Indian Female tamil cook experienced (veg & non veg) Home in Koramangala Contact 9739320225

Part-Time Jobs

WORK FROM HOME, Earn 30- 50K more per month. Qualification: PUC and above. Malleshwaram. 7899493370

PERSONAL

Change of Name

I, GOLLAHALLI SREERAMAIAH MANJUNATHA R/a #91 F1 Cm Apartments, 2nd circular roads, Dollar scheme Nandini Layout Bangalore-96 Have Changed my name to GOLLAHALLI SREERAMAIAH MANJUNATH vide Affidavit Dated 21/01/2022 Before Notary Mamatha .N.K, Bangalore

I, TANU BAPNA W/o. Deepak Surana R/a #42, 5th Cross, 8th Main, VasanthNagar, Bengaluru North- 560052 After Marriage Have Changed My Name to TANU SURANA vide Affidavit Dated: 21.01.2022 Before Notary R.S. Vijay, Bengaluru.

I, BANU, 40 Years,W/o Shouib, R/at #12/04, Gover House, Gover Road, Cox Town, Bangalore- 560005. Have Changed my name to ASMA SULTANA vide affidavit dated 24.01.2022 before notary C.V Earappa, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಸಕಾಲದಲ್ಲಿ ದೋಷ ಗುರುತಿಸಿ ನಿರ್ವಹಣೆ ಮಾಡದಿದ್ದರೆ ಅಪಾಯ!

ಮೇಲಿಂದ ಮೇಲೆ ಕಾಡುವ ಮೇಲ್ಸೇತುವೆ ಸಮಸ್ಯೆ

ಸುಮನಹಳ್ಳಿ ಬಳಿಯ ಮೇಲ್ಸೇತುವೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬೇಕಾಬಿಟ್ಟಿಯಾಗಿ ಬೆಳೆಯುತ್ತಿರುವ ನಗರದ ಸಂಚಾರ ದಟ್ಟಣೆ ನಿಭಾಯಿಸಲು ನಿರ್ಮಾಣ ಆಗಿರುವ ಮೇಲ್ಸೇತುವೆಗಳ ಅಸಮರ್ಪಕ ನಿರ್ವಹಣೆಯಿಂದ ಅವುಗಳಲ್ಲಿ ಆಗಾಗ ತೊಂದರೆ ಕಾಣಿಸಿಕೊಳ್ಳುತ್ತಿವೆ.

ಉದ್ಯಾನನಗರಿಯಲ್ಲಿ ಮೇಲ್ಸೇತುವೆ ನಿರ್ಮಾಣದ ಯುಗ 1999ರಿಂದ ಆರಂಭವಾಯಿತು. ಕೆ.ಆರ್.ಮಾರುಕಟ್ಟೆಯಿಂದ ಮೈಸೂರು ರಸ್ತೆ ಕಡೆಗೆ 2.65 ಕಿ.ಮೀ ಉದ್ದದ ಸೇತುವೆಯನ್ನು ₹ 97 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಯಿತು. ಬಳಿಕ ನಿರ್ಮಾಣವಾಗಿದ್ದು ರಿಚ್ಮಂಡ್ ವೃತ್ತದ ಬಳಿಯ ಮೇಲ್ಸೇತುವೆ. 1.32 ಕಿ.ಮೀ ಉದ್ದದ ಈ ಸೇತುವೆಯನ್ನು 2001ರಲ್ಲಿ ₹18 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಯಿತು. ಆ ನಂತರ ವರ್ಷದಿಂದ ವರ್ಷಕ್ಕೆ ಇವುಗಳ ಸಂಖ್ಯೆ ಹೆಚ್ಚುತ್ತಲೇ ಸಾಗುತ್ತಿದೆ.

ಅತಿಯಾದ ಸಂಚಾರ ದಟ್ಟಣೆ ಇರುವ ಒಂದೊಂದೇ ರಸ್ತೆಗಳನ್ನು ಗುರುತಿಸಿ ಪ್ರತಿವರ್ಷವೂ ಮೇಲ್ಸೇತು ವೆಗಳು ಹಾಗೂ ಕೆಳಸೇತುವೆಗಳನ್ನು ಬಿಡಿಎ ಮತ್ತು ಬಿಬಿಎಂಪಿ ನಿರ್ಮಾಣ ಮಾಡುತ್ತಲೇ ಇವೆ. ತುಮಕೂರು ರಸ್ತೆ, ಎಲೆಕ್ಟ್ರಾನಿಕ್ ಸಿಟಿ ಮತ್ತು ವಿಮಾನ ನಿಲ್ದಾಣ ರಸ್ತೆಯ ಫ್ಲೈಓವರ್‌ಗಳು ಬೆಂಗಳೂರಿನ ಮಟ್ಟಿಗೆ ಅತೀ ಉದ್ದದ ಸೇತುವೆಗಳು. ಈ ಮೂರನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೇ (ಎನ್‌ಎಚ್‌ಎಐ) ನಿರ್ವಹಣೆ ಮಾಡುತ್ತಿದೆ. ಉಳಿದವುಗಳನ್ನು ಬಿಬಿಎಂಪಿ ಮತ್ತು ಬಿಡಿಎ ನಿರ್ವಹಿಸುತ್ತಿವೆ.

ನಿರ್ಮಾಣ, ನಿರ್ವಹಣೆ ಹೇಗೆ: ಮೇಲ್ಸೇತುವೆಗಳನ್ನು ಎರಡು ರೀತಿಯಲ್ಲಿ ನಿರ್ಮಿಸಲಾಗುತ್ತದೆ. ಎರಡು ಕಂಬಗಳ ನಡುವೆ ಮೊದಲೇ ಸಿದ್ಧಪಡಿಸಲಾದ (ಪ್ರಿಕಾಸ್ಟ್) ಕಾಂಕ್ರಿಟ್ ತೊಲೆಗಳನ್ನು (ಸೆಗ್‌ಮೆಂಟ್) ಜೋಡಿಸಿ ಸೇತುವೆ ನಿರ್ಮಿಸುವುದು ಒಂದು ವಿಧಾನವಾದರೆ, ಕಂಬಗಳ ನಡುವೆ ಚಿಕ್ಕಚಿಕ್ಕ ಕಾಂಕ್ರಿಟ್ ಸೆಗ್‌ಮೆಂಟ್‌ಗಳನ್ನು ಜೋಡಿಸುವುದು ಮತ್ತೊಂದು ವಿಧಾನ. ಉಕ್ಕಿನ ಕೇಬಲ್‌ಗಳಿಗೆ ಈ ಚಿಕ್ಕ ಸೆಗ್‌ಮೆಂಟ್‌ಗಳನ್ನು ಪೋಣಿಸಿ ಬಿಗಿಗೊಳಿಸಲಾಗುತ್ತದೆ. ಕೇಬಲ್‌ಗಳ ಸಂಖ್ಯೆ ಸೇತುವೆಯಿಂದ ಸೇತುವೆಗೆ ಭಿನ್ನವಾಗಿರುತ್ತದೆ. ಆ ಕೇಬಲ್‌ಗಳೇ ಕಾಂಕ್ರಿಟ್ ಸೆಗ್‌ಮೆಂಟ್‌ಗಳನ್ನು ಅತ್ತಿತ್ತ ಸರಿಯದಂತೆ ಬಿಗಿಯಾಗಿ ಹಿಡಿದಿಡುತ್ತವೆ.

ಸೆಗ್‌ಮೆಂಟ್‌ಗಳ ಒಳಗಿನ ಟೊಳ್ಳಾದ ಭಾಗದಲ್ಲಿ ಪ್ರವೇಶಿಸಿ ನಿರ್ವಹಣೆ ಮಾಡಲು ಅವಕಾಶ ಇರುತ್ತದೆ. ಸಿಬ್ಬಂದಿ ಒಳ ನುಸುಳಿ ನಿರ್ವಹಣೆ ಮಾಡುತ್ತಾರೆ. ಸೇತುವೆಯ ಮೇಲೆ ಮಳೆ ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ವ್ಯವಸ್ಥೆ ಇರಬೇಕು. ಈ ವ್ಯವಸ್ಥೆ ಸರಿಯಾಗಿ ಆಗದಿದ್ದರೆ ಫ್ಲೈಓವರ್‌ನಿಂದ ಕೆಳಗಿನ ರಸ್ತೆಗೆ ನೀರು ಎಲ್ಲೆಂದರಲ್ಲಿ ಬೀಳುತ್ತದೆ. ಈ ರೀತಿ ಎಲ್ಲೆಂದರಲ್ಲಿ ನೀರು ಸುರಿಯುವುದು ಬೆಂಗಳೂರಿನ ಹಲವು ಮೇಲ್ಸೇತುವೆಗಳಲ್ಲಿ ಸಾಮಾನ್ಯದ ವಿಷಯ. 'ಆಗಾಗ ಪರಿಶೀಲನೆ ನಡೆಸಿ ನಿರ್ವಹಣೆ ಮಾಡಬೇಕಾಗುತ್ತದೆ. ಸೇತುವೆಗಳ ನಿರ್ವಹಣೆ ಬಗ್ಗೆ ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಮಾನದಂಡಗಳನ್ನು ನಿಗದಿ ಮಾಡಿದೆ. ಅದರಂತೆ ನಿರ್ವಹಣೆ ಮಾಡದಿದ್ದರೆ ಸೇತುವೆಯ ಕ್ಷಮತೆ ಕಡಿಮೆಯಾಗುತ್ತಾ ಹೋಗುತ್ತದೆ' ಎನ್ನುತ್ತಾರೆ ತಜ್ಞರು.

'ಎನ್‌ಎಚ್‌ಎಐ ವ್ಯಾಪ್ತಿಯಲ್ಲಿನ ಮೇಲ್ಸೇತುವೆಗಳ ನಿರ್ವಹಣೆ ತಕ್ಕಮಟ್ಟಿಗೆ ಆಗುತ್ತಿದೆ. ಆದರೆ, ಬಿಬಿಎಂಪಿ ಮತ್ತು ಬಿಡಿಎ ವ್ಯಾಪ್ತಿಯ ಮೇಲ್ಸೇತುವೆಗಳು ನಿರ್ವಹಣೆ ಆಗುತ್ತಿರುವ ಬಗ್ಗೆ ಅನುಮಾನ ಇದೆ. ಬಿರುಕುಗಳು ಕಾಣಿಸಿಕೊಂಡಿವೆಯೇ, ನೀರು ಹರಿಯುವ ವ್ಯವಸ್ಥೆ ಸರಿಯಾಗಿದೆಯೇ ಎಂಬುದನ್ನು ಆಗಾಗ ಗಮನಿಸಬೇಕು. ಸಕಾಲದಲ್ಲಿ ಎಚ್ಚೆತ್ತು ಲೋಪ ಸರಿಪಡಿಸದಿದ್ದರೆ ಅವುಗಳೇ ದೊಡ್ಡದಾಗಿ ಇಡೀ ಸೇತುವೆ ರಚನೆಗೇ ಧಕ್ಕೆ ಉಂಟಾಗುವ ಅಪಾಯ ಇರುತ್ತದೆ' ಎನ್ನುತ್ತಾರೆ ತಜ್ಞರು.

ನಗರದಲ್ಲಿ 25ಕ್ಕೂ ಹೆಚ್ಚು ದೊಡ್ಡ ಪ್ರಮಾಣದ ಮೇಲ್ಸೇತುವೆಗಳಿವೆ. ಮೇಲ್ಸೇತುವೆ, ಕೆಳಸೇತುವೆ ಹಾಗೂ ಗ್ರೇಡ್ ಸಪರೇಟರ್‌ಗಳು ಸೇರಿ ಒಟ್ಟು 59 ಸೇತುವೆಗಳಿವೆ. ಇವುಗಳ ನಿರ್ವಹಣೆಗೆ ಸ್ಥಳೀಯ ಆಡಳಿತಗಳು ಪ್ರತ್ಯೇಕ ಅನುದಾನ ಮೀಸಲಿಡಬೇಕು ಎನ್ನುವುದು ಅವರ ಅಭಿಪ್ರಾಯ.

'ರಾಜಕೀಯ ಹಸ್ತಕ್ಷೇಪ ಇರಕೂಡದು'

ಶ್ರೀಕಾಂತ್ ಚನ್ನಾಳ್

'ಮೇಲ್ಸೇತುವೆಗಳು ಅತ್ಯಂತ ಸದೃಢವಾಗಿರಬೇಕು. ಅವುಗಳನ್ನು ನಿರ್ಮಿಸುವಾಗ ಪಾಲಿಸಬೇಕಾದ ಮಾನದಂಡಗಳ ವಿಚಾರದಲ್ಲಿ ಯಾವುದೇ ಕಾರಣಕ್ಕೂ ರಾಜಿ ಆಗಬಾರದು' ಎನ್ನುತ್ತಾರೆ ಅಸೋಷಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಸಂಸ್ಥೆಯ ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಚನ್ನಾಳ್.

'ಮೇಲ್ಸೇತುವೆಗಳ ಕಾಮಗಾರಿಯನ್ನು ಕಳಪೆಯಾಗಿ ನಿರ್ವಹಿಸಲು ಅವಕಾಶವೇ ಇರಬಾರದು. ಕಾಮಗಾರಿಗಳು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು. ಆಗ ಸದೃಢ ಮೇಲ್ಸೇತುವೆಗಳು ನಿರ್ಮಾಣ ಸಾಧ್ಯ' ಎಂಬುದು ಅವರ ಅಭಿಪ್ರಾಯ.

'ಯಾವುದೇ ಮೇಲ್ಸೇತುವೆ ನಿರ್ಮಿಸುವಾಗ ಸಮಗ್ರವಾದ ಯೋಜನೆ ರೂಪಿಸಿಕೊಳ್ಳಬೇಕು. ಯೋಜನೆ ಸಮಗ್ರವಾಗಿ ರೂಪಿಸಿಕೊಳ್ಳದ ಕಾರಣ ಜಯದೇವ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿರ್ಮಿಸಿದ ಮೇಲ್ಸೇತುವೆಯನ್ನು 15 ವರ್ಷಗಳ ಒಳಗೆ ಒಡೆಯಬೇಕಾಯಿತು. ಪಶ್ಚಿಮ ಕಾರ್ಡ್ ರಸ್ತೆಯಲ್ಲೂ ಮೂರ್ನಾಲ್ಕು ಬಾರಿ ಯೋಜನೆ ಬದಲಿಸಿ ಐದು ವರ್ಷಗಳಿಂದ ಕಾಮಗಾರಿ ನಿರ್ವಹಿಸಲಾಗುತ್ತಿದೆ' ಎಂದು ಉದಾಹರಣೆ ನೀಡಿದರು.

'ಸಂಚಾರ ದಟ್ಟಣೆ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸುವಂತೆ ಮೇಲ್ಸೇತುವೆಗಳ ವಿನ್ಯಾಸ ರೂಪಿಸಬೇಕು. ಅವು ದಟ್ಟಣೆಯನ್ನು ಮುಂದೂಡಲಷ್ಟೇ ಸೀಮಿತವಾದರೆ ದೀರ್ಘ ಕಾಲದಲ್ಲಿ ಅವುಗಳಿಂದ ಯಾವುದೇ ಪ್ರಯೋಜನವಾಗದು' ಎಂದು ಹೇಳಿದರು.

ಅವೈಜ್ಞಾನಿಕ ಜಾಲಹಳ್ಳಿ ಸೇತುವೆ

ಗೊರಗೊಂಟೆ ಪಾಳ್ಯದಿಂದ ಹೆಬ್ಬಾಳ ಕಡೆಗೆ ಹೊರಟ ಕೂಡಲೇ ಸಿಗುವ ಜಾಲಹಳ್ಳಿ ರೈಲ್ವೆ ಮೇಲ್ಸೇತುವೆ ಮೇಲೆ ವಾಹನ ಚಾಲನೆ ಮಾಡಿಕೊಂಡು ಹೋದರೆ ನರಕ ನೆನಪಾಗುತ್ತದೆ.

'ಹೆಬ್ಬಾಳ ಕಡೆಯಿಂದ ತುಮಕೂರು ರಸ್ತೆ ಸಂಪರ್ಕಿಸಲು ಪ್ರಮುಖ ರಸ್ತೆ ಇದಾಗಿದೆ. ವಾಹನ ದಟ್ಟಣೆ ಸಮಸ್ಯೆ ನೀಗಿಸಲು ನಿರ್ಮಿಸಿದ ಸೇತುವೆಯ ಉದ್ದೇಶವೇ ಈಡೇರಿಲ್ಲ. ಸೇತುವೆಯನ್ನು ಕಿರಿದಾಗಿ ನಿರ್ಮಿಸಿರುವುದರಿಂದ ವಾಹನಗಳು ನಿತ್ಯ ಸಾಲುಗಟ್ಟಿ ನಿಲ್ಲುತ್ತಿವೆ. ಮುಂದಾಲೋಚನೆ ವಹಿಸಿ ವಿಶಾಲವಾಗಿ ಸೇತುವೆ ನಿರ್ಮಿಸಿದ್ದರೆ ಈಗ ಸಮಸ್ಯೆ ಕಾಡುತ್ತಿರಲಿಲ್ಲ' ಎನ್ನುತ್ತಾರೆ ಜಾಲಹಳ್ಳಿ ನಿವಾಸಿಗಳು.



ತುಮಕೂರು ರಸ್ತೆಯಲ್ಲಿನ ಶಿವಕುಮಾರಸ್ವಾಮೀಜಿ ಮೇಲ್ಸೇತುವೆ
—ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

ಎರಡೂವರೆ ಪಟ್ಟು ಸಾಮರ್ಥ್ಯ

ನಗರದಲ್ಲಿ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಬೆಂಗಳೂರಿನಲ್ಲೇ ನೋಂದಣಿ ಆಗಿರುವ 1 ಕೋಟಿಗೂ ಅಧಿಕ ವಾಹನಗಳಿವೆ. ಇವುಗಳಲ್ಲದೇ ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳಿಂದ ಬರುವ ವಾಹನಗಳ ಸಂಖ್ಯೆಯೂ ಕಡಿಮೆ ಇಲ್ಲ. ಈ ಎಲ್ಲ ವಾಹನಗಳ ಭಾರವನ್ನು ನಗರದ ಮೇಲ್ಸೇತುವೆಗಳು ತಡೆದುಕೊಳ್ಳಬೇಕಿದೆ.

ಫ್ಲೈಓವರ್‌ಗಳನ್ನು ನಿರ್ಮಿಸುವಾಗಲೇ ವಾಹನಗಳ ಭಾರಕ್ಕಿಂತಲೂ ಎರಡೂವರೆ ಪಟ್ಟು ಹೆಚ್ಚು ಭಾರ ತಡೆದುಕೊಳ್ಳುವಷ್ಟು ಸಾಮರ್ಥ್ಯವಿರುವಂತೆ ನೋಡಿಕೊಳ್ಳಲಾಗಿರುತ್ತದೆ. ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವ ಮೊದಲೇ ಅದರ ಭಾರ ಹೊರುವ ಸಾಮರ್ಥ್ಯವನ್ನು ಖಾತರಿಪಡಿಸಿಕೊಳ್ಳಲಾಗುತ್ತದೆ.

ಹಾಗಾಗಿ, ಮೇಲ್ಸೇತುವೆಗಳ ಮೇಲಿನ ಸಂಚಾರವೇ ಅಪಾಯ ಎಂಬ ಭಾವನೆ ತಪ್ಪು. ಆದರೆ, ಕಾಲಕಾಲಕ್ಕೆ ಪರಿಶೀಲನೆ ನಡೆಸಿ ದೋಷಗಳನ್ನು ಗುರುತಿಸಿಕೊಂಡು ನಿರ್ವಹಣೆ ಮಾಡಿಕೊಳ್ಳುವುದು ಸೂಕ್ತ ಎನ್ನುತ್ತಾರೆ ತಜ್ಞರು.

ಉಕ್ಕಿನ ಸೇತುವೆ ಎಂದರೆ ವೇಗದ ಕಾಮಗಾರಿ

ಉಕ್ಕಿನ ಸೇತುವೆಗೂ ಕಾಂಕ್ರಿಟ್ ಸೇತುವೆಗೂ ದಕ್ಷತೆಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಆದರೆ, ಉಕ್ಕಿನ ಸೇತುವೆಯಲ್ಲಿ ಕಾಮಗಾರಿ ವೇಗವಾಗಿ ಪೂರ್ಣಗೊಳಿಸಲು ಸಾಧ್ಯವಿದೆ ಎನ್ನುತ್ತಾರೆ ತಜ್ಞರು.

'ಶಿವಾನಂದ ವೃತ್ತದಲ್ಲಿ ಬೆಂಗಳೂರಿನ ಮೊದಲ ಉಕ್ಕಿನ ಸೇತುವೆ ನಿರ್ಮಾಣ ಆಗುತ್ತಿದೆ. ಆರೇ ತಿಂಗಳಲ್ಲಿ ಮುಗಿಸಬಹುದಾದ ಕಾಮಗಾರಿಗೆ ಐದು ವರ್ಷ ತಗುಲಿದೆ. ಕಾಂಕ್ರಿಟ್ ಮೇಲ್ಸೇತುವೆಗೆ ಹೋಲಿಸಿದರೆ ಉಕ್ಕಿನ ಸೇತುವೆ ನಿರ್ಮಾಣ ಮತ್ತು ನಿರ್ವಹಣಾ ವೆಚ್ಚ ಹೆಚ್ಚು. ಎರಡೇ ವರ್ಷದಲ್ಲಿ ಕಾಂಕ್ರಿಟ್ ಸೇತುವೆ ನಿರ್ಮಿಸಬಹುದಿತ್ತು' ಎಂದು ಶ್ರೀಕಾಂತ್ ಚನ್ನಾಳ್ ವಿವರಿಸಿದರು.

ಸಯ್ಯದ್, ಅಭಿನವ್‌ಗೆ ರಾಷ್ಟ್ರೀಯ ಬಾಲ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲೆ ಹಾಗೂ ಸಮಾಜ ಸೇವೆಯಲ್ಲಿ ಎಳೆಯ ವಯಸ್ಸಿನಲ್ಲೇ ತೊಡಗಿಸಿಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ನಗರದ ಇಬ್ಬರು ವಿದ್ಯಾರ್ಥಿಗಳಿಗೆ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುಯಲ್ ವೇದಿಕೆ ಮೂಲಕ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ನೀಡಿದರು.

ದೇಶದಾದ್ಯಂತ ಒಟ್ಟು 29 ಮಕ್ಕಳಿಗೆ ಕಲೆ, ಕ್ರೀಡೆ, ನಾವಿನ್ಯತೆ, ಶಿಕ್ಷಣ, ಸಾಹಸ ಹಾಗೂ ಸಮಾಜ ಸೇವೆ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಾಗಿ ಪ್ರಧಾನಿ ಅವರು ಈ ಪುರಸ್ಕಾರ ನೀಡಿ ನೇರ ಸಂವಾದ ನಡೆಸಿದರು. ಪ್ರಶಸ್ತಿ ಪುರಸ್ಕೃತರಲ್ಲಿ 14 ಹೆಣ್ಣು ಮಕ್ಕಳು ಇದ್ದ ಬಗ್ಗೆ ಪ್ರಧಾನಿ ಹರ್ಷ ವ್ಯಕ್ತಪಡಿಸಿದರು.

ಕೋವಿಡ್ ಕಾರಣಕ್ಕಾಗಿ ಬ್ಲಾಕ್ ಚೈನ್ ತಂತ್ರಜ್ಞಾನ ಬಳಸಿ ಪುರಸ್ಕೃತರಿಗೆ ಪ್ರಮಾಣಪತ್ರವನ್ನು ನೇರವಾಗಿ ಅವರ ಸ್ಮಾರ್ಟ್ ಫೋನ್‌ಗಳಿಗೆ ತಲುಪಿಸಲಾಯಿತು. ಈ ಪುರಸ್ಕಾರವು ಪದಕ, ₹1 ಲಕ್ಷ ನಗದು ಮತ್ತು ಪ್ರಮಾಣ ಪತ್ರವನ್ನು ಹೊಂದಿದೆ.

ಕಲಾ ಕ್ಷೇತ್ರದಲ್ಲಿನ ಸಾಧನೆಗಾಗಿ ಜೆ.ಪಿ. ನಗರದ ಸಂವೇದ್ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಸಯ್ಯದ್ ಫತೀನ್ ಅಹಮದ್ ಮತ್ತು ಸಮಾಜ ಸೇವೆ ಕ್ಷೇತ್ರದಲ್ಲಿನ ಸಾಧನೆಗಾಗಿ ಜವಾಹರ ನವೋದಯ ಶಾಲೆಯ 12ನೇ ತರಗತಿ ವಿದ್ಯಾರ್ಥಿ ಅಭಿನವ್ ಕುಮಾರ್ ಚೌಧರಿ ಈ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಕ್ಕೆ ಆಯ್ಕೆಯಾದ ಸಯ್ಯದ್ ಫತೀನ್ ಅಹಮದ್ ಮತ್ತು ಅಭಿನವ್ ಕುಮಾರ್ ಚೌದರಿ.

ಸಯ್ಯದ್ ಫತೀನ್ ಅಹಮದ್ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದಲ್ಲಿ ನುರಿತ ಪಿಯಾನೋ ವಾದಕರಾಗಿದ್ದಾರೆ. 14 ದೇಶಗಳಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿರುವ ಸೈಯದ್ ಫತೀನ್ ಅಹಮದ್, ಲಂಡನ್ ಸ್ಕೂಲ್ ಆಫ್ ಮ್ಯೂಸಿಕ್‌ನಲ್ಲಿ ಪದವಿ ಪಡೆದ ಅತ್ಯಂತ ಕಿರಿಯ ಭಾರತೀಯ.

ಅಭಿನವ್ ಕುಮಾರ್ ಚೌಧರಿ ಅವರು, ಸರ್ವರಿಗೂ ಸಮಪಾಲು ಧ್ಯೇಯದೊಂದಿಗೆ ಪುಸ್ತಕಗಳ ಮರುಬಳಕೆ, ಮರುಮಾರಾಟ ಹಾಗೂ ವಿದ್ಯಾರ್ಥಿ ವೇತನ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಮುಖ್ಯವಾಗಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ಅದರ ಮರುಬಳಕೆ ಚಟುವಟಿಕೆಗಳಲ್ಲಿಯೂ ಚೌಧರಿ ತೊಡಗಿಸಿಕೊಂಡಿದ್ದಾರೆ.

'ಕ್ರೂಸ್ ಬೈ ಬುಕ್ಸ್,ಕ್ರೂಸ್ ಎಂಪವರ್' ಮತ್ತು 'ಕ್ರೂಸ್ ಜೀರೋ ವೇಸ್ಟ್' ಹೆಸರಿನ ಕ್ರೂಸ್ ಸಂಸ್ಥೆಯ ಮೂಲಕ ಅಭಿನವ ಈ ಚಟುವಟಿಕೆಯಲ್ಲಿ ಸಾಧನೆ ಮಾಡಿದ್ದಾರೆ.

ಇದಕ್ಕಾಗಿ ರೈಸ್ ಸ್ಕಾಲರ್‌ಶಿಪ್‌ಗೆ ಆಯ್ಕೆಯಾಗಿದ್ದು 1000 ಡಾಲರ್ (₹74,623) ಹಣವನ್ನು ಸಂಸ್ಥೆಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನು 0.5 ಶತಕೋಟಿ ಡಾಲರ್ ಹಣವನ್ನು (₹3731.18 ಕೋಟಿ) ಸಂಸ್ಥೆಯ ಚಟುವಟಿಕೆಗಳಿಗೆ ತರುವ ನಿರೀಕ್ಷೆ ಇದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಈ ಇಬ್ಬರು ವಿದ್ಯಾರ್ಥಿಗಳಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅಭಿನಂದಿಸಿದರು.

ಏಪ್ರಿಲ್ 27 ರಂದು ಧರ್ಮಸ್ಥಳದಲ್ಲಿ ಉಚಿತ ಸಾಮೂಹಿಕ ವಿವಾಹ

ಪ್ರಜಾವಾಣಿ ವಾರ್ತೆ

ಉಜಿರೆ: ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದಲ್ಲಿ ಏಪ್ರಿಲ್ 27 ರಂದು ಸಂಜೆ ಗಂಟೆ 6.50 ಕ್ಕೆ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ 50ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭ ಆಯೋಜಿಸಲಾಗಿದೆ.

ವರನಿಗೆ ಧೋತಿ, ಶಾಲು ಮತ್ತು ವಧುವಿಗೆ ಸೀರೆ, ರವಿಕೆ ಕಣ, ಮಂಗಲಸೂತ್ರ ಹಾಗೂ ಹೂವಿನ ಹಾರ ನೀಡಲಾಗುವುದು. ಮದುವೆಯ ಎಲ್ಲಾ ವೆಚ್ಚವನ್ನು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ಭರಿಸಲಾಗುವುದು. ವರದಕ್ಷಿಣೆ ಹಾಗೂ ಮದುವೆಗಾಗುವ ದುಂದುವೆಚ್ಚವನ್ನು ತಡೆಯುವ ಉದ್ದೇಶದಿಂದ 1927ರಲ್ಲಿ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಉಚಿತ ಸಾಮೂಹಿಕ ವಿವಾಹ ಯೋಜನೆ ಪ್ರಾರಂಭಿಸಿದ್ದು ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹ ನಡೆಸಲಾಗುತ್ತದೆ.

ಎರಡನೇ ವಿವಾಹಕ್ಕೆ ಅವಕಾಶವಿಲ್ಲ. ಸಾಮೂಹಿಕ ವಿವಾಹದಲ್ಲಿ ಮದುವೆ ಆಗಲು ಬಯಸುವವರು ಏಪ್ರಿಲ್ 15 ರೊಳಗೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08256 266644/ ಸಂಪರ್ಕಿಸಬಹುದು.

2023ರ ಮಾರ್ಚ್‌ಗೆ ಸ್ಮಾರ್ಟ್‌ಸಿಟಿ ಕಾಮಗಾರಿ ಪೂರ್ಣ

ಬೆಂಗಳೂರು: ರಾಜ್ಯದ ಎಲ್ಲ ಏಳು ಸ್ಮಾರ್ಟ್ ಸಿಟಿ ಕಾಮಗಾರಿಗಳು 2023 ರ ಜುಲೈ ಅಂತ್ಯಕ್ಕೆ ಪೂರ್ಣಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಗಡುವು ನೀಡಿದೆ. ಆದರೆ, 2023 ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

7 ಸ್ಮಾರ್ಟ್ ಸಿಟಿಗಳ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

2020 ರ ಫೆಬ್ರುವರಿ ವೇಳೆಗೆ ₹855 ಕೋಟಿ ಮೊತ್ತದ ಕಾಮಗಾರಿಗಳು ನಡೆದಿದ್ದವು. ಅಲ್ಲಿಂದ ಈಚೆಗೆ ₹2,646 ಕೋಟಿ ವೆಚ್ಚದ ಕಾಮಗಾರಿಗಳು ನಡೆದಿವೆ ಎಂದರು.

'ನಾನು ಈ ಇಲಾಖೆಯ ಸಚಿವನಾದ ಬಳಿಕ ಸ್ಮಾರ್ಟ್ ಸಿಟಿಗಳ ಕಾಮಗಾರಿ ವೀಕ್ಷಣೆ ಮತ್ತು ಪ್ರಗತಿ ಪರಿಶೀಲನೆಗಾಗಿ ಪ್ರತಿ ನಗರಕ್ಕೂ 8 ರಿಂದ 10 ಬಾರಿ ಭೇಟಿ ನೀಡಿದ್ದೇನೆ. ಕಾಮಗಾರಿಗಳ ವೇಗ ಹೆಚ್ಚಿಸಲು ಎಲ್ಲ ರೀತಿಯ ಕ್ರಮ ತೆಗೆದುಕೊಂಡಿದ್ದೇವ' ಎಂದು ಹೇಳಿದರು.

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಜ.25ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಲಕ್ಷ್ಮಿ ರಸ್ತೆ, ಸುಶೀಲಾ ಮಾರುಕಟ್ಟೆ, ಶಾಂತಿ ನಗರ, ಬಸಪ್ಪಾ ರಸ್ತೆ, ನಂಜಪ್ಪ ರಸ್ತೆ, ಕಾಶಿ ನಗರ, ಇಸ್ರೊ ಬಡಾವಣೆ, ಸಿದ್ಧಾಪುರ, ಸಿದ್ಧಣ್ಣ ಬಡಾವಣೆ, ಜೆ.ಪಿ. ನಗರ ಎರಡನೇ, ಮೂರನೇ, ಐದನೇ ಹಂತ ಹಾಗೂ ಚಿಕ್ಕಲ್ಲಸಂದ್ರ, ಬಾಲಾಜಿ ಬಡಾವಣೆ, ವಿಜಯಶ್ರೀ ಬಡಾವಣೆ, ಮೂಕಾಂಬಿಕಾ ಬಡಾವಣೆ, ಬಿಎಚ್‌ಇಎಲ್ ಬಡಾವಣೆ, ಸಪ್ತಗಿರಿ ಬಡಾವಣೆ, ಹೊಸಹಳ್ಳಿ ರಸ್ತೆ, ಭುವನೇಶ್ವರಿ ನಗರ, ಆರ್. ಆರ್. ಬಡಾವಣೆ, ಅಂಬೇಡ್ಕರ ನಗರ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ

ಅರಕೆರೆ ಗ್ರಾಮ ಪಂಚಾಯಿತಿಯಿಂದ ನಿರ್ಮಾಣ

ಬಹೂಪಯೋಗಿ ಸ್ವಚ್ಛ ಸಂಕೀರ್ಣ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಸರಘಟ್ಟ ಹೋಬಳಿಯ ಅರಕೆರೆ ಗ್ರಾಮಪಂಚಾಯಿತಿ ವತಿಯಿಂದ ಅರಕೆರೆ ಗ್ರಾಮದಲ್ಲಿ ನಿರ್ಮಿಸಿರುವ ವಿನೂತನ ಬಹೂಪಯೋಗಿ ಸ್ವಚ್ಛ ಸಂಕೀರ್ಣ ಘಟಕವನ್ನು ಸೋಮವಾರ ಲೋಕಾರ್ಪಣೆಗೊಳಿಸಲಾಯಿತು.

2 ಎಕರೆ ಪ್ರದೇಶದಲ್ಲಿ ನಿರ್ಮಿಸಿರುವ ಈ ಘಟಕದಲ್ಲಿ 40 ಬಗೆಯ ಕಸಗಳನ್ನು ಬೇರ್ಪಡಿಸಲು ವ್ಯವಸ್ಥೆ ಮಾಡಲಾಗಿದೆ. ಹಸಿ ಮತ್ತು ಒಣ ಕಸ ವಿಂಗಡಣೆ ಘಟಕ, 1.50 ಲಕ್ಷ ಲೀಟರ್ ಸಾಮರ್ಥ್ಯದ ಮಳೆ ನೀರು ಸಂಗ್ರಹ ಘಟಕ, ಅಡುಗೆ ಮನೆಯಲ್ಲಿ ಸಂಗ್ರಹವಾಗುವ ಹಸಿ ತ್ಯಾಜ್ಯವನ್ನು 24 ಗಂಟೆಗಳಲ್ಲಿ ಗೊಬ್ಬರವನ್ನಾಗಿ ಪರಿವರ್ತಿಸುವ 'ಸಾವಯವ ತ್ಯಾಜ್ಯ ಪರಿವರ್ತಕ ಯಂತ್ರ', ಮೀನು ಸಾಕಾಣಿಕೆ ಹೊಂಡ, ಆಡಳಿತ ಕಚೇರಿ, ಸಭಾ ಭವನ ಹಾಗೂ ಎರೆಹುಳು ಗೊಬ್ಬರದ ತೊಟ್ಟಿ ಮುಂತಾದ ಸೌಕರ್ಯಗಳನ್ನು ಇಲ್ಲಿ ನಿರ್ಮಿಸಲಾಗಿದೆ.

ಸರ್ಕಾರದ ₹60 ಲಕ್ಷ ಅನುದಾನ ಸೇರಿದಂತೆ ದಾನಿಗಳಿಂದ ಸಂಗ್ರಹಿಸಿದ ದೇಣಿಗೆ ಹಣದಿಂದ ಆಧುನಿಕ ರೀತಿಯಲ್ಲಿ ಈ ಘಟಕ ನಿರ್ಮಿಸಲಾಗಿದೆ.

ಸೌಕರ್ಯಗಳನ್ನು ಉದ್ಘಾಟಿಸಿದ ಶಾಸಕ ಎಸ್.ಆರ್. ವಿಶ್ವನಾಥ್, 'ಅರಕೆರೆ ಗ್ರಾಮ ಪಂಚಾಯಿತಿಯು ಒಂದೇ ವರ್ಷದಲ್ಲಿ ತೆರಿಗೆ ಸಂಗ್ರಹದಲ್ಲಿ ದಾಖಲೆ ಸ್ಥಾಪಿಸಿದೆ. ರಸ್ತೆ, ಚರಂಡಿ, ಸ್ವಚ್ಛತೆ ಮತ್ತು ಕೆರೆ ಅಭಿವೃದ್ಧಿಯಂತಹ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಗ್ರಾಮಗಳ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ' ಎಂದರು.

'ಕಸದ ವೈಜ್ಞಾನಿಕ ವಿಂಗಡಣೆ ಘಟಕ ನಿರ್ಮಿಸುವ ಮೂಲಕ ಅರಕೆರೆ ಗ್ರಾಮ ಪಂಚಾಯಿತಿಯು ಇಡೀ ಬೆಂಗಳೂರಿಗೆ ಮಾದರಿಯಾಗಿದೆ. ಬಿಬಿಎಂಪಿಯ ಎಲ್ಲ ವಾರ್ಡ್‌ಗಳಲ್ಲಿ ಇಂತಹ ಘಟಕಗಳನ್ನು ನಿರ್ಮಿಸಿದರೆ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ' ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಎಚ್. ಎಸ್. ಗೋಪಿನಾಥ್, 'ಬೆಂಗಳೂರಿನ ಸುತ್ತಮುತ್ತಲಿರುವ ಗ್ರಾಮಪಂಚಾಯಿತಿಗಳಲ್ಲಿ ಕಸದ ಸಮಸ್ಯೆಯಿದೆ. ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಇಂತಹ ಘಟಕ ನಿರ್ಮಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ಎಲ್ಲೆಡೆ ಇಂತಹ ಘಟಕಗಳನ್ನು ನಿರ್ಮಿಸಲು ಸರ್ಕಾಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಆರ್. ತಿಮ್ಮೇಗೌಡ, ಉಪಾಧ್ಯಕ್ಷರಾದ ಮಂಜುಳಾ ಅರಸೇಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಸ್.ಚಂದ್ರಪ್ಪ, ಕಾರ್ಯದರ್ಶಿ ಉಸ್ಮಾನ್ ಇದ್ದರು.

ಸ್ವಚ್ಛ ಸಂಕೀರ್ಣ ಘಟಕದ ನೋಟ

ಚಿತ್ತಾಕರ್ಷಕ ಕಲಾಕೃತಿಗಳು

ಬಹೂಪಯೋಗಿ ಸ್ವಚ್ಛ ಸಂಕೀರ್ಣ ಘಟಕದ ಪ್ರವೇಶ ದ್ವಾರದ ಬಳಿ ಕಲ್ಲಿನಿಂದ ನಿರ್ಮಿಸಿರುವ ಎತ್ತಿನ ಗಾಡಿ, ಸುಂದರ ಉದ್ಯಾನ, ನೀರಿನ ಕಾರಂಜಿ, ಸೈನಿಕರು, ರೈತ, ಜೋಡೆತ್ತು, ಮೇಕೆಗಳು ಹಾಗೂ ಪೌರಕಾರ್ಮಿಕರ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ಈ ಮಾದರಿ ಕಲಾಕೃತಿಗಳು ಆಕರ್ಷಣೀಯವಾಗಿದ್ದು, ಜನರ ಗಮನ ಸೆಳೆಯುತ್ತಿವೆ.

ಧನ್ವಂತರಿ ವನದಲ್ಲಿ 60 ಬಗೆಯ ಔಷಧೀಯ ಸಸ್ಯ

ಬಹೂಪಯೋಗಿ ಸ್ವಚ್ಛ ಸಂಕೀರ್ಣ ಘಟಕದ ಪಕ್ಕದಲ್ಲೇ ಧನ್ವಂತರಿ ವನ ನಿರ್ಮಿಸಲಾಗಿದೆ. ಇಲ್ಲಿ 60 ಬಗೆಯ ಔಷಧಿ ಸಸ್ಯಗಳನ್ನು ಬೆಳೆಸಲಾಗಿದೆ. ಘಟಕದ ಸುತ್ತಮುತ್ತ 5 ಸಾವಿರ ಸಸಿಗಳನ್ನು ನೆಡಲಾಗಿದೆ.

ಅನ್ನದ ಭಾಷೆಗೆ ವಂಚನೆ ಸಲ್ಲದು; ಸಂಸ್ಕೃತಕ್ಕೂ ಆದ್ಯತೆ ಸಿಗಲಿ

ಪ್ರಜಾವಾಣಿ ಸಂವಾದ

ಬೆಂಗಳೂರು: ಸಂಸ್ಕೃತದ ಬಗ್ಗೆ ದ್ವೇಷ ಇಲ್ಲ. ಸಂಸ್ಕೃತದಲ್ಲಿನ ಜ್ಞಾನ ಭಂಡಾರ ಕನ್ನಡಕ್ಕೆ ಬರಬೇಕು. ಆದರೆ, ನಾಡಿನ ವಿಶ್ವವಿದ್ಯಾಲಯಗಳೇ ದುಸ್ಥಿತಿಯಲ್ಲಿವೆ. ಹೀಗಿರುವಾಗ, ಅತಿ ಕಡಿಮೆ ಸಂಖ್ಯೆಯಲ್ಲಿ ಅಧ್ಯಯನ ಮಾಡುವ ಮತ್ತು ಮಾತನಾಡುವ ಜನರಿಗಾಗಿ ಸರ್ಕಾರ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ₹359 ಕೋಟಿ ಹಾಗೂ ಅನುದಾನ ಮತ್ತು 100 ಎಕರೆ ಜಮೀನು ನೀಡುವ ಅಗತ್ಯ ಏನಿದೆ ಎನ್ನುವ ಪ್ರಶ್ನೆ 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ 'ಫೇಸ್‌ಬುಕ್ ಲೈವ್ ಸಂವಾದ'ದಲ್ಲಿ ಪ್ರಸ್ತಾಪವಾಯಿತು. ಈ ಬಗ್ಗೆ ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪೂರ್ಣ ಸಂವಾದವನ್ನು www.facebook.com/prajavani.net https://youtu.be/kJnIta1bjHk ವೀಕ್ಷಿಸಬಹುದು.

'ಬಿಕ್ಕಟ್ಟುಗಳಿಗೆ ಸ್ಪಂದಿಸುವ ವಿಶ್ವವಿದ್ಯಾಲಯ ಬೇಕು'

ಯಾವುದೇ ವಿಶ್ವವಿದ್ಯಾಲಯ ಸದ್ಯದ ಬಿಕ್ಕಟ್ಟುಗಳಿಗೆ ಯಾವ ರೀತಿ ಪರಿಹಾರ ಸೂಚಿಸುತ್ತದೆ ಎನ್ನುವುದು ಮುಖ್ಯವಾಗುತ್ತದೆ. ಮಹಿಳೆಯರು, ಪರಿಶಿಷ್ಟರು ಎದುರಿಸುತ್ತಿರುವ ಸವಾಲುಗಳಿಗೆ ಉತ್ತರ ನೀಡಬೇಕು. 12ನೇ ಶತಮಾನದಲ್ಲಿ ಸಮಾಜ ಎದುರಿಸುತ್ತಿದ್ದ ಬಿಕ್ಕಟ್ಟುಗಳಿಗೆ ಅಚ್ಚಕನ್ನಡದಲ್ಲಿ 'ವಚನ ವಿಶ್ವವಿದ್ಯಾಲಯ' ಉತ್ತರ ನೀಡಿತ್ತು. ಇಂತಹ ವಚನ ಸಾಹಿತ್ಯ ನಮ್ಮ ಆದ್ಯತೆಯಾಗಬೇಕು.

ಇಂದು ದೇವಭಾಷೆ ಮತ್ತು ಅನ್ನದ ಭಾಷೆ ನಡುವೆ ಹೋರಾಟ ನಡೆಯುತ್ತಿದೆ. ಬೇರೆ ವಿಶ್ವವಿದ್ಯಾಲಯಗಳಿಗೆ ಅನುದಾನವನ್ನೇ ಕೊಡುತ್ತಿಲ್ಲ. ಹಂಪಿ ವಿಶ್ವವಿದ್ಯಾಲಯದಲ್ಲಿ ನಿವೃತ್ತರಿಗೆ ಸೌಲಭ್ಯಗಳನ್ನು ನೀಡಿಲ್ಲ. ಸಾವಿರಾರು ಜನ ಊಟಕ್ಕೆ ಪರದಾಡುತ್ತಿರುವಾಗ ಇನ್ನೊಂದು ಭಾಷೆಯ ಬಗ್ಗೆ ಮಮಕಾರ ಸರಿಯೇ?

ಸಂಸ್ಕೃತದ ಬಗ್ಗೆ ಎಲ್ಲರಿಗೂ ಪ್ರೀತಿ ಮತ್ತು ಗೌರವ ಇದೆ. ಶತಮಾನಗಳಿಂದ ಸಂಸ್ಕೃತವನ್ನು ಜತೆಯಾಗಿಟ್ಟುಕೊಂಡಿದ್ದೇವೆ. ಮುಂದೆಯೂ ಇಟ್ಟುಕೊಳ್ಳುತ್ತೇವೆ. ಆದರೆ, ಕನ್ನಡಕ್ಕೆ ಮೊದಲ ಆದ್ಯತೆ ದೊರೆಯಬೇಕು.

ಸಂಸ್ಕೃತ ಭಾಷೆ ಬಹುಸಂಖ್ಯಾತರನ್ನು ಹೊರಗಿಟ್ಟಿದೆ. ಈ ಭಾಷೆಯಲ್ಲಿ ಒಳಗೊಳ್ಳುವಿಕೆ ಇಲ್ಲ. ಈಗಲೂ ಜನರ ಉಸಿರಾಗಿರುವ ಕನ್ನಡಕ್ಕೆ ಪ್ರಾಮುಖ್ಯತೆ ನೀಡಬೇಕಿದ್ದ ವಂಚನೆ ಮಾಡಲಾಗುತ್ತಿದೆ. ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಸಾವಿರಾರು ಮಂದಿ ಇದ್ದಾರೆ. ಆದರೆ, ಸಂಸ್ಕೃತ ಓದಿದವರು ಅತ್ಯಂತ ಕಡಿಮೆ ಮಂದಿ. ಆದ್ದರಿಂದ, ನಮ್ಮ ಮೊದಲ ಆದ್ಯತೆ ಅನ್ನದ ಪ್ರಶ್ನೆಯಾಗಬೇಕು. ಸಂಸ್ಕೃತ ಜನರ ಭಾಷೆ ಅಥವಾ ಆಡಳಿತ ಭಾಷೆ ಅಲ್ಲ. ಆದರೂ, ಅಲ್ಲಿನ ಜ್ಞಾನದ ಭಾಷೆಯನ್ನು ಕನ್ನಡದ ಜನ ಗೌರವಿಸಿದ್ದಾರೆ.

ಡಾ.ಎಂ.ಎಸ್. ಆಶಾದೇವಿ, ಕನ್ನಡ ಪ್ರಾಧ್ಯಾಪಕಿ, ಮಹಾರಾಣಿ ಕ್ಲಸ್ಟರ್ ವಿ.ವಿ., ಬೆಂಗಳೂರು.

'ಸಂಸ್ಕೃತದ ಸಂಶೋಧನೆಗೆ ಸಂಸ್ಥೆಯ ಬೆಂಬಲ ಅಗತ್ಯ'

ಸಂಸ್ಕೃತ ದೇವ ಭಾಷೆ ಎನ್ನುವುದಕ್ಕೆ ಯಾವ ವಾಸ್ತವಾಂಶವೂ ಇಲ್ಲ. 'ಇಂಗ್ಲಿಷ್ ಅನ್ನದ ಭಾಷೆ ಎಂದು ಪರಿಗಣಿಸಲಾಗುತ್ತದೆ. ಆದರೆ, ಕನ್ನಡ ಮತ್ತು ಸಂಸ್ಕೃತ ಮಧ್ಯೆ ವಿವಾದ ಸೃಷ್ಟಿಸಿದಾಗ ಕನ್ನಡ ಅನ್ನದ ಭಾಷೆಯಾಗುತ್ತದೆ. ಆಗ ಸಂಸ್ಕೃತ ದೇವ ಭಾಷೆಯಾಗುತ್ತದೆ. ಇದು ಸರಿಯಾದ ಕ್ರಮವಲ್ಲ.

ಕನ್ನಡದ ಭಾಗವನ್ನು ಸಂಸ್ಕೃತ ಕಸಿದುಕೊಳ್ಳುತ್ತಿದೆ ಎನ್ನುವುದು ಹಾಸ್ಯಾಸ್ಪದ. ಯಾವುದೇ ರಾಜ್ಯದ ಭಾಷೆ ಸಂಸ್ಕೃತವಲ್ಲ. ಸಂಸ್ಕೃತ ಸಂಶೋಧನೆಗೆ ಸಂಸ್ಥೆಯ ಬೆಂಬಲ ಬೇಕು. ಸಂಸ್ಕೃತದ ಅಮೂಲ್ಯ ಗ್ರಂಥ ಭಂಡಾರ ಉಳಿಸಬೇಕು. ಇದಕ್ಕಾಗಿ ಪಂಡಿತರು ಬೇಕು ಮತ್ತು ಅನುದಾನವೂ ಬೇಕು. ಹೀಗಾಗಿಯೇ, ಸಂಸ್ಕೃತ ವಿಶ್ವವಿದ್ಯಾಲಯ ಅಗತ್ಯತೆಯನ್ನು ಕಂಡುಕೊಂಡು ಸ್ಥಾಪಿಸಲಾಗುತ್ತಿದೆ. ಇದು ಹಲವು ವರ್ಷಗಳ ಬೇಡಿಕೆ.

ಸಂಸ್ಕೃತ ಪಾಠಶಾಲೆಯ ಕೋರ್ಸ್‌ಗಳಿಗೆ ಈ ಮೊದಲು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ಪ್ರಮಾಣಪತ್ರಗಳನ್ನು ನೀಡುತ್ತಿತ್ತು. ದೇಶದ ಯಾವುದೇ ವಿಶ್ವವಿದ್ಯಾಲಯವು ಈ ಪ್ರಮಾಣಪತ್ರ ಮಾನ್ಯತೆ ಅಥವಾ ಬೆಲೆ ನೀಡುತ್ತಿರಲಿಲ್ಲ. ಈಗ ಸಂಸ್ಕೃತ ವಿಶ್ವವಿದ್ಯಾಲಯ ಆರಂಭಿಸಿದ ನಂತರ ಈ ಪ್ರಮಾಣಪತ್ರಕ್ಕೆ ಮಾನ್ಯತೆ ದೊರೆತಿದೆ. ಸಂಸ್ಕೃತ ವಿ.ವಿ. ಅಗತ್ಯತೆಗೆ ಇದೂ ಒಂದು ಕಾರಣ.

ಕನ್ನಡ ವಿಶ್ವವಿದ್ಯಾಲಯ ಇರುವುದರ ನಾಡಿಗೆ ಏನೇನು ಕೊಡುಗೆ ನೀಡಿದೆ ಎನ್ನುವ ಪ್ರಶ್ನೆಯನ್ನು ಮುಂದಿಟ್ಟು ಚರ್ಚೆ ನಡೆಯಬೇಕಿದೆ. ಅದೇ ರೀತಿಯ ಪ್ರಶ್ನೆಯನ್ನು ಇತರ ವಿಶ್ವವಿದ್ಯಾಲಯಗಳಿಗೆ ಮುಂದಿಡಬೇಕು. ನಿತ್ಯ ಮಾತನಾಡುವ ಕನ್ನಡವನ್ನು ವಿಶ್ವ ವಿದ್ಯಾಲಯದಲ್ಲಿಯೇ ಕಲಿಯಬೇಕಾಗಿಲ್ಲ. ಸಂಸ್ಕೃತ ಜ್ಞಾನಭಂಡಾರದ ಅಧ್ಯಯನಕ್ಕೆ ಸಾಂಸ್ಥಿಕ, ಆರ್ಥಿಕ ಬೆಂಬಲ ಬೇಕಾಗಿದೆ.

ಡಾ. ನವೀನ್ ಭಟ್ ಗಂಗೋತ್ರಿ
ಸಹಾಯಕ ಪ್ರಾಧ್ಯಾಪಕ, ಅಮೃತ ವಿಶ್ವವಿದ್ಯಾಪೀಠಂ, ಕೊಯಮತ್ತೂರು

'ಸಂಸ್ಕೃತ ವಿ.ವಿ ಹಿಂದೆ ಹುನ್ನಾರ ಅಡಗಿದೆ'

ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸುವ ಉದ್ದೇಶದ ಹಿಂದೆ ಆರ್‌ಎಸ್‌ಎಸ್‌ನ ಹುನ್ನಾರ ಅಡಗಿದೆ. ದೇಶಕ್ಕೆ ಒಂದೇ ಭಾಷೆ ಇರಬೇಕು. ಅದು ಸಂಸ್ಕೃತವಾಗಿರಬೇಕು ಎನ್ನುವುದು ಆರ್‌ಎಸ್‌ಎಸ್‌ನ ಕಾರ್ಯಸೂಚಿ. ಆಯಾ ರಾಜ್ಯಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ದೊರೆತರೆ ಸಂಸ್ಕೃತಕ್ಕೆ ಮಾನ್ಯತೆ ದೊರೆಯಲು ಸಾಧ್ಯವಾಗುವುದಿಲ್ಲ. ಹೀಗಾಗಿಯೇ ವಿಶ್ವವಿದ್ಯಾಲಯ ಸ್ಥಾಪಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಪದವಿ ವಿದ್ಯಾರ್ಥಿಗಳಿಗೆ ಕನ್ನಡ ವಿಷಯವನ್ನು ಕಡ್ಡಾಯ ಮಾಡಿರುವುದನ್ನು ಸಂಸ್ಕೃತ ಭಾರತಿ ಟ್ರಸ್ಟ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದೆ. ಇದೇ ವಿಷಯವನ್ನು ಮುಂದಿಟ್ಟುಕೊಂಡು ಭವಿಷ್ಯದಲ್ಲಿ ಪ್ರಾಥಮಿಕ ಶಿಕ್ಷಣ, ಆಡಳಿತ ಮತ್ತು ಉದ್ಯೋಗದಲ್ಲಿಯೂ ಕನ್ನಡ ಕಡ್ಡಾಯ ಮಾಡುವುದನ್ನು ತೆಗೆದುಹಾಕುವಂತೆ ವಾದ ಮಂಡಿಸಬಹುದು. ಆದರಿಂದ, ಕನ್ನಡಿಗರಿಗೆ ಕುತ್ತು ಬರಲಿದೆ. ಹೀಗಾಗಿ, ಸಂಸ್ಕೃತ ಭಾರತಿ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ವಾಪಸ್ ಪಡೆಯಬೇಕು.

ಕೇಂದ್ರ ಸರ್ಕಾರವು ಸಂಸ್ಕೃತದ ಅಭಿವೃದ್ಧಿಗೆ ₹ 1,200 ಕೋಟಿ ಅನುದಾನ ನೀಡಿದೆ. ಆದರೆ, ಇತರ ಪ್ರಾದೇಶಿಕ ಭಾಷೆಗಳಿಗೆ ಅತ್ಯಲ್ಪ ಅನುದಾನ ನೀಡಿದೆ. ಸಂಸ್ಕೃತ ವಿಶ್ವವಿದ್ಯಾಲಯ ಅಥವಾ ಸಂಸ್ಕೃತದ ವಿರುದ್ಧ ನಾವು ಹೋರಾಟ ಮಾಡುತ್ತಿಲ್ಲ. ಈ ರೀತಿಯ ತಾರತಮ್ಯದ ವಿರುದ್ಧ ಮತ್ತು ಕನ್ನಡ ಕಡ್ಡಾಯ ಮಾಡಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದನ್ನು ವಿರೋಧಿಸಿ ಹೋರಾಟ ಮಾಡುತ್ತಿದ್ದೇವೆ. ರಾಜ್ಯದಲ್ಲಿನ ಬಹುತೇಕ ವಿಶ್ವವಿದ್ಯಾಲಯಗಳಿಗೆ ಅನುದಾನದ ಕೊರತೆ ಇದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಸೇರಿದಂತೆ ಎಲ್ಲ ವಿಶ್ವವಿದ್ಯಾಲಯಗಳನ್ನು ಉಳಿಸಿ ಬೆಳೆಸಬೇಕು.

ಅರುಣ ಜಾವಗಲ್,
ರಾಜ್ಯ ಸಂಘಟನಾ ಕಾರ್ಯದರ್ಶಿ, ಕರ್ನಾಟಕ ರಕ್ಷಣಾ ವೇದಿಕೆ

ಸುದ್ದಿ 2 ನಿಮಿಷ

ಸಭೆಗೆ ಯಾರನ್ನು ಕರೆದಿದ್ದರೋ ನನಗೆ ಗೊತ್ತಿಲ್ಲ: ಸಚಿವ ಕತ್ತಿ

ಬೆಳಗಾವಿ: 'ವಿಧಾನಪರಿಷತ್ ಚುನಾವಣೆಯಲ್ಲಿ ಸೋತ ಮಹಾಂತೇಶ ಕವಟಗಿಮಠ ಅವರು ಎಲ್ಲರನ್ನೂ ಕೂಡಿಸಿದ್ದರು. ಯಾವ ಶಾಸಕರನ್ನು ಕರೆದಿದ್ದಾರೆ, ಯಾರನ್ನು ಕರೆದಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ' ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಉಮೇಶ ಕತ್ತಿ ಹೇಳಿದರು.

ಹುಕ್ಕೇರಿ ತಾಲ್ಲೂಕಿನ ಅಂಕಲಿಯಲ್ಲಿ ಸೋಮವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಜಾರಕಿಹೊಳಿ ಸಹೋದರರನ್ನು ದೂರವಿಟ್ಟು ಸಭೆ ನಡೆಸಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕೆಲ ನಾಯಕರು ಬಂದಿದ್ದರು. ಕೆಲವರು ಬಂದಿಲ್ಲ. ಬಂದಿದ್ದೇಕೆ?, ಬರಲಿಲ್ಲವೇಕೆ? ಎಂದು ನಾನು ಯಾರನ್ನೂ ಕೇಳಿಲ್ಲ' ಎಂದರು.

'ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಬಲಪಡಿಸುವ ಬಗ್ಗೆ ಚರ್ಚಿಸುವುದಕ್ಕಾಗಿ ಸೇರಿದ್ದೆವು. ನಮ್ಮ ಮನೆಯಲ್ಲಿ ನಡೆದಿದ್ದು ಗುಪ್ತ ಸಭೆ ಅಲ್ಲ. ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಸೋತ ಕುರಿತು ವಿಸ್ತಾರವಾಗಿ ಚರ್ಚಿಸಿದ್ದೇವೆ. ಮುಂಬರುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗೆ ಕಾರ್ಯತಂತ್ರ ಹೇಗಿರಬೇಕು ಎಂಬ ಬಗ್ಗೆ ಸಮಾಲೋಚನೆ ನಡೆಸಿದ್ದೇವೆ' ಎಂದು ಅವರು ಹೇಳಿದರು.

'ಸಚಿವ ಸಂಪುಟ ವಿಸ್ತರಣೆ ಕುರಿತು ಮುಖ್ಯಮಂತ್ರಿ ನಿರ್ಧಾರ ತಗೆದುಕೊಳ್ಳುತ್ತಾರೆ. ಆ ಬಗ್ಗೆ ನಾನು ಮಾತನಾಡುವುದಿಲ್ಲ. ಸಭೆಯಲ್ಲಿ ಆ ಕುರಿತು ಚರ್ಚಿಸಿಲ್ಲ' ಎಂದು ಹೇಳಿದರು.

ನಿಯಮ ಉಲ್ಲಂಘಿಸಿ ಬಸವಕಲ್ಯಾಣ ಶಾಸಕ ಶರಣು ಸಲಗರ ಪಾದಯಾತ್ರೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಕೊರೊನಾ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರ ಮೆರವಣಿಗೆ ನಿಷೇಧಿಸಿದ್ದರೂ ಶಾಸಕ ಶರಣು ಸಲಗರ ಬಸವಕಲ್ಯಾಣದಿಂದ ಗೋಕುಳ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದವರೆಗೆ ಸೋಮವಾರ ಪಾದಯಾತ್ರೆ ನಡೆಸಿದರು.

ಶರಣು ಸಲಗರ ಶಾಸಕರಾಗಿ ಆಯ್ಕೆಯಾದರೆ ಅವರನ್ನು ಬಸವಕಲ್ಯಾಣದಿಂದ ಗೋಕುಳ ಗ್ರಾಮದವರೆಗೆ ಪಾದಯಾತ್ರೆಯಲ್ಲಿ ಕರೆದುಕೊಂಡು ಬರುವುದಾಗಿ ಗ್ರಾಮಸ್ಥರೊಬ್ಬರು ದೇವರಿಗೆ ಹರಕೆ ಹೊತ್ತಿದ್ದರಂತೆ. ಹೀಗಾಗಿ ಶಾಸಕರು ಬಸವಕಲ್ಯಾಣದಿಂದ 9 ಕಿ.ಮೀ ದೂರದವರೆಗೆ ಅಭಿಮಾನಿಗಳೊಂದಿಗೆ ಪಾದಯಾತ್ರೆ ಕೈಗೊಂಡರು.

ಪಾದಯಾತ್ರೆಯಲ್ಲಿದ್ದವರು ಮಾಸ್ಕ್ ಧರಿಸಿರಲಿಲ್ಲ. ಮಧ್ಯಾಹ್ನ ಪಾದಯಾತ್ರೆ ಗ್ರಾಮಕ್ಕೆ ತಲುಪಿದಾಗ ಅಲ್ಲಿನ ವೀರಭದ್ರೇಶ್ವರ ದೇವಸ್ಥಾನದಲ್ಲಿ ಅವರನ್ನು ಸ್ವಾಗತಿಸಿ ಸನ್ಮಾನಿಸಲಾಯಿತು.

'ಇಸ್ಲಾಂನಲ್ಲಿ ಸೂರ್ಯ ನಮಸ್ಕಾರ ನಿಷಿದ್ಧ'

ಮುಹಮ್ಮದ್ ಸಾದ್

ಬೆಂಗಳೂರು: 'ಇಸ್ಲಾಂ ಧರ್ಮದಲ್ಲಿ ಸೂರ್ಯ ನಮಸ್ಕಾರ ನಿಷಿದ್ಧ. ಮುಸ್ಲಿಂ ವಿದ್ಯಾರ್ಥಿಗಳು ಗಣರಾಜ್ಯೋತ್ಸವದಂದು ನಡೆಯಲಿರುವ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು' ಎಂದು ಜಮಾಅತೆ ಇಸ್ಲಾಮೀ ಹಿಂದ್‌ನ ರಾಜ್ಯ ಘಟಕದ ಅಧ್ಯಕ್ಷ ಬೆಳಗಾಮಿ ಮುಹಮ್ಮದ್ ಸಾದ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೂರ್ಯ ನಮಸ್ಕಾರದಂತಹ ಆರಾಧನೆಯನ್ನು ಇಸ್ಲಾಂ ಧರ್ಮದಲ್ಲಿ ನಿಷೇಧಿಸಲಾಗಿದೆ. ಮುಸ್ಲಿಂ ಪ್ರವಾದಿ ಮುಹಮ್ಮದ್ ಅವರಿಗೂ ಸಾಷ್ಟಾಂಗ ನಮಸ್ಕಾರ ಮಾಡಲು ಮುಸ್ಲಿಮರಿಗೆ ಅವಕಾಶ ಇಲ್ಲ' ಎಂದು ವಿವರಿಸಿದರು.

'ಸೂರ್ಯಾರಾಧನೆ ತಪ್ಪಿಸುವ ಉದ್ದೇಶದಿಂದ ಸೂರ್ಯೋದಯ ಹಾಗೂ ಸೂರ್ಯಾಸ್ತದ ಸಮಯದಲ್ಲಿ ನಮಾಜ್ ಮಾಡುವುದನ್ನೂ ನಿಷೇಧಿಸಲಾಗಿದೆ. ಇಸ್ಲಾಂನಲ್ಲಿ ಈ ನಿರ್ಬಂಧಗಳಿರುವುದರಿಂದ ಸೂರ್ಯ ನಮಸ್ಕಾರದಲ್ಲಿ ಪಾಲ್ಗೊಳ್ಳುವಂತೆ ಹೇಳುವುದು ಮುಸ್ಲಿಂ ಮಕ್ಕಳ ಮೂಲಭೂತ ಮತ್ತು ಸಾಂವಿಧಾನಿಕ ಹಕ್ಕಿನ ಉಲ್ಲಂಘನೆ' ಎಂದು ಆರೋಪಿಸಿದರು.

'ಸರ್ಕಾರ ಒಂದು ಸಮುದಾಯದ ಧಾರ್ಮಿಕ ಆಚರಣೆಯನ್ನು ಇತರರ ಮೇಲೆ ಹೇರಬಾರದು. ಶಾಲೆಗಳು ಹಾಗೂ ಶಿಕ್ಷಣ ಸಂಸ್ಥೆ ಆಡಳಿತಗಳು ದೇಶದ ವೈವಿಧ್ಯ ಮತ್ತು ಆಯ್ಕೆಯ ಸ್ವಾತಂತ್ರ್ಯವನ್ನು ಗೌರವಿಸಬೇಕು' ಎಂದೂ ಅವರು ಒತ್ತಾಯಿಸಿದರು.

'ಹಿಜಾಬ್ ಉಡುಗೆ ಆಯ್ಕೆಯ ಹಕ್ಕು': 'ಹಿಜಾಬ್' ಮುಸ್ಲಿಂ ಸಮುದಾಯ ಆಚರಿಸುವ ಉಡುಗೆ. ಉಡುಗೆ ಆಯ್ಕೆಯ ಹಕ್ಕು ಸಾಂವಿಧಾನಿಕ. ಮಹಿಳೆಯರ ಅಸ್ಮಿತೆ ಮತ್ತು ಪ್ರಗತಿಗೆ ಹಿಜಾಬ್ ಅಡ್ಡಿಯಾಗಿರಲಿಲ್ಲ. ಆದರೆ, ಉಡುಪಿಯ ಕಾಲೇಜುವೊಂದರಲ್ಲಿ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಿ, ತರಗತಿ ಪ್ರವೇಶಿಸದಂತೆ ಸೂಚಿಸಿರುವುದು ಕಳವಳಕಾರಿ' ಎಂದು ಮುಹಮ್ಮದ್ ಸಾದ್ ತಿಳಿಸಿದರು.

ಜಾಲಪ್ಪ ಕುಟುಂಬದವರ ಪ್ರತಿಭಟನೆ: ಲಾಠಿ ಪ್ರಹಾರ

ದೇವರಾಜ ಅರಸು ಟ್ರಸ್ಟ್ ಅಧ್ಯಕ್ಷರ ಆಯ್ಕೆ ವಿವಾದ: ಎಸ್‌.ಐ ಸೇರಿ ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ದೇವರಾಜ ಅರಸು ಶಿಕ್ಷಣ ಟ್ರಸ್ಟ್ ಅಧ್ಯಕ್ಷರಾಗಿ ಜಿ.ಎಚ್. ನಾಗರಾಜ್ ಅವರ ಆಯ್ಕೆ ಪ್ರಶ್ನಿಸಿ ಕೋಲಾರದಲ್ಲಿ ಸೋಮವಾರ ಟ್ರಸ್ಟ್‌ನ ಆಡಳಿತ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ಕೇಂದ್ರದ ಮಾಜಿ ಸಚಿವ ದಿವಂಗತ ಆರ್.ಎಲ್. ಜಾಲಪ್ಪ ಅವರ ಕುಟುಂಬದ ಸದಸ್ಯರು ಮತ್ತು ಬೆಂಬಲಿಗರನ್ನು ಪೊಲೀಸರು ತಡೆಯಲೆತ್ನಿಸಿದರು

ಕೋಲಾರ: ದೇವರಾಜ ಅರಸು ಶಿಕ್ಷಣ ಟ್ರಸ್ಟ್ ಅಧ್ಯಕ್ಷರಾಗಿ ಜಿ.ಎಚ್. ನಾಗರಾಜ್ ಅವರ ಆಯ್ಕೆ ಪ್ರಶ್ನಿಸಿ ಇಲ್ಲಿ ಸೋಮವಾರ ಟ್ರಸ್ಟ್‌ನ ಆಡಳಿತ ಕಚೇರಿಗೆ ಮುತ್ತಿಗೆ ಹಾಕಲೆತ್ನಿಸಿದ ಕೇಂದ್ರದ ಮಾಜಿ ಸಚಿವ ದಿವಂಗತ ಆರ್.ಎಲ್. ಜಾಲಪ್ಪ ಅವರ ಕುಟುಂಬದ ಸದಸ್ಯರು ಮತ್ತು ಬೆಂಬಲಿಗರ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದು, ಘಟನೆಯಲ್ಲಿ ಎಸ್.ಐ ಸೇರಿದಂತೆ ಇಬ್ಬರು ಗಾಯಗೊಂಡಿದ್ದಾರೆ.

ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದ ನಾಗರಾಜ್ ಅವರನ್ನು ಜಾಲಪ್ಪ ನಿಧನದ ನಂತರ ಇತ್ತೀಚೆಗೆ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿತ್ತು. ಆದರೆ, ಅವರ ಆಯ್ಕೆ ನಿಯಮಬಾಹಿರವೆಂದು ಆರೋಪಿಸಿದ ಜಾಲಪ್ಪ ಕುಟುಂಬದ ಸದಸ್ಯರು ಮತ್ತು ಬೆಂಬಲಿಗರು ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಎದುರು ಪ್ರತಿಭಟನೆ ನಡೆಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಿಂದ ಬಂದಿದ್ದ ನೂರಾರು ಮಂದಿ, ಜಾಲಪ್ಪ ಕುಟುಂಬದ ಬೆಂಬಲಿಗರು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಆವರಣದ ಆಡಳಿತ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಇದಕ್ಕೆ ಪೊಲೀಸರು ತಡೆಯೊಡ್ಡಿದ್ದರಿಂದ ಮಾತಿನ ಚಕಮಕಿ ನಡೆಯಿತು. ಪ್ರತಿಭಟನಕಾರರ ಗುಂಪು ಪೊಲೀಸರನ್ನು ತಳ್ಳಿ ಮುನ್ನುಗ್ಗಿದ್ದರಿಂದ ತಳ್ಳಾಟ ಉಂಟಾಯಿತು. ಈ ಹಂತದಲ್ಲಿ ನಗರ ಠಾಣೆ ಎಸ್.ಐ ಅಣ್ಣಯ್ಯ ಅವರ ಬಲ ಗಾಲಿಗೆ ಪೆಟ್ಟಾಯಿತು.

ಪರಿಸ್ಥಿತಿ ನಿಯಂತ್ರಣಕ್ಕಾಗಿ ಪೊಲೀಸರು ಪ್ರತಿಭಟನಕಾರರ ಮೇಲೆ ಲಘು ಲಾಠಿ ಪ್ರಹಾರ ನಡೆಸಿದಾಗ ಜಾಲಪ್ಪ ಅವರ ಕುಟುಂಬದ ಬೆಂಬಲಿಗ ಲಕ್ಷ್ಮೀಪತಿ ಅವರ ತಲೆಗೆ ಲಾಠಿ ತಾಗಿ ತೀವ್ರ ರಕ್ತಸ್ರಾವವಾಯಿತು. ಇದರಿಂದ ಮತ್ತಷ್ಟು ಕೆರಳಿದ ಪ್ರತಿಭಟನಕಾರರು ಪೊಲೀಸರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರದ ಆವರಣದಲ್ಲಿ ಹಾಕಿದ್ದ ನಾಗರಾಜ್ ಅವರ ಅಭಿನಂದನಾ ಸಮಾರಂಭದ ಫ್ಲೆಕ್ಸ್ ಮತ್ತು ಬ್ಯಾನರ್ ಕಿತ್ತೆಸೆದರು. ಫ್ಲೆಕ್ಸ್‌ಗಳಲ್ಲಿದ್ದ ನಾಗರಾಜ್ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಧಿಕ್ಕಾರ ಕೂಗಿದರು. ಆಡಳಿತ ಕಚೇರಿಯ ಒಳ ಹೋದ ಜಾಲಪ್ಪ ಕುಟುಂಬದ ಸದಸ್ಯರು ನಾಗರಾಜ್‌ಅವರಕೊಠಡಿಯಪ್ರವೇಶದ್ವಾರದಲ್ಲಿನ ನಾಮಫಲಕಕ್ಕೆ ಮಸಿ ಬಳಿದರು.

'ಹೈಕಮಾಂಡ್ ಸೂಚಿಸಿದ ಕಡೆ ಸ್ಪರ್ಧೆ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಬಾದಾಮಿ ಮಾತ್ರವಲ್ಲ, ರಾಜ್ಯದ ಇನ್ನೂ ಐದಾರು ಕಡೆ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಕರೆಯುತ್ತಿದ್ದಾರೆ. ಅಂತಿಮವಾಗಿ ಹೈಕಮಾಂಡ್‌ನವರು ಎಲ್ಲಿ ನಿಲ್ಲಲು ಹೇಳುವರೋ ಅಲ್ಲಿ ಸ್ಪರ್ಧಿಸುವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಗುಳೇದಗುಡ್ಡ ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಾದಾಮಿಯವರೂ ಕರೀತಾರೆ, ಚಾಮರಾಜಪೇಟೆ, ಕೊಪ್ಪಳ, ಕೋಲಾರ, ಹುಣಸೂರು, ಚಿಕ್ಕನಾಯಕಹಳ್ಳಿಯವರೂ ಕರೆಯುತ್ತಿದ್ದಾರೆ. ಆದರೆ ಎಲ್ಲಿ ನಿಲ್ಲಬೇಕು ಎಂಬುದರ ಬಗ್ಗೆ ಇನ್ನೂ ಚರ್ಚೆ ಆಗಿಲ್ಲ' ಎಂದರು.

'ಚುನಾವಣೆ ಸಂದರ್ಭದಲ್ಲಿ ನಾನು ರಾಜ್ಯದ ತುಂಬೆಲ್ಲ ಓಡಾಡಿ ಪ್ರಚಾರ ಮಾಡಬೇಕಿದೆ. ಹೈಕಮಾಂಡ್ ಹೇಳಿದ ಕಡೆ ಸ್ಪರ್ಧಿಸುವೆ' ಎಂದರು. ಆಗ ಸ್ಥಳದಲ್ಲಿದ್ದ ಬೆಂಬಲಿಗರು, 'ನಮಗೆ ನೀವೇ ಹೈಕಮಾಂಡ್. ಬಾದಾಮಿಯಿಂದಲೇ ಸ್ಪರ್ಧಿಸಿ' ಎಂದು ಒತ್ತಾಯಿಸಿದರು. 'ನಿಮ್ಮ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡಿರುತ್ತೇನೆ' ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಮಂತ್ರಿಯಾಗಲು ನಮಗೆ ಅರ್ಹತೆ ಇಲ್ಲವೇ: ರೇಣುಕಾಚಾರ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: 'ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲಾ ಮಂತ್ರಿಗಳಾದವರೇ ಮತ್ತೆ ಮಂತ್ರಿಗಳಾಗಬೇಕೆ? ನಮಗೆ ಆ ಅರ್ಹತೆ ಇಲ್ಲವೇ' ಎಂದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಪ್ರಶ್ನಿಸಿದ್ದಾರೆ.

'ರಾಜ್ಯದಲ್ಲಿನ ಕಾಂಗ್ರೆಸ್, ಜೆಡಿಎಸ್ ಮೈತ್ರಿ ಸರ್ಕಾರ ಪತನವಾಗಲು ನಾನು ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಎಷ್ಟು ಕಷ್ಟಪಟ್ಟಿದ್ದೇವೆ ಎಂಬುದು ನಮಗೆ ಮಾತ್ರ ಗೊತ್ತು' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ನಮ್ಮ ಕ್ಷೇತ್ರದ ಸಮಸ್ಯೆಗಳು ಹಾಗೂ ಆಗಬೇಕಾದ ಕೆಲಸಗಳ ಬಗ್ಗೆ ಹೇಳಲು ಕರೆ ಮಾಡಿದರೆ ಕೆಲ ಸಚಿವರು ಫೋನ್ ಕೂಡ ತೆಗೆಯುವುದಿಲ್ಲ. ಸಚಿವರು ಉತ್ತರ ಕೊಡುವ ಬದಲು, ಅವರ ಆಪ್ತ ಸಹಾಯಕರು ಷರಾ ಬರೆಯುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಹಲವು ಬಾರಿ ಸಚಿವರಾದವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಹೊಸಬರಿಗೆ ಅವಕಾಶ ನೀಡಬೇಕು. ಮಾರ್ಚ್ ಬದಲು ಈಗಲೇ ಸಚಿವ ಸಂಪುಟ ವಿಸ್ತರಣೆ ಮಾಡಬೇಕು. ಅಗತ್ಯ ಬಿದ್ದರೆ ನಾವು ದೆಹಲಿಗೂ ಹೋಗುತ್ತೇವೆ' ಎಂದು ಎಚ್ಚರಿಕೆ ನೀಡಿದರು.

'ಹೊಸಬರಿಗೆ ಸಚಿವ ಸ್ಥಾನ ಸಿಗಬೇಕು ಎಂದುನಾನುಹಾಗೂಯತ್ನಾಳ್‌ಒಂದಾಗಿದ್ದೇವೆ. ಇದು ಪಕ್ಷದ ವಿರುದ್ಧ ಬಂಡಾಯವಲ್ಲ' ಎಂದು ಸ್ಪಷ್ಟನೆ ನೀಡಿದರು.

'ಬಿ.ವೈ. ವಿಜಯೇಂದ್ರ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಅವರದ್ದೇ ಆದ ವರ್ಚಸ್ಸು ಇದೆ. ಅವರಿಗೆ ಸಚಿವ ಸ್ಥಾನ ಕೊಡುವುದು-ಬಿಡುವುದು ವರಿಷ್ಠರಿಗೆ ಬಿಟ್ಟ ವಿಚಾರ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವರಿಷ್ಠರು ಬಯಸಿದರೆ ಸಚಿವ ಸ್ಥಾನ ತೊರೆಯುವೆ: ಈಶ್ವರಪ್ಪ

ಶಿವಮೊಗ್ಗ: 'ವರಿಷ್ಠರು ಬಯಸಿದರೆ ಸಚಿವ ಸ್ಥಾನ ತೊರೆದು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಸಚಿವ ಸ್ಥಾನಕ್ಕಿಂತ ಪಕ್ಷ ಸಂಘಟನೆಯೇ ನನಗೆ ಹೆಚ್ಚು ಪ್ರಿಯ. ಬಿಜೆಪಿ ಶಿಸ್ತಿನ ಪಕ್ಷ. ವರಿಷ್ಠರು ಹೇಳಿದ ಹಾಗೆ ಎಲ್ಲರೂ ನಡೆದುಕೊಳ್ಳುವೆವು. ಸಚಿವ ಸ್ಥಾನ ಬಿಟ್ಟು ಪಕ್ಷದ ಸಂಘಟನೆಗೆ ಸೂಚಿಸಿದರೆ ಹೋಗಲೇಬೇಕು. ಪಕ್ಷ ಹೇಳಿದ ಯಾವುದೇ ಕೆಲಸಕ್ಕೂ ಸಿದ್ಧ' ಎಂದರು.

'ಬಿಜೆಪಿ ರಾಜ್ಯ ಘಟಕದ ಸ್ಥಾನ ಖಾಲಿ ಇಲ್ಲ. ನಳಿನ್ ಕುಮಾರ್ ಕಟೀಲ್ ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರು ಅಧ್ಯಕ್ಷರಾದ ಮೇಲೆ ನಡೆದ ಎಲ್ಲಾ ಚುನಾವಣೆಗಳಲ್ಲೂ ಬಿಜೆಪಿ ಗೆಲುವು ಪಡೆದಿದೆ. ಹಾಗಾಗಿ, ಕಟೀಲ್ ಅವರನ್ನು ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸಚಿವ ಸಂಪುಟದಲ್ಲಿ ನಾಲ್ಕು ಸ್ಥಾನಗಳು ಖಾಲಿ ಇವೆ. ಮುಂದಿನ ವಿಧಾನಸಭಾ ಚುನಾವಣೆ ಗಮನದಲ್ಲಿ ಇಟ್ಟುಕೊಂಡು ಸ್ಥಾನಗಳನ್ನು ಶೀಘ್ರ ಭರ್ತಿ ಮಾಡಬೇಕಿದೆ. ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಿದೆ. ವರಿಷ್ಠರು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

ಮಹದಾಯಿ ಪಾದಯಾತ್ರೆಗೂ ಚರ್ಚೆ: ಸಿದ್ದರಾಮಯ್ಯ

ಹುಬ್ಬಳ್ಳಿ: ಮಹದಾಯಿ ಯೋಜನೆ ಜಾರಿಗೆ ಒತ್ತಾಯಿಸಿ ಮೇಕೆದಾಟು ಮಾದರಿಯಲ್ಲಿ ಪಾದಯಾತ್ರೆ ಮಾಡುವ ಪ್ರಸ್ತಾವ ಪಕ್ಷದ ಮುಂದಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಮಹದಾಯಿ ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆ, ಕಲ್ಯಾಣ ಕರ್ನಾಟಕದ 371 ಜೆ ಅಭಿವೃದ್ಧಿಗೂ ಆಗ್ರಹಿಸಿ ಹೋರಾಟ ಮಾಡುತ್ತೇವೆ.ಮೇಕೆದಾಟುಪಾದಯಾತ್ರೆಪೂರ್ಣಗೊಂಡ ಬಳಿಕ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದರು.

'ಮಹದಾಯಿ ನೀರು ತರುವುದಾಗಿ ರಕ್ತದಲ್ಲಿ ಬರೆದುಕೊಡುತ್ತೇನೆ ಎಂದು ಯಡಿಯೂರಪ್ಪ ಚುನಾವಣಾ ಸಮಯದಲ್ಲಿ ಹುಬ್ಬಳ್ಳಿಯಲ್ಲಿ ನೀಡಿದ ಭರವಸೆ ಹುಸಿಯಾಗಿದೆ. ಉತ್ತರ ಕರ್ನಾಟಕ ಭಾಗಕ್ಕೆ ಈಗ ನೀರು ಬಂತಾ' ಎಂದು ಪ್ರಶ್ನಿಸಿದರು. 'ಮೇಕೆದಾಟು ಪಾದಯಾತ್ರೆ ಹತ್ತಿಕ್ಕುವ ಉದ್ದೇಶದಿಂದ ವಾರಾಂತ್ಯದ ಕರ್ಫ್ಯೂ ಜಾರಿಗೆ ತರಲಾಯಿತು' ಎಂದು ಆರೋಪಿಸಿದರು.

ನ್ಯಾಯಮೂರ್ತಿ ಕೆ.ಎಲ್.ಮಂಜುನಾಥ್ ನಿಧನ

ಬೆಂಗಳೂರು: ಕರ್ನಾಟಕ ಗಡಿ ಮತ್ತು ರಾಜ್ಯ ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷ ಹಾಗೂ ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯಾಗಿದ್ದ ಕೆ.ಎಲ್.ಮಂಜುನಾಥ್ ಶನಿವಾರ ಮಧ್ಯರಾತ್ರಿ ನಿಧನರಾದರು.

'ಕಾಮಾಕ್ಷಿಪಾಳ್ಯದ ಸ್ವಗೃಹದಲ್ಲಿ ಶನಿವಾರ ರಾತ್ರಿ 12 ಗಂಟೆ ವೇಳೆಯಲ್ಲಿ ಹೃದಯಾಘಾತದಿಂದ ಕೊನೆಯುಸಿರು ಎಳೆದರು' ಎಂದು ಮಂಜುನಾಥ್ ಅವರ ಕುಟುಂಬದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮಂಜುನಾಥ್ ಅವರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ 4.30ಕ್ಕೆ ಕುಣಿಗಲ್ ರಸ್ತೆಯ ಕೆಂಪಲಿಂಗನಹಳ್ಳಿಯ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು.

1974ರ ಸೆಪ್ಟೆಂಬರ್ 13ರಂದು ಹೈಕೋರ್ಟ್‌ನಲ್ಲಿ ವಕೀಲಿಕೆ ಆರಂಭಿಸಿದ್ದ ಮಂಜುನಾಥ್ 2000ದ ಡಿಸೆಂಬರ್ 11ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2015ರ ಏಪ್ರಿಲ್ 20ರಂದು ಹಿರಿಯ ನ್ಯಾಯಮೂರ್ತಿಯಾಗಿ ನಿವೃತ್ತಿ ಹೊಂದಿದ್ದರು.

ಹೈಕೋರ್ಟ್ ನ್ಯಾಯಮೂರ್ತಿಯಾಗಿ 14 ವರ್ಷ 4 ತಿಂಗಳ ಕಾಲ ವಿವಿಧ ಸ್ತರಗಳಲ್ಲಿ ದುಡಿದಿದ್ದ ಅವರು ವಿಭಾಗೀಯ ಪೀಠದ ನ್ಯಾಯಮೂರ್ತಿಯಾಗಿದ್ದಾಗಲೇ 10ಕ್ಕೂ ಸಾವಿರಕ್ಕೂ ಹೆಚ್ಚು ತೀರ್ಪು ನೀಡಿದ್ದರು. ವಕೀಲರಾಗಿ, ನ್ಯಾಯಮೂರ್ತಿಯಾಗಿ ಅಪಾರ ಜನಪ್ರೀತಿ ಗಳಿಸಿದ್ದ ಅವರು ಹೈಕೋರ್ಟ್‌ನಲ್ಲಿ ವಕೀಲರ ಗುಮಾಸ್ತರ ಸಂಘದ ಹುಟ್ಟಿಗೂ ಕಾರಣರಾಗಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಹೈಕೋರ್ಟ್ ನ್ಯಾಯಮೂರ್ತಿಗಳಾದ ಬಿ.ವೀರಪ್ಪ, ಎನ್.ಎಸ್. ಸಂಜಯಗೌಡ, ಲೋಕಾಯುಕ್ತ ವಿಶ್ವನಾಥ ಶೆಟ್ಟಿ, ವಕೀಲರ ಸಂಘದ ಅಧ್ಯಕ್ಷ ಬಿ.ವಿವೇಕ ರೆಡ್ಡಿ, ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್, ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಬಿ.ಎಸ್. ರಾಜಶೇಖರ್, ವಕೀಲರ ಪರಿಷತ್ ಸದಸ್ಯರು ಸೇರಿದಂತೆ ಅಪಾರ ಸಂಖ್ಯೆಯ ಹಿರಿ-ಕಿರಿಯ ವಕೀಲರು, ಆಪ್ತರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/216/217 ಟೆಲಿ–ಫ್ಯಾಕ್ಸ್:080–26534477
ಇ–ಮೇಲ್: director@jayadevacardiology.com/pstodirectorsjicr@gmail.com/pe.sjicrblr@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಕಾಮಗಾರಿಗಳ ಹೆಸರು
1	ಎಸ್‌ಜೆಐಸಿ&ಆರ್/ಟಿಎಸ್/66/ 2021–22 ದಿನಾಂಕ: 24.01.2022	ಬೆಂಗಳೂರಿನ SJICR ನಲ್ಲಿ ತುರ್ತು OPD, ಮುಖ್ಯ ಆಸ್ಪತ್ರೆ ಮತ್ತು ಹೊಸ 350 ಹಾಸಿಗೆಗಳ ಇನ್ಫೋಸಿಸ್ ಫೌಂಡೇಶನ್ ಬ್ಲಾಕ್ ಅನ್ನು ತಲುಪಲು ಬನ್ನೇರುಘಟ್ಟ ರಸ್ತೆಯ ಉದ್ದಕ್ಕೂ ಮತ್ತು ಕಾಂಪೌಂಡ್ ಗೋಡೆಯ ಮಾರ್ಪಾಡು ಮುಖ್ಯ ಪ್ರವೇಶ ದ್ವಾರ ಮತ್ತು ನಿರ್ಮಾಣ ಕಾಮಗಾರಿಗಳು.
2	ಎಸ್‌ಜೆಐಸಿ&ಆರ್/ಟಿಎಸ್/67/ 2021–22 ದಿನಾಂಕ: 24.01.2022	ಬೆಂಗಳೂರಿನ SJICR ನಲ್ಲಿ ಇನ್ಫೋಸಿಸ್ ಫೌಂಡೇಶನ್–SJICR ಬ್ಲಾಕ್‌ನ ಪೂರ್ವ, ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಉಪ–ಬೇಸ್ ಸೇರಿದಂತೆ ಕಾಂಕ್ರೀಟ್ ಪಾದಚಾರಿ ರಸ್ತೆಯನ್ನು ಒದಗಿಸುವುದು ಮತ್ತು ಇತರೆ ಕಾಮಗಾರಿಗಳನ್ನು ಒದಗಿಸುವುದು.
3	ಎಸ್‌ಜೆಐಸಿ&ಆರ್/ಟಿಎಸ್/68/ 2021–22 ದಿನಾಂಕ: 24.01.2022	SJICR, ಬನ್ನೇರುಘಟ್ಟ ರಸ್ತೆ, ಬೆಂಗಳೂರಿನಲ್ಲಿ ಮುಖ್ಯ ಕಟ್ಟಡದ ಸುತ್ತಲೂ ಹಾಲಿ ಇರುವ ರಸ್ತೆಯಲ್ಲಿ ಹಳೆಯ ಫುಟ್ ಪಾತ್ ನ್ನು ತೆಗದುಹಾಕಿ, ಪೇವರ್ ಬ್ಲಾಕ್‌ಗಳನ್ನು ಬಳಸಿ ಮರುನಿರ್ಮಾಣ ಮಾಡುವುದು, ಪಾರ್ಕಿಂಗ್ ಲಾಟ್, ಕಾಂಕ್ರೀಟ್ ಪಾದಚಾರಿ ಮಾರ್ಗವನ್ನು ಒದಗಿಸುವುದು ಮತ್ತು ಇತರ ಕೆಲಸಗಳು ಸೇರಿದಂತೆ ರಸ್ತೆಯನ್ನು ಉನ್ನತೀಕರಿಸುವ ಕಾಮಗಾರಿ.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://eproc.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ : 29.01.2022 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **02.03.2022ರ ಸಂಜೆ 4.00 ಗಂಟೆಯವರೆಗೆ.**
2. ಪ್ರಿ–ಬಿಡ್ ಮೀಟಿಂಗ್ ದಿನಾಂಕ : **15.02.2022ರ ಬೆಳಿಗ್ಗೆ 11:30 ಗಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **03.03.2022ರ ಸಂಜೆ 4:00 ಗಂಟೆಗೆ.**
4. ಇ.ಎಂ.ಡಿ. : ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
5. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com**ನ್ನು ನೋಡಬಹುದು.
6. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮೆ)
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ, ಕೃ.ಭಾ.ಜ.ನಿ.ನಿ, ನಾಎದಂಕಾ ವಿಭಾಗ, ಹುಣಸಗಿ–585215, ತಾ: ಹುಣಸಗಿ, ಜಿಲ್ಲೆ: ಯಾದಗಿರಿ
Office of the Executive Engineer, KBJNL NLBC Divn. Hunasagi - 585215

ಕ್ರಮಸಂ:ಕೃಭಾಜನಿನಿ/ನಾಎದಂಕಾವಿಹು/ಪಿಬಿ/ಟೆಂಡರ್/2021–22/ 620, 621 ದಿ: 20.01.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಅಡಿ 2021–22ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಒಟ್ಟು 08 ಕಾಮಗಾರಿಗಳಿಗಾಗಿ One Cover System ನ 06 ಕಾಮಗಾರಿಗಳು ಹಾಗೂ Two Cover System ನ 02 ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಲಾಗಿದ್ದು. Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗಾಗಿ ಈ ಕಛೇರಿ ಟೆಂಡರು ಪ್ರಕಟಣೆ ಸಂ 620 ಮತ್ತು 621 ದಿನಾಂಕ 20.01.2022 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ–ಪ್ರೋಟಲ್ ಮುಖಾಂತರ http://eproc.karnataka.gov.in/eportal/ines.seam ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ.ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ : 25.01.2022 ರಿಂದ 07.02.2022 ಸಂಜೆ 5.00 ಗಂಟೆಯವರೆಗೆ
2.	ಪೂರ್ವಭಾವಿ ಸಭೆಯ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರ ಕಚೇರಿಯಲ್ಲಿ)	ದಿನಾಂಕ : 31.01.2022 ಮುಂಜಾನೆ : 11.00 ಗಂಟೆಗೆ
3.	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿನಾಂಕ : 07.02.2022 ಸಂಜೆ 5.00 ಗಂಟೆಯವರೆಗೆ
4.	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರ ಕಚೇರಿಯಲ್ಲಿ)	ದಿನಾಂಕ : 09.02.2022 ಮುಂಜಾನೆ 11.00 ಗಂಟೆಗೆ
5.	ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರ ಕಚೇರಿಯಲ್ಲಿ)	ದಿನಾಂಕ : 14.02.2022 ಮುಂಜಾನೆ 11.00 ಗಂಟೆಗೆ (ತಾತ್ಕಾಲಿಕ)

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in/eportal/ines.seam ನಲ್ಲಿ ವೀಕ್ಷಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು, ಕೃ.ಭಾ.ಜ.ನಿ.ನಿ, ನಾಎದಂಕಾ ವಿಭಾಗ, ಹುಣಸಗಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, 2ನೇ & 4ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್.ಎಂ.ಟಿ. ಲೇಔಟ್, ಬಿಡಬ್ಲ್ಯುಎಸ್‌ಎಸ್‌ಬಿ ವಾಟರ್ ಟ್ಯಾಂಕ್ ಸಮೀಪ, ನಾಗಸಂದ್ರ (ಅಂ), ಬೆಂಗಳೂರು –73

ನಂ.: ಬಿಬಿಎಂಪಿ/ಕಾಪಾಅ/ದಾವಿ/ಟೆಂಡರ್/20/2021–22 ದಿನಾಂಕ: 24.01.2022

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ) (ಏಕ ಮತ್ತು ದ್ವಿ ಲಕೋಟೆ ಟೆಂಡರ್ ದಸ್ತಾವೇಜು ಪದ್ಧತಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) – ಕೆಡಬ್ಲ್ಯು1, 2 & 3
ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ ಇವರು, ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಕಾಮಗಾರಿಗಳ ಸಂಖ್ಯೆ
1	12	20.00 ಪ್ರತಿಯೊಂದಕ್ಕೆ	50,000/– ಪ್ರತಿಯೊಂದಕ್ಕೆ	2
2	13	20.00 ಪ್ರತಿಯೊಂದಕ್ಕೆ	50,000/– ಪ್ರತಿಯೊಂದಕ್ಕೆ	2
3	14	20.00 ಪ್ರತಿಯೊಂದಕ್ಕೆ	50,000/– ಪ್ರತಿಯೊಂದಕ್ಕೆ	3
4	15	20.00 ರಿಂದ 30.00	50,000/– ರಿಂದ 75,000/–	3
5	39	10.00 ರಿಂದ 20.00	25,000/– ರಿಂದ 50,000/–	3
6	41	20.00 ಪ್ರತಿಯೊಂದಕ್ಕೆ	50,000/– ಪ್ರತಿಯೊಂದಕ್ಕೆ	2
7	70	20.00 ಪ್ರತಿಯೊಂದಕ್ಕೆ	50,000/– ಪ್ರತಿಯೊಂದಕ್ಕೆ	2
8	71	20.00	50,000/–	1
ವರ್ಗ: ಪ.ಜಾ.				
9	15	40.00 ಪ್ರತಿಯೊಂದಕ್ಕೆ	1,00,000/– ಪ್ರತಿಯೊಂದಕ್ಕೆ	2
10	39	24.00	24,000/–	1
11	71	20.00	20,000/–	1
ವರ್ಗ: ಪ.ಪಂ.				
12	70	15.25	19,062.50	1
ದ್ವಿ ಲಕೋಟೆ ಪದ್ಧತಿ				
13	ದಾವ	85.00 ರಿಂದ 100.00	1,70,000/– ರಿಂದ 2,00,000/–	6
			ಒಟ್ಟು	29

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **07.02.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಟೆಂಡರ್ ಕ್ರ. ಸಂ. 24 ರಿಂದ 29ರವರೆಗೆ ಪೂರ್ವಭಾವಿ ಸಭೆಯು **09.02.2022**ರ **ಬೆಳಿಗ್ಗೆ 11:30 ಗಂಟೆ**ಗೆ ಮುಖ್ಯ ಅಭಿಯಂತರ ಕಛೇರಿ, ದಾಸರಹಳ್ಳಿ ವಲಯ, ಬಿಬಿಎಂಪಿಯಲ್ಲಿ ನಡೆಯಲಿದೆ. **(3)** ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **14.02.2022ರ ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. **(4)** ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬಿಬಿಎಂಪಿಯಲ್ಲಿ **https://eproc.karnataka.gov.in** ವೆಬ್‌ಸೈಟ್ ಮೂಲಕ **15.02.2022ರ ಸಂಜೆ 4:30 ಗಂಟೆ**ಗೆ ತೆರೆಯಲಾಗುವುದು. **(5)** ಆರ್ಥಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬಿಬಿಎಂಪಿಯಲ್ಲಿ **https://eproc.karnataka.gov.in** ವೆಬ್‌ಸೈಟ್ ಮೂಲಕ **16.02.2022ರ ಸಂಜೆ 4:30 ಗಂಟೆ**ಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸೇವಾನಿರತ ಅಭ್ಯರ್ಥಿಗಳಿಂದಲೂ ಎಡಿಜಿಪಿಗೆ (ನೇಮಕಾತಿ) ದೂರು

ಪಿಎಸ್ಐ ನೇಮಕಾತಿಯಲ್ಲೂ ಅಕ್ರಮ?

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ನೇಮಕಾತಿಯಲ್ಲಿ ಸ್ವ-ಜನಪಕ್ಷಪಾತ, ಭ್ರಷ್ಟಾಚಾರ, ಅಕ್ರಮ ಆರೋಪ ಪೊಲೀಸ್ ನೇಮಕಾತಿ ವಿಭಾಗಕ್ಕೂ ಅಂಟಿಕೊಂಡಿದೆ.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ- ಸಿವಿಲ್) 545 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಅನುಮಾನ ವ್ಯಕ್ತಪಡಿಸಿ ಹಲವು ಅಭ್ಯರ್ಥಿಗಳು ಪಿಎಸ್ಐ (ಸಿವಿಲ್) ನೇಮಕಾತಿ ಸಮಿತಿಯ ಅಧ್ಯಕ್ಷರಾಗಿರುವ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ (ಎಡಿಜಿಪಿ – ನೇಮಕಾತಿ) ದೂರು ನೀಡಿದ್ದಾರೆ.

ಈ ಪೈಕಿ, ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಲೇ ಸೇವಾನಿರತ ವಿಭಾಗದ ಮೀಸಲಾತಿ ಅಡಿ ಅರ್ಜಿ ಸಲ್ಲಿಸಿದವರೂ ಇದ್ದಾರೆ.

ಎಡಿಜಿಪಿಗೆ (ನೇಮಕಾತಿ) ದೂರು ನೀಡಿರುವ ಬೆಂಗಳೂರು ನಗರ ಸುಬ್ರಹ್ಮಣ್ಯಪುರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಡಿ.ಆರ್. ಮೋಹನ್‌ಕುಮಾರ್, ಕಲಬುರಗಿ ನಗರ ಬ್ರಹ್ಮಪುರ ಠಾಣೆಯ ಕಾನ್‌ಸ್ಟೆಬಲ್ ಮಾಳಪ್ಪ ಮತ್ತಿತರರು, 'ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ- 1ರ (ವಿವರಣಾತ್ಮಕ ಉತ್ತರ ಬಯಸುವ ಪ್ರಶ್ನೆಗಳು) ಉತ್ತರ ಪತ್ರಿಕೆಯನ್ನು ಮರು ಮೌಲ್ಯಮಾಪನ ಮಾಡಬೇಕು ಮತ್ತು ಅಂಕಗಳ ಮರುಎಣಿಕೆ ಮಾಡಿ ನ್ಯಾಯ ದೊರಕಿಸಿಕೊಡಬೇಕು' ಎಂದು ಮನವಿ ಮಾಡಿದ್ದಾರೆ.

ನೇಮಕಾತಿ ವೇಳೆ ಅಕ್ರಮ ನಡೆದಿರುವ ಅನುಮಾನ ವ್ಯಕ್ತಪಡಿಸಿ ನನಗೆ ನೇರವಾಗಿ ಯಾರೂ ದೂರು ಕೊಟ್ಟಿಲ್ಲ. ಆದರೆ, ಇಂಥ ದೂರುಗಳನ್ನು ಖಂಡಿತ ಪರಿಶೀಲಿಸುತ್ತೇನೆ

ಆರಗ ಜ್ಞಾನೇಂದ್ರ, ಗೃಹ ಸಚಿವ

ಇಲಾಖೆಯಲ್ಲಿ ಸೇವಾನಿರತರು ಮತ್ತು ಕಲ್ಯಾಣ ಕರ್ನಾಟಕ ಭಾಗಕ್ಕೆ ಹುದ್ದೆ ಮೀಸಲು ಸೇರಿ ಒಟ್ಟು 545 ಪಿಎಸ್ಐ ಹುದ್ದೆಗಳ ನೇಮಕಾತಿಗೆ 2021ರ ಜ. 21ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಅ. 3ರಂದು ನಡೆದ ದೈಹಿಕ ಕ್ಷಮತೆ ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳನ್ನು ಪತ್ರಿಕೆ- 1 (ವಿವರಣಾತ್ಮಕ) ಮತ್ತು ಪತ್ರಿಕೆ- 2 (ಬಹುಆಯ್ಕೆ) ಸ್ಪರ್ಧಾತ್ಮಕ ಪರೀಕ್ಷೆಗೆ ಆಯ್ಕೆ ಮಾಡಲಾಗಿತ್ತು. ಇದೇ 19ರಂದು ಹುದ್ದೆಗೆ ಆಯ್ಕೆಯಾದವರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

'ನಾನು ಪತ್ರಿಕೆ-2ರಲ್ಲಿ 99.375 ಅಂಕ ಪಡೆದಿದ್ದು, ಪತ್ರಿಕೆ- 1ನ್ನು ಕೂಡಾ ಚೆನ್ನಾಗಿಯೇ ಬರೆದಿದ್ದೇನೆ. ಪತ್ರಿಕೆ- 1ರಲ್ಲಿ ಕನಿಷ್ಠ 30 ಅಂಕ ಗಳಿಸುವ ವಿಶ್ವಾಸವಿದೆ. ಆಯ್ಕೆ ಪಟ್ಟಿ ಪ್ರಕಾರ ಮೀಸಲಾತಿ '3ಬಿ' ಪ್ರವರ್ಗದಲ್ಲಿ ಆಯ್ಕೆಯಾದ ಕೊನೆಯ ಅಭ್ಯರ್ಥಿ 123.875 ಅಂಕ ಗಳಿಸಿದ್ದಾರೆ. ನಾನು ಈ ಹಿಂದೆ ಪಿಎಸ್ಐ ಹುದ್ದೆಗೆ ಬರೆದ ಪರೀಕ್ಷೆಗಳ ಪತ್ರಿಕೆ- 1ರಲ್ಲಿ 2017ರಲ್ಲಿ 37, 2018ರಲ್ಲಿ 33 ಮತ್ತು 29, 2019ರಲ್ಲಿ 32 ಮತ್ತು 27.5 ಅಂಕ ಪಡೆದಿದ್ದು, ಯಾವುದೇ ಪರೀಕ್ಷೆಯಲ್ಲಿ 27ಕ್ಕಿಂತ ಕಡಿಮೆ ಅಂಕ ಪಡೆದಿಲ್ಲ. 2017ರಲ್ಲಿ ಸಂದರ್ಶನಕ್ಕೂ ಆಯ್ಕೆ ಆಗಿದ್ದೆ. ಆದರೆ, ಪ್ರಸಕ್ತ ಸಾಲಿನ ಪರೀಕ್ಷೆಯಲ್ಲಿ ಕನಿಷ್ಠ ಅಂಕ ಪಡೆದರೂ ಆಯ್ಕೆ ಆಗಲೇಬೇಕಿತ್ತು' ಎಂದು ಮನವಿಯಲ್ಲಿ ಮೋಹನ್ ಕುಮಾರ್ ವಿವರಿಸಿದ್ದಾರೆ.

'ಪತ್ರಿಕೆ-2ರಲ್ಲಿ 103.3 ಅಂಕ ಪಡೆದಿರುವ ಮಾಳಪ್ಪ ಅವರದ್ದೂ ಇದೇ ಅಹವಾಲು. 'ಪತ್ರಿಕೆ- 1ರಲ್ಲಿ ಕನಿಷ್ಠ 30 ಅಂಕ ಗಳಿಸುವ ವಿಶ್ವಾಸವಿದೆ. ಆಯ್ಕೆ ಪಟ್ಟಿಯಲ್ಲಿ ಮೀಸಲಾತಿ '2ಎ' ಕಲ್ಯಾಣ ಕರ್ನಾಟಕ ಪ್ರವರ್ಗದಲ್ಲಿ ಆಯ್ಕೆಯಾದ ಕೊನೆಯ ಅಭ್ಯರ್ಥಿ 121.375 ಅಂಕ ಗಳಿಸಿದ್ದಾರೆ. ಪಿಎಸ್ಐ ಹುದ್ದೆಗೆ ಈ ಹಿಂದೆ ಬರೆದ ಪರೀಕ್ಷೆಗಳ ಪತ್ರಿಕೆ-1ರಲ್ಲಿ 2017ರಲ್ಲಿ 28, 2018ರಲ್ಲಿ 32, 2019ರಲ್ಲಿ 31.5 ಮತ್ತು 29 ಅಂಕ ಪಡೆದಿದ್ದು, ಯಾವುದೇ ಪರೀಕ್ಷೆಯಲ್ಲಿ 28ಕ್ಕಿಂತ ಕಡಿಮೆ ಅಂಕ ಪಡೆದಿಲ್ಲ. 2018ರಲ್ಲಿ ಸಂದರ್ಶನಕ್ಕೂ ಆಯ್ಕೆ ಆಗಿದ್ದೆ. ಈ ಬಾರಿ 18 ಅಂಕ ಪಡೆದರೂ ಆಯ್ಕೆ ಆಗಲೇಬೇಕಿತ್ತು' ಎಂದು ಮಾಳಪ್ಪ ತಿಳಿಸಿದ್ದಾರೆ. ಹುದ್ದೆ ವಂಚಿತ ಹಲವು ಅಭ್ಯರ್ಥಿಗಳು ಇದೇ ರೀತಿ ಮನವಿ ಸಲ್ಲಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪಿಎಸ್ಐ (ಸಿವಿಲ್) ನೇಮಕಾತಿ ಸಮಿತಿ ಅಧ್ಯಕ್ಷ ಅಮೃತ್ ಪಾಲ್ ಅವರಿಗೆ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಬ್ಲೂ ಟೂತ್ ಸಾಧನ ಬಳಕೆ?

'ತಾತ್ಕಾಲಿಕ ನೇಮಕಾತಿ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪೂರ್ಣ ಮಾಹಿತಿ (ಜನ್ಮ ದಿನಾಂಕ, ಮನೆ ವಿಳಾಸ ಇತ್ಯಾದಿ) ನೀಡಿಲ್ಲ. ಆ ಮೂಲಕ, ಯಾವ ಭಾಗದಿಂದ ಅಭ್ಯರ್ಥಿಗಳು ಆಯ್ಕೆ ಆಗಿದ್ದಾರೆಂಬ ಮಾಹಿತಿಯನ್ನು ಮುಚ್ಚಿಡಲಾಗಿದೆ. ಕಲಬುರಗಿ ಜಿಲ್ಲೆಯ ಕೇಂದ್ರದಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆ ಆಗಿರುವ ಮಾಹಿತಿ ಇದೆ. ಪತ್ರಿಕೆ -2ರಲ್ಲಿ (ಬಹು ಆಯ್ಕೆ) ಹೆಚ್ಚಿನ ಅಂಕ ಗಳಿಸಿದವರು, ಪತ್ರಿಕೆ- 1ರಲ್ಲಿ ಹೆಚ್ಚು ಅಂಕ ಗಳಿಸಲು ಸಾಧ್ಯ ಆಗಿಲ್ಲ. ಬ್ಲೂ ಟೂತ್ ಸಾಧನ ಬಳಸಿ ಪರೀಕ್ಷೆ ಬರೆದಿರುವ ಸಂದೇಹವಿದೆ' ಎಂದೂ ಕೆಲವರು ದೂರಿನಲ್ಲಿ ಅನುಮಾನ ವ್ಯಕ್ತಪಡಿಸಿದ್ದಾರೆ.

ಕೋವಿಡ್: ಕೊಂಚ ಇಳಿಮುಖ

ನವದೆಹಲಿ(ಪಿಟಿಐ) : ಸೋಮವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ದೇಶದಾದ್ಯಂತ ಹೊಸದಾಗಿ 3,06,064 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ಎರಡು ದಿನಗಳಿಂದ ಕೊರೊನಾ ಸೋಂಕು ಪ್ರಕರಣಗಳು ಇಳಿಮುಖವಾಗಿವೆ.

ಶನಿವಾರ 3.37 ಲಕ್ಷ ಹಾಗೂ ಭಾನುವಾರ 3.33 ಲಕ್ಷ ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಭಾನುವಾರಕ್ಕೆ ಹೋಲಿಸಿದರೆ ಸೋಮವಾರ 27,469 ಪ್ರಕರಣಗಳು ಕಡಿಮೆಯಾಗಿವೆ.

ಇದೇ ಅವಧಿಯಲ್ಲಿ 439 ಮಂದಿ ಮೃತಪಟ್ಟಿದ್ದಾರೆ. ಸೋಂಕಿನಿಂದಾಗಿ ಇದುವರೆಗೆ ಒಟ್ಟು 4,89,848 ಮಂದಿ ಸಾವಿಗೀಡಾಗಿದ್ದಾರೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 22,49,335ಕ್ಕೆ ತಲುಪಿದೆ. 2,43,495 ಮಂದಿ ಸೋಂಕಿನಿಂದ ಗುಣಮುಖರಾಗಿದ್ದು, ದೈನಂದಿನ ಕೋವಿಡ್ ದೃಢ ಪ್ರಮಾಣವು ಶೇ 20.75ರಷ್ಟು ಆಗಿದೆ.

ದೇಶದಲ್ಲಿ ಇದುವರೆಗೆ 162.26 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ.

ಶರದ್ ಪವಾರ್‌ಗೆ ಕೋವಿಡ್ ದೃಢ: ಮುಂಬೈ: ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಅವರಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ. ಈ ಕುರಿತು ಟ್ವೀಟ್ ಮೂಲಕ ಅವರು ಮಾಹಿತಿ ಹಂಚಿಕೊಂಡಿದ್ದಾರೆ.

'ನನಗೆ ಕೋವಿಡ್ ದೃಢಪಟ್ಟಿದೆ. ಆದರೆ, ಚಿಂತಿಸಬೇಕಾಗಿಲ್ಲ. ವೈದ್ಯರು ಸೂಚಿಸಿದ ಪ್ರಕಾರ ಔಷಧ ತೆಗೆದುಕೊಳ್ಳುತ್ತಿದ್ದೇನೆ. ಕಳೆದ ಕೆಲವು ದಿನಗಳಿಂದ ನನ್ನ ಸಂಪರ್ಕಕ್ಕೆ ಬಂದವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ ಹಾಗೂ ಮುನ್ನೆಚ್ಚರಿಕೆವಹಿಸಿ' ಎಂದು ಎಂದು ಶರದ್ ಪವಾರ್ ಅವರು ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

ಮುಂಬೈ: ಶಾಲೆಗಳು ಪುನರಾರಂಭ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಸೋಮವಾರದಿಂದ ಶಾಲೆಗಳು ಪುನರಾರಂಭವಾಗಿದ್ದು, ಒಂದರಿಂದ 12ನೇ ತರಗತಿವರೆಗಿನ ಮಕ್ಕಳು ಖುಷಿಯಿಂದ ಶಾಲೆಗಳಿಗೆ ಹಾಜರಾಗಿದ್ದರು. ಕೋವಿಡ್ ಪ್ರಕರಣಗಳು ಹೆಚ್ಚಾದ ಕಾರಣ ಜನವರಿ ಮೊದಲ ವಾರದಲ್ಲಿ ಶಾಲೆಗಳನ್ನು ಮುಚ್ಚಲಾಗಿತ್ತು. ಆದರೆ, ಈಗ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿರುವ ಕಾರಣ ಶಾಲೆಗಳ ಪುನರಾರಂಭಕ್ಕೆ ಸರ್ಕಾರ ಅನುಮತಿ ನೀಡಿದೆ.

ಗಣರಾಜ್ಯೋತ್ಸವ: 15 ವರ್ಷಕ್ಕಿಂತ ಕೆಳಗಿನವರಿಗೆ ಅವಕಾಶ ಇಲ್ಲ

ನವದೆಹಲಿ(ಪಿಟಿಐ): ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಅವಕಾಶ ಇಲ್ಲ. ಅಲ್ಲದೆ ಎರಡು ಡೋಸ್ ಲಸಿಕೆ ಪಡೆದವರಿಗಷ್ಟೇ ಅವಕಾಶ ನೀಡಲಾಗುತ್ತದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲಾಗಿದೆ. ಮಾಸ್ಕ್ ಧರಿಸುವುದು, ದೈಹಿಕ ಅಂತರ ಕಾಪಾಡುವುದು ಸೇರಿದಂತೆ ಕೋವಿಡ್ ನಿಯಂತ್ರಣಕ್ಕೆ ರೂಪಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಲಾಗಿದೆ.

ಹೊಗೇನಕಲ್: ತಮಿಳುನಾಡಿನ ಯೋಜನೆಗೆ ಪರಿಸರವಾದಿಗಳು, ಹೋರಾಟಗಾರರ ವಿರೋಧ

ಗಡಿ ಗುರುತು: ಜಂಟಿ ಸರ್ವೆಗೆ ಒತ್ತಾಯ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಹೊಗೇನಕಲ್ ಕುಡಿಯುವ ನೀರಿನ ಎರಡನೇ ಹಂತದ ಯೋಜನೆಯನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಘೋಷಿಸಿದ ಬೆನ್ನಲ್ಲೇ ಗಡಿ ಜಿಲ್ಲೆಯಲ್ಲಿ ವಿರೋಧ ವ್ಯಕ್ತವಾಗಿದೆ. ಒಂದೂವರೆ ದಶಕದ ಹಿಂದೆ ಸ್ಥಗಿತಗೊಂಡಿದ್ದ, ಎರಡೂ ರಾಜ್ಯಗಳ ಗಡಿ ಗುರುತಿಸುವ ಜಂಟಿ ಸರ್ವೆ ನಡೆಸಬೇಕು ಎಂಬ ಕೂಗು ಮತ್ತೆ ಎದ್ದಿದೆ.

'ಹೊಗೇನಕಲ್ ಜಲಪಾತ ಪ್ರದೇಶದಲ್ಲಿರುವ 400 ಎಕರೆ ವ್ಯಾಪ್ತಿಯ ನಡುಗುಡ್ಡೆ ಕರ್ನಾಟಕಕ್ಕೆ ಸೇರಿದೆ. ಅಲ್ಲಿ ತಮಿಳುನಾಡು ಪ್ರವಾಸೋದ್ಯಮ ಚಟುವಟಿಕೆ ನಡೆಸುತ್ತಿದೆ. ಮೊದಲ ಹಂತದ ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನೂ ಕೈಗೆತ್ತಿಕೊಂಡಿದೆ. ಜಂಟಿ ಸರ್ವೆ ನಡೆಸಿದರೆ ಆ ಜಾಗ ಕರ್ನಾಟಕ್ಕೆ ಸೇರುವುದು ಖಚಿತ. 2005–2006ರಲ್ಲಿ ಸರ್ವೆ ಆರಂಭವಾಗಿತ್ತಾದರೂ ತಮಿಳುನಾಡಿನ ಅಸಹಕಾರ ಹಾಗೂ ರಾಜ್ಯ ಸರ್ಕಾರ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಸ್ಥಗಿತಗೊಂಡಿತ್ತು. ಈಗ ಮತ್ತೆ ಜಂಟಿ ಸರ್ವೆ ಆರಂಭಿಸಬೇಕು' ಎಂದು ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿಯ ಪದಾಧಿಕಾರಿಗಳು, ಹೋರಾಟಗಾರರು ಒತ್ತಾಯಿಸಿದ್ದಾರೆ.

ಜಲಪಾತದ ಬಳಿ 2005ರಲ್ಲಿ ತಮಿಳುನಾಡು ಸರ್ಕಾರ ವೀಕ್ಷಣಾ ಗೋಪುರ, ತೂಗು ಸೇತುವೆ ಅಭಿವೃದ್ಧಿ ಕಾರ್ಯ ಆರಂಭಿಸಿದಾಗ ಜಿಲ್ಲೆಯ ಪರಿಸರವಾದಿಗಳು, ಹೋರಾಟ ಸಮಿತಿ ಸೇರಿ 'ಹೊಗೇನಕಲ್ ಜಲಪಾತ ಉಳಿಸಿ' ಎಂಬ ಸಂಘಟನೆ ರೂಪಿಸಿ ಪ್ರತಿಭಟಿಸಿದ್ದರು.

ಅದರ ಫಲವಾಗಿ ಅದೇ ವರ್ಷ ಸೆ. 26ರಂದು ಜಂಟಿ ಸರ್ವೆ ಸಂಬಂಧ ಕಂದಾಯ ಇಲಾಖೆ ಎರಡು ತಂಡಗಳನ್ನು ರಚಿಸಿ ಆದೇಶ ಹೊರಡಿಸಿತ್ತು. 'ಒಂದು ತಂಡವು ಗುಂಡ್ಲುಪೇಟೆ ತಾಲ್ಲೂಕಿನ ಬೇರಂಬಾಡಿ ಅರಣ್ಯ ಭಾಗದಿಂದ ಹಾಗೂ 2ನೇ ತಂಡವು ಹೊಗೇನಕಲ್ ಜಲಪಾತದಿಂದ ಅಳತೆ ಆರಂಭಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿತ್ತು.

'ಜಂಟಿ ಸರ್ವೆಗಾಗಿ ರಾಜ್ಯ ಸರ್ಕಾರ ₹1 ಕೋಟಿ ಹಣವನ್ನೂ ಬಿಡುಗಡೆ ಮಾಡಿತ್ತು. ಆದರೆ, ತಮಿಳುನಾಡು ಸಹಕಾರ ನೀಡಲಿಲ್ಲ. ಪ್ರಾಣಿಗಳ ಭಯ, ಉಪಕರಣಗಳ ಕೊರತೆಯ ನೆಪಗಳನ್ನು ಒಡ್ಡಿ ಸರ್ವೆ ನಡೆಯದಂತೆ ಮಾಡಿತು. ನಮ್ಮ ಸರ್ಕಾರ ಹಾಗೂ ಅಧಿಕಾರಿಗಳು ನೆರೆ ರಾಜ್ಯದ ತಾಳಕ್ಕೆ ಕುಣಿದರು. ಬಿಳಿಗುಂಡ್ಲು, ಹೊಗೇನಕಲ್‌ನಲ್ಲಿರುವ ನಡುಗುಡ್ಡೆ ನಮ್ಮ ಜಾಗ. ಅದನ್ನು ಪಡೆಯುವುದಕ್ಕೆ ಗಡಿ ಗುರುತಿಸುವಿಕೆ ಅನಿವಾರ್ಯ. ಅದಕ್ಕಾಗಿ ಮತ್ತೆ ಹೋರಾಟ ಆರಂಭಿಸುತ್ತೇವೆ' ಎಂದು ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿಯ ಅಧ್ಯಕ್ಷ ಕೆ.ವೀರಭದ್ರಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಹೊಗೇನಕಲ್‌ನ ನಡುಗುಡ್ಡೆ 400ರಿಂದ 450 ಎಕರೆಗಳಷ್ಟಿದೆ. ಅದು ನಮ್ಮ ರಾಜ್ಯಕ್ಕೆ ಸೇರಿದ್ದು. ತಮಿಳುನಾಡು ಅಲ್ಲಿ ತೂಗುಸೇತುವೆ, ಸ್ನಾನಘಟ್ಟ ನಿರ್ಮಿಸಿ ಅಭಿವೃದ್ಧಿಪಡಿಸಿದೆ. ಈಗ 2ನೇ ಹಂತದ ಕುಡಿಯುವ ನೀರಿನ ಯೋಜನೆ ಆರಂಭಿಸುವುದಾಗಿ ಘೋಷಿಸಿದೆ. ರಾಜ್ಯ ಸರ್ಕಾರ ಅದಕ್ಕೆ ಅವಕಾಶ ನೀಡಬಾರದು' ಎಂದು ಜಲಪಾತ ಉಳಿಸಿ ಸಮಿತಿಯ ಸಂಚಾಲಕರಾಗಿದ್ದ ಡಿ.ಎಸ್.ದೊರೆಸ್ವಾಮಿ ಒತ್ತಾಯಿಸಿದರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, 'ತಮಿಳುನಾಡು ಪ್ರಸ್ತಾಪಿಸಿರುವ ಹೊಸ ಯೋಜನೆಗೆ ಜಿಲ್ಲೆಯ ಸಂಘಟನೆಗಳು ವಿರೋಧ ವ್ಯಕ್ತಪಡಿಸಿ, ಜಂಟಿ ಸರ್ವೆಗೆ ಒತ್ತಾಯಿಸಿರುವ ವಿಷಯ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ವಿಚಾರಿಸುತ್ತೇನೆ' ಎಂದರು.

ಹೊಗೇನಕಲ್ ಜಲಪಾತದ ಬಳಿ ತಮಿಳುನಾಡು ತೂಗು ಸೇತುವೆ, ಸ್ನಾನಘಟ್ಟ ಸೌಲಭ್ಯ ಕಲ್ಪಿಸಿದೆ

ತಮಿಳುನಾಡಿನ ಹೊಸ ಯೋಜನೆಯನ್ನು ವಿರೋಧಿಸುತ್ತೇವೆ. ಬಿಳಿಗುಂಡ್ಲುವಿನಿಂದ ಹೊಗೇನಕಲ್ ಜಲಪಾತದವರೆಗೂ ಜಂಟಿ ಸರ್ವೆ ನಡೆಯಬೇಕು

-ಕೆ.ವೀರಭದ್ರಸ್ವಾಮಿ, ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ

ಹೊಗೇನಕಲ್ 2ನೇ ಹಂತದ ಯೋಜನೆಗೆ ಸರ್ಕಾರ ಅವಕಾಶ ನೀಡಬಾರದು. ಜಂಟಿ ಸರ್ವೆ ನಡೆಸಿ, ನಮ್ಮ ರಾಜ್ಯದ ಜಾಗವನ್ನು ವಶಕ್ಕೆ ಪಡೆಯಬೇಕು

-ಡಿ.ಎಸ್.ದೊರೆಸ್ವಾಮಿ, ಪರಿಸರವಾದಿ

ಮೊದಲ ಹಂತದ ಯೋಜನೆಗೂ ವಿರೋಧ

ತಮಿಳುನಾಡಿನ ಧರ್ಮಗಿರಿ ಹಾಗೂ ಕೃಷ್ಣಗಿರಿ ಜಿಲ್ಲೆಯ ಗ್ರಾಮಗಳು, ನಗರ, ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿ 2008ರಲ್ಲಿ ಅಂದಿನ ಮುಖ್ಯಮಂತ್ರಿ ಕರುಣಾನಿಧಿ ₹1,334 ಕೋಟಿ ವೆಚ್ಚದ ಮೊದಲ ಹಂತದ ಹೊಗೇನಕಲ್ ಕುಡಿಯುವ ನೀರಿನ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಆಗ ಜಿಲ್ಲೆಯಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಪ್ರತಿಭಟನೆ, ಬಂದ್, ಹೋರಾಟಗಳು ನಡೆದಿದ್ದವು. ಆಗಲೂ ಜಂಟಿ ಸರ್ವೆಗೆ ಒತ್ತಾಯ ಕೇಳಿ ಬಂದಿತ್ತು. ವಿರೋಧದ ನಡುವೆಯೇ ತಮಿಳುನಾಡು ಯೋಜನೆಯನ್ನು ಕಾರ್ಯಗತಗೊಳಿಸಿತ್ತು. 2013ರ ಮೇ 29ರಂದು ಅಂದಿನ ಮುಖ್ಯಮಂತ್ರಿ ಜಯಲಲಿತಾ ಯೋಜನೆ ಉದ್ಘಾಟಿಸಿದ್ದರು.

ಕಾಂಗ್ರೆಸ್‌ಗೆ ಶಾಸಕರ ವಲಸೆ – ಯತ್ನಾಳ

ಒಂದನೇ ಪುಟದಿಂದ

ಯತ್ನಾಳ ಹೇಳಿದ್ದೇನು?: 'ಸಚಿವ ಸಂಪುಟ ಪುನಾರಚನೆ ಇನ್ನು ಒಂದು ವಾರದೊಳಗೆ ಮಾಡಬೇಕು. ತಡವಾಗಿ ಮಾಡಿದರೆ ಉಪಯೋಗ ಆಗದು. ಪಕ್ಷ ನಿಷ್ಠರಿಗೆ ಅವಕಾಶ ಕೊಡಬೇಕು. ಉತ್ತರಪ್ರದೇಶದಲ್ಲಿ ಆದಂತೆ ಅಧಿಕಾರ ಅನುಭವಿಸಿ, ನಮ್ಮ ಪಕ್ಷದಲ್ಲಿ ಜಾತ್ರೆ ಮಾಡಿ ಬಳಿಕ ಪಕ್ಷ ಬಿಟ್ಟು ಹೋಗಬಹುದು' ಎಂದು ಹೇಳಿದರು.

'ಕೆಲವರು ಡಿ.ಕೆ.ಶಿವಕುಮಾರ್ ಜತೆ ಟಿಕೆಟ್ ಬಗ್ಗೆ ಮಾತನಾಡಿರುವ ಮಾಹಿತಿ ಇದೆ. ಎಲ್ಲ ಹೋದ ಮೇಲೆ ಯತ್ನಾಳ ಬೇಕು, ಜಾರಕಿಹೊಳಿ ಬೇಕು ಎಂದರೆ ಆಗಲ್ಲ. ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರೆ ಪ್ರಯೋಜನವೇನು' ಎಂದು ಪ್ರಶ್ನಿಸಿದರು.

'ಶಾಸಕ ರೇಣುಕಾಚಾರ್ಯ ಅವರನ್ನು ಭೇಟಿ ಮಾಡಿದ್ದರಲ್ಲಿ ತಪ್ಪೇನೂ ಇಲ್ಲ. ನಾನು ಸಿದ್ದರಾಮಯ್ಯ, ಡಿಕೆಶಿ ಅಥವಾ ಜಮೀರ್ ಅಹಮದ್ ಅವರನ್ನು ಭೇಟಿ ಮಾಡಿಲ್ಲವಲ್ಲ. ನಮ್ಮ ಪಕ್ಷದ ಶಾಸಕರನ್ನೇ ಭೇಟಿ ಮಾಡಿದ್ದು. ಚಹಾ ಕುಡಿಯಲು ಕರೆದಿದ್ದರು, ಹೋಗಿದ್ದೆ. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರನ್ನು ವಿರೋಧಿಸಿಕೊಂಡು ಬಂದಿದ್ದೇನೆ. ರೇಣುಕಾಚಾರ್ಯ ನನ್ನ ಬಗ್ಗೆ ಮಾತನಾಡಿದ್ದರೂ ನಾನು ಅವರ ಬಗ್ಗೆ ಮಾತನಾಡಿಲ್ಲ' ಎಂದು ಯತ್ನಾಳ ಹೇಳಿದರು.

ಸಿ.ಎಂ ನಿರ್ಧಾರ ಒಪ್ಪುವೆ: ಈ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಶಾಸಕ ರಮೇಶ ಜಾರಕಿಹೊಳಿ, 'ಸಂಪುಟ ಪುನಾರಚನೆ ಬಗ್ಗೆ ಮುಖ್ಯಮಂತ್ರಿಯವರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ. ನಾನು ಮತ್ತು ಯತ್ನಾಳ ಅವರು ನೀರಾವರಿ ವಿಷಯದ ಬಗ್ಗೆ ಮಾತನಾಡಲು ಸೇರಿದ್ದು' ಎಂದರು.

'ಬೆಳಗಾವಿಯ ಪ್ರತ್ಯೇಕ ಸಭೆಗೆ ಹೋಗಿಲ್ಲ. ಪ್ರೀತಿ ಇರುವ ಸಭೆಗೆ ಹೋಗುತ್ತೇನೆ. ಇಂತಹ ಸಭೆಗಳಿಗೆ ಹೋಗುವುದಿಲ್ಲ. ನಮ್ಮ ವರಿಷ್ಠರು ಬುದ್ಧಿವಂತರಿದ್ದಾರೆ. ಯಾರು ಎಲ್ಲಿ ಏನು ಮಾಡುತ್ತಾರೆ ಎಂಬ ಮಾಹಿತಿ ಅವರಿಗೆ ಇರುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ವಿಸ್ತರಣೆ ವರಿಷ್ಠರ ತೀರ್ಮಾನ'

ಒಂದನೇ ಪುಟದಿಂದ

'ನಿಗಮ ಮಂಡಳಿಗಳಿಗೆ ನೇಮಕಾತಿ ವಿಚಾರದಲ್ಲಿ ಕೂಡಾ ಪಕ್ಷದಲ್ಲಿ ಚರ್ಚೆ ಆಗಬೇಕು. ಪಕ್ಷದಲ್ಲಿ ಚರ್ಚೆಯಾದ ಬಳಿಕ ಈ ಬಗ್ಗೆ ತೀರ್ಮಾನ ಆಗುತ್ತದೆ. ಪಕ್ಷದವರು ಕುಳಿತುಕೊಂಡು ಚರ್ಚೆ ಮಾಡುತ್ತಾರೆ. ಸದ್ಯಕ್ಕೆ ನನ್ನ ಮುಂದೆ ನಿಗಮ- ಮಂಡಳಿಯ ಯಾವುದೇ ಪ್ರಸ್ತಾವ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಸಚಿವ ಉಮೇಶ ಕತ್ತಿ ಮನೆಯಲ್ಲಿ ನಡೆದ ರಹಸ್ಯ ಸಭೆ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಆ ಬಗ್ಗೆ ನನಗೆ ಗೊತ್ತಿಲ್ಲ. ಪಕ್ಷದಲ್ಲಿ ಯಾವುದೇ ಗೊಂದಲ ಇಲ್ಲ. ನಾಯಕರು ಹಲವಾರು ಸಂದರ್ಭದಲ್ಲಿ ಪ್ರತ್ಯೇಕವಾಗಿ ಸೇರುತ್ತಾರೆ. ಕಾಂಗ್ರೆಸ್‌ನವರೂ ಸೇರುತ್ತಾರೆ, ಬಿಜೆಪಿಯವರೂ ಸೇರುತ್ತಾರೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ' ಎಂದರು.

'ಪಕ್ಷಕ್ಕೆ ಮೋಸ ಮಾಡಲ್ಲ'

'ಎರಡು ವರ್ಷಗಳ ಅವಧಿಯಲ್ಲಿ ಸಹಕಾರ ಸಚಿವನಾಗಿ ಕೆಲಸ ಮಾಡುವಾಗ ಪಕ್ಷ ಮತ್ತು ಸರ್ಕಾರದಲ್ಲಿ ನನಗೆ ಸಂಪೂರ್ಣ ಸ್ವಾತಂತ್ರ್ಯ ದೊರಕಿದೆ. ಈಗ ಪಕ್ಷಕ್ಕೆ ಮೋಸ ಮಾಡುವುದಿಲ್ಲ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್ ನ ಹಲವರು ಕಾಂಗ್ರೆಸ್ ಪಕ್ಷ ಸೇರಲು ಮುಂದಾಗಿದ್ದಾರೆ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, 'ಪಕ್ಷ ಮತ್ತು ಸರ್ಕಾರದಲ್ಲಿ ನನಗೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಪಕ್ಷ ಮತ್ತು ಸರ್ಕಾರಕ್ಕೆ ಯಾವತ್ತೂ ಮುಜುಗರ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲ' ಎಂದರು. 'ಇಲ್ಲಿ ತೃಪ್ತಿಯಾಗಿದ್ದೇನೆ. ಇಲ್ಲಿಯೇ ಮುಂದುವರಿಯುತ್ತೇನೆ' ಎಂದು ಹೇಳಿದರು.

ಅಶೋಕ, ಮಾಧುಸ್ವಾಮಿಗೆ ಇಲ್ಲ ಜಿಲ್ಲಾ ಉಸ್ತುವಾರಿ

ಒಂದನೇ ಪುಟದಿಂದ

ಬೆಂಗಳೂರು ನಗರ ಉಸ್ತುವಾರಿಯನ್ನು ಬೊಮ್ಮಾಯಿ ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಪಕ್ಷದ ಪ್ರಮುಖರ ಸಮಿತಿ ಸಭೆಯಲ್ಲಿ ಯಾವುದೇ ಸಚಿವರಿಗೂ ತವರು ಜಿಲ್ಲೆಯ ಉಸ್ತುವಾರಿ ನೀಡಬಾರದು ಎಂಬ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಸಚಿವರ ಒತ್ತಡಕ್ಕೆ ಮಣಿದು ಯಡಿಯೂರಪ್ಪ ಕೆಲವರಿಗೆ ಮಾತೃ ಜಿಲ್ಲೆಗಳನ್ನೇ ಉಸ್ತುವಾರಿ ನೀಡಿದ್ದರು.ಬೆಂಗಳೂರು ನಗರ ಜಿಲ್ಲೆಯ ಉಸ್ತುವಾರಿ ಮೇಲೆ ಕಂದಾಯ ಸಚಿವ ಆರ್.ಅಶೋಕ ಮತ್ತು ವಿ.ಸೋಮಣ್ಣ ಅವರು ಕಣ್ಣಿಟ್ಟಿದ್ದರು. ಇಬ್ಬರಿಗೂ ನಿರಾಸೆಯಾಗಿದೆ. ಶಿವಮೊಗ್ಗ ಉಸ್ತುವಾರಿ ಹೊಂದಿದ್ದ ಕೆ.ಎಸ್.ಈಶ್ವರಪ್ಪ ಅವರಿಗೆ ನೆರೆಯ ಚಿಕ್ಕಮಗಳೂರಿನ ಉಸ್ತುವಾರಿ ನೀಡಿದ್ದಾರೆ. ಮಾಧುಸ್ವಾಮಿ ಅವರು ಪಕ್ಷ ಹಾಳು ಮಾಡುತ್ತಿದ್ದಾರೆ ಎಂದು ತುಮಕೂರು ಸಂಸದ ಜಿ.ಎಸ್. ಬಸವರಾಜು ಅವರು ಸಚಿವ ಬೈರತಿ ಬಸವರಾಜ ಜತೆ ಮಾತನಾಡಿದ್ದು ಸದ್ದು ಮಾಡಿತ್ತು.

'ಸಂಪರ್ಕದಲ್ಲಿರುವವರ ಮಾಹಿತಿ ಕೊಡಲ್ಲ'

ಒಂದನೇ ಪುಟದಿಂದ

'ಬಿಜೆಪಿಯಲ್ಲಿ ಏನಾಗುತ್ತಿದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ನಮ್ಮ ಜತೆ ಮಾತನಾಡಿರುವವರ ಬಗ್ಗೆ ಮಾಹಿತಿ ಬಹಿರಂಗಪಡಿಸಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಜತೆ ಯಾರೆಲ್ಲಾ ಮಾತನಾಡುತ್ತಿದ್ದಾರೆ ಎಂದು ಸಚಿವರನ್ನೇ ಕೇಳಿ' ಎಂದು ಮಾರ್ಮಿಕವಾಗಿ ನುಡಿದರು.

'ನನ್ನ ಬಳಿ ಯಾರು ಮಾತನಾಡುತ್ತಾರೆ ಎಂಬ ಮಾಹಿತಿಯನ್ನು ನಾನ್ಯಾಕೆ ಬಿಟ್ಟುಕೊಡಲಿ. ಇದರಲ್ಲಿ ಗೋಪ್ಯತೆ ಕಾಪಾಡಿಕೊಳ್ಳುವುದು ಮುಖ್ಯ. ಇದು ರಾಜಕಾರಣದ ಒಂದು ಭಾಗ' ಎಂದರು.

ಯಾರಿಗೆ ಯಾವ ಜಿಲ್ಲೆ ಉಸ್ತುವಾರಿ?

ಗೋವಿಂದ ಕಾರಜೋಳ–ಬೆಳಗಾವಿ, ಕೆ.ಎಸ್. ಈಶ್ವರಪ್ಪ–ಚಿಕ್ಕಮಗಳೂರು, ಬಿ.ಶ್ರೀರಾಮುಲು–ಬಳ್ಳಾರಿ, ವಿ.ಸೋಮಣ್ಣ– ಚಾಮರಾಜನಗರ, ಉಮೇಶ ಕತ್ತಿ– ವಿಜಯಪುರ, ಎಸ್.ಅಂಗಾರ– ಉಡುಪಿ, ಆರಗ ಜ್ಞಾನೇಂದ್ರ–ತುಮಕೂರು, ಡಾ.ಸಿ.ಎನ್.ಅಶ್ವತ್ಥನಾರಾಯಣ–ರಾಮನಗರ, ಸಿ.ಸಿ.ಪಾಟೀಲ– ಬಾಗಲಕೋಟೆ, ಆನಂದಸಿಂಗ್ – ಕೊಪ್ಪಳ, ಕೋಟ ಶ್ರೀನಿವಾಸ ಪೂಜಾರಿ– ಉತ್ತರಕನ್ನಡ, ಪ್ರಭು ಚವ್ಹಾಣ–ಯಾದಗಿರಿ, ಮುರುಗೇಶ ನಿರಾಣಿ– ಕಲಬುರಗಿ, ಶಿವರಾಮ ಹೆಬ್ಬಾರ್– ಹಾವೇರಿ, ಎಸ್.ಟಿ.ಸೋಮಶೇಖರ್– ಮೈಸೂರು, ಬಿ.ಸಿ.ಪಾಟೀಲ– ಚಿತ್ರದುರ್ಗ, ಗದಗ, ಬಿ.ಎ.ಬಸವರಾಜ– ದಾವಣಗೆರೆ, ಡಾ.ಕೆ.ಸುಧಾಕರ್– ಬೆಂಗಳೂರು ಗ್ರಾಮಾಂತರ, ಕೆ.ಗೋಪಾಲಯ್ಯ– ಹಾಸನ, ಮಂಡ್ಯ, ಶಶಿಕಲಾ ಜೊಲ್ಲೆ– ವಿಜಯನಗರ, ಎಂ.ಟಿ.ಬಿ ನಾಗರಾಜ– ಚಿಕ್ಕಬಳ್ಳಾಪುರ, ಕೆ.ಸಿ.ನಾರಾಯಣಗೌಡ– ಶಿವಮೊಗ್ಗ, ಬಿ.ಸಿ.ನಾಗೇಶ್– ಕೊಡಗು, ವಿ.ಸುನಿಲ್ ಕುಮಾರ್– ದಕ್ಷಿಣಕನ್ನಡ, ಹಾಲಪ್ಪ ಆಚಾರ್– ಧಾರವಾಡ, ಶಂಕರಪಾಟೀಲ ಮುನೇನಕೊಪ್ಪ– ರಾಯಚೂರು, ಬೀದರ್, ಮುನಿರತ್ನ–ಕೋಲಾರ

ಪಕ್ಷಕ್ಕೆ ನಿಷ್ಠ: ಬೈರತಿ

'ಬಿಜೆಪಿಗೆ ಬಂದ ಸ್ನೇಹಿತರ ಪೈಕಿ ಯಾರು ಎಲ್ಲಿಗೆ ಹೋಗುತ್ತಾರೆ, ಬಿಡುತ್ತಾರೆ ಎನ್ನುವುದು ಗೊತ್ತಿಲ್ಲ. ಅದು ಅವರ ವೈಯಕ್ತಿಕ ವಿಚಾರ. ಆದರೆ, ಎಲ್ಲರೂ ಪಕ್ಷ ನಿಷ್ಠರಾಗಿ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ರಾಗಿ ಖರೀದಿ: ನೋಂದಣಿ ಸ್ಥಗಿತ

ಒಂದನೇ ಪುಟದಿಂದ

ಪ್ರತಿ ಕ್ವಿಂಟಲ್‌ಗೆ ₹3,377 ದರ ನಿಗದಿಪಡಿಸಿದ್ದು, ಒಂದು ಎಕರೆಗೆ 10 ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಖರೀದಿ ಮಾಡುವುದಾಗಿ ಘೋಷಿಸಿತ್ತು. ಆದರೆ ಸರ್ಕಾರ ನಿಗದಿಪಡಿಸಿದ ಗುರಿ ತಲುಪಿದ ಹಿನ್ನೆಲೆಯಲ್ಲಿ ಸದ್ಯ ರಾಗಿ ಖರೀದಿ ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡಿದೆ. ಈವರೆಗೆ ನೋಂದಣಿ ಮಾಡಿಸಿದವರಿಂದ ಮಾತ್ರವೇ ಖರೀದಿ ನಡೆಸುವುದಾಗಿ ಅಧಿಕಾರಿಗಳು ಹೇಳುತ್ತಾರೆ.

ಕೇಂದ್ರದ ಮಿತಿ: ಈ ಹಿಂದಿನ ವರ್ಷಗಳಲ್ಲಿ ರಾಗಿ ಖರೀದಿಗೆ ಕೇಂದ್ರ ಸರ್ಕಾರ ಯಾವುದೇ ಮಿತಿ ವಿಧಿಸಿರಲಿಲ್ಲ. ಈ ವರ್ಷ ರಾಜ್ಯದಿಂದ 2.10 ಲಕ್ಷ ಟನ್‌ನಷ್ಟು ರಾಗಿಯನ್ನು (ಸುಮಾರು 21 ಲಕ್ಷ ಕ್ವಿಂಟಲ್) ಮಾತ್ರವೇ ಬೆಂಬಲ ಬೆಲೆ ನೀಡಿ ಕೊಳ್ಳುವುದಾಗಿ ಮಿತಿ ಹೇರಿದೆ. ರಾಜ್ಯದಲ್ಲಿ ಈ ವರ್ಷ ಅಂದಾಜು 3ರಿಂದ 4 ಲಕ್ಷ ಟನ್ ನಷ್ಟು ಉತ್ಪನ್ನದ ನಿರೀಕ್ಷೆ ಇದೆ.

ಕಳೆದ ಶುಕ್ರವಾರವೇ ಖರೀದಿ ಕೇಂದ್ರಗಳಲ್ಲಿ ನೋಂದಣಿ ಸ್ಥಗಿತಗೊಳಿಸಿದ್ದು, ರೈತರು ನಿರಾಸೆಯಿಂದ ವಾಪಸ್ ಆಗುತ್ತಿದ್ದಾರೆ.

ರಾಮನಗರ ಜಿಲ್ಲೆಯಲ್ಲಿ ಈ ವರ್ಷ ಸದ್ಯಕ್ಕೆ 11,544 ರಾಗಿ ಬೆಳೆಗಾರರು ನೋಂದಾಯಿಸಿಕೊಂಡಿದ್ದು, ಇವರಿಂದ ಮಾತ್ರವೇ ಕೆಎಫ್‌ಸಿಎಸ್‌ಸಿ 1,81,591 ಕ್ವಿಂಟಲ್ ರಾಗಿ ಖರೀದಿ ಮಾಡಲಿದೆ.

ಕಳೆದ ವರ್ಷ ಜಿಲ್ಲೆಯಲ್ಲಿ ನೋಂದಣಿಯಾದ 20,138 ರೈತರಿಂದ 4,03,316 ಕ್ವಿಂಟಲ್ ರಾಗಿಯನ್ನು ಖರೀದಿ ಮಾಡಲಾಗಿತ್ತು. ತುಮಕೂರಿನಲ್ಲಿ 7 ಲಕ್ಷ ಕ್ವಿಂಟಲ್ ಹಾಗೂ ಹಾಸನದಲ್ಲಿ 4 ಲಕ್ಷ ಕ್ವಿಂಟಲ್‌ನಷ್ಟು ಖರೀದಿ ನಡೆದಿತ್ತು.

'ಎಸಿಬಿ ಲೋಕಾಯುಕ್ತದ ಅಧೀನದಲ್ಲೇ ಇರಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ಲೋಕಾಯುಕ್ತದ ಅಧೀನಕ್ಕೆ ತಂದು, ಲೋಕಾಯುಕ್ತಕ್ಕೆ ಹಿಂದಿನಂತೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಒತ್ತಾಯಿಸಿದರು.

ಪಿ.ವಿಶ್ವನಾಥ ಶೆಟ್ಟಿ

ಇದೇ 27ರಂದು ಲೋಕಾಯುಕ್ತ ಹುದ್ದೆಯಿಂದ ನಿವೃತ್ತರಾಗುತ್ತಿರುವ ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಎಸಿಬಿ ಸರ್ಕಾರದ ಅಧೀನದಲ್ಲಿ ಇರುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಲೋಕಾಯುಕ್ತ ಒಂದು ಸ್ವತಂತ್ರ ಸಂಸ್ಥೆ. ಇದರ ಅಧೀನಕ್ಕೆ ಎಸಿಬಿಯನ್ನು ನೀಡಿದರೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಹೆಚ್ಚಿನ ಕೆಲಸ ಮಾಡಲು ಸಾಧ್ಯವಿದೆ' ಎಂದರು.

ಹಿಂದೆ ಲೋಕಾಯುಕ್ತದ ಪೊಲೀಸ್ ವಿಭಾಗವೇ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರ ಹೊಂದಿತ್ತು. ಅದನ್ನು ಬದಲಿಸಿ ಎಸಿಬಿ ಸೃಜಿಸಲಾಯಿತು. ಎಸಿಬಿ ಸರ್ಕಾರದ ಅಧೀನದಲ್ಲಿ ಇರುವುದು ಸರಿಯಲ್ಲ ಎಂದು ಹೇಳಿದರು.

ತಾವು ಲೋಕಾಯುಕ್ತ ಹುದ್ದೆಯ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಸಂಸ್ಥೆಯಲ್ಲಿ 7,680 ದೂರುಗಳು ಬಾಕಿ ಇದ್ದವು. 3,242 ಇಲಾಖಾ ವಿಚಾರಣಾ ಪ್ರಕರಣಗಳೂ ಇದ್ದವು. ಕೆಲವು ಪ್ರಕರಣಗಳು 15 ವರ್ಷಗಳಿಗಿಂತಲೂ ಹಿಂದಿನವು. ತಮ್ಮ ಐದು ವರ್ಷಗಳ ಅವಧಿಯಲ್ಲಿ 20,549 ದೂರುಗಳು ಹಾಗೂ 2,431 ಇಲಾಖಾ ವಿಚಾರಣಾ ಪ್ರಕರಣಗಳು ದಾಖಲಾಗಿವೆ. 13,000 ಇತರ (ಮಿಸಲೇನಿಯಸ್) ದೂರುಗಳು ದಾಖಲಾಗಿವೆ ಎಂದರು.

ತಮ್ಮ ಅವಧಿಯಲ್ಲಿ 20,199 ದೂರು ವಿಲೇವಾರಿ ಮಾಡಲಾಗಿದೆ. 2,677 ಇಲಾಖಾ ವಿಚಾರಣೆಗಳನ್ನು ಪೂರ್ಣಗೊಳಿಸಲಾಗಿದೆ. 12,000 ಇತರ ದೂರುಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ವಿವರಿಸಿದರು.

ಹುದ್ದೆಯ ಸೂಕ್ಷ್ಮತೆ ತಿಳಿದಿರಲಿಲ್ಲ: 'ಹೆಚ್ಚಿನ ಆದಾಯದ ಕೆಲಸ ಇದ್ದರೂ ಸಮಾಜ ಸೇವೆಯ ಅವಕಾಶ ಎಂದು ಪರಿಗಣಿಸಿ ಲೋಕಾಯುಕ್ತ ಹುದ್ದೆಗೆ ಬಂದಿದ್ದೆ. ಬರುವಾಗ ಈ ಹುದ್ದೆಯ ಸೂಕ್ಷ್ಮತೆ ತಿಳಿದಿರಲಿಲ್ಲ. ನನ್ನ ಮೇಲೆ ಮಾರಕಾಸ್ತ್ರದಿಂದ ದಾಳಿಯಾದ ಬಳಿಕವೇ ಹುದ್ದೆಯ ಸೂಕ್ಷ್ಮತೆ ತಿಳಿಯಿತು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

1,226 ವರದಿಗಳಿಗೆ ಸರ್ಕಾರದ ಉತ್ತರವಿಲ್ಲ

ತಪ್ಪಿತಸ್ಥ ಸರ್ಕಾರಿ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 12(3)ರ ಅಡಿಯಲ್ಲಿ 2,122 ಮತ್ತು ಸೆಕ್ಷನ್ 21(1)ರ ಅಡಿಯಲ್ಲಿ 587 ವರದಿಗಳನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಪೈಕಿ 1,226 ಪ್ರಕರಣಗಳಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ ವರದಿ ಬರುವುದು ಬಾಕಿ ಇದೆ ಎಂದು ಲೋಕಾಯುಕ್ತ ವಿಶ್ವನಾಥ ಶೆಟ್ಟಿ ತಿಳಿಸಿದರು.

ಲೋಕಾಯುಕ್ತ ಪೊಲೀಸರು ಪ್ರಾಥಮಿಕ ವಿಚಾರಣೆ ನಡೆಸಿದ್ದ ದೂರುಗಳ ಪೈಕಿ 36 ಪ್ರಕರಣಗಳಲ್ಲಿ ಆಪಾದಿತ ಸಾರ್ವಜನಿಕ ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸಲು ಅಭಿಯೋಜನಾ ಮಂಜೂರಾತಿ ಕೋರಲಾಗಿತ್ತು. 26 ಪ್ರಕರಣಗಳಲ್ಲಿ ಸಂಸ್ಥೆಯ ಕೋರಿಕೆಯನ್ನು ಸರ್ಕಾರ ತಿರಸ್ಕರಿಸಿದೆ. 10 ಪ್ರಕರಣಗಳಲ್ಲಿ ಯಾವುದೇ ಉತ್ತರ ಬಂದಿಲ್ಲ ಎಂದು ಹೇಳಿದರು.

'ಆಸ್ತಿ ವಿವರ ಸಲ್ಲಿಸುವ ಅಗತ್ಯವಿಲ್ಲ'

'ಲೋಕಾಯುಕ್ತರ ಹುದ್ದೆ ಸರ್ಕಾರಿ ನೌಕರಿಯೂ ಅಲ್ಲ, ಜನಪ್ರತಿನಿಧಿಯೂ ಅಲ್ಲ. ಸ್ವತಂತ್ರ ಸಾಂವಿಧಾನಿಕ ಸಂಸ್ಥೆ. ಈ ಕಾರಣದಿಂದ ಲೋಕಾಯುಕ್ತರು ಆಸ್ತಿ ವಿವರ ಸಲ್ಲಿಸಬೇಕಾದ ಅಗತ್ಯ ಇಲ್ಲ' ಎಂದು ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಹೇಳಿದರು.

'45 ವರ್ಷದಿಂದ ನಾನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿದ್ದೇನೆ. ತಪ್ಪು ಮಾಡಿದ್ದರೆ, ಅಕ್ರಮ ಸಂಪಾದನೆ ಮಾಡಿದ್ದರೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶಗಳಿವೆ. ಲೋಕಾಯುಕ್ತರ ಆಸ್ತಿ ವಿವರಗಳನ್ನು ಬಹಿರಂಗಪಡಿಸುವುದರಿಂದ ಸಂಸ್ಥೆ ದುರ್ಬಲಗೊಳ್ಳುವುದಕ್ಕೆ ದಾರಿಯಾಗಬಹುದು. ಜನರಿಂದ ಕಿರಿಕಿರಿಗೆ ಒಳಗಾಗಬಹುದು' ಎಂದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ16/21723/2021–22 ದಿನಾಂಕ: 24.01.2022

ಉದ್ಯೋಗ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಈ ಕೆಳಕಂಡ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ 'ಆನ್–ಲೈನ್' ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

ಕ್ರ. ಸಂ.	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ				ಒಟ್ಟು
		ಮಿಕ್ಕುಳಿದ ವೃಂದ (NKK)		ಸ್ಥಳೀಯ ವೃಂದ (KK)		
		Regular	Backlog	Regular	Backlog	
1	ಸಹಾಯಕ ಇಂಜಿನಿಯರ್(ವಿದ್ಯುತ್) ₹ 41130-1140-42270-1270-46080-1390-51640-1560-56320-1700-63120-1900-68820-2050-72920	393	6	106	0	**505**
2	ಸಹಾಯಕ ಇಂಜಿನಿಯರ್(ಸಿವಿಲ್) ₹ 41130-1140-42270-1270-46080-1390-51640-1560-56320-1700-63120-1900-68820-2050-72920	21	0	7	0	**28**
3	ಕಿರಿಯ ಇಂಜಿನಿಯರ್(ವಿದ್ಯುತ್) ₹ 26270-810-31130-940-37710-1140-42270-1270-46080-1390-51640-1560-56320-1700-63120-1900-65020	477	9	82	2	**570**
4	ಕಿರಿಯ ಇಂಜಿನಿಯರ್(ಸಿವಿಲ್) ₹ 26270-810-31130-940-37710-1140-42270-1270-46080-1390-51640-1560-56320-1700-63120-1900-65020	21	0	8	0	**29**
5	ಕಿರಿಯ ಸಹಾಯಕ ₹ 20220-540-22920-670-26270-810-31130-940-37710-1140-42270-1270-46080-1390-51640	357	0	3	0	**360**
	ಒಟ್ಟು	**1269**	**15**	**206**	**2**	**1492**

ಕವಿಪ್ರನಿನಿಯ ಅಧಿಕೃತ ವೆಬ್‌ಸೈಟ್ ಮುಖಾಂತರ ನಿಗದಿತ ನಮೂನೆಯಲ್ಲಿ **'ಆನ್–ಲೈನ್'** ಮೂಲಕ ಮಾತ್ರವೇ ಅರ್ಜಿಗಳನ್ನು ಸಲ್ಲಿಸುವುದು. ಹುದ್ದೆಗಳ ವರ್ಗೀಕರಣ, ಮೀಸಲಾತಿ ವಿವರ, ಕಲ್ಯಾಣ ಕರ್ನಾಟಕ ಪ್ರದೇಶ ಮೀಸಲಾತಿ, ವಯೋಮಿತಿ, ಅರ್ಹತೆ, ನೇಮಕಾತಿ ವಿಧಾನ, ಪರೀಕ್ಷಾ ವಿಧಾನ, ಅರ್ಜಿಯ ನಮೂನೆ ಮತ್ತು ಇತರೆ ವಿವರಗಳನ್ನು ದಿನಾಂಕ: **07.02.2022**ರ ನಂತರ ಕವಿಪ್ರನಿನಿ ಅಧಿಕೃತ ವೆಬ್‌ಸೈಟ್: **https://kptcl.karnataka.gov.in**ನಲ್ಲಿ ಲಭ್ಯಪಡಿಸಲಾಗುವುದು.

ಸಹಿ/–

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)

ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಶಾಹೀನ್‌ಬಾಗ್ ಪ್ರತಿಭಟನೆ ತೀರ್ಪು ಸ್ಪಷ್ಟೀಕರಣ ಕೋರಿದ್ದ ಅರ್ಜಿ ವಜಾ

ನವದೆಹಲಿ: ಶಾಹೀನ್‌ಬಾಗ್ ಪ್ರತಿಭಟನೆಗೆ ಸಂಬಂಧಿಸಿದಂತೆ 2020ರ ಅಕ್ಟೋಬರ್ 7ರಂದು ನೀಡಿದ್ದ ತೀರ್ಪಿನ ಸ್ಪಷ್ಟೀಕರಣ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾ ಮಾಡಿದೆ.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ಶಾಹೀನ್‌ಬಾಗ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಸಂಬಂಧಿಸಿ ಉಲ್ಲೇಖಿತ ತೀರ್ಪಿನಲ್ಲಿ, ಸಾರ್ವಜನಿಕ ರಸ್ತೆಗಳನ್ನು ಅನಿರ್ದಿಷ್ಟಾವಧಿಗೆ ಬಂದ್ ಮಾಡಲಾಗದು ಎಂದೂ ಸುಪ್ರೀಂ ಕೋರ್ಟ್ ಘೋಷಿಸಿತ್ತು.

'ತೀರ್ಪು ಸ್ಪಷ್ಟವಾಗಿದೆ, ಸ್ಪಷ್ಟೀಕರಣ ಅಗತ್ಯವಿಲ್ಲ' ಎಂದು ನ್ಯಾಯಪೀಠವು ಹೇಳಿತು.

ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ಈ ಬಾರಿ ಪಾಳಿ ಪದ್ಧತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನದ ಮೊದಲ ಹಂತದಲ್ಲಿ ಸಂಸತ್ತಿನ ಉಭಯ ಸದನಗಳ ಕಲಾಪ ಪಾಳಿ ಪದ್ಧತಿಯಲ್ಲಿ ನಡೆಯಲಿದೆ. ರಾಜ್ಯಸಭೆ ಕಲಾಪ ಬೆಳಗಿನ ಅವಧಿ ಮತ್ತು ಲೋಕಸಭೆಯ ಕಲಾಪ ಮಧ್ಯಾಹ್ನ ನಡೆಯಲಿದೆ.

ಕೋವಿಡ್ ಮೂರನೇ ಅಲೆ ಹಿನ್ನೆಲೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಬಜೆಟ್ ಅಧಿವೇಶನ ಇದೇ 31ರಂದು ಶುರುವಾಗಲಿದೆ. ಆ ದಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಷಣ ಮಾಡುವರು.

ಕೋವಿಡ್ ಹಿನ್ನೆಲೆಯಲ್ಲಿ ಸದಸ್ಯರ ಆಸನ ವ್ಯವಸ್ಥೆಯಲ್ಲಿ ಬದಲಾವಣೆ ಆಗಿದೆ. ಜಂಟಿ ಅಧಿವೇಶನ ದಿನ ಮೊದಲ ಬಾರಿಗೆ ಸೆಂಟ್ರಲ್ ಸಭಾಂಗಣದ ಜೊತೆಗೆ, ರಾಜ್ಯಸಭೆ, ಲೋಕಸಭೆ ಗ್ಯಾಲರಿಗಳಲ್ಲೂ ಆಸನ ವ್ಯವಸ್ಥೆಯಾಗಿದೆ.

ಜ.31ರಂದು ರಾಷ್ಟ್ರಪತಿ ಭಾಷಣದ ಬಳಿಕ ಲೋಕಸಭೆಯು ಅರ್ಧಗಂಟೆ ಕಲಾಪ ನಡೆಸಲಿದ್ದು, ಆರ್ಥಿಕ ಸಮೀಕ್ಷೆ ವರದಿ ಮಂಡನೆಯಾಗಲಿದೆ. ರಾಜ್ಯಸಭೆ ಕಲಾಪ ಮಧ್ಯಾಹ್ನ 2.30ಕ್ಕೆ ಶುರುವಾಗಲಿದ್ದು, ರಾಷ್ಟ್ರಪತಿಗಳ ಭಾಷಣದ ಪ್ರತಿ ಮಂಡಿಸಲಾಗುತ್ತದೆ.

ಫೆಬ್ರುವರಿ 1ರಂದು ಲೋಕಸಭೆ ಕಲಾಪವು ಬೆಳಿಗ್ಗೆ 11 ಗಂಟೆಗೆ ಸೇರಲಿದ್ದು, 2022–23ನೇ ಸಾಲಿನ ಬಜೆಟ್ ಮಂಡನೆಯಾಗಲಿದೆ. ಲೋಕಸಭೆ ಅಧಿವೇಶನದ ಬಳಿಕ ರಾಜ್ಯಸಭೆಯಲ್ಲಿ ಬಜೆಟ್ ಪ್ರತಿ ಮಂಡಿಸಲಾಗುತ್ತದೆ.

ಫೆ.2ರಿಂದ ರಾಜ್ಯಸಭೆಯ ಕಲಾಪ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆದರೆ, ಲೋಕಸಭೆಯ ಕಲಾಪವು ಸಂಜೆ 4 ಗಂಟೆಯಿಂದ ರಾತ್ರಿ 9 ಗಂಟೆಯವರೆಗೂ ನಡೆಯಲಿದೆ. ಕಲಾಪದ ಅವಧಿಯಲ್ಲಿ ಸದಸ್ಯರಿಗೆ ಗ್ಯಾಲರಿಯಲ್ಲಿಯೂ ಆಸನ ವ್ಯವಸ್ಥೆಯನ್ನು ಮಾಡಲಾಗಿದೆ.

ಬಜೆಟ್ ಅಧಿವೇಶನದ ಮೊದಲ ಹಂತದ ಅವಧಿಗಷ್ಟೇ ಈ ಆಸನ ವ್ಯವಸ್ಥೆ ಇರುತ್ತದೆ.

ನಟ ದಿಲೀಪ್ ವಿರುದ್ಧ ವಿಚಾರಣೆ: ಕಾಲಾವಕಾಶಕ್ಕೆ 'ಸುಪ್ರೀಂ' ನಕಾರ

ನವದೆಹಲಿ: ಮಲಯಾಳಂ ನಟ ದಿಲೀಪ್ ವಿರುದ್ಧ ದಾಖಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ವಿಚಾರಣೆಗೆ ಹೆಚ್ಚಿನ ಕಾಲಾವಕಾಶ ನೀಡಬೇಕು ಎಂದು ಕೇರಳ ಸರ್ಕಾರ ಮಾಡಿದ ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿತು.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠವು, ಇಂಥ ಕೋರಿಕೆಯನ್ನು ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರು ಮಾಡಬಹುದು. ಅಗತ್ಯವಿದ್ದರೆ ವಿಸ್ತರಣೆಗೆ ಕೋರಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಬಹುದು ಎಂದು ಹೇಳಿದೆ.

ಕೇರಳ ಸರ್ಕಾರವನ್ನು ಪ್ರತಿನಿಧಿಸಿದ ವಕೀಲ ಜೈದೀಪ್ ಗುಪ್ತಾ ಅವರು, ವಿಚಾರಣೆ ಪೂರ್ಣಗೊಳಿಸಲು ಈಗಿರುವ ಗಡುವು ಫೆಬ್ರುವರಿ 16ಕ್ಕೆ ಕೊನೆಗೊಳ್ಳಲಿದೆ. ಆದ್ದರಿಂದ ಹೆಚ್ಚುವರಿ ಆರು ತಿಂಗಳ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು. ನ್ಯಾಯಪೀಠವು ಮನವಿಯನ್ನು ತಿರಸ್ಕರಿಸಿ, ಕಾಲಾವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿತು.

ಗಣರಾಜ್ಯೋತ್ಸವ ದಿನ ಸಂಭವನೀಯ ದಾಳಿ ಸಾಧ್ಯತೆ ಹಿನ್ನೆಲೆ

ಪಾಕ್ ಗಡಿಯಲ್ಲಿ ತೀವ್ರ ಕಟ್ಟೆಚ್ಚರ: ಬಿಎಸ್‌ಎಫ್

ಪ್ರಜಾವಾಣಿ ವಾರ್ತೆ

ಜಮ್ಮು/ಶ್ರೀನಗರ: 'ಗಣರಾಜ್ಯೋತ್ಸವ ದಿನದಂದು ದೇಶವಿರೋಧಿ ಚಟುವಟಿಕೆ ಸಾಧ್ಯತೆ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿನ ಭಾರತ– ಪಾಕಿಸ್ತಾನದ ಗಡಿಯಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದ್ದು, ಅಂತರರಾಷ್ಟ್ರೀಯ ಗಡಿಯಲ್ಲಿ ಹೆಚ್ಚುವರಿ ಗಡಿ ಭದ್ರತಾ ಪಡೆ (ಬಿಎಸ್ ಎಫ್) ಯನ್ನು ನಿಯೋಜಿಸಲಾಗಿದೆ' ಎಂದು ಬಿಎಸ್‌ಎಫ್‌ನ ಜಮ್ಮು ಪ್ರಾಂತ್ಯ ಐಜಿ ಡಿ.ಕೆ.ಬೂರಾ ತಿಳಿಸಿದರು.

'ಈ ಸಂಬಂಧ ಅಂತರರಾಷ್ಟ್ರೀಯ ಗಡಿಯಲ್ಲಿ ಡ್ರೋನ್ ಹಾರಾಟದ ಮೇಲೆ ನಿಗಾ ಸೇರಿದಂತೆ ವಿವಿಧ ಕಾರ್ಯಾಚರಣೆಯನ್ನು ಬಿಎಸ್‌ಎಫ್ ಆರಂಭಿಸಿದ್ದು, ಭಯೋತ್ಪಾದಕರ ದುಷ್ಕೃತ್ಯಗಳನ್ನು ವಿಫಲಗೊಳಿಸಲು ಸೇನೆ, ಸಿಆರ್‌ಪಿಎಫ್, ಸ್ಥಳೀಯ ಪೊಲೀಸರ ಸಹಯೋಗದಲ್ಲಿ ಜಂಟಿ ಗಸ್ತು ಆರಂಭಿಸಲಾಗಿದೆ' ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಗಡಿಯಾಚೆಯಿಂದ ಒಳನುಸುಳುವಿಕೆ, ಶಸ್ತ್ರಾಸ್ತ್ರ ಸಾಗಣೆ, ಸ್ಫೋಟ ಸಂಚು ಹಾಗೂ ಮಾದಕವಸ್ತು ಕಳ್ಳಸಾಗಣೆಯ ಸಾಧ್ಯತೆಯ ಬಗ್ಗೆ ಗುಪ್ತಚರ ಮಾಹಿತಿಯ ಹಿನ್ನೆಲೆಯಲ್ಲಿ ಗಡಿನಿಯಂತ್ರಣ ರೇಖೆ(ಎಲ್‌ಒಸಿ) ಹಾಗೂ ಅಂತರರಾಷ್ಟ್ರೀಯ ಗಡಿಯಲ್ಲಿ ತೀವ್ರ ಹಾಗೂ ವ್ಯಾಪಕ ಕಟ್ಟೆಚ್ಚರ ವಹಿಸಿದ್ದೇವೆ. ಜನರ ಸುರಕ್ಷತೆ ಹಾಗೂ ಭದ್ರತೆಯನ್ನು ಬಿಎಸ್‌ಎಫ್ ಖಚಿತಪಡಿಸಲಿದ್ದು, ಗಡಿ ಪ್ರದೇಶದಲ್ಲಿನ ಜನರು ಯಾವುದೇ ಭಯ ಪಡಬೇಕಿಲ್ಲ' ಎಂದು ಹೇಳಿದರು.

ದೇಶ ನುಸುಳಲು 135 ಉಗ್ರರು ಸಂಚು: 'ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ(ಎಲ್‌ಒಸಿ) ಪ್ರದೇಶಗಳಲ್ಲಿ ಸುಮಾರು 135 ಉಗ್ರರು ದೇಶದೊಳಗೆ ನುಸುಳಲು ಯತ್ನ ನಡೆಸುತ್ತಿದ್ದಾರೆ' ಎಂದು ಬಿಎಸ್‌ಎಫ್ ಕಾಶ್ಮೀರ ಪ್ರಾಂತ್ಯದ ಐಜಿ ರಾಜಾ ಬಾಬು ಸಿಂಗ್ ತಿಳಿಸಿದರು.

ಶ್ರೀನಗರದ ಬಿಎಸ್‌ಎಫ್ ಕೇಂದ್ರ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕದನ ವಿರಾಮ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಒಳನುಸುಳುವ ಪ್ರಕರಣ ಕಡಿಮೆಯಾಗಿದ್ದು, ಸದ್ಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಉದ್ದಕ್ಕೂ ಪರಿಸ್ಥಿತಿ ಶಾಂತಿಯುತವಾಗಿದೆ. '2021ರಲ್ಲಿ 58 ಮಂದಿ ಒಳನುಸುಳುವ ಯತ್ನ ನಡೆಸಿದ್ದು, ಐವರನ್ನು ಹತ್ಯೆ ಮಾಡಲಾಗಿದೆ. 21 ಉಗ್ರರು ವಾಪಸ್ ತೆರಳಿದ್ದು, ಒಬ್ಬನನ್ನು ಸೆರೆ ಹಿಡಿಯಲಾಗಿದೆ' ಎಂದು ಮಾಹಿತಿ ನೀಡಿದರು.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ, ಭೂಮಿ ಉಸ್ತುವಾರಿ ಕೋಶ

ಮೊದಲನೇ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ. ಆರ್. ವೃತ್ತ, ಬೆಂಗಳೂರು – 560 001. ದೂರವಾಣಿ: 080–22113255

ಸಂಖ್ಯೆ: ಬಿ.ಎಂ.ಸಿ/11013/06/2022RD/2021-22/IND1282 ದಿನಾಂಕ: 24.01.2022

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

ಕಂದಾಯ ಇಲಾಖೆಯ **"ಕಂದಾಯ ದಾಖಲೆ ಮನೆ ಬಾಗಿಲಿಗೆ"** ಸೇವೆಗಾಗಿ ರಾಜ್ಯದ 31 ಜಿಲ್ಲೆಗಳಿಗೆ ಅವಶ್ಯವಿರುವ ಕಂದಾಯ ದಾಖಲೆಗಳ ಮುದ್ರಣಕ್ಕಾಗಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 04.02.2022 ರ ಸಂಜೆ 5.30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಸಲ್ಲಿಸಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು http://eproc.karnataka.gov.in. ರಲ್ಲಿ ಪಡೆಯಬಹುದಾಗಿದೆ.

ಸಹಿ/–
ಸಹಾಯಕ ಆಯುಕ್ತರು
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

DIPR/DDU/Zen/RO-3014/2020-21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಕರ್ನಾಟಕ ಸರ್ಕಾರ)

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ಬಿ.ಎಂ ರಸ್ತೆ, ಹಾಸನ

ಸಂಖ್ಯೆ: ಹಾನಪ್ರಾ/ಸಿ.ಎ.ನಿವೇಶನ/ಹಂಚಿಕೆ/ತಿದ್ದುಪಡಿ/ಪ್ರಕಟಣೆ/02/2021–22
ದಿನಾಂಕ:14.01.2022

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿ ಲಭ್ಯವಿರುವ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ತಿದ್ದುಪಡಿ ಪ್ರಕಟಣೆ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಾಗರೀಕ ಸೌರ್ಕಯ ನಿವೇಶನಗಳನ್ನು ವಿವಿಧ ಸಂಘ ಸಂಸ್ಥೆಗಳಿಗೆ, ಸರ್ಕಾರಿ, ಅರೆ ಸರ್ಕಾರಿ ಹಾಗೂ ಕೇಂದ್ರ ಸರ್ಕಾರಿ ಕಛೇರಿಗಳಿಗೆ ನಾಗರೀಕ ಸೌಕರ್ಯಕ್ಕಾಗಿ ಹಂಚಿಕೆ ಮಾಡುವ ಸಂಬಂಧ ಪ್ರಕಟಣೆ ಸಂಖ್ಯೆ: ಹಾನಪ್ರಾ/ಸಿ.ಎ.ನಿವೇಶನ/ಹಂಚಿಕೆ/ಪ್ರಕಟಣೆ /01/2021–22 ದಿನಾಂಕ:13.12.2021 ಮತ್ತು ಪ್ರಕಟಣೆ ಸಂ :ಹಾನಪ್ರಾ/ಸಿ.ಎ.ನಿವೇಶನ/ಹಂಚಿಕೆ/ಪ್ರಕಟಣೆ/02/2021–22 ದಿನಾಂಕ:20.12.2021ರಲ್ಲಿ ಪ್ರಕಟಿಸಿರುವಂತೆ ಅರ್ಜಿ ಪಡೆಯುವ ದಿನಾಂಕ:18.01.2022 ಹಾಗೂ ಅರ್ಜಿ ಸಲ್ಲಿಸುವ ದಿನಾಂಕ:21.01.2022ರಂದು ಅಪರಾಹ್ನ 5–30ಕ್ಕೆ ನಿಗಧಿಡಿಸಲಾಗಿರುವುದನ್ನು ಅರ್ಜಿ ಪಡೆಯುವ ದಿನಾಂಕ:11.02.2022 ಹಾಗೂ ಅರ್ಜಿ ಸಲ್ಲಿಸುವ ದಿನಾಂಕ:15.02.2022ರಂದು ಅಪರಾಹ್ನ 5–30ಕ್ಕೆ ನಿಗದಿಪಡಿಸಲಾಗಿದೆ. ಉಳಿದಂತೆ ಷರತ್ತು ಮತ್ತು ನಿಭಂದನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–(ಕೆ.ಎಂ.ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
ಸಹಿ/– (ಲಲಾಟಮೂರ್ತಿ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/671/2021–22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102 ದೂರವಾಣಿ:0816–2278190 ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com

ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/56(1)/2018–19 ದಿನಾಂಕ: 19.01.2022

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಕೆಲಸಕ್ಕೆ ಮರು–ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಏಜೆನ್ಸಿದಾರರು/ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: 080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು. (1) ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ನಗರದಲ್ಲಿ ವಿವಿಧ ಚಟುವಟಿಕೆಗಳ ಜಿಐಎಸ್ ಮ್ಯಾಪಿಂಗ್ ಮಾಡುವಿಕೆ" ಇಎಂಡಿ. ಮೊತ್ತ ರೂ.2,11,700/–, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **10.02.2022** : 16:00pm ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **11.02.2022** ; 16:00pm, **ಸೂಚನೆ:** ಈ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/562/MCA/2021-22

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ:08354– 235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354–235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–2/ಟೆಂಡರ್/2021–22/4983
ದಿನಾಂಕ:18.01.2022

–: ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ದ್ವಿ–ಲಕೋಟೆ ಟೆಂಡರ್ ಪ್ರಕಟಣೆ:–

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2021–22ನೇ ಸಾಲಿನ ಮಾನ್ಯ 5054–ರಡಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಪ್ಯಾಕೇಜ್ ಕಾಮಗಾರಿಗೆ Standard Tender Document KW–4ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳ ಇಂಡೆಂಟ್ ನಂ:: RDPR/2021-22/RD/WORK_INDENT88034, RDPR/2021-22/RD/WORK_INDENT88035, RDPR/2021-22/RD/WORK_INDENT88036, RDPR/2021-22/RD/WORK_INDENT88037 & RDPR/2021-22/RD/WORK_ INDENT88038 ಕಾಮಗಾರಿ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ ಟೆಂಡರ್ ಮೊತ್ತ (ರೂ.116.78 ರಿಂದ 165.95 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:07.02.2022 ರ ಸಾಯಂಕಾಲ 17.30 ಗಂಟೆವರೆಗೆ.

ಪ್ರೀ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 02.02.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 09.02.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

DIPR/BGK/RO-NO-500/MCA/2021-22

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್.ವೃತ್ತ ಬೆಂಗಳೂರು
ದೂರವಾಣಿ ಸಂಖ್ಯೆ : 080–22112809 ಇ–ಮೇಲ್ : pwdelediv1@gmail.com

ಸಂ. ಕಾಇಂ(ವಿ)/ಲೋಇ/ವಿದ್ಯುತ್/2021–22/2048 ದಿನಾಂಕ : 17–01–2022

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ Annual Maintenance of 2x500KVA Transformers Sub-station, HT Breakers and Main LT panels, 320 KVA D.G set, 3 nos. of 62.5 KVA DG set and 3 Nos. 30 KVA DG set and External and Internal Street light in the premises of NCP Parappana Agrahara at Bangalore (For 10 months) KPWD/2021-22/EL/WORK_INDENT143443 ಕಾಮಗಾರಿಯ ಮೊತ್ತ ರೂ. 18.05 ಲಕ್ಷಗಳ ಟೆಂಡರ್‌ನ ಮೊದಲನೇ ಕರೆಯನ್ನು ಕೆಡಬ್ಲ್ಯು–1, ಎಸ್.ಟಿ.ಡಿ. ಷರತ್ತುಗೊಳಪಟ್ಟಂತೆ The tenderer as a Prime Contractor having valid Class-I and above Electrical License issued by Electrical Inspectorate, Government of Karnataka ರವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **www.eproc.karnataka.gov.in** ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ : **14–01–2022 ರಿಂದ 28–01–2022 16:00 ಗಂಟೆ**ಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ : **28–01–2022 ರಂದೆ 16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು (ವಿ),
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.

ವಾ.ಸಂ.ಇ/ಬೆಂ.ನಗರ/ಶ್ರೇಷ್ಠ/2992/2021–22

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಶ್ವವಿದ್ಯಾನಿಲಯ

ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ, ಬೆಂಗಳೂರು

ಸಂಖ್ಯೆ: ಆಅ/ಟಿ.ಎನ್/462/2021–22 ದಿನಾಂಕ: 05.01.2022

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ / ಪಿಡಬ್ಲ್ಯೂಡಿ / ಗುತ್ತಿಗೆದಾರರುಗಳಿಂದ **ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಈಜು ಕೊಳ ನಿರ್ಮಾಣ ಮಾಡುವ ಕಾಮಗಾರಿಗೆ** ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್: **https://eproc.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇಎಂಡಿಯುನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಕಾಮಗಾರಿಯ ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 28.01.2022**ರಂದು **ಬೆಳಗ್ಗೆ 10.30**ಕ್ಕೆ ಆಗಿರುತ್ತದೆ. ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **https://eproc.karnataka.gov.in** ಯಿಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ: 04.02.2022**ರಂದು **ಅಪರಾಹ್ನ 04.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 07.02.2022**ರಂದು **ಬೆಳಗ್ಗೆ 10.30**ಕ್ಕೆ ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು **ದಿನಾಂಕ: 12.02.2022**ರಂದು **ಬೆಳಗ್ಗೆ 10.30**ಕ್ಕೆ ಕರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: **support@eprochelpdesk.com** ಅಥವಾ 8046010000 ಮತ್ತು 8068948777.

ಸಹಿ/–
ಆಸ್ತಿ ಅಧಿಕಾರಿಗಳು

ವಾಸಾಸಂ/ಬೆಂ.ನ/ಎಎಎ/3000/2021–2022

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2021–22/2283 ದಿನಾಂಕ:20.01.2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರವೆಂಟ್ ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2021–22 ನೇ ಸಾಲಿನ ಜಲ ಜೀವನ್ ಮಿಶನ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರವೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:24/01/2022 ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : **6 ತಿಂಗಳು (ಮಳೆಗಾಲ ಸೇರಿದಂತೆ)**. ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : **29/01/2022 ಸಮಯ 11:00 ಗಂಟೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **08/02/2022 ಸಮಯ 16:00 ಗಂಟೆ.** ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **09/02/2022 ರಂದು 17:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/–(ಎಸ್.ಎಂ.ಸುಭಾನ್ ಸಾಹೇಬ್) ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/491/ಎಂಸಿಎ/2021–22

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)

(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ-ಅಟ್ಟೂರು ಲೇಔಟ್ ಹತ್ತಿರ, ಬೆಂಗಳೂರು - 560 064. ದೂರವಾಣಿ : 080 - 6735 5000.

ಸಂಖ್ಯೆ : ಕರಾನೈವಿಉಕೇ/ಎಸಿಟಿ/13/2020 ದಿನಾಂಕ : 19–01–2022

ಇ–ಟೆಂಡರ್ ಅಧಿಸೂಚನೆ

ಈ ಕಛೇರಿಯು ಕೆಳಕಂಡ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ ಆಹ್ವಾನಿಸಿರುತ್ತದೆ.

ಟೆಂಡರ್ ಸಂಖ್ಯೆ : KSNDMC/ADM/10/2021 ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೊದಲನೇಯ ಮಹಡಿಯಲ್ಲಿ ನಿರ್ಮಿಸುತ್ತಿರುವ ತರಬೇತಿ ಕೇಂದ್ರದ ಇಂಟೀರಿಯರ್ ಕಾಮಗಾರಿಯನ್ನು ನಿರ್ವಹಿಸಲು.

ಈ ಟೆಂಡರ್ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ https://eproc.karnataka.gov.in ಯಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No : 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗಃಲೋಇಃಪಿಬಿ–ವಿವಿಧ/2021–22/4659 ದಿನಾಂಕ : 24–01–2022

ಟೆಂಡರ್ ಪ್ರಕಟಣೆಯ ಅವಧಿ ವಿಸ್ತರಣೆ

ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ನಂ: 4187 ದಿ: 05–01–2022ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಕರೆಯಲಾದ ಕಾಮಗಾರಿಗಳ (ವರ್ಕ ಇಂಡೆಂಟ್ ನಂ: 145737, 146263 ಹಾಗೂ 143494) ಟೆಂಡರ್ ಅವಧಿಯನ್ನು ವಿಸ್ತರಿಸಲಾಗಿದ್ದು ಪರಿಷ್ಕೃತ ವೇಳಾಪಟ್ಟಿ ಈ ಮುಂದಿನಂತಿರುತ್ತದೆ. ಪಶ್ನೋತ್ತರ ದಿನಾಂಕ ಃ **31–01–2022**, ಟೆಂಡರ್ ಸಲ್ಲಿಸುವ ದಿನಾಂಕ ಃ **02–02–2022** ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ ಃ **03–02–2022** ಆರ್ಥಿಕ ಬಿಡ್ ತೆರೆಯುವ ದಿನಾಂಕ ಃ **04–02–2022**

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ಗದಗ

ವಾಸಾಸಂಇ/ಗದಗ/ಎಂ.ಸಿ.ಎ/497/2021–22

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN - U04010KA2002SGC030438

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ, **ವಿಚಾರಣೆ ಸಂ.: ಬಿಸಿಪಿ–1373/2021–22** ಅನ್ವಯ 24x7 ಬೆಸ್ಕಾಂ ಗ್ರಾಹಕ ಸಹಾಯವಾಣಿಗಾಗಿ ಮಾನವ ಸಂಪನ್ಮೂಲ ಸೇವೆಗಳನ್ನು ಪಡೆಯಲು ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿದೆ. **ಪ್ರಮಾಣ :** (ಅ) ಗ್ರಾಹಕ ಸಹಕಾರ ಕಾರ್ಯನಿರ್ವಾಹಕರು – 375 ಸಂಖ್ಯೆಗಳು. (ಆ) ತಂಡದ ನಾಯಕರು – 23 ಸಂಖ್ಯೆಗಳು. (ಇ) ತಂಡದ ವ್ಯವಸ್ಥಾಪಕರು – 4 ಸಂಖ್ಯೆಗಳು.

ಬಿಡ್ ದಾಖಲೆಗಳ ಲಭ್ಯತೆ : **25–01–2022 ರಿಂದ 05–02–2022 15:00 ಗಂಟೆಗಳು.**
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **05–02–2022, 15:00 ಗಂಟೆಗಳು.**
ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ : **07–02–2022, 15:15 ಗಂಟೆಗಳು.**

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://eproc.karnataka.gov.in** ಮೂಲಕ ಟೆಂಡರ್ ದಾಖಲೆಗಳನ್ನು ಪಡೆಯಬಹುದು. ಇಚ್ಛೆಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆಗಳು 91–8046010000, +91–8068948777 ಗೆ ಸಂಪರ್ಕಿಸಬಹುದು ಅಥವಾ ಇ–ಮೇಲ್ **support@eprochelpdesk.com** ಮೂಲಕ ಸಹಾಯವನ್ನು ಪಡೆಯಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ವಿದ್ಯುತ್),
ಖರೀದಿ, ಬೆವಿಕಂ, 4ನೇ ಮಹಡಿ,
ಕೆ.ಆರ್.ವೃತ್ತ, ಬೆಂಗಳೂರು–560001.
ದೂ: 080–22354939, ಫ್ಯಾಕ್ಸ್ : 22352485

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ **Mobile APP** ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ದೂರವಾಣಿ ಸಂ:08338/273859 ಇ–ಮೇಲ್:eepwdckd@gmail.com

ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/5495 ದಿನಾಂಕ: 20/01/2022

ಅವಧಿ ವಿಸ್ತರಣೆ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ–2

ಈ ಕಚೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/5070 ದಿ: 03/01/2022 ರಡಿ ಟೆಂಡರ್ ಆಹ್ವಾನಿಸಲಾಗಿರುತ್ತದೆ ಹಾಗೂ ಈ ಕಚೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 5219 ದಿ: 10/01/2022 ರಡಿ ಮೊದಲನೇ ಬಾರಿ ಅವಧಿ ವಿಸ್ತರಣೆ ಮಾಡಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಈಗ ಎರಡನೇ ಬಾರಿ ಮತ್ತೆ ಅವಧಿ ವಿಸರಣೆ ಮಾಡಲಾಗಿದೆ.

ಕ್ರ.ಸಂ. 1 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ಮತ್ತೆ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 24–01–2022 ರಂದು (11.00 ಗಂಟೆಗೆ) 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 25–01–2022 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 28–01–2022 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 31–01–2022 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ಮತ್ತೆ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 27–01–2022 ರಂದು (11.00 ಗಂಟೆಗೆ) 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 29–01–2022 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 01–02–2022 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 03–02–2022 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1348/MCA/2021-22

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ: ರಾಗಾವಿ/ಇಎನ್‌ಜಿ/ಸಿಎನ್/ವಿಸಿ/ಫರ್/ಹೆಚ್‌ಎಲ್/31/2020–21 ದಿನಾಂಕ: 24/01/2022

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮೊದಲನೇ ಮಹಡಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಕೊಠಡಿ ನಿರ್ಮಾಣ ಮತ್ತು ಆವರಣದಲ್ಲಿರುವ ಸಭಾಂಗಣಗಳಿಗೆ ಪೀಠೋಪಕರಣಗಳನ್ನು ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಳಗೆ ಉಲ್ಲೇಖಿತ ಷರತ್ತುಗಳಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	24.01.2022 ಬೆಳಿಗ್ಗೆ 10:35 ಗಂಟೆಯಿಂದ
ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ	31.01.2022 ಬೆಳಿಗ್ಗೆ 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	09.02.2022 ಸಂಜೆ 4:00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	11.02.2022 ಸಂಜೆ 4:01 ಗಂಟೆಯವರೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/2995/2021–22

KSIIDC

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001.

ತಿದ್ದುಪಡಿ ಪ್ರಕಟಣೆ

ದಿನಾಂಕ: 24.01.2022ರಂದು ಈ ದಿನಪತ್ರಿಕೆಯಲ್ಲಿ ಮೂಲಸೌಕರ್ಯ ಯೋಜನೆಗಳಿಗೆ ಯೋಜನಾ ನಿರ್ವಹಣಾ ಸಾಫ್ಟ್‌ವೇರ್ ಅನುಷ್ಠಾನಕ್ಕೆ ಸಲಹೆಗಾರರನ್ನು ಆಯ್ಕೆ ಮಾಡುವ ಕುರಿತು ಜಾಹೀರಾತುಗೊಂಡ ಟೆಂಡರ್‌ನ ಮುಂದುವರೆದ ಪ್ರಕಟಣೆ ಇದಾಗಿದೆ. ಇದು ಅಲ್ಪಾವಧಿ ಟೆಂಡರ್ ಆಗಿರುವುದರಿಂದ, ಪ್ರೀ–ಬಿಡ್ ವಿಚಾರಣೆಗಳನ್ನು **ದಿನಾಂಕ: 27.01.2022, ಸಂಜೆ 6.00 ಗಂಟೆಯೊಳಗೆ** ಸಲ್ಲಿಸಬೇಕು. ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.02.2022, ಸಂಜೆ 5.30 ಗಂಟೆವರೆಗೆ.** ಇತರೆ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ಐಪಿಡಿ–2)

ವಾಸಾಸಂಇ/ಬೆಂ.ನ/3005/ಎಂಸಿಎ/2021–22

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2021–22/5500 ದಿನಾಂಕ: 20/01/2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 1 ಕಾಮಗಾರಿಯ ಗುತ್ತಿಗೆ ಇಟ್ಟ ಮೊತ್ತ ರೂ. 197.37 ಲಕ್ಷ ಇರುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 24–01–2022 ರಂದು (11.00 ಗಂಟೆಗೆ) 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 25–01–2022 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 28–01–2022 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 31–01–2022 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www. eproc.karnataka.gov.inನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1345/MCA/2021-22

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಸಂ.033/ಪಿಬಿ/ಗುತ್ತಿಗೆ/ಎಸ್‌ಸಿಪಿ–ಟಿಎಸ್‌ಪಿ/2021–22/5121 ದಿನಾಂಕ ಃ 24–01–2022

ಗುತ್ತಿಗೆ ತಿದ್ದುಪಡಿ ಪ್ರಕಟಣೆ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/ ಎಸ್‌ಸಿಪಿ–ಟಿಎಸ್‌ಪಿ/2021–22/4952/ದಿನಾಂಕ : **14–01–2022** ರಲ್ಲಿನ ಕಾಮಗಾರಿ ಕ್ರಸಂ: 1 (W.I.No.146491), 13 (W.I.No.146583) & 32 (W.I.No.146531)ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

ತಿದ್ದುಪಡಿ ದಿನಾಂಕಗಳಿಗೆ ಸಂಬಂಧಿಸಿದಂತೆ

ಕ್ರಸಂ.	ಗುತ್ತಿಗೆ ದಿನಾಂಕಗಳು	ಈ ಹಿಂದೆ ಪ್ರಕಟಿಸಲಾದಂತೆ	ಮುಂದೂಡಿಕೆ ಪ್ರಕಟಣೆಯಂತೆ
1	ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	24–01–2022 (ಮಧ್ಯಾಹ್ನ 4–00 ಗಂಟೆಯವರೆಗೆ)	**01–02–2022** (ಮಧ್ಯಾಹ್ನ 4–00 ಗಂಟೆಯವರೆಗೆ)
2	ಕಾಮಗಾರಿ ಗುತ್ತಿಗೆ ಪತ್ರವನ್ನು ತೆರೆಯುವ ದಿನಾಂಕ	25–01–2022 (ಮಧ್ಯಾಹ್ನ 4–30 ಗಂಟೆಗೆ)	**02–02–2022** (ಮಧ್ಯಾಹ್ನ 4–30 ಗಂಟೆಗೆ)

ಕರಡು ಗುತ್ತಿಗೆ ಪತ್ರಗಳಿಗೆ ಸಂಬಂಧಿಸಿದಂತೆ

ಕ್ರಸಂ.	ಇಂಡೆಂಟ್ ಸಂಖ್ಯೆ	ಈ ಹಿಂದೆ ಪ್ರಕಟಿಸಲಾದಂತೆ ಕರಡು ಗುತ್ತಿಗೆ ಪತ್ರಗಳ ಕಂಡಿಕೆ	ಮುಂದೂಡಿಕೆ ಪ್ರಕಟಣೆಯಂತೆ ಕರಡು ಗುತ್ತಿಗೆ ಪತ್ರಗಳ ಕಂಡಿಕೆ
1	KPWD/2021-22/RD/WORK_INDENT146491	Clause No. 3.2 (b) - C.C road/Drain works	Clause No. 3.2 (b) - Asphalt road works
2	KPWD/2021-22/BD/WORK_INDENT146583	Clause No. 3.2 (b) - C.C road/Drain works	Clause No. 3.2 (b) - Compound wall / Building works
3	KPWD/2021-22/RD/WORK_INDENT146531	Clause No. 3.2 (b) - C.C road/Drain works	Clause No. 3.2 (b) - Asphalt road works

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ವಾಸಾಸಂಇ/ಹಾವೇರಿ/ಎಂಸಿಎ/389/2021–22

ಕ್ಷೇಮ ಕುಶಲ

ಜಾಣ್ಮೆ, ಶಿಸ್ತು, ಸಂಯಮ ಜೊತೆಗೆ ಮನೆಯವರ ಸಹಕಾರ ಇದ್ದಲ್ಲಿ ಮನೆಯಿಂದ ಕೆಲಸ ನಿರ್ವಹಿಸುವುದು ಮತ್ತು ಮನೆಕೆಲಸ ನಿರ್ವಹಿಸುವುದು – ಎರಡೂ ಸರಾಗ

ಮನೆಯಿಂದ ಕೆಲಸವೂ ಮನೆಕೆಲಸವೂ

ಸಮುದ್ಯತಾ ರಾಜೇಶ್

ಲ್ಯಾಪ್‌ಟಾಪ್ ಮುಂದೆ ಕುಳಿತ ವರ್ಷಾಳಿಗೆ ಮಗಳು 'ಹಸಿವು' ಎಂದು ಕೂಗಿದಾಗಲೇ ಎಚ್ಚರವಾಗುವುದು. ಕೆಲಸದ ಒತ್ತಡದಲ್ಲಿ ಸಮಯಕ್ಕೆ ಸರಿಯಾಗಿ ಅಡುಗೆ ಮಾಡಲು ಅವಳಿಂದ ಆಗುತ್ತಿಲ್ಲ. ಮಗುವಿನ ಹಸಿದ ಕೂಗು ಕೇಳಿದಾಗ ಸಂಕಟವಾಗುತ್ತದೆ. ಕೆಲಸದ ಮೇಲೆ ಕೋಪವೂ ಅಸಹಾಯಕತೆಯೂ ಕಾಡುತ್ತದೆ.

ಬೆಳಗ್ಗೆಯಿಂದ ಸಂಜೆಯವರೆಗೂ ಕೆಲಸದಲ್ಲಿ ತೊಡಗಿರುವ ಸುಮಾಗೆ ಮನೆಕೆಲಸಕ್ಕೆ ಸಮಯ ಸಾಲುತ್ತಿಲ್ಲ. ಕೆಲಸ ಮುಗಿಸಿ ಕೋಣೆಯಿಂದ ಹೊರಬರುವಾಗ ಮನೆಯ ಅಸ್ತವ್ಯಸ್ತತೆ ಕಂಡು ಕಿರಿಕಿರಿ ಉಂಟಾಗುತ್ತದೆ. ಅದನ್ನೆಲ್ಲ ಸ್ವಚ್ಛಗೊಳಿಸುವ ವೇಳೆಗೆ ಇನ್ನಷ್ಟು ದಣಿವಾಗುತ್ತದೆ.

ಕೆಲಸದ ನೂರಾರು ಒತ್ತಡಗಳ ನಡುವೆ ಮಗು ಮೊಬೈಲ್‌ನಲ್ಲಿ ಮುಳುಗಿಹೋಗಿರುವುದು ಸೌಮ್ಯಳಿಗೆ ಪಾಪಪ್ರಜ್ಞೆ ಕಾಡುವಂತಾಗಿದೆ. ಮಗುವಿನೊಡನೆ ಆಟವಾಡಲು ಸಮಯವಿಲ್ಲ. ಕೆಲಸ ಮುಗಿಯುವ ವೇಳೆಗೆ ಆಯಾಸ. ಒಂದು ಪಶ್ಚಾತ್ತಾಪದೊಂದಿಗೇ ಸೌಮ್ಯ ದಿಂಬಿಗೆ ತಲೆಯಾನಿಸುತ್ತಾಳೆ.

* * *

ಕಳೆದೆರಡು ವರ್ಷಗಳಿಂದ ಕೋವಿಡ್ ಸಾಂಕ್ರಾಮಿಕದ ಪರಿಣಾಮವಾಗಿ ಮನೆಯಿಂದಲೇ ಕೆಲಸ ಮಾಡುತ್ತಿರುವ ಹಲವು ತಾಯಂದಿರ ಸಮಸ್ಯೆ ಇದು. ವರ್ಕ್ ಫ್ರಂ ಹೋಮ್ ಎನ್ನುವುದು ಹೇಳಿಕೆಗೆ ಸುಲಭವೆನಿಸಿದರೂ ಜವಾಬ್ದಾರಿಗಳು ಇನ್ನಷ್ಟು ಹೆಚ್ಚು.

ಹೇಗೂ ಮನೆಯಿಂದಲೇ ಕೆಲಸ ಮಾಡ್ತೀಯ, ಜೊತೆಗೆ ಮನೆಕೆಲಸವೂ ಮಾಡಿಬಿಡಬಹುದು – ಎಂಬ ಧೋರಣೆ ಮನೆಯಲ್ಲಿ ಬಂದರೆ, ಮನೆಯಲ್ಲೇ ಇರುತ್ತೀರಲ್ಲ ಒಂದಿಷ್ಟು ಕೆಲಸ ಹೆಚ್ಚು ಮಾಡಿದರೇನಂತೆ ಎಂಬ ಧೋರಣೆ ಕಚೇರಿಯಲ್ಲಿ ಬರುವುದು ಕೂಡ ಸಾಮಾನ್ಯ.

ಮನೆಯಿಂದಲೇ ಕೆಲಸ ಮಾಡುವುದು ಕೆಲವೊಮ್ಮೆ ಅನುಕೂಲವೂ ಹೌದು. ಕಚೇರಿಗೆ ಓಡಾಟದ ಸಮಯ ಉಳಿತಾಯವಾಗುತ್ತದೆ. ಮಕ್ಕಳಿಂದ ದೂರವಿರುವ ನೋವಿಲ್ಲ, ಹಿರಿಯರನ್ನು ಮನೆಯಲ್ಲಿ ಬಿಟ್ಟು ಹೋಗುವ ಆತಂಕವಿಲ್ಲ. ಎದುರಿದ್ದು ನೋಡಿಕೊಳ್ಳಬಹುದು. ಆದರೆ, ಕಚೇರಿಗೆ ಹೋದ ನಂತರ ಮನೆಯ ಕೆಲಸಕಾರ್ಯಗಳು, ಮನೆಯವರು ಇಲ್ಲದೇ ಇರುವುದರಿಂದ ಕೆಲಸಗಳಲ್ಲಿ ಗಮನ ಹರಿಸುವುದು, ಸಮಯ ಕೊಡುವುದು ಸುಲಭ. ಮನೆಯಿಂದಲೇ ಕೆಲಸ ಮಾಡುವಾಗ ಪ್ರತಿಯೊಂದನ್ನೂ ಪರಿಗಣಿಸಿ ಸಮಯ ನೀಡಿ ಕೆಲಸ, ಮನೆ ಎರಡನ್ನೂ ಸಂಭಾಳಿಸುವುದು ಸುಲಭವಲ್ಲ. ಎಲ್ಲವನ್ನೂ ಶಿಸ್ತಿನಿಂದ ನಿಭಾಯಿಸಿಕೊಂಡು ಹೋಗಲು ಸಮಯದ ಜೊತೆ ತುಸು ಜಾಣ್ಮೆಯೂ ಬೇಕು.

ಪತಿ-ಪತ್ನಿ ಇಬ್ಬರೂ ದುಡಿಯುವ ಸಂದರ್ಭಗಳಲ್ಲಿ ಮನೆ ನಿರ್ವಹಣೆಗೆ ಇಬ್ಬರ ಸಹಕಾರವೂ ಅಗತ್ಯ. ಕೆಲಸಗಳನ್ನು ಹಂಚಿಕೊಂಡು ಮಾಡಿದಲ್ಲಿ ಒತ್ತಡ ಕಡಿಮೆಯಾಗುವುದಲ್ಲದೆ ಕೆಲಸದ ನಂತರದ ಸಮಯವನ್ನು ಮನೆಯವರೊಂದಿಗೆ ನೆಮ್ಮದಿಯಿಂದ ಕಳೆಯಲು ಅನುಕೂಲವಾಗುತ್ತದೆ. ಮನೆಯಲ್ಲಿ ಹಿರಿಯರಿದ್ದಲ್ಲಿ ಮಕ್ಕಳೊಂದಿಗೆ ಸಮಯ ಕಳೆಯಬಹುದು.

- ವರ್ಕ್ ಫ್ರಂ ಹೋಂ ಆಯ್ಕೆಯಾಗಿದ್ದಲ್ಲಿ ನಿಮ್ಮ ಮನೆಯವರೊಂದಿಗೆ ಕುಳಿತು ಸ್ಪಷ್ಟವಾಗಿ ನಿಮ್ಮ ಕೆಲಸದ ಕುರಿತು ಮಾಹಿತಿ ನೀಡಿ. ನಿಮಗೆ ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಿಕೊಳ್ಳಿ.
- ಅನುಕೂಲವಿದ್ದಲ್ಲಿ ಮನೆಕೆಲಸಕ್ಕೆ ಸಹಾಯಕರನ್ನು ಗೊತ್ತುಪಡಿಸಿ. ಇದರಿಂದ ಸಮಯ ಮತ್ತು ಶ್ರಮದ ಉಳಿತಾಯವಾಗುತ್ತದೆ.
- ನಿಮ್ಮ ಆದ್ಯತೆಗಳನ್ನು ಪಟ್ಟಿ ಮಾಡಿ. ನಿಮ್ಮ ಕೆಲಸದ ನಿಗದಿತ ಸಮಯವನ್ನು ನಿಮ್ಮ ಅಧಿಕಾರಿಗಳೊಂದಿಗೆ ಸ್ಪಷ್ಟಪಡಿಸಿಕೊಳ್ಳಿ. ಕೆಲಸದ ನಂತರ ಮೊಬೈಲ್ ಬಳಕೆ ಕಡಿಮೆಗೊಳಿಸಿ, ಮನೆಯವರಿಗಾಗಿ ಸಮಯವನ್ನು ಮೀಸಲಿಡಿ.
- ಮಾರನೆಯ ದಿನದ ಅಡುಗೆಯನ್ನು ಇಂದೇ ಯೋಚಿಸಿ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಿ. ಇದರಿಂದ ನೀವು ಕೆಲಸಕ್ಕೆ ಕುಳಿತುಕೊಳ್ಳುವ ಮೊದಲೇ ಅಡುಗೆ ಸಿದ್ಧಪಡಿಸಲು ಅನುಕೂಲವಾಗುತ್ತದೆ. ಸಮಯಕ್ಕೆ ಸರಿಯಾಗಿ ಊಟ ತಿಂಡಿ ಮಾಡುವುದು ಆರೋಗ್ಯಕ್ಕೂ ಒಳ್ಳೆಯದು.
- ಮಕ್ಕಳಿಗಾಗಿ ಪ್ರತ್ಯೇಕ ಸಮಯವನ್ನು ಮೀಸಲಿಡಿ. ಮೊದಲೇ ನಿಮ್ಮ ಕೆಲಸದ ಕುರಿತು ತಿಳಿಸಿ. ಆ ವೇಳೆಯಲ್ಲಿ ಮಕ್ಕಳಿಗಾಗಿ ಚಟುವಟಿಕೆಗಳನ್ನು ಕೊಡಿ. ನಿಮ್ಮ ಕೆಲಸ ಮುಗಿದ ಮೇಲೆ ಅವರೊಂದಿಗೆ ಸ್ವಲ್ಪ ಹೊತ್ತು ನಿಮ್ಮ ಸಂಪೂರ್ಣ ಗಮನ ನೀಡಿ ಅವರೊಂದಿಗೆ ಕಾಲ ಕಳೆಯಿರಿ. ಮಕ್ಕಳು ಮಾಡಿದ ಚಟುವಟಿಕೆಗಳನ್ನು ನಿಮ್ಮ ಕೆಲಸದ ನಡುವೆ ಬಿಡುವಾದಾಗ ನೋಡಿ ಅಭಿನಂದಿಸಿ. ಅವರು ಇನ್ನಷ್ಟು ಸೃಜನಾತ್ಮಕವಾಗಿ ಬೆಳೆಯಲು ಅನುಕೂಲವಾಗುತ್ತದೆ.
- ಮಕ್ಕಳಿಗೆ ಸಣ್ಣ ಪುಟ್ಟ ಕೆಲಸ ನೀಡಿ. ಉದಾ: ಅವರ ಆಟದ ಸಾಮಾನುಗಳನ್ನು ತೆಗೆದಿರಿಸುವುದು, ಅವರ ಪುಸ್ತಕಗಳನ್ನು ಜೋಡಿಸುವುದು ಮುಂತಾದ ಪುಟ್ಟ ಕೆಲಸಗಳನ್ನು ಹೇಳಿ. ಮಕ್ಕಳು ಅದನ್ನು ಮಾಡಿದಾಗ ಪ್ರಶಂಸಿಸಿ. ಇದರಿಂದ ಸ್ವಚ್ಛತೆಗೂ ನೆರವಾಗುತ್ತದೆ, ಮಕ್ಕಳಲ್ಲಿ ಶಿಸ್ತು ಸಹ ಬೆಳೆಯುತ್ತದೆ.
- ಮನೆಯವರೊಂದಿಗೆ ಮುಕ್ತವಾಗಿ ಮಾತನಾಡಿ, ನಿಮಗೆ ಬೇಕಾದ ಸಹಾಯಗಳ ಕುರಿತು ತಿಳಿಸಿ. ಮನೆಕೆಲಸವನ್ನು ಹಂಚಿಕೊಳ್ಳುವುದು, ಅಡುಗೆ ಮಾಡುವುದು, ಮಕ್ಕಳ ನಿರ್ವಹಣೆಯನ್ನು ತಂದೆ ತಾಯಿ ಇಬ್ಬರೂ ಮಾಡುವುದು ಉತ್ತಮ.

ತುಸು ಜಾಣ್ಮೆ, ತುಸು ಶಿಸ್ತು, ತುಸು ಸಂಯಮ ಜೊತೆಗೆ ಮನೆಯವರ ಸಹಕಾರ ಇದ್ದಲ್ಲಿ ಮನೆಯಿಂದ ಕೆಲಸ ನಿರ್ವಹಿಸುವುದು ಮತ್ತು ಮನೆಕೆಲಸ ನಿರ್ವಹಿಸುವುದು – ಎರಡೂ ಸರಾಗ. ❖

ಜೀವನವೆಂಬ ಪವಾಡ

ಛಾಯಾಪತಿ

'ದಿಟವಾದ ಪವಾಡ ಎಂದರೆ ನೀರಿನ ಮೇಲೆ ನಡೆಯುವುದಲ್ಲ; ನೆಮ್ಮದಿಯಿಂದ ಜೀವನದ ಹೆಜ್ಜೆಗಳನ್ನು ಭೂಮಿಯ ಮೇಲೆ ಊರುತ್ತ ಸಾಗುವುದು ಪವಾಡ'. ಇತ್ತೀಚೆಗಷ್ಟೆ ನಮ್ಮನ್ನು ಅಗಲಿದ ಬೌದ್ಧಮಹಾಗುರು ಥಿಕ್ ನ್ಯಾಟ್ ಹಾನ್ ಅವರ ಮಾತು. ಇದು ನಮ್ಮ ಜೀವನದುದ್ದಕ್ಕೂ ನೆನಪಿನಲ್ಲಿಟ್ಟುಕೊಳ್ಳಬೇಕಾದ ಮಾತು.

ಥಿಕ್ ನ್ಯಾಟ್ ಹಾನ್

ನಮಗೆ ಜೀವನದಲ್ಲಿ ಏನೇನೋ ಭ್ರಾಂತಿಗಳು, ಮೋಹಗಳು, ಬಯಕೆಗಳು ಇರುತ್ತವೆ. ಇವೇ ನಮ್ಮ ಜೀವನವನ್ನು ನಿರ್ದೇಶಿಸುತ್ತಿರುತ್ತವೆ; ನಮ್ಮ ಎಲ್ಲ ಚಟುವಟಿಕೆಗಳು, ನಿರ್ಧಾರಗಳು, ಸಂತೋಷ-ಸಂಭ್ರಮಗಳು, ನೋವು-ದುಃಖಗಳು – ಇವುಗಳ ಸುತ್ತಲೇ ತಿರುಗುತ್ತಿರುತ್ತವೆ.

ಭ್ರಾಂತಿ, ಮೋಹ, ಬಯಕೆಗಳನ್ನೇ 'ಪವಾಡ' ಎಂದು ಅಂದುಕೊಳ್ಳುತ್ತೇವೆ. ನೀರಿನ ಮೇಲೆ ನಡೆಯುವ ಸಿದ್ಧಿ ಎಂಬ ಪವಾಡ ಇಲ್ಲಿ ಒಂದು ಪ್ರತಿಮೆಯಷ್ಟೆ. ಇಂಥ ಎಷ್ಟೋ 'ಅದ್ಭುತ'ಗಳನ್ನೇ ನಾವು ಜೀವನದಲ್ಲಿ ಪವಾಡ ಎಂದು ನಂಬಿಕೊಂಡು, ಅವುಗಳನ್ನು ಸಿದ್ಧಿಸಿಕೊಳ್ಳಲು ರಾತ್ರಿ-ಹಗಲು ಶ್ರಮಪಡುತ್ತೇವೆ. ಹೇರಳವಾಗಿ ಹಣವನ್ನು ಸಂಪಾದಿಸುವುದು, ದೊಡ್ಡ ಮನೆಯನ್ನು ನಿರ್ಮಿಸಿಕೊಳ್ಳುವುದು, ದೇಶ-ವಿದೇಶಗಳನ್ನು ಸುತ್ತುವುದು, ಕೆಜಿಗಟ್ಟಲೇ ಚಿನ್ನಾಭರಣಗಳನ್ನು ಧರಿಸುವುದು – ಇವೆಲ್ಲವೂ ನಮ್ಮ ಪಾಲಿಗೆ ದೊಡ್ಡ ಸಿದ್ಧಿಗಳೇ. ಹೀಗಾಗಿಯೇ ಇಂಥವನ್ನು ದಕ್ಕಿಸಿಕೊಂಡವರನ್ನು ನಾವು ಬೆರಗುಗಣ್ಣಿನಿಂದ ನೋಡುವುದು; ಅಸಾಧ್ಯವಾದುದನ್ನು ಸಾಧ್ಯವಾಗಿಸಿಕೊಂಡಿದ್ದಾರೆ ಎಂದು ಅಂಥವರನ್ನು ಕೊಂಡಾಡುವುದು. ಸಹಜವಾಗಿ ಸಿದ್ಧಿಸದಿರುವ, ಎಲ್ಲರಿಗೂ ಮಾಡಲು ಸಾಧ್ಯವಾಗದ ಕಾರ್ಯಗಳನ್ನೇ ಅಲ್ಲವೆ 'ಪವಾಡ' ಎನ್ನುವುದು. ಶ್ರೀಮಂತರಾಗುವುದು, ಅಧಿಕಾರವನ್ನು ಹಿಡಿಯುವುದು – ಇವೆಲ್ಲ ಸುಲಭದ ಕೆಲಸವಲ್ಲ. ಹೀಗಾಗಿಯೇ ಇವು ನಮ್ಮ ಪಾಲಿಗೆ ಪವಾಡಗಳು.

ಗುರು ಥಿಕ್ ನ್ಯಾಟ್ ಹಾನ್ ಇಂಥ ಪವಾಡಗಳ ಬಗ್ಗೆ ನಮ್ಮನ್ನು ಎಚ್ಚರಿಸುತ್ತಿದ್ದಾರೆ. ಏನೇನೋ ಅದ್ಭುತಗಳನ್ನು ಸಾಧಿಸುವುದು ಪವಾಡವಲ್ಲ. ಅವು ನೀರಿನ ಮೇಲೆ ನಡೆಯುವುದಾಗಿರಬಹುದು, ರಾಶಿ ರಾಶಿ ದುಡ್ಡನ್ನು ಸಂಪಾದಿಸುವುದಾಗಿರಬಹುದು – ಇಂಥವು ಪವಾಡಗಳಲ್ಲ; ನಮ್ಮ ಜೀವನವೇ ದಿಟವಾದ ಪವಾಡ ಎಂದು ಅವರು ಘೋಷಿಸುತ್ತಿದ್ದಾರೆ. ಜೀವನದ ಅರಿವು, ಜೀವನದ ಮೂಲಬಿಂದುವಾದ ನೆಮ್ಮದಿಯ ಅರಿವು – ಇವು ದಿಟವಾದ ಪವಾಡ. ಹೀಗಾಗಿಯೇ ಅವರು ಹೇಳುತ್ತಿರುವುದು 'ನೀರಿನ ಮೇಲೆ ನಡೆಯುವುದು ಪವಾಡವಲ್ಲ; ಭೂಮಿಯ ಮೇಲೆ ನಡೆಯುವುದು ಪವಾಡ; ನೆಮ್ಮದಿಯಿಂದ ಸಂತೋಷದಿಂದ ಈ ಹೆಜ್ಜೆಗಳನ್ನಿಡಲು ಸಾಧ್ಯವಾದರೆ ಅದು ಪವಾಡ.'

ನಿಜ, ನಾವೆಲ್ಲರೂ ಜೀವನದಲ್ಲಿ ಬಯಸುವುದು ನೆಮ್ಮದಿಯನ್ನೇ. ಹೀಗಾಗಿಯೇ ನಾವು ನಿರಂತರ ನೆಮ್ಮದಿಯನ್ನು ಹುಡುಕುತ್ತಲೇ ಇರುತ್ತೇವೆ. ಅದಕ್ಕಾಗಿ ಏನೇನೋ ಕಸರತ್ತುಗಳನ್ನು ಮಾಡುತ್ತಲೇ ಇರುತ್ತೇವೆ. ಈ ಪ್ರಯತ್ನದಲ್ಲಿ ನಾವು ನೀರಿನ ಮೇಲೆ ನಡೆಯುವುದನ್ನು ಕಲಿಯುತ್ತೇವೆಯೇ ವಿನಾ ನೆಲದ ಮೇಲೆ ನಡೆಯುವುದನ್ನೇ ಮರೆತುಬಿಡುತ್ತೇವೆ. ನಮ್ಮ ಶರೀರ, ಪ್ರಕೃತಿ, ಅನ್ನ, ನಿದ್ರೆ, ನಗು, ಮಗು – ಹೀಗೆ ಇಡಿಯ ಸೃಷ್ಟಿಯೇ ಅನಂತ ಪವಾಡಗಳ ಸರಮಾಲೆ. ಇವು ಸಹಜವಾಗಿಯೇ ನಮಗೆ ಒದಗಿರುವ ಸಂಪತ್ತುಗಳು ಕೂಡ. ಇವುಗಳ ಜೊತೆಗೆ ಒಂದಾಗಿ, ಆನಂದವಾಗಿ ಬದುಕುವುದನ್ನು ಕಲಿಯದೇ ನಾವು ನೆಮ್ಮದಿಯನ್ನು ಬೇರೆ ಎಲ್ಲೆಲ್ಲೋ ಅರಸುತ್ತಿದ್ದೇವೆ ಎಂದು ಎಚ್ಚರಿಸುತ್ತಿದ್ದಾರೆ, ಗುರುಗಳು. ನಾವು ಉಸಿರನ್ನು ಎಳೆದುಕೊಂಡಾಗ ಸಮಸ್ತ ಸೃಷ್ಟಿಯನ್ನೇ ನಮ್ಮದನ್ನಾಗಿಸಿಕೊಳ್ಳುತ್ತಿರುತ್ತವೆ; ನಾವು ಉಸಿರನ್ನು ಹೊರಗೆ ಬಿಟ್ಟಾಗ ಇಡಿಯ ಸೃಷ್ಟಿಯೊಂದಿಗೆ ಬೆರೆಯುತ್ತಿರುತ್ತೇವೆ. ಇದಕ್ಕಿಂತಲೂ ದೊಡ್ಡ ಪವಾಡ ಮತ್ತೇನಿದ್ದೀತು? ಇಡಿಯ ಬ್ರಹ್ಮಾಂಡವೇ ನಾನಾಗಿರುವೆ – ಎಂಬ ಅರಿವಿನ ವೈಶಾಲ್ಯಕ್ಕೆ ಹೋಲಿಸಿದರೆ ಯಾವ ಸಂಪತ್ತು ತಾನೆ ದೊಡ್ಡದಾಗಿರಲು ಸಾಧ್ಯ? ಇಂಥ ಸಂಪತ್ತನ್ನು ಪಡೆದವ ಬಡನಾಗಿರಲು ಸಾಧ್ಯವೆ? ಇಡಿಯ ಸೃಷ್ಟಿಯೇ ನನ್ನದು ಎಂಬ ಭಾವವು ಬಲಿತಮೇಲೆ ಇನ್ನೊಬ್ಬರನ್ನು ದ್ವೇಷಿಸಲು ಮನಸ್ಸಾದರೂ ಹೇಗೆ ಬಂದೀತು? ದ್ವೇಷಿಸುವ ಮನಸ್ಸೇ ಇಲ್ಲದ ಮೇಲೆ ಅಶಾಂತಿಗೆ ಅವಕಾಶವಾದರೂ ಎಲ್ಲಿದ್ದೀತು? ಹೀಗೆ ನಮ್ಮಲ್ಲಿಯೇ ಇರುವ ಬ್ರಹ್ಮಾಂಡದಷ್ಟು ನೆಮ್ಮದಿಯ ಅರಿವೇ ನಮ್ಮ ಜೀವನದ ಒಂದೊಂದು ಹೆಜ್ಜೆಯ ಗುರಿ ಆಗಿರಬೇಕು ಎನ್ನುತ್ತಾರೆ, ಥಿಕ್ ನ್ಯಾಟ್ ಹಾನ್. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

ರಸಾಯನ ಶಾಸ್ತ್ರ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು:

- **ಸೂಚಕಗಳು:**- ಆಮ್ಲ/ಪ್ರತ್ಯಾಮ್ಲಗಳನ್ನು ಕಂಡುಹಿಡಿಯಲು ಬಳಸುವ ರಾಸಾಯನಿಕಗಳು.
- ತಟಸ್ಥೀಕರಣ:- ಆಮ್ಲ ಮತ್ತು ಪ್ರತ್ಯಾಮ್ಲಗಳು ಪರಸ್ಪರ ವರ್ತಿಸಿ ಲವಣ ಮತ್ತು ನೀರು ಉಂಟುಮಾಡುವ ಕ್ರಿಯೆ.

ನೈಸರ್ಗಿಕವಾಗಿ ದೊರಕುವ ಕೆಲವು ಆಮ್ಲಗಳು

ನೈಸರ್ಗಿಕ ಆಕರ	ಆಮ್ಲ	ನೈಸರ್ಗಿಕ ಆಕರ	ಆಮ್ಲ
ವಿನೇಗರ್	ಅಸಿಟಿಕ್	ಕಿತ್ತಳೆ	ಸಿಟ್ರಿಕ್
ಹುಣಸೆ	ಟಾರ್ಟಾರಿಕ್	ಟೊಮೆಟೊ	ಆಕ್ಸಾಲಿಕ್
ಮೊಸರು	ಲ್ಯಾಕ್ಟಿಕ್	ಇರುವೆ ಕಡಿತ	ಮೆಥನೋಯಿಕ್
ಲಿಂಬೆ	ಸಿಟ್ರಿಕ್	ತುರಿಕೆ ಎಲೆ	ಮೆಥನೋಯಿಕ್

- pH(ಪಿ.ಎಚ್) ಅಳತೆಪಟ್ಟಿ:- 0 ಯಿಂದ 14 ರವರೆಗೆ ಅಳೆಯಬಹುದು.
- pH ಮೌಲ್ಯ:- ಆಮ್ಲ 0 ಯಿಂದ 6.9, ಪ್ರತ್ಯಾಮ್ಲ 7.1 ರಿಂದ 14, ತಟಸ್ಥ 7.
- ತಟಸ್ಥ ಲವಣಗಳು:- ಪ್ರಬಲ ಆಮ್ಲ ಮತ್ತು ಪ್ರಬಲ ಪ್ರತ್ಯಾಮ್ಲಗಳಿಂದುಂಟಾದ ಲವಣಗಳು. ಇವುಗಳ ಪಿ.ಎಚ್ 7
- ಆಮ್ಲೀಯ ಲವಣಗಳು:- ಪ್ರಬಲ ಆಮ್ಲ ಮತ್ತು ದುರ್ಬಲ ಪ್ರತ್ಯಾಮ್ಲಗಳಿಂದುಂಟಾದ ಲವಣಗಳು. ಇವುಗಳ pH 7 ಕ್ಕಿಂತ ಕಡಿಮೆ.
- ಪ್ರತ್ಯಾಮ್ಲೀಯ ಲವಣಗಳು:- ಪ್ರಬಲ ಪ್ರತ್ಯಾಮ್ಲ ಮತ್ತು ದುರ್ಬಲ ಆಮ್ಲಗಳಿಂದುಂಟಾದ ಲವಣಗಳು. ಇವುಗಳ pH 7 ಕ್ಕಿಂತ ಹೆಚ್ಚು.

ಕೆಲವು ಪ್ರಮುಖ ಲವಣಗಳು

ಲವಣ	ರಾಸಾಯನಿಕ ಹೆಸರು ಮತ್ತು ಅಣುಸೂತ್ರ	ಉಪಯೋಗಗಳು
ಸಾಮಾನ್ಯ ಉಪ್ಪು	ಸೋಡಿಯಂ ಕ್ಲೋರೈಡ್ NaCI	•ಆಹಾರದಲ್ಲಿ •ಸೋಡಿಯಂ ಹೈಡ್ರಾಕ್ಸೈಡ್, ಅಡುಗೆಸೋಡಾ, ವಾಷಿಂಗ್‌ಸೋಡಾ, •ಚೆಲುವೆಪುಡಿಯ ತಯಾರಿಕೆಗೆ ಕಚ್ಚಾವಸ್ತು
ಚೆಲುವೆ ಪುಡಿ	ಕ್ಯಾಲ್ಸಿಯಂ ಆಕ್ಸಿ ಕ್ಲೋರೈಡ್ $CaOCI_2$	•ಚೆಲುವೆಕಾರಕ •ಉತ್ಕರ್ಷಣಕಾರಿಯಾಗಿ •ಕುಡಿಯುವ ನೀರನ್ನು ಕ್ರಿಮಿಶುದ್ಧಿಕರಿಸಲು
ಅಡುಗೆ ಸೋಡಾ	ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ $NaHCO_3$	•ಬೇಕಿಂಗ್‌ಪುಡಿ •ಆಮ್ಲಶಾಮಕಗಳಲ್ಲಿ •ಬೆಂಕಿ ಆರಿಸುವ ಸೋಡಾ •ಆ್ಯಸಿಡ್ ಉಪಕರಣಗಳಲ್ಲಿ
ವಾಷಿಂಗ್ ಸೋಡಾ	ಸೋಡಿಯಂ ಕಾರ್ಬೋನೇಟ್ Na_2CO_3	•ಗಾಜು, ಸಾಬೂನು, ಕಾಗದ ಕಾರ್ಖಾನೆಗಳಲ್ಲಿ •ಗೃಹಬಳಕೆಯ •ಬೋರಾಕ್ಸ್ ಸಂಯುಕ್ತಗಳಲ್ಲಿ •ಸ್ವಚ್ಛಕಾರಿಯಾಗಿ

ಸಂಭವನೀಯ ಪ್ರಶ್ನೆ-ಉತ್ತರಗಳು

1.ಆಮ್ಲ ಮತ್ತು ಪ್ರತ್ಯಾಮ್ಲಗಳಿಗಿರುವ ವ್ಯತ್ಯಾಸ ತಿಳಿಸಿ.

ಆಮ್ಲ	ಪ್ರತ್ಯಾಮ್ಲ
ಹುಳಿ ರುಚಿ ಹೊಂದಿವೆ	ಕಹಿ ರುಚಿ ಹೊಂದಿವೆ
ನೀಲಿ ಲಿಟ್ಮಸ್ ಅನ್ನು ಕೆಂಪಾಗಿಸುತ್ತವೆ	ಕೆಂಪುಲಿಟ್ಮಸ್ ಅನ್ನು ನೀಲಿಯಾಗಿಸುತ್ತವೆ
H + ಅಯಾನುಗಳನ್ನು ಹೊಂದಿದೆ	OH- ಅಯಾನುಗಳನ್ನು ಹೊಂದಿದೆ

2. ಸೂಚಕಗಳ ವಿಧಗಳನ್ನು ಹೆಸರಿಸಿ. ಪ್ರತಿಯೊಂದಕ್ಕೂ ಉದಾಹರಣೆ ಕೊಡಿ.

- ನೈಸರ್ಗಿಕ ಸೂಚಕಗಳು ಉದಾ: ಲಿಟ್ಮಸ್, ಅರಿಸಿನ
- ಸಂಶ್ಲೇಷಿತ ಸೂಚಕಗಳು ಉದಾ: ಮೀಥೈಲ್ ಆರೆಂಜ್, ಫಿನಾಪ್ತಲೀನ್
- ಘ್ರಾಣ ಸೂಚಕಗಳು ಉದಾ: ವೆನಿಲ್ಲಾ, ಈರುಳ್ಳಿ, ಲವಂಗದ ಎಣ್ಣೆ.

3. ಸಾಮಾನ್ಯ ಉಪ್ಪು ಎರಡು ರಾಸಾಯನಿಕಗಳ ಸಂಯೋಗ ಕ್ರಿಯೆಯಿಂದ ಉಂಟಾಗುತ್ತದೆ. ಅವುಗಳನ್ನು ಹೆಸರಿಸಿ, ಸಮೀಕರಣ ಬರೆಯಿರಿ.

-ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸೋಡಿಯಂ ಹೈಡ್ರಾಕ್ಸೆಡ್

$NaOH + HCI$-------- > $NaCI = H_2 O$

4. ಕ್ಲೋರ್-ಆಲ್ಕಲಿ ಪ್ರಕ್ರಿಯೆಯಿಂದ ಉಂಟಾಗುವ ಉತ್ಪನ್ನಗಳನ್ನು ಪಟ್ಟಿಮಾಡಿ. ಅವುಗಳ ಉಪಯೋಗಗಳನ್ನು ತಿಳಿಸಿ.

-ಸೋಡಿಯಂ ಹೈಡ್ರಾಕ್ಸೈಡ್ (NaOH) -ಸಾಬೂನು ಮತ್ತು ಮಾರ್ಜಕಗಳು, ಕಾಗದ ತಯಾರಿಕೆ, ಕೃತಕ ನೂಲುಗಳು

-ಕ್ಲೋರಿನ್ ಅನಿಲ (CI_2) -ನೀರಿನ ಶುದ್ಧೀಕರಣ, ಈಜುಕೊಳಗಳು, ಪಿ.ವಿ.ಸಿ. ಸೋಂಕುನಾಶಕಗಳು, ಸಿ.ಎಫ್.ಸಿ., ಕೀಟನಾಶಕಗಳು.

-ಹೈಡ್ರೋಜನ್ ಅನಿಲ (H_2)-ಇಂಧನಗಳು, ಕೃತಕಬೆಣ್ಣೆ, ರಸಗೊಬ್ಬರಗಳಿಗೆ ಅಮೋನಿಯಾ.

5. ಆಮ್ಲಶಾಮಕಗಳು ಎಂದರೇನು? ಉದಾಹರಣೆ ಕೊಡಿ.

-ಜಠರದಲ್ಲಿನ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸುವ ರಾಸಾಯನಿಕಗಳು.

ಉದಾಹರಣೆ:-ಮೆಗ್ನೀಷಿಯಂ ಹೈಡ್ರಾಕ್ಸೈಡ್ ($MgSO_4$)

6. ಕಾರಣ ಕೊಡಿ.

ಎ) ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ತೇವಾಂಶ ನಿರೋಧಕ ಸಂಗ್ರಾಹಕದಲ್ಲಿ ಸಂಗ್ರಹಿಸಿಡಬೇಕು.

-ಏಕೆಂದರೆ, ಇದು ಬೇಗನೆ ತೇವಾಂಶವನ್ನು ಹೀರಿಕೊಂಡು ಜಿಪ್ಸಂ ಆಗಿ ಬದಲಾಗುತ್ತದೆ.

ಬಿ) ಆಮ್ಲವನ್ನು ಸಾರರಿಕ್ತಗೊಳಿಸುವಾಗ, ಸಾರೀಕೃತ ಆಮ್ಲಗಳಿಗೆ ನೀರನ್ನು ಸೇರಿಸಬಾರದು.

-ಏಕೆಂದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟ ಗಾಯಗಳು ಉಂಟಾಗಬಹುದು.

ಪರೀಕ್ಷೆಗೆ ಸಂಭವನೀಯ ಚಿತ್ರಗಳು:

ಎ)ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ.



ಬಿ) ನೀರಿನಲ್ಲಿ ಆಮ್ಲೀಯ ದ್ರಾವಣ ವಿದ್ಯುತ್‌ನ್ನು ಪ್ರವಹಿಸುತ್ತಿರುವುದು.



ಬಾಲರಾಜು.ಎ ಎಂ.ಎಸ್ಸಿ.,ಎ.ಇಡಿ. ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ — ರಸಾಯನಶಾಸ್ತ್ರದ 'ಆಸಿಡ್, ಬೇಸ್ ಮತ್ತು ಸಾಲ್ಟ್' ಅಧ್ಯಾಯದ ಓದಿಗಾಗಿ ಈ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ https://bit.ly/3tVwf9c

ಘನಸ್ಥಿತಿ

ಹಿಂದಿನ ಸಂಚಿಕೆಯಿಂದ..

ರಸಾಯನ ಶಾಸ್ತ್ರ

ಪಿಯುಸಿ

ಲೋಹೀಯ ಘನವಸ್ತುಗಳು

ಲೋಹಗಳು ಧನಅಯಾನುಗಳ ಕ್ರಮಬದ್ಧ ಸಂಗ್ರಹವಾಗಿದ್ದು ಮುಕ್ತ ಎಲೆಕ್ಟ್ರಾನ್‌ಗಳ ಸಮುದ್ರದಿಂದ ಸುತ್ತುವರೆದ್ದು. ಈ ಎಲೆಕ್ಟ್ರಾನ್‌ಗಳು ಚಲನೆಯಲ್ಲಿದ್ದು ಮತ್ತು ಸ್ಫಟಿಕದ ಎಲ್ಲೆಡೆ ಸಮವಾಗಿ ಹರಡಿವೆ. ಪ್ರತಿ ಲೋಹದ ಪರಮಾಣು ಚಲನೆಯಲ್ಲಿರುವ ಎಲೆಕ್ಟ್ರಾನ್‌ಗಳ ಈ ಸಮುದ್ರದ ಕಡೆಗೆ ಒಂದು ಅಥವಾ ಹೆಚ್ಚಿನ ಎಲೆಕ್ಟ್ರಾನ್‌ಗಳನ್ನು ನೀಡುತ್ತದೆ. ಈ ಮುಕ್ತ ಮತ್ತು ಚಲಿಸುವ ಇಲೆಕ್ಟ್ರಾನುಗಳು ಲೋಹಗಳಲ್ಲಿ ಹೆಚ್ಚಿನ ವಿದ್ಯುತ್ ಮತ್ತು ಉಷ್ಣ ವಾಹಕತೆಗೆ ಕಾರಣವಾಗಿವೆ. ವಿದ್ಯುತ್ ಕ್ಷೇತ್ರವನ್ನು ಅನ್ವಯಿಸಿದಾಗ, ಈ ಎಲೆಕ್ಟ್ರಾನ್‌ಗಳ ಧನ ಅಯಾನುಗಳ ಜಾಲದ ಮೂಲಕ ಹರಿಯುತ್ತವೆ. ಇದೇ ರೀತಿ, ಶಾಖವನ್ನು ಲೋಹದ ಒಂದು ಭಾಗಕ್ಕೆ ಸರಬರಾಜು ಮಾಡಿದಾಗ, ಉಷ್ಣ ಶಕ್ತಿಯು ಮುಕ್ತ ಎಲೆಕ್ಟ್ರಾನ್‌ಗಳಿಂದ ಸಮನಾಗಿ ಹರಡುತ್ತದೆ.

ಲೋಹಗಳ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಕೆಲವು ಸಂದರ್ಭಗಳಲ್ಲಿ ಅವುಗಳ ಹೊಳಪು ಮತ್ತು ಬಣ್ಣ. ಇದಕ್ಕೆ ಅವುಗಳಲ್ಲಿನ ಮುಕ್ತ ಎಲೆಕ್ಟ್ರಾನ್‌ಗಳ ಉಪಸ್ಥಿತಿಯೇ ಕಾರಣವಾಗಿದೆ.

ಸಹ ವೆಲೆನ್ಸಿಯಾ ಅಥವಾ ಜಾಲಬಂಧ ಘನವಸ್ತುಗಳು

ಸ್ಫಟಿಕದ ಎಲ್ಲೆಡೆ ಪಕ್ಕದ ಪರಮಾಣುಗಳ ನಡುವೆ ಸಹ ವೆಲೆನ್ಸಿಯ ಬಂಧಗಳ ಆಗುವಿಕೆಯಿಂದ ಉಂಟಾದ ಅಲೋಹಗಳ ವಿವಿಧ ಸ್ಫಟಿಕೀಯ ಘನವಸ್ತುಗಳು ಕಂಡುಬರುತ್ತವೆ. ಅವುಗಳನ್ನು ದೈತ್ಯ ಅಣುಗಳೆಂದೂ ಕರೆಯಲಾಗುತ್ತದೆ. ಸಹ ವೆಲೆನ್ಸಿಯಾ ಬಂಧವು ಬಲವಾಗಿರುತ್ತವೆ ಮತ್ತು ದಿಕ್ಕಿಗೆ ಸಂಬಂಧಿಸಿದ ಸ್ವಭಾವವುಳ್ಳವಾಗಿರುತ್ತವೆ, ಆದ್ದರಿಂದ ಪರಮಾಣುಗಳನ್ನು ಅವುಗಳ ಸ್ಥಾನಗಳಲ್ಲಿ ಬಲವಾಗಿ ಹಿಡಿದಿಡಲ್ಪಟ್ಟಿದೆ. ಅಂತಹ ಘನವಸ್ತುಗಳು ತುಂಬಾ ಕಠಿಣ ಮತ್ತು ಪೆಡಸಾಗಿವೆ. ಅವು ಅತ್ಯಂತ ಹೆಚ್ಚಿನ ಕರಗುವ ಬಿಂದುವನ್ನು ಹೊಂದಿವೆ ಮತ್ತು ಕರಗುವ ಮೊದಲೇ ವಿಘಟನೆ ಹೊಂದಬಹುದಾಗಿದೆ. ಇವು ಅವಾಹಕಗಳಾಗಿದ್ದು ವಿದ್ಯುತ್ ಹರಿಯಲು ಬಿಡುವುದಿಲ್ಲ. ವಜ್ರ ಮತ್ತು ಸಿಲಿಕಾನ್ ಕಾರ್ಬೈಡ್ ಇಂತಹ ಘನಗಳಿಗೆ ವಿಶಿಷ್ಟ ಉದಾಹರಣೆಗಳು.



ವಜ್ರದ ಜಾಲಬಂಧ ವಿನ್ಯಾಸ



ಗ್ರಾಫೈಟ್‌ನ ವಿನ್ಯಾಸ

ಗ್ರಾಫೈಟ್ ಮೃದುವಾಗಿರುತ್ತದೆ ಮತ್ತು ವಿದ್ಯುತ್ ವಾಹಕವಾಗಿದೆ. ಅದರ ಅಸಾಧಾರಣ ಲಕ್ಷಣಗಳಿಗೆ ಅದರ ವಿಶಿಷ್ಟ ರಚನೆಯೇಕಾರಣ. ಕಾರ್ಬನ್ ಪರಮಾಣುಗಳನ್ನು ವಿವಿಧ ಪದರಗಳಲ್ಲಿ ಜೋಡಿಸಲಾಗಿದೆ ಮತ್ತು ಪ್ರತಿ ಪರಮಾಣು ಅದರ ನೆರೆಯ ಮೂರು ಪರಮಾಣುಗಳ ಜೊತೆ ಅದೇ ಪದರದಲ್ಲಿ ಸಹ ವೆಲೆನ್ಸಿಯಾ ಬಂಧದಿಂದ ಬಂಧಿತವಾಗಿದೆ. ಪ್ರತಿ ಪರಮಾಣುವಿನ ನಾಲ್ಕನೇ ವೇಲೆನ್ಸಿ ಎಲೆಕ್ಟ್ರಾನ್ ಪದರಗಳ ನಡುವೆ ಇದ್ದು ಮತ್ತು ಚಲಿಸಲು ಮುಕ್ತವಾಗಿವೆ. ಈ ಮುಕ್ತ ಇಲೆಕ್ಟ್ರಾನುಗಳು ಗ್ರಾಫೈಟ್ ಅನ್ನು ಒಂದು ಉತ್ತಮ ವಿದ್ಯುತ್ ವಾಹಕವಾಗಿಸಿವೆ. ವಿವಿಧ ಪದರಗಳನ್ನು ಒಂದರ ಮೇಲೆ ಒಂದನ್ನು ಸರಿಸಬಹುದು. ಇದು ಗ್ರಾಫೈಟ್ ಅನ್ನು ಮೃದು ಘನವಾಗಿಸುತ್ತದೆ ಮತ್ತು ಉತ್ತಮ ಘನಮೃದು ಜಾಲಕವಾಗಿಸಿದೆ.

ಸ್ಫಟಿಕ ಜಾಲರಿ ಮತ್ತು ಘಟಕ ಕೋಶಗಳು

ಸ್ಫಟಿಕೀಯ ಘನದ ಮುಖ್ಯ ಲಕ್ಷಣವೆಂದರೆ ನಿಯಮಿತ ಮತ್ತು ಪುನರಾವರ್ತಿತಗೊಂಡಿರುವ ಘಟಕ ಕಣಗಳು. ಸ್ಫಟಿಕದಲ್ಲಿರುವ ಕಣಗಳ ಮೂರು ಆಯಾಮದ ಜೋಡಣೆಯು ರೇಖಾಚಿತ್ರವಾಗಿ ಪ್ರತಿನಿಧಿಸಲ್ಪಟ್ಟರೆ, ಪ್ರತಿ ಕಣವನ್ನು ಬಿಂದುವಾಗಿ ಬಿಂಬಿಸಲಾಗಿದೆ, ಈ ಜೋಡಣೆಯನ್ನು ಸ್ಫಟಿಕ ಜಾಲರಿ ಎಂದು ಕರೆಯಲಾಗುತ್ತದೆ. ಹೀಗಾಗಿ, ಅವಕಾಶದಲ್ಲಿ ಬಿಂದುಗಳ ನಿಯಮಿತವಾದ ಮೂರು ಆಯಾಮದ ಜೋಡಣೆಯನ್ನು ಸ್ಫಟಿಕ ಜಾಲರಿ ಎಂದು ಕರೆಯಲಾಗುತ್ತದೆ.

14 ಸಂಭವನೀಯ ಮೂರು ಆಯಾಮದ ಜಾಲರಿಗಳು ಮಾತ್ರ ಇವೆ. ಇವುಗಳನ್ನು ಬ್ರವೈಸ್ ಜಾಲರಿಗಳು ಎಂದು ಕರೆಯಲಾಗುತ್ತದೆ

ಮೂರು ಆಯಾಮದ ಘಟಕ ಜಾಲರಿಯ



ಮತ್ತು ಅದರ ಘಟಕ ಕೋಶ

ಸ್ಫಟಿಕ ಜಾಲರಿಯ ಗುಣಲಕ್ಷಣಗಳು.

(a) ಜಾಲಬಂಧದ ಪ್ರತಿಯೊಂದು ಬಿಂದುವನ್ನು ಜಾಲರಿಬಿಂದು ಅಥವಾ ಜಾಲರಿಜಾಗ ಎಂದು ಕರೆಯಲಾಗುತ್ತದೆ.

(b) ಸ್ಫಟಿಕ ಜಾಲರಿಯ ಪ್ರತಿಯೊಂದು ಬಿಂದುವೂ ಒಂದು ಪರಮಾಣು, ಅಣು (ಪರಮಾಣುಗಳ ಸಮೂಹ) ಅಥವಾ ಅಯಾನ್ ಆಗಿರುವ ಒಂದು ಘಟಕ ಕಣವನ್ನು ಪ್ರತಿನಿಧಿಸುತ್ತದೆ.

(c) ಜಾಲರಿಗಳ ಜ್ಯಾಮಿತಿಯನ್ನು ತರಲು ಜಾಲರಿ ಬಿಂದುಗಳನ್ನು ನೇರ ರೇಖೆಗಳ ಮೂಲಕ ಸೇರಿಸಲಾಗಿದೆ.

- ಘಟಕ ಕೋಶಗಳನ್ನು ವಿಶಾಲವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು, ಆದಿಮ ಮತ್ತು ಕೇಂದ್ರಿತ ಘಟಕ ಕೋಶಗಳು.

(a) ಆದಿಮ ಘಟಕ ಕೋಶಗಳು: ಘಟಕ ಕಣಗಳು ಘಟಕ ಕೋಶದ ಮೂಲೆಯ ಸ್ಥಾನದಲ್ಲಿ ಮಾತ್ರ ಇದ್ದಾಗ, ಅದನ್ನು ಆದಿಮ ಘಟಕ ಕೋಶಗಳು ಎಂದು ಕರೆಯಲಾಗುತ್ತದೆ.

(b) ಕೇಂದ್ರಿತ ಘಟಕ ಕೋಶಗಳು: ಒಂದು ಘಟಕ ಕೋಶವು ಮೂಲೆಗಳಲ್ಲಿರುವ ಜೊತೆಗೆ ಮೂಲೆಗಳಿಗಿಂತ ಬೇರೆ ಸ್ಥಾನದಲ್ಲಿ ಇರುವ ಒಂದು ಅಥವಾ ಹೆಚ್ಚಿನ ಘಟಕ ಕಣಗಳನ್ನು ಹೊಂದಿದ್ದರೆ, ಅದನ್ನು ಕೇಂದ್ರಿತ ಘಟಕ ಕೋಶವೆಂದು ಕರೆಯಲಾಗುತ್ತದೆ. ಕೇಂದ್ರಿತ ಘಟಕ ಕೋಶಗಳು ಮೂರು ವಿಧಗಳಾಗಿವೆ

(ಮುಂದುವರಿಯುವುದು......)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ರಸಾಯನ ಶಾಸ್ತ್ರ ವಿಷಯದ 'ದಿ ಸಾಲಿಡ್ ಸ್ಟೇಟ್' ಪಾಠದ ಅಧ್ಯಯನಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ https://bit.ly/3fP9JGM

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಬೊಗಳುವ ಪ್ರತಿಯೊಂದು ನಾಯಿಗೂ ನೀವು ನಿಂತು ಕಲ್ಲೆಸೆಯುತ್ತಾ ಸಾಗುವಿರಾದರೆ, ಎಂದಿಗೂ ನಿಮ್ಮ ಗುರಿಯನ್ನು ತಲುಪಲಾರಿರಿ.

–ವಿನ್‌ಸ್ಟನ್ ಚರ್ಚಿಲ್

ಕೆಪಿಎಸ್‌ಸಿ ನೇಮಕಾತಿಯಲ್ಲಿ ವಿಳಂಬ ಸರ್ಕಾರದ ನಿಸ್ಸೀಮ ನಿರ್ಲಕ್ಷ್ಯದ ಫಲ

‘ಕರ್ನಾಟಕ ಲೋಕಸೇವಾ ಆಯೋಗವನ್ನು (ಕೆಪಿಎಸ್‌ಸಿ) ಮುಚ್ಚಲು ಇದು ಸಕಾಲ’ ಎಂದು ರಾಜ್ಯ ಹೈಕೋರ್ಟ್, ಎರಡು ವರ್ಷಗಳ ಹಿಂದೆ ಅತ್ಯಂತ ಕಟುವಾದ ಪದಗಳಲ್ಲಿ ಕುಟುಕಿತ್ತು. ಕೆಪಿಎಸ್‌ಸಿ ಅವ್ಯವಸ್ಥೆಗಳ ಕುರಿತು ಬರುತ್ತಿದ್ದ ಪ್ರಕರಣಗಳಿಂದ ರೋಸಿಹೋಗಿದ್ದ ಕೋರ್ಟ್ ಹಾಗೆ ಆಕ್ರೋಶವನ್ನು ಹೊರಹಾಕಿತ್ತು. ಆದರೆ, ರಾಜ್ಯ ಸರ್ಕಾರವು ಅಕ್ಷರಶಃ ಆ ಮಾತಿನಂತೆ ನಡೆಯಲು ಮುಂದಾಗಿದೆಯೇನೋ ಎಂಬ ಅನುಮಾನ ಬರುವಂತಿದೆ ಅದರ ಇತ್ತೀಚಿನ ಧೋರಣೆ. ಏಕೆಂದರೆ, ಎಂಟು ತಿಂಗಳಿನಿಂದ ಕೆಪಿಎಸ್‌ಸಿಗೆ ಕಾಯಂ ಪರೀಕ್ಷಾ ನಿಯಂತ್ರಕರೇ ಇಲ್ಲ. ಅದರಲ್ಲೂ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಾಲ್ವರು ಪರೀಕ್ಷಾ ನಿಯಂತ್ರಕರನ್ನು ಆಯೋಗ ಕಾಣುವಂತಾಗಿದೆ. ಅದರ ಪರಿಣಾಮವಾಗಿ, ಸರ್ಕಾರದ ನಾನಾ ಇಲಾಖೆಗಳ ವಿವಿಧ ಶ್ರೇಣಿಗಳಿಗೆ ಸೇರಿದ 4,078 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಕೆಪಿಎಸ್‌ಸಿ ವ್ಯವಸ್ಥೆ ಇರುವುದೇ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿಗೆ ಅಗತ್ಯವಾದ ಪ್ರಕ್ರಿಯೆ ನಡೆಸುವುದಕ್ಕಾಗಿ. ಅಧಿಕಾರಿಗಳನ್ನೇ ನಿಯೋಜಿಸದೆ ಹೋದರೆ ಆ ಪ್ರಕ್ರಿಯೆಯನ್ನು ನಡೆಸುವುದಾದರೂ ಹೇಗೆ? ‘ನಿಯಮಿತ ಪರೀಕ್ಷಾ ಕಂಟ್ರೋಲರ್ ಇಲ್ಲದ ಕಾರಣ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಪೂರ್ಣಗೊಂಡಿಲ್ಲ. 2017ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಆರಂಭವೇ ಆಗಿಲ್ಲ. ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳ ಆಯ್ಕೆಗೆ ಸ್ಪರ್ಧಾತ್ಮಕ ಪರೀಕ್ಷೆಯ ನಂತರದ ಪ್ರಕ್ರಿಯೆಗಳೂ ಶುರುವಾಗಿಲ್ಲ. ವಿವಿಧ ಇಲಾಖೆಗಳ ತಾಂತ್ರಿಕೇತರ ಹುದ್ದೆಗಳ ಆಯ್ಕೆಗೆ ನಡೆದ ಪರೀಕ್ಷೆ, ಲೋಕೋಪಯೋಗಿ ಇಲಾಖೆಯ ಕಿರಿಯ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಗಳ ಮೌಲ್ಯಮಾಪನವೂ ನನೆಗುದಿಗೆ ಬಿದ್ದಿದೆ’ ಎಂದು ಮುಖ್ಯಮಂತ್ರಿಯವರಿಗೆ ಕೆಪಿಎಸ್‌ಸಿ ಅಧ್ಯಕ್ಷರೇ ಬರೆದ ಪತ್ರದಲ್ಲಿ ಪಟ್ಟಿ ಮಾಡಿದ್ದಾರೆ. ಮೇಲೆ ಉಲ್ಲೇಖಗೊಂಡ ಎಲ್ಲ ಪರೀಕ್ಷೆಗಳೂ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಡೆದಂಥವು. ನೇಮಕಾತಿ ವಿಳಂಬದಿಂದ ಒಂದೆಡೆ ಉದ್ಯೋಗ ಆಕಾಂಕ್ಷಿಗಳು ಅಸಮಾಧಾನಗೊಂಡರೆ, ಇನ್ನೊಂದೆಡೆ ವಿವಿಧ ಇಲಾಖೆಗಳು ಸಿಬ್ಬಂದಿ ಕೊರತೆಯಿಂದ ಸಮರ್ಪಕವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.

ಕೆಪಿಎಸ್‌ಸಿಯನ್ನು ಕ್ರಿಯಾಶೀಲಗೊಳಿಸಲು ಎಲ್ಲ ಅಗತ್ಯ ಕ್ರಮಗಳನ್ನೂ ಸರ್ಕಾರ ಆದ್ಯತೆ ಮೇರೆಗೆ ಕೈಗೊಳ್ಳಬೇಕು

ಸದ್ಯ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರೀಕ್ಷಾ ನಿಯಂತ್ರಕರನ್ನು ಸಮವರ್ತಿ ಪ್ರಭಾರದಲ್ಲಿ ಇರಿಸಲಾಗಿದೆ. ಅವರು ಆಯೋಗದ ಕಾರ್ಯನಿರ್ವಹಣೆಯ ಜೊತೆಗೆ ರೇಷ್ಮೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹೊಣೆಯನ್ನೂ ನಿಭಾಯಿಸಬೇಕಿದೆ. ಪೂರ್ಣಾವಧಿ ಪರೀಕ್ಷಾ ನಿಯಂತ್ರಕರಿದ್ದಾಗಲೇ ಕೆಪಿಎಸ್‌ಸಿ ಮೇಲಿನ ಕಾರ್ಯಭಾರದ ಒತ್ತಡವನ್ನು ನಿಭಾಯಿಸುವುದು ಕಷ್ಟ. ಇನ್ನು ಬೇರೊಂದು ಇಲಾಖೆಯ ಪ್ರಮುಖ ಹೊಣೆಯನ್ನೂ ನಿಭಾಯಿಸಬೇಕಾದ ಈ ಅಧಿಕಾರಿ, ನೇಮಕಾತಿ ಪ್ರಕ್ರಿಯೆಗೆ ಸಮರ್ಪಕ ಸಮಯ ನೀಡಲು ಸಾಧ್ಯವಾಗದ ಕಾರಣ ಆಯೋಗದ ಕಾರ್ಯನಿರ್ವಹಣೆ ವಿಳಂಬ ಆಗುತ್ತಿದೆ ಎನ್ನುವುದು ಕೆಪಿಎಸ್‌ಸಿ ಅಧ್ಯಕ್ಷರ ಅಳಲು. 18 ತಿಂಗಳ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯ ಕಿರಿಯ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಪರಿಷ್ಕೃತ ಅಧಿಸೂಚನೆಯೊಂದನ್ನು ಹೊರಡಿಸಿರುವುದು ಹೊರತುಪಡಿಸಿದರೆ ಯಾವುದೇ ನೇಮಕಾತಿಗೆ ಸಂಬಂಧಿಸಿದಂತೆ ಹೊಸ ಅಧಿಸೂಚನೆಯನ್ನು ಹೊರಡಿಸಲು ಸಾಧ್ಯವಾಗಿಲ್ಲ. ಆಯೋಗ ಎಷ್ಟೊಂದು ‘ಕ್ರಿಯಾಶೀಲ’ವಾಗಿ ಕಾರ್ಯ ನಿರ್ವಹಿಸುತ್ತಿದೆ ಎನ್ನುವುದರ ದ್ಯೋತಕ ಇದು. ಆಯೋಗದ ಮೂಲಕ ನಡೆಯುವ ನೇಮಕಾತಿಯನ್ನೇ ನಂಬಿರುವ ಉದ್ಯೋಗಾಕಾಂಕ್ಷಿಗಳಿಗೆ ಅದರ ಮಂದಗತಿಯ ಕಾರ್ಯಾಚರಣೆ ಬಲು ನಿರಾಸೆ ಮೂಡಿಸಿದೆ. ಅಲ್ಲದೆ, ಅನೇಕರು ವಯೋಮಿತಿ ಮೀರುವ ಆತಂಕದಲ್ಲಿದ್ದಾರೆ. ಅವರ ಭವಿಷ್ಯದ ಪ್ರಶ್ನೆಗೆ ಯಾರ ಬಳಿ ಉತ್ತರವಿದೆ? ಇಲಾಖೆಗಳು ಸಹ ವಿವಿಧ ಶ್ರೇಣಿಯ ಹುದ್ದೆಗಳ ಪಟ್ಟಿ ನೀಡಿ, ಅರ್ಹರನ್ನು ಆಯ್ಕೆ ಮಾಡಿಕೊಡುವಂತೆ ಕೆಪಿಎಸ್‌ಸಿಗೆ ಮನವಿ ಮಾಡಿ, ಕಾಯುತ್ತಾ ಕುಳಿತಿವೆ. ಅವುಗಳ ದೈನಂದಿನ ಕೆಲಸವೂ ಖಾಲಿ ಹುದ್ದೆಗಳಿಂದಾಗಿ ಕುಂಟುತ್ತಿದೆ. ಆದರೆ, ಕೆಪಿಎಸ್‌ಸಿ ಮಾತ್ರ ಯಾವುದೇ ಪ್ರಕ್ರಿಯೆ ನಡೆಸಲು ಸಾಧ್ಯವಾಗದೆ ಕೈಕಟ್ಟಿ ಕುಳಿತಿದೆ.

ಕೆಪಿಎಸ್‌ಸಿಯಲ್ಲಿ ಆಗಬೇಕಾದ ಸುಧಾರಣೆಗಳ ಕುರಿತು ವರದಿ ನೀಡಲು ಪಿ.ಸಿ. ಹೋಟಾ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿತ್ತು. ಈ ಸಮಿತಿ ಮಾಡಿದ್ದ ಶಿಫಾರಸಿನಂತೆ ಐಎಎಸ್ ಹಿರಿಯ ಶ್ರೇಣಿಯ ಪರೀಕ್ಷಾ ನಿಯಂತ್ರಕ ಹುದ್ದೆಯನ್ನೇನೋ ಸೃಜಿಸಲಾಯಿತು. ಆದರೆ, ಈ ಹುದ್ದೆಗೆ ನಿಯೋಜಿತರಾದವರನ್ನು ಕನಿಷ್ಠ ಮೂರು ವರ್ಷಗಳವರೆಗೆ ವರ್ಗಾವಣೆ ಮಾಡಬಾರದು ಎಂಬ ಸಮಿತಿಯ ಮತ್ತೊಂದು ಶಿಫಾರಸನ್ನು ನಿರ್ಲಕ್ಷಿಸಲಾಯಿತು. ಹೀಗಾಗಿ ಕೆಪಿಎಸ್‌ಸಿ ವ್ಯವಸ್ಥೆಯಲ್ಲಿ ಪೂರ್ಣ ಸುಧಾರಣೆ ಎನ್ನುವುದು ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ಸಾರ್ವಜನಿಕರು ಮತ್ತು ಉದ್ಯೋಗ ಆಕಾಂಕ್ಷಿಗಳಿಂದ ಹಿಡಿಶಾಪಕ್ಕೆ ಒಳಗಾಗುತ್ತಲೇ ಇರುವ, ಮೇಲಿಂದ ಮೇಲೆ ಕೋರ್ಟ್ ಕಟಕಟೆಯಲ್ಲಿ ನಿಲ್ಲುತ್ತಿರುವ, ಅದರಿಂದ ಛೀಮಾರಿಗೂ ಒಳಗಾಗುತ್ತಿರುವ ಕೆಪಿಎಸ್‌ಸಿಯನ್ನು ಸದ್ಯದ ಸ್ಥಿತಿಯಿಂದ ಮೇಲೆತ್ತಿ, ಅದನ್ನು ಕ್ರಿಯಾಶೀಲಗೊಳಿಸಲು ಎಲ್ಲ ಅಗತ್ಯ ಕ್ರಮಗಳನ್ನೂ ಸರ್ಕಾರ ಆದ್ಯತೆ ಮೇರೆಗೆ ಕೈಗೊಳ್ಳಬೇಕು. ಆ ಮೂಲಕ ಜನಹಿತ ಕಾಯುವ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ನೇಮಕಾತಿ ಪ್ರಕ್ರಿಯೆ ಮೇಲೆ ಜನರ ವಿಶ್ವಾಸ ಮೂಡಿಸುವಂತಹ ಹೊಣೆಗಾರಿಕೆ ಸರ್ಕಾರ, ಆಯೋಗ ಎರಡರ ಮೇಲೂ ಇದೆ. ಆಯೋಗ ಸುಗಮವಾಗಿ ಕಾರ್ಯನಿರ್ವಹಿಸಲು ಬೇಕಾದ ಎಲ್ಲ ಅಗತ್ಯ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಬೇಕು. ಆಯೋಗ ಸಮರ್ಪಕವಾಗಿ ಕಾರ್ಯ ನಿರ್ವಹಿಸಿ, ಸಕಾಲದಲ್ಲಿ ನಿಷ್ಪಕ್ಷಪಾತದಿಂದ ನೇಮಕಾತಿ ಪ್ರಕ್ರಿಯೆ ನಡೆಸಬೇಕು.

ದಿನದ ಟ್ವೀಟ್

ಪರಿವರ್ತನೆ ಆಗಬೇಕಿದೆ

ಶಿಕ್ಷಣವು ಬದುಕಿನಲ್ಲಿ ಪರಿವರ್ತನೆ ತರುತ್ತದೆ. ಆದರೆ, ಇಂದಿನ ಮತ್ತು ನಾಳೆಯ ಸವಾಲುಗಳನ್ನು ಎದುರಿಸಲು ಶಿಕ್ಷಣ ವ್ಯವಸ್ಥೆಯಲ್ಲೂ ಪರಿವರ್ತನೆ ಆಗಲೇಬೇಕಾಗಿದೆ. #EducationDay

ವಿಶ್ವಸಂಸ್ಥೆ

ಕಿಡಿನುಡಿ

ಮಹಾರಾಷ್ಟ್ರದಲ್ಲಿ ನಾವು ಬಿಜೆಪಿಯನ್ನು ತಳಮಟ್ಟದಿಂದ ಮೇಲ್ಮಟ್ಟಕ್ಕೆ ಕೊಂಡೊಯ್ದೆವು. ಬಾಬರಿ ಘಟನೆಯ ಬಳಿಕ ಉತ್ತರ ಭಾರತದಲ್ಲಿ ಶಿವಸೇನೆಯ ಅಲೆ ಇತ್ತು. ಆ ಸಮಯದಲ್ಲಿ ನಾವೇನಾದರೂ ಚುನಾವಣೆಯಲ್ಲಿ ಸ್ಪರ್ಧಿಸಿದ್ದರೆ, ದೇಶದಲ್ಲಿ ನಮ್ಮ (ಶಿವಸೇನೆ) ಪ್ರಧಾನಿ ಇರುತ್ತಿದ್ದರು. ಆದರೆ ನಾವು ಅದನ್ನು ಅವರಿಗಾಗಿ ಬಿಟ್ಟುಕೊಟ್ಟೆವು. ಬಿಜೆಪಿಯು ಹಿಂದುತ್ವವನ್ನು ಕೇವಲ ಅಧಿಕಾರಕ್ಕಾಗಿ ಬಳಸಿಕೊಳ್ಳುತ್ತದೆ.



ಸಂಜಯ್ ರಾವುತ್, ಶಿವಸೇನಾ ವಕ್ತಾರ

25 ವರ್ಷಗಳ ಹಿಂದೆ

ಶನಿವಾರ, 25-1-1997

• **ಉಪಚುನಾವಣೆ: ಕಣದಲ್ಲಿ ಉಳಿದ ಅಭ್ಯರ್ಥಿಗಳು**

ಬೆಂಗಳೂರು, ಜ. 24– ರಾಜ್ಯ ವಿಧಾನಸಭೆಗೆ ಫೆಬ್ರುವರಿ 8ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಲ್ಲಿ ಐವರು ಹಾಗೂ ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಆರು ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿ ಉಳಿದಿದ್ದಾರೆ. ಮಾಜಿ ಶಾಸಕ ಜೆ.ಸಿ. ಮಾಧುಸ್ವಾಮಿ ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಜನತಾದಳದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನವಾದ ಇಂದು ರಾಮನಗರ ಕ್ಷೇತ್ರದಲ್ಲಿ 7 ಅಭ್ಯರ್ಥಿಗಳು ನಾಮಪತ್ರ ವಾಪಸು ಪಡೆದರು. ಅಂತಿಮವಾಗಿ ಕಾಂಗ್ರೆಸ್‌ನ ಸಿ.ಎಂ. ಲಿಂಗಪ್ಪ, ಜನತಾ ದಳದ ಎಂ.ಎಚ್. ಅಮರನಾಥ್ ಅಲಿಯಾಸ್ ಅಂಬರೀಷ್, ಬಿಜೆಪಿಯ ಗಿರಿಗೌಡ ಹಾಗೂ ಪಕ್ಷೇತರರಾದ ಎ.ಬಿ. ಅನಂತರಾಮ ಮತ್ತು ಅಪ್ಪಾಜಯ್ಯ ಸ್ಪರ್ಧೆಯಲ್ಲಿದ್ದಾರೆ.

ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ 7 ಮಂದಿ ಇಂದು ತಮ್ಮ ನಾಮಪತ್ರಗಳನ್ನು ವಾಪಸು ಪಡೆದರು. ಅಂತಿಮವಾಗಿ ಕಾಂಗ್ರೆಸ್‌ನ ಬಿ. ಲಕ್ಕಪ್ಪ, ಜನತಾದಳದ ಸಿ.ಬಿ.ಸುರೇಶ್ ಬಾಬು, ಬಿಜೆಪಿಯ ಶಂಕರಪ್ಪ, ಸಮತಾ ಪಕ್ಷದ ರಮೇಶ್ ಬಾಬು, ಪಕ್ಷೇತರರಾದ ಜೆ.ಸಿ. ಮಾಧುಸ್ವಾಮಿ ಹಾಗೂ ಪ್ರಸನ್ನಕುಮಾರ ಸ್ವಾಮಿ ಸ್ಪರ್ಧೆಯಲ್ಲಿ ಉಳಿದಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 25-1-1972

• **ಕಾರ್ಪೊರೇಷನ್‌ನಿಂದ ಪೇಟೆಯಲ್ಲಿ ಆಹಾರಧಾನ್ಯ ನೇರ ಮಾರಾಟ ಆರಂಭ**

ನವದೆಹಲಿ, ಜ. 24– ಆಹಾರಧಾನ್ಯಗಳ ಬೆಲೆ ಇಳಿಸಲು ಭಾರತದ ಆಹಾರ ಕಾರ್ಪೊರೇಷನ್ ಇಂದು ಮೊದಲ ಬಾರಿಗೆ ಪೇಟೆಯಲ್ಲಿ ಮಾರಾಟಕ್ಕೆ ಇಳಿಯಿತು.

ವಿವಿಧ ರಾಜ್ಯಗಳ 60 ಮಂಡಿಗಳಲ್ಲಿ ಅದು ಮಾರಾಟ ಪ್ರಾರಂಭಿಸಿತು. ಇದರ ಪರಿಣಾಮವಾಗಿ ಗೋಧಿಯ ಬೆಲೆ ಕ್ವಿಂಟಲ್‌ಗೆ ಆರು ರೂ.ಗಳಷ್ಟು ಇಳಿಯಿತು.

ಇನ್ನು 7ರಿಂದ 10 ದಿನಗಳೊಳಗೆ ಸ್ವದೇಶಿ ಗೋಧಿ ಬೆಲೆಯನ್ನು ಕ್ವಿಂಟಲ್‌ಗೆ 82 ರೂ.ಗಳಿಗೆ ಇಳಿಸುವುದಾಗಿ ಕಾರ್ಪೊರೇಷನ್ ಅಧ್ಯಕ್ಷ ಶ್ರೀ ಇಕ್ಬಾಲ್ ಸಿಂಗ್ ಅವರು ಇಂದು ಪತ್ರಿಕಾಗೋಷ್ಠಿಯೊಂದರಲ್ಲಿ ತಿಳಿಸಿದರು. ಈಗ ಅದರ ಬೆಲೆ 90ರಿಂದ 100 ರೂ.ಗಳವರೆಗೆ ಇದೆ.

• **ಎರಡು ವರ್ಷಗಳಲ್ಲಿ ದೆಹಲಿ–ಬೆಂಗಳೂರು ನಡುವೆ ನೇರ ರೈಲು ಪ್ರಯಾಣ ಸಾಧ್ಯ**

ಕೆಂಗಲ್, ಜ. 24– ಇನ್ನೆರಡು ವರ್ಷಗಳಲ್ಲಿ ಕೇರಳದ ರಾಜಧಾನಿ ತಿರುವನಂತಪುರ ಮತ್ತು ಕರ್ನಾಟಕದ ರಾಜಧಾನಿ ಬೆಂಗಳೂರುಗಳಿಂದ ನೇರವಾಗಿ ದೆಹಲಿಗೆ ರೈಲು ಪ್ರಯಾಣ ಸೌಲಭ್ಯ ದೊರೆಯಲಿದೆ.

ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ವಿವಾಹ ವಯಸ್ಸನ್ನು 21ಕ್ಕೆ ಏರಿಸುವುದಕ್ಕಿಂತಲೂ ಉತ್ತಮವಾದ ಆಯ್ಕೆಗಳಿವೆ

ವಿವಾಹ ವಯಸ್ಸು ಮತ್ತು ಸೌಖ್ಯ ವೃದ್ಧಿ

ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಪುರುಷರ ವಿವಾಹ ವಯಸ್ಸಿಗೆ ಸಮನಾಗಿ ಹೆಣ್ಣು ಮಕ್ಕಳ ವಿವಾಹ ವಯಸ್ಸನ್ನೂ 18ರಿಂದ 21 ವರ್ಷಗಳಿಗೆ ಏರಿಸುವ ಉದ್ದೇಶದ ಬಾಲ್ಯ ವಿವಾಹ ನಿಷೇಧ ತಿದ್ದುಪಡಿ ಮಸೂದೆಯನ್ನು 2021ರ ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿದೆ. ಈ ಮಸೂದೆಯು ಈಗ ಸಂಸತ್ತಿನ ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಳಪಟ್ಟಿದ್ದು, ಅದರ ಸಾಮಾಜಿಕ, ಕಾನೂನಾತ್ಮಕ ಹಾಗೂ ರಾಜಕೀಯ ಪರಿಣಾಮಗಳು ಸಾರ್ವಜನಿಕ ಚರ್ಚೆಗೆ ವಸ್ತುವಾಗಿವೆ. ಆದರೆ, ಮಹಿಳೆಯ ಪ್ರಜನನ ಆರೋಗ್ಯ, ಮಕ್ಕಳ ಬದುಕುಳಿಯುವಿಕೆ ಹಾಗೂ ಅವರ ಭವಿಷ್ಯದ ಬದುಕಿನ ಅವಕಾಶಗಳ ಕುರಿತಂತೆ ವಿವಾಹ ವಯಸ್ಸಿನ ಏರಿಕೆಯು ಮಹಿಳೆಯ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದು ಈ ವಾಗ್ವಾದದಲ್ಲಿ ಗಮನಿಸಬೇಕಿರುವ ಮುಖ್ಯ ಅಂಶ.

ಪ್ರಜನನ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಚಿಕ್ಕ ವಯಸ್ಸಿಗೇ ಮದುವೆ ಎಂದರೆ ಚಿಕ್ಕ ವಯಸ್ಸಿಗೇ ಬಸಿರು ಎಂಬುದು ಮೊದಲ ಕಾಳಜಿಯ ಸಂಗತಿಯಾಗುತ್ತದೆ. ಏಕೆಂದರೆ, ಶಿಶು ಹಾಗೂ ತಾಯಿ ಇಬ್ಬರಿಗೂ ಇದು ಹಾನಿಕಾರಕ. ಭಾರತದಾದ್ಯಂತ 20-24ರ ವಯೋಮಾನದ ಸುಮಾರು ನಾಲ್ವರು ಹುಡುಗಿಯರ ಪೈಕಿ ಒಬ್ಬಾಕೆ ಬಾಲವಧುವಾಗಿದ್ದವಳು (23.3%) ಎಂಬುದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್- 5) ದತ್ತಾಂಶಗಳು ತೋರಿಸಿವೆ. ಜಾಗತಿಕವಾಗಿ ಎಲ್ಲಾ ಬಾಲವಧುಗಳ ಪೈಕಿ ಸುಮಾರು ಶೇಕಡ 30ರಷ್ಟು ಮಂದಿ ಭಾರತದಲ್ಲೇ ಇದ್ದಾರೆ ಎಂದು ಯುನಿಸೆಫ್ ಅಂದಾಜಿಸಿದೆ.

ಇನ್ನೂ ಮಕ್ಕಳಾಗಿರುವಾಗಲೇ ವಿವಾಹವಾದ ಇವರು ಹದಿಹರೆಯದವರಾಗಿದ್ದಾಗ ಮಕ್ಕಳಿಗೆ ಜನ್ಮ ನೀಡಿದ್ದಾರೆ. ಬಸಿರಿಗೆ ಸಂಬಂಧಿಸಿದ ಅತಿ ರಕ್ತದೊತ್ತಡ ಹಾಗೂ ಇಡೀ ಶರೀರದ ಸೋಂಕುಗಳಿಗೆ ಒಳಗಾಗುವ ಅಪಾಯವು ಹದಿಹರೆಯದ ತಾಯಂದಿರಿಗಿರುತ್ತದೆ ಎಂಬುದನ್ನು ವಿಶ್ವ ಆರೋಗ್ಯ ಸಂಸ್ಥೆಯ ಅಂಕಿಅಂಶಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಹಾಗೆಯೇ ನವಜಾತ ಶಿಶುವಿನ ಕಡಿಮೆ ಜನನ ತೂಕ, ಅವಧಿಪೂರ್ವ ಹೆರಿಗೆ ಹಾಗೂ ನವಜಾತ ಶಿಶುವಿನಲ್ಲಿನ ಸಮಸ್ಯೆಗಳಂತಹ ಅಪಾಯಗಳು ಹದಿಹರೆಯದ ತಾಯಂದಿರಿಗೆ ಜನಿಸಿದ ಮಕ್ಕಳಲ್ಲಿ ಸಾಮಾನ್ಯವಾಗಿರುತ್ತವೆ. ವಾಸ್ತವವಾಗಿ, ಜಾಗತಿಕವಾಗಿ 15-19 ವಯಸ್ಸಿನ ಹೆಣ್ಣು ಮಕ್ಕಳ ಸಾವುಗಳಿಗೆ ಗರ್ಭಾವಸ್ಥೆ ಹಾಗೂ ಹೆರಿಗೆ ಸಂದರ್ಭದ ತೊಂದರೆಗಳೇ ಪ್ರಮುಖ ಕಾರಣ.

ಇದಲ್ಲದೆ, ಬೇಗನೇ ಮದುವೆ ಎಂದರೆ ಹುಡುಗಿಯರ ಓದು ಅರ್ಧಕ್ಕೇ ಮೊಟಕಾದಂತೆ. ಪೂರ್ಣವಾದ ಸಾರ್ಥಕ ಬದುಕನ್ನು ಕಟ್ಟಿಕೊಳ್ಳುವ ಅವರ ಸಾಮರ್ಥ್ಯದ ಮೇಲೆ ಇದು ದೀರ್ಘಾವಧಿ ಪರಿಣಾಮ ಬೀರುತ್ತದಲ್ಲದೆ ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಹೆಚ್ಚಿನ ವಿದ್ಯಾಭ್ಯಾಸವಿಲ್ಲದ ಅಥವಾ ಯಾವುದೇ ವಿದ್ಯಾಭ್ಯಾಸವಿಲ್ಲದ ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳ ಹುಡುಗಿಯರಿಗೆ ಬೇಗನೇ ಮದುವೆ ಮಾಡಿಬಿಡುವ ಅಪಾಯಗಳು ಜಾಸ್ತಿ. 18 ವರ್ಷಗಳಾಗುವ ಮುಂಚೆಯೇ ಬಹುತೇಕ ಶೇ 60ರಷ್ಟು ಬಡ ಗ್ರಾಮೀಣ ಬಾಲೆಯರ ವಿವಾಹವಾಗಿತ್ತು ಎಂಬುದನ್ನು ಎನ್‌ಎಫ್‌ಎಚ್‌ಎಸ್- 5 ಸಮೀಕ್ಷೆಯ ಅಂಕಿಅಂಶಗಳು ತೋರಿಸಿವೆ. ಈ ಹೆಣ್ಣು ಮಕ್ಕಳು ಯಾವುದೇ ಶಿಕ್ಷಣ ಪಡೆದಿಲ್ಲದವರು. ಶಿಕ್ಷಣ ಮಟ್ಟ ಹೆಚ್ಚಿದಂತೆ, ಬಾಲ್ಯವಿವಾಹದ ಪ್ರಮಾಣವೂ ತೀವ್ರವಾಗಿ ಇಳಿಮುಖವಾಗಿರುವುದು ಕಂಡುಬಂದಿದೆ. ಬಾಲವಧುಗಳು ಸರಾಸರಿ ಹೆಚ್ಚು ಮಕ್ಕಳನ್ನು ಹೊಂದಿರುತ್ತಾರೆ. ಬಡತನ, ವಿದ್ಯಾಭ್ಯಾಸದ ಕೊರತೆ, ಬೇಗನೇ ಮದುವೆ, ನಂತರ ಮಕ್ಕಳು ಎಂಬಂಥ ಪರಿಸ್ಥಿತಿಗಳು ಬದುಕಿನಲ್ಲಿ ಮುಂದೆ ಬರಲು ಮಹಿಳೆಗೆ ಅವಕಾಶ ನೀಡುವುದಿಲ್ಲ. ಇದೇ ಸುಳಿಯಲ್ಲಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆ ಸಿಲುಕುತ್ತದೆ.

ಬಾಲ್ಯವಿವಾಹ ಮಾಮೂಲಿ ಪದ್ಧತಿಯಾಗಿರುವಂತಹ ಸಮಾಜದಲ್ಲಿ ವಿವಾಹದ ವಯಸ್ಸಿನ ಕುರಿತಾದ ಕಾಳಜಿಯು ದೀರ್ಘಾವಧಿಯದ್ದು. 1929ರ ಬಾಲ್ಯವಿವಾಹ ನಿಗ್ರಹ ಕಾಯ್ದೆಯು ವಿವಾಹದ ಕಾನೂನುಬದ್ಧ ವಯಸ್ಸನ್ನು ಭಾರತದಲ್ಲಿ ಮೊದಲ ಬಾರಿಗೆ ನಿರ್ದಿಷ್ಟಪಡಿಸಿತು. ಈ ಪ್ರಕಾರ, ಹುಡುಗಿಯರಿಗೆ 14 ಹಾಗೂ ಹುಡುಗರಿಗೆ 18 ವಯಸ್ಸು ನಿಗದಿಪಡಿಸಲಾಗಿತ್ತು. ‘ಶಾರದಾ ಕಾಯ್ದೆ’ ಎಂದೂ ಕರೆಯಲಾಗುವ ಇದಕ್ಕೆ ಆಗ ಕೆಲವು ಗುಂಪುಗಳಿಂದ ವಿರೋಧ ವ್ಯಕ್ತವಾಗಿತ್ತು. ಇದರಿಂದ ಇದನ್ನು ಮುಸ್ಲಿಮೇತರ ಸಮುದಾಯಗಳಿಗೆ ಸೀಮಿತಗೊಳಿಸಲಾಯಿತು. ಇದನ್ನು ಸ್ವಾತಂತ್ರ್ಯಾನಂತರದ ಕಾಲದಲ್ಲಿ ಎರಡು ಬಾರಿ ಪರಿಷ್ಕರಿಸಲಾಯಿತು. 1949ರಲ್ಲಿ ಬಾಲೆಯರ ವಿವಾಹ ವಯಸ್ಸನ್ನು 15ಕ್ಕೆ ಏರಿಸಲಾಯಿತು. 1978ರಲ್ಲಿ ಹುಡುಗಿಯರು ಹಾಗೂ ಹುಡುಗರು ಇಬ್ಬರಿಗೂ ವಿವಾಹ ವಯಸ್ಸನ್ನು ಕ್ರಮವಾಗಿ 18 ಹಾಗೂ 21ಕ್ಕೆ ಏರಿಸಲಾಯಿತು. ಎಲ್ಲಾ ಭಾರತೀಯರಿಗೂ ಅನ್ವಯವಾಗುವಂತಹ ‘ಬಾಲ್ಯವಿವಾಹ ನಿಷೇಧ ಕಾಯ್ದೆ- 2006’ರ ಮೂಲಕ ಇದನ್ನು ಪುನರ್ ದೃಢೀಕರಿಸಲಾಯಿತು. ತೀರಾ ಇತ್ತೀಚೆಗೆ, ‘ಲಿಂಗತ್ವ ಸಮಾನತೆ ಸಾಧನೆ ಹಾಗೂ ಎಲ್ಲಾ ಮಹಿಳೆಯರು, ಬಾಲಕಿಯರ ಸಬಲೀಕರಣ’ ಗುರಿ ಹೊಂದಿರುವ ಎಸ್‌ಡಿಜಿ 5 ಅಳವಡಿಕೆಯ ಮೂಲಕ ಜಾಗತಿಕ ಪ್ರಾಮುಖ್ಯವನ್ನು ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್‌ಡಿಜಿ) ಒದಗಿಸಿಕೊಟ್ಟಿವೆ. ‘ಎಸ್‌ಡಿಜಿ 5.3.1’ ಎಂಬ ಮುಖ್ಯ ಸೂಚಕದ ಮೂಲಕ, 15 ವರ್ಷಕ್ಕಿಂತ ಮುಂಚೆ ಹಾಗೂ 18 ವರ್ಷಕ್ಕಿಂತ ಮುಂಚೆ ವಿವಾಹವಾಗಿರುವ ಅಥವಾ ಸಂಗಾತಿಯೊಟ್ಟಿಗಿರುವ 20-24ರ ವಯೋಮಾನದ ಮಹಿಳೆಯರ ಪ್ರಮಾಣದ ಪ್ರಗತಿಯನ್ನು ನಿಯಮಿತವಾಗಿ ಗುರುತಿಸಲಾಗುತ್ತದೆ.

ಈಗಿರುವಂತಹ ಕಾನೂನು ಅವಕಾಶಗಳ ಅನುಷ್ಠಾನದಿಂದ 18 ವರ್ಷಗಳ ಮಿತಿಯಿಂದ ಬಾಲ್ಯವಿವಾಹ ಕಡಿಮೆ ಮಾಡುವಲ್ಲಿ ಸಾಧಿಸಿರುವ ಪ್ರಗತಿ ಸ್ಥಿರವಾಗಿದೆ. ಆದರೆ ಗುರಿ ಸಾಧನೆಯಲ್ಲಿ ತುಂಬಾ ಹಿಂದುಳಿದಿದ್ದೇವೆ. ರಾಷ್ಟ್ರದಾದ್ಯಂತ ಬಾಲ್ಯವಿವಾಹದ ಪ್ರಮಾಣ 1970ರಲ್ಲಿ ಬಹುತೇಕ ಶೇಕಡ 75ರಷ್ಟಿದ್ದದ್ದು 2020ರಲ್ಲಿ ಶೇಕಡ 23.3ಕ್ಕೆ ಇಳಿಮುಖವಾಗಿದೆ. ಇದು, ಕಳೆದ ದಶಕದಲ್ಲಿ ವಾರ್ಷಿಕ ಶೇಕಡ 5.5ರಷ್ಟು ಇಳಿಕೆಯನ್ನು ಪ್ರತಿನಿಧಿಸುತ್ತದೆ. ಹದಿಹರೆಯದ ಫಲವತ್ತತೆ ಪ್ರಮಾಣವು 2015-16ರಲ್ಲಿ 15-19 ವಯೋಮಾನದ 1,000 ಹುಡುಗಿಯರಲ್ಲಿ 51 ಇದ್ದದ್ದು 2019-21ರಲ್ಲಿ 41ಕ್ಕೆ ಕುಸಿದಿದೆ. ಇಂತಹ ಸನ್ನಿವೇಶದಲ್ಲಿ, ವಿವಾಹ ವಯಸ್ಸನ್ನು 18ರಿಂದ 21 ವರ್ಷಕ್ಕೆ ಏರಿಸುವುದು ಉತ್ತಮ ಮಾರ್ಗವಾಗುವುದೇ?

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು, ಮಹಿಳೆಯರಿಗೆ ಹೆಚ್ಚಿನ ಉದ್ಯೋಗ ಹಾಗೂ ಇತರ ಆರ್ಥಿಕ ಅವಕಾಶಗಳು, ಹದಿಹರೆಯದ ಹೆಣ್ಣು ಮಕ್ಕಳನ್ನು ಬೆಂಬಲಿಸುವ ಸರ್ಕಾರಿ ಕಾರ್ಯಕ್ರಮಗಳು ಹಾಗೂ ಬಾಲ್ಯವಿವಾಹವು ಕಾನೂನುಬಾಹಿರ ಎಂಬುದರ ಬಗ್ಗೆ ನಿರಂತರ ಜಾಗೃತಿ ಮೂಡಿಸುವಿಕೆಯ ಕೆಲಸಗಳು ಬಾಲ್ಯವಿವಾಹ ಇಳಿಮುಖವಾಗಲು ಕೆಲವು ಕಾರಣಗಳಾಗಿವೆ ಎಂದು ಸದ್ಯಕ್ಕೆ ವಿವರಿಸಲಾಗುತ್ತಿದೆ. 21ಕ್ಕೆ ವಿವಾಹ ವಯಸ್ಸು ಏರಿಸುವುದಕ್ಕಿಂತಲೂ ಅಂತಹ ಕಾರ್ಯಕ್ರಮಗಳು ಹಾಗೂ ಅವಕಾಶಗಳಿಗೆ ಎಲ್ಲ ಹುಡುಗಿಯರೂ ಸಂಪರ್ಕ ಹೊಂದುವಂತೆ ಮಾಡಲು ಪ್ರಗತಿಯನ್ನು ಗಣನೀಯವಾಗಿ ಹೆಚ್ಚಿಸುವುದು ಬಹುಶಃ ಉತ್ತಮ ಆಯ್ಕೆ.

ಸುರಕ್ಷಿತ ತಾಯ್ತನ ಹಾಗೂ ಶಿಶುಗಳ ಬದುಕುಳಿಯುವಿಕೆ ಖಾತರಿಪಡಿಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಹೂಡಿಕೆ ಅಗತ್ಯ. ಶೇಕಡ 50ಕ್ಕಿಂತ ಹೆಚ್ಚಿನ ಬಾಲವಧುಗಳು ಐದು ರಾಜ್ಯಗಳಿಗೆ ಸೇರಿದವರು. ಆ ರಾಜ್ಯಗಳು ಯಾವುವೆಂದರೆ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಉತ್ತರಪ್ರದೇಶ, ಬಿಹಾರ ಹಾಗೂ ಮಧ್ಯಪ್ರದೇಶ. ವಿವಾಹ ವಯಸ್ಸಿನಲ್ಲಿ ಪುರುಷ- ಮಹಿಳೆ ಮಧ್ಯೆ ಲಿಂಗತ್ವ ಸಮಾನತೆ ತರಬೇಕು ಎಂಬುದು ಗುರಿಯಾಗಿದ್ದಲ್ಲಿ, ಪುರುಷರಿಗೂ ವಯಸ್ಸಿನ ಮಿತಿಯನ್ನು 18ಕ್ಕೆ ಇಳಿಸಬಹುದಾದ ಆಯ್ಕೆ ಇದೆ. 25-29 ವಯೋಮಾನದ ಐವರು ಪುರುಷರಲ್ಲಿ ಒಬ್ಬರು (17.7%) ಈಗಿರುವ 21 ವಯಸ್ಸಿನ ಮಿತಿಯ ಕೆಳಗೆ ವಿವಾಹವಾಗಿರುವುದನ್ನು ಎನ್‌ಎಫ್‌ಎಚ್‌ಎಸ್- 5ರ ದತ್ತಾಂಶ ತೋರಿಸಿದೆ.

ಮಹಿಳೆಯರ ಆರೋಗ್ಯ ಹಾಗೂ ಸೌಖ್ಯವನ್ನು ವೃದ್ಧಿಸುವುದೇ ಗುರಿಯಾಗಿದ್ದಲ್ಲಿ, ಮುಂದೆ ಸಾಗಬೇಕಾದ ಹಾದಿ ಸ್ಪಷ್ಟವಿದೆ: ವಿದ್ಯಾಭ್ಯಾಸದಿಂದ ಅವರದೇ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಹಾಗೂ ಮಾಹಿತಿಗಳನ್ನು ತಿಳಿದುಕೊಂಡು ಬದುಕಿನ ಆಯ್ಕೆಗಳನ್ನು ಮಾಡಿಕೊಳ್ಳುವಂತಹ ಅವಕಾಶಗಳನ್ನು ತಮ್ಮ ಹೆಣ್ಣು ಮಕ್ಕಳಿಗೆ ನೀಡಲು ಅಗತ್ಯವಾದಂತಹ ಸಾಮಾಜಿಕ ಹಾಗೂ ಆರ್ಥಿಕ ಬೆಂಬಲಗಳನ್ನು ಅವರ ಕುಟುಂಬಗಳಿಗೆ ಹಾಗೂ ಹುಡುಗಿಯರಿಗೆ ಒದಗಿಸಿ.

ಚುರುಮುರಿ



ಬಸಣ್ಣನ ಇಕ್ಕಟ್ಟು

• ಲಿಂಗರಾಜು ಡಿ.ಎಸ್.

ಬಸಣ್ಣನು ಕೊರೋನಾ, ಓಮಿಕ್ರಾನ್, ಡೆಲ್ಟಾ ಭೇತಾಳಗಳನ್ನು ಬಲಿ ಹಾಕಲು ಸಕ್ರಮಾದಿತ್ಯನಂತೆ ಮರ ಹತ್ತಿಳಿಯುತ್ತಾ ಮಂಡಿ ನೋವಿಂದ ಬಸವಳಿದಿದ್ದನು. ಬಸಣ್ಣನ ನೋಡುತ್ತಲೇ ವೈರಸ್ಸುಗಳು ಪಣ್ಣಂತ ನೆಗೆದು ಪರಾರಿಯಾಗುತ್ತಿದ್ದವು. ‘ರಾಜಾವುಲಿ ಕಾಲದಲ್ಲಿ ತಂದ ಆಕ್ಸಿಜನ್, ಬೆಡ್, ವೆಂಟಿಲೇಟರ್ ಒಂದ್ನೂ ಕಾಣೆ! ಯಾರು ಹೊತ್ಕೋದ್ರೋ?! ತಜ್ಞರು ಕೊರೋನಾ ಭೇತಾಳವು ವ್ಯಾಲೆಂಟೈನ್ ದಿನದಗಂಟಾ ಇದ್ದು ಹೋಯ್ತದೆ ಎಂದು ಭವಿಷ್ಯ ಹೇಳವ್ರೆ, ಅಲ್ಲೀಗಂಟಾ ಏನು ಮಾಡದು? ಬ್ರಿಟನ್ನಲ್ಲಿ ಎಲ್ಲ ಓಪನ್ ಬುಟ್ಟವ್ರಂತೆ. ಫೋನು ಮಾಡಿ ಯಂಗೆ, ಯಾಥರ ಅಂತ ತಿಳ್ಕಬಕು!’ ಎಂದು ಚರ್ಚರಿತಗೊಂಡನು.

‘ಪಕ್ಷದಲ್ಲಿ ನನ್ನ ನೋಡಿ ಉರುಕಳೋರು ಭಾಳ ಆಗ್ಯವರೆ. ‘ಮುಖ್ಯಮಂತ್ರಿ ರೇಸಲ್ಲಿ ನಾನಿಲ್ಲ, ಮುಂದ್ಲ ಸಾರಿಗೂ ಅವರೇ ಮುಖ್ಯಮಂತ್ರಿ, ನನಗೇನೋ ಸಚಿವ ಸ್ಥಾನದ ಮ್ಯಾಲೆ ಬಯಕೆಯಾಗಿಲ್ಲ’ ಅಂತೆಲ್ಲಾ ನುಲಿತಾ ಭಯದ್ರಸ ಹುಟ್ಟಿಸ್ತಾವ್ರೆ. ಎಲ್ಲಾರೂ ಮಂತ್ರಿಯಾಗಬಕಂತೆ, ಅಡವಾಗಿರ ಖಾತೇನೇ ಬೇಕಂತೆ! ಅವರು ಕೊಡಂಗಿಲ್ಲ ಇವರು ಬುಡಂಗಿಲ್ಲ. ಅದಿರ್ಲಿ ಅರಗನ್ನ ನೋಡ್ರಿ, ‘ನಾನೇನು ಓದಿಕ್ಯಂಡಿಲ್ಲ. ಆದ್ರೂ ಸಚಿವ್ನನ್ನ ಮಾಡವ್ರೆ’ ಅಂದ್ಕಂಡು ಡಲ್ಲಾಯ್ತಾವನೆ! ಇದು ಕಂಡೇ ಪೋಲೀಸನೇ ಕಳ್ಳತನ ಮಾಡ್ಸಕೆ ಸುರು ಮಾಡ್ಯವುನೆ. ಈಗ ನಮ್ಮನೆ ತಾವ್ಲೇ ಡ್ರಗ್ಸ್ ಮಾರ್ತಾವರಂತೆ! ರಾಜಾವುಲಿ ಇವುರುನ್ನೆಲ್ಲಾ ಯಂಗೆ ನಿಭಾಯಿಸ್ತಿದ್ರೋ ತಿಳ್ಕಬಕು. ಕೇಳಕೋದ್ರೆ ಚಿಕ್ನೋನ್ನ ಮಂತ್ರಿ ಮಾಡಿಲ್ಲ ಅಂತ ಸಿಟ್ಟತರೇನೋ!’ ಎಂಬ ಯೋಚನೆಯಲ್ಲಿ ತಬ್ಬುಲಿಯಾದನು.

‘ನೀರಾವರಿ ಯೋಜನೆಗಳ ಹೆಸರಲ್ಲಿ ದುಡ್ಡು ಹೊಡೆದದ್ದೇ ಆಯ್ತು! ನೀರೇ ಬರಲಿಲ್ಲ! ಜನಪ್ರತಿನಿಧಿಗಳಿಗೆ ಕೆಪಿಎಸ್‌ಸಿ, ಬಿಬಿಎಂಪಿ, ಬಿಡಿಎಗಳಿಗೆ ಬೆಂಕಿ ಹಾಕಿ ಮೈಬೆಚ್ಚಗೆ ಮಾಡಿಕ್ಯಳದೇ ಕ್ಯಾಮೆ ಆಗ್ಯದೆ! ಡಿಕೆಶಿ, ಸಿದ್ದಣ್ಣ ಕೇಮೆಘಾಟು ಎಬ್ಬಿಸಿ ಉಸಿರುಗಟ್ಟಿಸಿದ್ರು. ಕುಮ್ಮಿ ಸುಮ್ಮನೆ ಯಕ್ಷಪ್ರಶ್ನೆ ಹಾಕ್ತಾ ಕೂತದೆ. ಕೊನೇಗೆ ಜನದ ತಲೆ ಮೇಲೆ ಎಲ್ಲಾ ಹಾಕಿ ಕೆಟ್ಟೋರನ್ನ ಮಾಡ್ತರೆ!’ ಎಂದು ನಿಟ್ಟುಸಿರು ಬಿಡುತ್ತಾ ನಿದ್ರೆ ಬರದೇ ಹೊರಳು ಸೇವೆ ಮಾಡುತ್ತಿದ್ದನು!

ಸಂಗತ

ಉದ್ಯಮಶೀಲತೆ: ಭರವಸೆ ಸಾಕೆ?

ಉದ್ಯಮ ನಡೆಸಬಲ್ಲೆ ಎನ್ನುವ ವಿಶ್ವಾಸ ಹೊಂದಿರುವ ಯುವ ಸಮೂಹಕ್ಕೆ ಅಗತ್ಯ ನೆರವು, ಮಾರ್ಗದರ್ಶನ ಲಭ್ಯವಾಗಿಸುವುದು ಸರ್ಕಾರದ ಆದ್ಯತೆಯಾಗಬೇಕಲ್ಲವೇ?

• ಎಚ್.ಕೆ.ಶರತ್

‘ಉದ್ಯೋಗ ಕೇಳುವವರಾಗುವ ಬದಲು ಉದ್ಯಮಿಯಾಗಿ... ನೀವೇ ಬೇರೆಯವರಿಗೆ ಉದ್ಯೋಗ ನೀಡಿ...’ ಇದು, ಇತ್ತೀಚಿನ ದಿನಗಳಲ್ಲಿ ನೀತಿ ನಿರೂಪಕರು ಮತ್ತು ಸರ್ಕಾರದ ಉನ್ನತ ಸ್ಥಾನಗಳನ್ನು ಅಲಂಕರಿಸಿರುವ ರಾಜಕೀಯ ನಾಯಕರಿಂದ ಯುವ ಸಮೂಹಕ್ಕೆ ನಿರಂತರವಾಗಿ ರವಾನೆಯಾಗುತ್ತಿರುವ ಸಂದೇಶ.

ಯುವ ಸಮುದಾಯದಲ್ಲಿ ಉದ್ಯಮಶೀಲತೆ ಮೈಗೂಡುವಂತೆ ನೋಡಿಕೊಳ್ಳಲು ನೀತಿ ನಿರೂಪಕರು ವಿಶೇಷ ಮುತುವರ್ಜಿ ವಹಿಸುತ್ತಿರುವುದು ಸ್ವಾಗತಾರ್ಹವೇ ಆದರೂ, ವಾಸ್ತವಿಕ ಸವಾಲುಗಳತ್ತಲೂ ಗಮನಹರಿಸಬೇಕಲ್ಲವೇ? ಉನ್ನತ ಸ್ಥಾನದಲ್ಲಿರುವವರು ಉದ್ಯಮಶೀಲತೆಯನ್ನು ಉತ್ತೇಜಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಲ್ಲವೇ? ಉದ್ಯೋಗಾವಕಾಶಗಳನ್ನು ಎದುರು ನೋಡುತ್ತಿರುವ ಯುವ ಸಮೂಹಕ್ಕೆ ಅರ್ಹತೆಗೆ ತಕ್ಕ ಉದ್ಯೋಗ ದೊರಕಿಸಿಕೊಡಲು ಸಾಧ್ಯವಾಗದೆ ಕೆಂಗಣ್ಣಿಗೆ ಗುರಿಯಾಗುವ ಸಂದರ್ಭ ಎದುರಾಗಿರುವಾಗ, ಆಳುವವರಿಂದ ಹೊರಹೊಮ್ಮುವ ಸ್ಫೂರ್ತಿಯ ಮಾತುಗಳು ನಿಜಕ್ಕೂ ನವೋದ್ಯಮಗಳ ಸ್ಥಾಪನೆಗೆ ಅಡಿಗಲ್ಲಾಗಲಿವೆಯೇ?

ಉದ್ಯಮಶೀಲತೆಯ ಉತ್ತೇಜನಕ್ಕೆ ಬೇಕಾದ ಪೂರಕ ವಾತಾವರಣ ನಿರ್ಮಿಸಲು ಸರ್ಕಾರ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಕನಿಷ್ಠ ತಿಳಿವಳಿಕೆ ಇರುವ ಯಾರಿಗೇ ಆದರೂ ಬಾಯಿ ಮಾತಿನ ಭರವಸೆಗಳಿಗಿಂತ ಮಾರುಕಟ್ಟೆಯಲ್ಲಿನ ವಾಸ್ತವದತ್ತಲೇ ಗಮನ ಹರಿಯುವುದು ಸಹಜವಲ್ಲವೇ?

ಕಳೆದ ಐದಾರು ವರ್ಷಗಳಿಂದ ಭಾರತದಲ್ಲಿ ಉದ್ಯಮ ವಲಯ ಎದುರಿಸುತ್ತಿರುವ ಸವಾಲುಗಳಿಗೂ ಸರ್ಕಾರದ ಕಾರ್ಯವೈಖರಿಗೂ ನೇರ ಸಂಬಂಧ ಕಲ್ಪಿಸಲು ಅನುವಾಗುವ ಹಲವು ಅಂಶಗಳು ಕಣ್ಣೆದುರೇ ಇರುವಾಗಲೂ, ಸರ್ಕಾರವನ್ನು ನಡೆಸುವವರು ಉದ್ಯಮಿಗಳಾಗಿ ಎಂದು ಯುವ ಸಮುದಾಯಕ್ಕೆ ಕರೆ ನೀಡುವುದು ಹೊಣೆಗೇಡಿತನವಲ್ಲವೇ? ಎಲ್ಲರೂ ಉದ್ಯಮಿಗಳಾಗಲು ಸಾಧ್ಯವೇ? ಉದ್ಯಮ ನಡೆಸುವ ಪ್ರಕ್ರಿಯೆಯಲ್ಲಿ ಎದುರಾಗುವ ಆರ್ಥಿಕ, ಸಾಮಾಜಿಕ, ವೈಯಕ್ತಿಕ ಹಾಗೂ ಸ್ಪರ್ಧಾತ್ಮಕ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಎಲ್ಲರಲ್ಲೂ ಮೈಗೂಡುವುದು ದುಸ್ತರವೇ ಆಗಿರುವಾಗ, ‘ಉದ್ಯಮಿಯಾಗುವುದು ಮೇಲು, ಉದ್ಯೋಗಿಯಾಗುವುದು ಕೀಳು’ ಎಂಬ ಮನೋಭಾವ ಬಿತ್ತಲು ಹೊರಡುವುದು ಸೂಕ್ತವೇ? ಎಲ್ಲ ರೀತಿಯ ಒತ್ತಡಗಳನ್ನೂ ತಾಳಿಕೊಂಡು ಉದ್ಯಮ ನಡೆಸಬಲ್ಲೆ ಎನ್ನುವ ವಿಶ್ವಾಸ ಹೊಂದಿರುವ ಯುವ ಸಮೂಹಕ್ಕೆ ಅಗತ್ಯ ನೆರವು ಮತ್ತು ಮಾರ್ಗದರ್ಶನ ಲಭ್ಯವಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯತೆಯಾಗಬೇಕಲ್ಲವೇ?

ಆರ್ಥಿಕತೆಯು ಪ್ರಗತಿಪಥದಲ್ಲಿ ದಾಪುಗಾಲಿಡುತ್ತ, ಜನರಲ್ಲಿ ಕೊಳ್ಳುವ ಶಕ್ತಿ ನಿರಂತರವಾಗಿ ಏರುತ್ತಿದ್ದರೆ ಸಹಜವಾಗಿಯೇ ಹೊಸ ಉದ್ಯಮಗಳು ಶುರುವಾಗುತ್ತವೆ. ಜನರಲ್ಲಿ ಕೊಳ್ಳುವ ಶಕ್ತಿ ಕುಂದಿ ಮಾರುಕಟ್ಟೆಯಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಕುಸಿಯತೊಡಗಿದರೆ ನವೋದ್ಯಮಗಳ ಸ್ಥಾಪನೆ ಒತ್ತಟ್ಟಿಗಿರಲಿ, ಇರುವ ಉದ್ಯಮಗಳನ್ನು ಉಳಿಸಿಕೊಳ್ಳುವುದೂ ದುಸ್ತರವಾಗುತ್ತದೆ. ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿಯಿಂದ ಮೊದಲೇ ನಲುಗಿದ್ದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ (ಎಂಎಸ್‌ಎಂಇ) ವಲಯ, ಕೊರೊನಾ ಕಾರಣಕ್ಕೆ ಮತ್ತೊಮ್ಮೆ ಏದುಸಿರು ಬಿಡುತ್ತಿದೆ. ಕಚ್ಚಾ ವಸ್ತುಗಳ ಬೆಲೆ ಗಗನಮುಖಿಯಾಗುತ್ತಿರುವುದರಿಂದ ಸಹಜವಾಗಿಯೇ ಸರಕುಗಳ ಉತ್ಪಾದನಾ ವೆಚ್ಚವೂ ಏರುಗತಿಯಲ್ಲಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಸೆಣಸಲು ಬೇಕಿರುವ ಗುಣಮಟ್ಟ ಮತ್ತು ಕಡಿಮೆ ಬೆಲೆ ಎಂಬ ಎರಡು ಪ್ರಮುಖ ಅಸ್ತ್ರಗಳಲ್ಲಿ ಒಂದನ್ನು ಸರ್ಕಾರದ ತೆರಿಗೆ ನೀತಿಯ ಕಾರಣಕ್ಕೆ ಉತ್ಪಾದನಾ ವಲಯ ಕಳೆದುಕೊಳ್ಳುತ್ತಿದೆ. ವಾಸ್ತವ ಹೀಗಿರುವಾಗ ಹೊಸ ಉದ್ಯಮ ಸ್ಥಾಪಿಸುವ ಉತ್ಸಾಹ ಮೂಡುವುದಾದರೂ ಹೇಗೆ?

ಒಕ್ಕೂಟ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ‘ಭಾರತದಲ್ಲೇ ತಯಾರಿಸಿ’ ಎಂಬುದು ಯಶಸ್ಸು ಕಂಡಿದ್ದರೆ, ದೇಶದ ತಯಾರಿಕಾ ವಲಯ ಏಕೆ ಮಂಕಾಗುತ್ತಿತ್ತು? ಉದ್ಯಮ ನಡೆಸಲು ಪೂರಕ ವಾತಾವರಣ ನಿರ್ಮಿಸುವಲ್ಲಿ ಸಮಾಜದ ಆದ್ಯತೆಗಳೂ ಬಹುಮುಖ್ಯ ಪಾತ್ರ ವಹಿಸುತ್ತವೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ ಮುತುವರ್ಜಿ ತೋರುತ್ತ, ಸಮಾಜವೂ ಶಾಂತಿ, ನೆಮ್ಮದಿಯ ಬದುಕನ್ನೇ ಆದ್ಯತೆಯನ್ನಾಗಿಸಿಕೊಂಡಾಗ ಸಹಜವಾಗಿಯೇ ಹೂಡಿಕೆದಾರರು ನಮ್ಮತ್ತ ಸುಳಿಯುತ್ತಾರೆ. ಉದ್ಯಮ ವಲಯದಲ್ಲಿ ಹೂಡಿಕೆ ಹೆಚ್ಚುತ್ತ ಮಾರುಕಟ್ಟೆ ಚಲನಶೀಲವಾಗಿದ್ದರೆ ಸಹಜವಾಗಿಯೇ ಹೊಸ ಉದ್ಯೋಗಾವಕಾಶಗಳೂ ಉದ್ಯಮದ ಕನಸುಗಳೂ ಚಿಗುರೊಡೆಯುತ್ತವೆ.

ತಮ್ಮ ಕೌಟುಂಬಿಕ ಹಿನ್ನೆಲೆಯ ಕಾರಣಕ್ಕೆ ಸಾಮಾಜಿಕ ಬಂಡವಾಳದಿಂದ ವಂಚಿತವಾಗಿರುವ ಯುವ ಸಮೂಹವೇ ಹೆಚ್ಚಿರುವ ನಮ್ಮಲ್ಲಿ, ಮೊದಲ ತಲೆಮಾರಿನ ಉದ್ಯಮಿಗಳನ್ನು ರೂಪಿಸಲು ವಾಸ್ತವಿಕ ನೆಲೆಗಟ್ಟಿನ ಮಾರ್ಗದರ್ಶನದ ಜರೂರತ್ತಿದೆ. ಮೊದಲು ಉದ್ಯೋಗಿಯಾಗಲು ಅಗತ್ಯವಿರುವ ಅವಕಾಶ ಸೃಷ್ಟಿಸಿದರೆ ಆನಂತರ ಉದ್ಯಮಿಯಾಗುವ ಅವರ ಕನಸುಗಳಿಗೆ ರೆಕ್ಕೆ ಮೂಡಲಿದೆ. ಉದ್ಯಮ ಕ್ಷೇತ್ರ ಯಾವುದೇ ಆದರೂ ಬಹಳಷ್ಟು ಪೂರ್ವಸಿದ್ಧತೆ ಮತ್ತು ಪ್ರಾಯೋಗಿಕ ತಿಳಿವಳಿಕೆಯ ಅನುಪಸ್ಥಿತಿಯಲ್ಲಿ ಯಶಸ್ಸು ಗಳಿಸುವುದು ಕಷ್ಟಸಾಧ್ಯ. ವಾಸ್ತವ ಹೀಗಿರುವಾಗ ಬಾಯಿ ಮಾತಿನಲ್ಲಿ ಭರವಸೆ ತುಂಬುವ ಬದಲು ಉದ್ಯಮಶೀಲತೆ ಉತ್ತೇಜಿಸಲು ಅಗತ್ಯವಿರುವ ಬಂಡವಾಳದ ಲಭ್ಯತೆ, ಉದ್ಯಮಸ್ನೇಹಿ ನೀತಿ ಮತ್ತು ಮೂಲಸೌಕರ್ಯ ವೃದ್ಧಿಗೆ ಆಳುವವರು ಆದ್ಯತೆ ನೀಡಬೇಕಿದೆ.

ವಾಚಕರ ವಾಣಿ

ಸದಸ್ಯತ್ವಕ್ಕೆ ಪರೀಕ್ಷೆ ಅನಗತ್ಯ

ಕನ್ನಡಿಗರ ಹೆಮ್ಮೆಯ ಪ್ರತೀಕವಾದ ಮತ್ತು ಶತಮಾನ ದಾಟಿ ಮುಂದೆ ಸಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆಯಲು ಪರೀಕ್ಷೆಗೆ ಒಳಗಾಗಬೇಕು ಎಂಬ ಮಾತು ಕೇಳಿಬರುತ್ತಿದೆ. ಇಂತಹದೊಂದು ಆದೇಶವನ್ನು ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರು ಹೊರಡಿಸಿದ್ದಾರೆ ಎನ್ನಲಾಗುತ್ತಿದೆ. ಅವರು ಈಗ ಇರುವ ಸುಮಾರು ಮೂರು ಲಕ್ಷ ಸದಸ್ಯರ ಸಂಖ್ಯೆಯನ್ನು ಒಂದು ಕೋಟಿಗೆ ಏರಿಸಬೇಕೆಂಬ ಗುರಿ ಹೊಂದಿದ್ದಾರೆ. ಆದರೆ, ಸದಸ್ಯತ್ವಕ್ಕೆ ಪರೀಕ್ಷೆ ಮತ್ತು ಕೋಟಿಯ ಗುರಿ ಎರಡೂ ವಿರುದ್ಧ ದಿಕ್ಕಿನವು.

ಕೆಲವೇ ರೂಪಾಯಿಗಳನ್ನು, ಭಾವಚಿತ್ರ ಮತ್ತು ಕೆಲ ದಾಖಲೆಗಳನ್ನು ನೀಡಿ ಸದಸ್ಯತ್ವ ಪಡೆಯಿರಿ ಎಂದರೇನೆ ಹಿಂದೆ ಸರಿಯುವ ಜನರು, ಇನ್ನು ಪರೀಕ್ಷೆ ಎದುರಿಸಿ ಸದಸ್ಯರಾಗುವುದು ಕನಸಿನ ಮಾತೇ ಸರಿ. ಹೊಸ ಕಾನೂನುಗಳನ್ನು ಮಾಡುವ, ಇರುವ ಕಾನೂನುಗಳಿಗೆ ತಿದ್ದುಪಡಿ ತರುವ ಲೋಕಸಭಾ ಅಥವಾ ವಿಧಾನಸಭಾ ಸದಸ್ಯರಾಗಲು, ಪುರಸಭೆಯ ಸದಸ್ಯರಾಗಲು ಇಲ್ಲದ ಯಾವುದೇ ಪರೀಕ್ಷೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆಯಲು ಎದುರಿಸಬೇಕೆಂಬುದು ಅರ್ಥಹೀನ. ಇದು ನಿಜವೇ ಆದರೆ ಈ ಆದೇಶ ಹಿಂಪಡೆದು, ಈಗಿರುವಂತೆಯೇ ಸದಸ್ಯತ್ವ ನೀಡಲಿ. ಕನ್ನಡ ನಾಡು, ನುಡಿ, ಜಲ ಮುಂತಾದ ಕುರಿತು ಬಹಳಷ್ಟು ಕೆಲಸಗಳು ಇವೆ. ಅವನ್ನು ಆದ್ಯತೆ ಮೇರೆಗೆ ಮಾಡಿ ಜನಮನ್ನಣೆ ಗಳಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸಲ್ಲದ ಕೆಸರೆರಚಾಟ

ಪಂಚಮಸಾಲಿ ಮೂರನೇ ಪೀಠ ಸ್ಥಾಪನೆ ವಿಚಾರವಾಗಿ ಇತ್ತೀಚೆಗೆ ವಿವಾದ ಪ್ರಾರಂಭ ಆಗಿ ತಾರಕಕ್ಕೆ ಏರಿದೆ. ನಾನೂ ಈ ಪಂಚಮಸಾಲಿ ಸಮಾಜಕ್ಕೆ ಸೇರಿದ ಸಾಮಾನ್ಯರಲ್ಲಿ ಅತಿ ಸಾಮಾನ್ಯನಾಗಿದ್ದು, ಈ ವಿವಾದಗಳು, ಪರಸ್ಪರ ಕೆಸರೆರಚಾಟಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ನಮ್ಮ ಸಮಾಜದಲ್ಲಿ ಬಹಳಷ್ಟು ಜನ ತಮ್ಮ ಸಾಮರ್ಥ್ಯ, ಬುದ್ಧಿವಂತಿಕೆಗಳಿಂದ ಏಳಿಗೆ ಹೊಂದಿರುತ್ತಾರೆ ವಿನಾ ಸಮಾಜದ ರಾಜಕೀಯ ಮುಖಂಡರಿಂದ, ಪೀಠಗಳಿಂದ ಅಲ್ಲವೇ ಅಲ್ಲ ಎಂದು ಧೈರ್ಯವಾಗಿ ಎದೆ ತಟ್ಟಿಕೊಂಡು ಹೇಳುತ್ತೇನೆ.

ಈ ಪೀಠಾಧಿಪತಿಗಳು, ಸಮಾಜದ ರಾಜಕೀಯ ಮುಖಂಡರು ಹೀಗೇ ಕಚ್ಚಾಡುತ್ತ ಇದ್ದರೆ ಇವರ ಮೇಲೆ ನಮಗೆ ಇರುವ ಗೌರವಕ್ಕೂ ಕುಂದುಂಟಾಗುತ್ತದೆ ಮತ್ತು ನಮ್ಮ ಸಮಾಜದ ಹೆಸರು ಕೆಡುತ್ತದೆ. ಇವರು ನಮ್ಮ ಸಮಾಜಕ್ಕೆ ಏನೂ ಉಪಕಾರ ಮಾಡುವುದು ಬೇಡ. ನಮಗೂ ಸ್ವಾಭಿಮಾನ ಇದೆ. ನ್ಯಾಯವಾಗಿ ದುಡಿದು, ನಮ್ಮ ಪ್ರತಿಭೆ, ಬುದ್ಧಿವಂತಿಕೆಗಳಿಂದ ಮುಂದೆ ಬರುತ್ತೇವೆ ವಿನಾ 2ಎ ಇತ್ಯಾದಿ ಭಿಕ್ಷೆಗಳಿಂದ ಅಲ್ಲ.

ಶಾಂತವೀರ ಎಸ್., ಚಿತ್ರದುರ್ಗ

ಚಿತ್ರೋತ್ಸವ: ಯಾರಿಗೆ ಬೇಕಾಗಿದೆ?

‘ಫೆಬ್ರುವರಿ ಕೊನೆಗೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ?’ ವರದಿ (ಪ್ರ.ವಾ., ಜ. 21) ಓದಿದಾಗ ಮೂಡಿದ ಪ್ರಶ್ನೆಯೆಂದರೆ, ‘ಈಗ ಸಿನಿಮಾ, ಸಿನಿಮೋತ್ಸವ ಯಾರಿಗೆ ಬೇಕಾಗಿದೆ?’ ‘ಏನಾದೀತು ಎಂಬ ಕುತೂಹಲ, ನಿರೀಕ್ಷೆ’ ಎಲ್ಲ ಕಲ್ಪಿತ– ಉತ್ಪ್ರೇಕ್ಷಿತ. ವಾಸ್ತವ ಎಂದರೆ, ಇಫಿ ಗೋವಾ ಹಾಗೂ ಕೋಲ್ಕತ್ತ ಚಿತ್ರೋತ್ಸವಗಳೆರಡೂ ಬಂದು ಹೋಗಿವೆಯಷ್ಟೆ. ಸಿನಿಮಾ ಅಕಾಡೆಮಿ ಅಧ್ಯಕ್ಷರು ಈ ಸಿನಿಮೋತ್ಸವದ ಕ್ರಿಯೇಟಿವ್ ಡೈರೆಕ್ಟರ್ ಹೇಳಬೇಕಾದುದನ್ನು ಬಹಳ ಮುಂಚಿತವಾಗಿ ರಾಜಕಾರಣಿ ಶೈಲಿಯಲ್ಲಿ ಹೇಳಿಬಿಟ್ಟಿದ್ದಾರೆ.

ಸಿದ್ಧತೆ- ವಿವಿಧ ಸಮಿತಿಗಳು ಘಟಿತವಾಗಿದ್ದರೆ ಅದನ್ನು ಬಹಿರಂಗಪಡಿಸಬೇಕಾಗುತ್ತದೆ (ವೆಬ್‌ಸೈಟ್‌ನಲ್ಲಾದರೂ ಹಾಕಲಿ). ಅರ್ಜಿಗಳು ಎಂದರೇನು? ಸಿನಿಮಾಗಳ ಎಂಟ್ರಿಗಳು (ಪ್ರವೇಶ) ಎಂದಾದರೆ ಅಂತಿಮ ದಿನಾಂಕ ಫ್ರೀಝ್ ಆಯಿತೆ? ಚಿತ್ರೋದ್ಯಮ, ಪ್ರದರ್ಶಕರಿಗಿಂತ ವೀಕ್ಷಕರು ಮುಖ್ಯ. ಶೇ 50 ನಿಯಮ ಇರುವವರೆಗೆ ಈಗಿನ ಜಾಗದಲ್ಲಿ ಅದನ್ನು ನಡೆಸುವುದೇ ಸರಿಯಾಗಲಾರದು. ಇಲ್ಲಿನವರೆಗೆ ಬಿಫೆಸ್ ಬಗೆಗಿನ ಮುಖ್ಯ ಸಮಸ್ಯೆಯೆಂದರೆ, ಆಯೋಜನೆಯ ನಡಾವಳಿಗಳು ಪಾರದರ್ಶಕವಾಗಿಲ್ಲ. ಅಕಾಡೆಮಿ, ವಾರ್ತಾ ಇಲಾಖೆ, ಕೆಲವೇ ಪ್ರಭಾವಿ ವ್ಯಕ್ತಿಗಳ ಮುಷ್ಟಿಯಿಂದ ಚಿತ್ರೋತ್ಸವವನ್ನು ಮುಕ್ತಗೊಳಿಸಬೇಕೆಂಬ ಇಚ್ಛಾಶಕ್ತಿ ಮುಖ್ಯಮಂತ್ರಿಯವರಲ್ಲಿ ಇದ್ದರೆ, ಸ್ವಲ್ಪ ತಡವಾದರೂ ಚಿಂತೆಯಿಲ್ಲ, ಡಿಎಫ್‌ಎಫ್ ಮಾದರಿಯ ನಿರ್ದೇಶನಾಲಯವನ್ನು ಸ್ಥಾಪಿಸಿ ಅದರ ಮೂಲಕ ಚಿತ್ರೋತ್ಸವವನ್ನು ನಡೆಸಬೇಕು. ಕೆಲವು ಸ್ಥಾಪಿತ ಹಿತಾಸಕ್ತಿಗಳನ್ನು ನಿಯಂತ್ರಿಸಲು ಇದು ಒಂದು ಮಾರ್ಗ ಆದೀತು. ಒಟ್ಟಿನಲ್ಲಿ ಕೋವಿಡ್ ಹತೋಟಿಗೆ ಬರದೆ ದಿನಾಂಕಗಳನ್ನು ಪ್ರಕಟಿಸುವುದೇ ವಿವೇಕಯುತ ಅಲ್ಲ. ಆರೋಗ್ಯ ಸಚಿವರ ಅಂದಾಜನ್ನೂ ಡೆಲ್ಟಾ, ಓಮೈಕ್ರಾನ್‌ಗಳು ಮೀರಬಹುದಲ್ಲ!

ಎಚ್.ಎಸ್.ಮಂಜುನಾಥ, ಬೆಂಗಳೂರು

ಐತಿಹಾಸಿಕ ಸ್ಥಳಗಳಿಗೆ ಬೇಕಾಗಿದೆ ಪ್ರಚಾರ

ಧಾರ್ಮಿಕ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕೆಂಬ ಎ.ರವೀಂದ್ರ ಅವರ ಲೇಖನವನ್ನು (ಪ್ರ.ವಾ., ಜ. 21) ಪ್ರಸ್ತಾಪಿಸುತ್ತಾ ಬಿ.ಎಸ್.ಜಯಪ್ರಕಾಶ ನಾರಾಯಣ ಅವರು (ವಾ.ವಾ., ಜ. 22) ಯಾತ್ರಾಸ್ಥಳಗಳ ಅಭಿವೃದ್ಧಿಯಿಂದ ಆಗುವ ಆರ್ಥಿಕ ಲಾಭದ ವಿಚಾರ ಪ್ರಶ್ನಾರ್ಹ ಎಂದಿದ್ದಾರೆ. ಆರ್ಥಿಕ ಲಾಭಕ್ಕಾಗಿ ಸೌಕರ್ಯಗಳು ಎಂದಕೂಡಲೆ ಅವರು ಪಟ್ಟಿ ಮಾಡಿರುವ ಎಲ್ಲ ಸೌಕರ್ಯಗಳೇ ಆಗಬೇಕಾಗಿಲ್ಲ. ಈ ಸೌಕರ್ಯಗಳನ್ನು ಎಲ್ಲ ಯಾತ್ರಾಸ್ಥಳಗಳಿಗೂ ಒದಗಿಸುವ ಅಗತ್ಯವೂ ಇಲ್ಲ. ಆದರೆ ಅಷ್ಟಾಗಿ ಪ್ರಚಲಿತವಿಲ್ಲದ, ಬೆಳಕಿಗೆ ಬಾರದ ಹಲವಾರು ಐತಿಹಾಸಿಕ ಸ್ಥಳಗಳು (ಹೊಸಹೊಳಲು, ಕಿಕ್ಕೇರಿ, ಗೋವಿಂದನಹಳ್ಳಿ, ತೊಣ್ಣೂರು, ನುಗ್ಗೇಹಳ್ಳಿ, ಬೆಳವಾಡಿ, ಹೆಡತಲೆ, ದೊಡ್ಡಗದ್ದವಳ್ಳಿ, ಅರಳಗುಪ್ಪೆ ಮುಂತಾದವು) ಪ್ರವಾಸಿಗರು ಇಲ್ಲದೆ ಬಿಕೋ ಎನ್ನುತ್ತಿವೆ. ಅದಕ್ಕೆ ಕಾರಣ ಈ ಸ್ಥಳಗಳಿಗೆ ಸಿಗಬೇಕಾದ ಪ್ರಚಾರ ಸಿಗದಿರುವುದು ಒಂದೆಡೆಯಾದರೆ, ಕನಿಷ್ಠ ಮೂಲ ಸೌಕರ್ಯಗಳಾದ ಉತ್ತಮ ರಸ್ತೆ, ಸಾರ್ವಜನಿಕ ಸಾರಿಗೆ, ಕುಡಿಯುವ ನೀರು, ಶೌಚಾಲಯದಂತಹ ವ್ಯವಸ್ಥೆಗಳು ಇಲ್ಲದಿರುವುದು.

ಕನಿಷ್ಠ ಮೂಲ ಸೌಕರ್ಯದೊಂದಿಗೆ ಪ್ರವಾಸೋದ್ಯಮ ಇಲಾಖೆ ಸಹ ವಾರಾಂತ್ಯದ ಪ್ರವಾಸಗಳನ್ನು ಆಯೋಜಿಸುವುದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ಇದರಿಂದ ಆ ಪ್ರದೇಶದ ಅಭಿವೃದ್ಧಿಯನ್ನು ಕಾಣಬಹುದು. ಇವುಗಳಿಂದಾಗಿ ಆ ಸ್ಥಳಗಳೇನು ಮಾರುಕಟ್ಟೆಗಳಾಗಿ ಪರಿವರ್ತನೆಯಾಗುವುದಿಲ್ಲ. ಅಷ್ಟೇ ಅಲ್ಲದೆ ಈ ಸ್ಥಳಗಳ ಇತಿಹಾಸ, ಶಿಲ್ಪಕಲಾ ಸಂಸ್ಕೃತಿಯ ವೈಭವವನ್ನು ಎಲ್ಲರಿಗೂ ಪರಿಚಯಿಸುವ ಮಹಾಕಾರ್ಯ ಮಾಡಿದಂತಾಗುತ್ತದೆ. ಇಲ್ಲದಿದ್ದಲ್ಲಿ ಮುಂದಿನ ಪೀಳಿಗೆಯವರಿಗೆ ಇವುಗಳನ್ನೆಲ್ಲಾ ಪರಿಚಯಿಸುವ ಭಾಗ್ಯವನ್ನು ನಾವೇ ಕಳೆದುಕೊಂಡಂತೆ ಆಗುತ್ತದೆ.

ಕೆ.ಪ್ರಭಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಎಎಸ್ ಅಧಿಕಾರಿಗಳ ನಿಯೋಜನೆ
ಕೇಂದ್ರ–ರಾಜ್ಯ ಜಟಾಪಟಿ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಒಕ್ಕೂಟ ವ್ಯವಸ್ಥೆಯಲ್ಲಿ ಅಧಿಕಾರ ಹಂಚಿಕೆ ಕುರಿತಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಮತ್ತೊಂದು ಸುತ್ತಿನ ಸಂಘರ್ಷ ಏರ್ಪಟ್ಟಿದೆ. ಭಾರತೀಯ ಆಡಳಿತ ಸೇವೆಯ (ಐಎಎಸ್) ಅಧಿಕಾರಿಗಳನ್ನು ನಿಯೋಜನೆ ಮಾಡುವ ಬಗ್ಗೆ ಸರ್ಕಾರಗಳು ವಾದ-ಪ್ರತಿವಾದಕ್ಕೆ ಇಳಿದಿವೆ. ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳನ್ನು ರಾಜ್ಯಗಳ ಅನುಮತಿ ಪಡೆದು ವರ್ಗಾವಣೆ ಮಾಡುವ ಪರಿಪಾಟವನ್ನು ಕೇಂದ್ರ ಸರ್ಕಾರ ಈವರೆಗೆ ಪಾಲಿಸಿಕೊಂಡು ಬರುತ್ತಿತ್ತು. ಆದರೆ, ರಾಜ್ಯಗಳ ಅನುಮತಿ ಪಡೆಯದೇ, ಅಧಿಕಾರಿಗಳನ್ನು ನಿಯೋಜನೆ ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರ ಪಡೆದುಕೊಳ್ಳಲು ಮುಂದಾಗಿದೆ. ಕೇಂದ್ರ ಸರ್ಕಾರದ ಅಧಿಕಾರ 'ಅತಿಕ್ರಮಣ'ಕ್ಕೆ ಪಶ್ಚಿಮ ಬಂಗಾಳ, ಕೇರಳ ಹಾಗೂ ತಮಿಳುನಾಡು ರಾಜ್ಯಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಐಎಎಸ್ (ಕೇಡರ್) ನಿಯಮಗಳು –1954ಕ್ಕೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಇದೇ 12ರಂದು ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಇದನ್ನು ವಿವರಿಸಲಾಗಿದೆ.

ಹೇಗಿದೆ ಈಗಿನ ವ್ಯವಸ್ಥೆ?

ಪ್ರತಿ ವರ್ಷ, ರಾಜ್ಯ ಕೇಡರ್‌ನಿಂದ ಕೇಂದ್ರ ಸರ್ಕಾರಕ್ಕೆ ನಿಯೋಜನೆ ಮೇರೆಗೆ ಹೋಗಲು ಸಿದ್ಧರಿರುವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಪಟ್ಟಿಯಿಂದ ಕೆಲವರನ್ನು ಕೇಂದ್ರ ಆಯ್ಕೆ ಮಾಡುತ್ತದೆ. ಮಂಜೂರಾದ ಹುದ್ದೆಗಳಲ್ಲಿ ಇಂತಿಷ್ಟನ್ನು ರಾಜ್ಯಗಳು ಕಳುಹಿಸಬೇಕು ಎಂಬುದನ್ನು 'ಕೇಂದ್ರೀಯ ನಿಯೋಜನೆ ಮೀಸಲು' (ಸಿಡಿಆರ್) ನಿಯಮ ವಿವರಿಸುತ್ತದೆ. ಒಮ್ಮೆ ಕೇಂದ್ರ ಸೇವೆಗೆ ನಿಯೋಜನೆಗೊಂಡ ನಂತರ, ಈ ಅಧಿಕಾರಿಗಳು ಅವರು ಮೂಲತಃ ವರದಿ ಮಾಡಿಕೊಂಡಿದ್ದ ರಾಜ್ಯ ಸರ್ಕಾರಗಳಿಗೆ ಬದಲಾಗಿ ಕೇಂದ್ರ ಸಚಿವಾಲಯಗಳು, ಇತರ ರಾಜ್ಯಗಳು ಅಥವಾ ಕೇಂದ್ರದ ಸಂಸ್ಥೆಗಳಲ್ಲಿ ಕೆಲಸ ಮಾಡಬೇಕಾಗುತ್ತದೆ.

ಪ್ರಸ್ತುತ ಅಸ್ತಿತ್ವದಲ್ಲಿರುವ ನಿಯಮಗಳ ಪ್ರಕಾರ, ಕೇಂದ್ರ ಸರ್ಕಾರವು ಆಯಾ ರಾಜ್ಯ ಸರ್ಕಾರಗಳ ಅನುಮೋದನೆಯೊಂದಿಗೆ ಮಾತ್ರ ಅಧಿಕಾರಿಗಳನ್ನು ತನ್ನ ಸೇವೆಗಳಿಗೆ ವರ್ಗಾಯಿಸಿಕೊಳ್ಳಬಹುದು. ಐಎಎಸ್ (ಕೇಡರ್) ನಿಯಮಗಳು–1954ರ ನಿಯಮ 6 (1) ಇದನ್ನು ವಿವರಿಸುತ್ತದೆ. ಒಂದು ವೇಳೆ ನಿಯೋಜನೆ ವಿಚಾರದಲ್ಲಿ ಕೇಂದ್ರ–ರಾಜ್ಯಗಳ ನಡುವೆ ಭಿನ್ನಾಭಿಪ್ರಾಯ ಉಂಟಾದರೆ, ಕೇಂದ್ರ ಸರ್ಕಾರವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ. ಈ ನಿರ್ಧಾರವನ್ನು ರಾಜ್ಯ ಸರ್ಕಾರಗಳು ಪಾಲಿಸಬೇಕು ಎಂದು ನಿಯಮಗಳು ತಿಳಿಸುತ್ತವೆ.

ಕೇಂದ್ರದಲ್ಲಿ ಐಎಎಸ್ ಅಧಿಕಾರಿಗಳ ಸೇವೆಯನ್ನು ಖಾತರಿಪಡಿಸುವ ನಿಬಂಧನೆಗಳನ್ನು ಉಲ್ಲೇಖಿಸಲಾಗಿದೆ. ಕೇಂದ್ರದ ನಿಯೋಜನೆ ಬೇಡಿಕೆಯು ಒಂದು ಕೇಡರ್‌ಗೆ ಮಂಜೂರಾದ ಡ್ಯೂಟಿ ಪೋಸ್ಟ್‌ಗಳ (ಎಸ್‌ಡಿಪಿ) ಶೇ 40ರಷ್ಟನ್ನು ಮೀರಬಾರದು. ರಾಜ್ಯ ಕೇಡರ್‌ನಿಂದ ಕೇಂದ್ರದ ಪಾಲನ್ನು ಕೇಂದ್ರದ ನಿಯೋಜನೆ ಕೋಟಾ ನಿಗದಿಪಡಿಸುತ್ತದೆ. ಪ್ರತಿ ರಾಜ್ಯ ಸರ್ಕಾರವು ವಿವಿಧ ಹಂತದ ಅರ್ಹ ಅಧಿಕಾರಿಗಳನ್ನು ಕೇಂದ್ರ ಸರ್ಕಾರದ ನಿಯೋಜನೆಗಾಗಿ ಲಭ್ಯವಾಗುವಂತೆ ಮಾಡಬೇಕು ಎಂದು ಕಾಯ್ದೆಯ ನಿಯಮ 4 (1)ರಲ್ಲಿ ಉಲ್ಲೇಖಿಸಲಾಗಿದೆ. ಕೇಂದ್ರ ಸರ್ಕಾರಕ್ಕೆ ನಿಯೋಜಿಸಬೇಕಾದ ಅಧಿಕಾರಿಗಳ ಸಂಖ್ಯೆಯನ್ನು ಕೇಂದ್ರವು ಸಂಬಂಧಪಟ್ಟ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನಿರ್ಧರಿಸುತ್ತದೆ.

‘ರಾಜ್ಯಗಳ ಅಧಿಕಾರ ಕಸಿಯುವ ಹುನ್ನಾರ’

ಕೇಂದ್ರ ಸರ್ಕಾರವು ಪ್ರಸ್ತಾಪಿಸಿರುವ ಬದಲಾವಣೆಗೆ ಹಲವು ರಾಜ್ಯ ಸರ್ಕಾರಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ‘ಇದು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತದೆ’ ಎಂದು ಹಲವು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಈವರೆಗೆ ಆರು ರಾಜ್ಯಗಳು ಈ ಬದಲಾವಣೆಗೆ ಆಕ್ಷೇಪ ವ್ಯಕ್ತಪಡಿಸಿವೆ. ಪಶ್ಚಿಮ ಬಂಗಾಳ, ರಾಜಸ್ಥಾನ, ಮಹಾರಾಷ್ಟ್ರ, ಛತ್ತೀಸಗಡ, ಜಾರ್ಖಂಡ್, ಕೇರಳ ಮತ್ತು ತಮಿಳುನಾಡು ಸರ್ಕಾರಗಳು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಆಕ್ಷೇಪ ಪತ್ರ ರವಾನಿಸಿವೆ. ಈ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿಯೇತರ ಪಕ್ಷಗಳ ಸರ್ಕಾರಗಳು ಅಧಿಕಾರದಲ್ಲಿವೆ.

ಕೇಂದ್ರ ಸರ್ಕಾರವು ಈ ಬದಲಾವಣೆ ತರುವ ಮೂಲಕ ರಾಜ್ಯ ಸರ್ಕಾರಗಳ ಅಧಿಕಾರವನ್ನು ಕಸಿದುಕೊಳ್ಳಲು ಯತ್ನಿಸುತ್ತಿದೆ. ರಾಜ್ಯ ಸೇವೆಯಲ್ಲಿರುವ ಐಎಎಸ್ ಅಧಿಕಾರಿಗಳನ್ನು ಕೇಂದ್ರ ಸೇವೆಗೆ ನಿಯೋಜಿಸುವ ಪ್ರಸ್ತಾವವನ್ನು ತಿರಸ್ಕರಿಸುವ ಅಥವಾ ಮುಂದೂಡುವ ಅಧಿಕಾರವನ್ನು ರಾಜ್ಯಗಳ ಕೈಯಿಂದ ಕಸಿದುಕೊಳ್ಳಲಾಗುತ್ತಿದೆ. ಪ್ರಸ್ತಾವ ಕಳುಹಿಸಿದ 12 ದಿನಗಳ ನಂತರ ಆ ಅಧಿಕಾರಿ ಕಡ್ಡಾಯವಾಗಿ ಕೇಂದ್ರ ಸೇವೆಗೆ ಹೋಗಬೇಕಾಗುತ್ತದೆ. ಆ ಅಧಿಕಾರಿ ರಾಜ್ಯದಲ್ಲಿ ವಹಿಸಿಕೊಂಡಿರುವ ಹುದ್ದೆ, ನಡೆಸುತ್ತಿರುವ ಕಾರ್ಯಕ್ರಮ ಮತ್ತು ಅಭಿಯಾನಗಳನ್ನು ಅರ್ಧದಲ್ಲೇ ಕೈಬಿಟ್ಟು ಕೇಂದ್ರ ಸೇವೆಗೆ ಹೋಗಬೇಕಾಗುತ್ತದೆ. ಇದರಿಂದ ರಾಜ್ಯಗಳಲ್ಲಿ ಆಡಳಿತ ಯಂತ್ರ ಕುಸಿದು ಬೀಳುತ್ತದೆ ಎಂದು ಪಶ್ಚಿಮ ಬಂಗಾಳ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

‘ಇದು ರಾಜ್ಯಗಳನ್ನು ತುಳಿದು, ಕೇಂದ್ರ ಸರ್ಕಾರ ಮಾತ್ರ ಪ್ರಬಲವಾಗುವ ಹುನ್ನಾರ. ಇದು ದಬ್ಬಾಳಿಕೆ ಮಾತ್ರ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟೀಕಿಸಿದ್ದಾರೆ.

‘ಐಎಎಸ್ ಅಧಿಕಾರಿಗಳನ್ನು ತನಗೆ ಬೇಕಾದಂತೆ ಕೇಂದ್ರ ಸೇವೆಗೆ ನಿಯೋಜನೆ ಮಾಡಿಕೊಳ್ಳುವ ಮತ್ತು ವರ್ಗಾವಣೆ ಮಾಡುವ ಸಂಪೂರ್ಣ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಈ ಬದಲಾವಣೆಯು ನೀಡುತ್ತದೆ. ಈ ಬದಲಾವಣೆ ಜಾರಿಗೆ ಬಂದರೆ, ಅಧಿಕಾರಿಗಳು ಕೇಂದ್ರದ ನಿಯೋಜನೆ ಮತ್ತು ವರ್ಗಾವಣೆಯ ಭಯದ ತೂಗುಕತ್ತಿಯ ಅಡಿಯಲ್ಲೇ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಅವರು ರಾಜ್ಯ ಸರ್ಕಾರಗಳ ಆಣತಿಯಂತೆ ಕೆಲಸ ಮಾಡಲು ಹಿಂದೇಟು ಹಾಕುವ ಸ್ಥಿತಿ ಬರುತ್ತದೆ. ಇದು ಯಾವ ರೀತಿಯಲ್ಲೂ ಒಳ್ಳೆಯದಲ್ಲ’ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

‘ದೇಶಕ್ಕ ಸ್ವಾತಂತ್ರ್ಯ ಬಂದಾಗಿನಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದೇ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಷ್ಟು ವರ್ಷಗಳಲ್ಲಿ ಆಗದೇ ಇರುವ ಸಮಸ್ಯೆ ಈಗ ಹೇಗೆ ಆಗುತ್ತಿದೆ? ಇದು ಐಎಎಸ್ ಅಧಿಕಾರಿಗಳನ್ನು ಹಿಡಿತದಲ್ಲಿ ಇರಿಸಿಕೊಳ್ಳುವ ಮತ್ತು ಆ ಮೂಲಕ ರಾಜ್ಯ ಸರ್ಕಾರಗಳ ಆಡಳಿತದಲ್ಲಿ ಕೇಂದ್ರವು ಹಸ್ತಕ್ಷೇಪ ಮಾಡುವ ಹುನ್ನಾರ’ ಎಂದು ಟಿಎಂಸಿ ಉಪಾಧ್ಯಕ್ಷ ಯಶವಂತ್ ಸಿನ್ಹಾ ಆರೋಪಿಸಿದ್ದಾರೆ.

ಮಮತಾ ಬ್ಯಾನರ್ಜಿ



ಎಂ.ಕೆ.ಸ್ಟಾಲಿನ್

ಕೇಂದ್ರದ ಪ್ರಸ್ತಾವ

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಜಂಟಿ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳ ಸಂಖ್ಯೆ ಇಳಿಕೆಯಾಗುತ್ತಿರುವ ಕಾರಣ, ಕೇಂದ್ರ ಈ ಬದಲಾವಣೆ ತರುತ್ತಿದೆ. 2011ರಲ್ಲಿ ಈ ದರ್ಜೆಯ 309 ಅಧಿಕಾರಿಗಳಿದ್ದರು. ಇವರ ಸಂಖ್ಯೆ ಈಗ 223ಕ್ಕೆ ಇಳಿಕೆಯಾಗಿದೆ. 2011ರಲ್ಲಿ ಕೇಂದ್ರೀಯ ನಿಯೋಜನೆ ಮೀಸಲು ಶೇ 25ರಷ್ಟಿತ್ತು. ಅದು ಈಗ ಶೇ 18ಕ್ಕೆ ಕುಸಿದಿದೆ. ಈ ಸಂಖ್ಯೆ ಸಾಲುತ್ತಿಲ್ಲ ಎಂದು ಕೇಂದ್ರ ಸರ್ಕಾರ ಪದೇ ಪದೇ ಹೇಳುತ್ತಾ ಬಂದಿದೆ. ಬಹುತೇಕ ರಾಜ್ಯಗಳು ಸಿಡಿಆರ್ ಪಾಲಿಸುತ್ತಿಲ್ಲ ಎಂಬುದು ಕೇಂದ್ರದ ಆರೋಪ. ವಿವಿಧ ರಾಜ್ಯ ಸರ್ಕಾರಗಳು ಕೇಂದ್ರಕ್ಕೆ ಅಧಿಕಾರಿಗಳನ್ನು ಕಳುಹಿಸುತ್ತಿಲ್ಲ ಎಂದು 2021ರ ಡಿಸೆಂಬರ್ 20ರಂದು ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ರಾಜ್ಯ ಸರ್ಕಾರಗಳಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿತ್ತು.

ಈ ಸಮಸ್ಯೆಯನ್ನು ಸರಿಪಡಿಸುವ ದಿಸೆಯಲ್ಲಿ ಐಎಎಸ್ (ಕೇಡರ್) ನಿಯಮಗಳು–1954ರ ನಿಯಮ 6 (1)ಕ್ಕೆ ಹೆಚ್ಚುವರಿ ಅಂಶವನ್ನು ಸೇರ್ಪಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈಗಿರುವ ನಿಯಮದ ಪ್ರಕಾರ, ಭಿನ್ನಾಭಿಪ್ರಾಯ ಉಂಟಾದಾಗ, ಕೇಂದ್ರದ ನಿರ್ಧಾರವನ್ನು ರಾಜ್ಯಗಳು ಪಾಲಿಸಬೇಕು. ಅಂತಿಮ ನಿರ್ಧಾರ ಕೇಂದ್ರ ಸರ್ಕಾರದ್ದಾಗಿದ್ದರೂ, ಅದಕ್ಕೆ ಕಾಲಮಿತಿ ಇರಲಿಲ್ಲ. ಪ್ರಸ್ತಾವಿತ ನಿಯಮಗಳಲ್ಲಿ ಕಾಲಮಿತಿಯನ್ನು ಸೇರಿಸಲಾಗಿದೆ. ಕೇಂದ್ರ ತೆಗೆದುಕೊಂಡ ನಿರ್ಧಾರವನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ರಾಜ್ಯ ಸರ್ಕಾರ ಜಾರಿಗೆ ತರಬೇಕು ಎಂದು ಹೊಸ ನಿಯಮ ವಿವರಿಸುತ್ತದೆ.

ಆಧಾರ: ಪಿಟಿಐ, ಐಎಎಸ್ (ಕೇಡರ್) ನಿಯಮಗಳು–1954

ಬದಲಾವಣೆಗೆ ಕೇಂದ್ರದ ಸಮರ್ಥನೆ

ಈಗ ಇರುವ ನಿಯಮದ ಪ್ರಕಾರ ರಾಜ್ಯ ಕೇಡರ್‌ನ ಅಧಿಕಾರಿಗಳನ್ನು ಕೇಂದ್ರ ಸೇವೆಗೆ ನಿಯೋಜಿಸುವಂತೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಪ್ರಸ್ತಾವ ಕಳುಹಿಸಬೇಕು. ಅದನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಥವಾ ನಿಯೋಜನೆಯನ್ನು ಮುಂದೂಡುವ ಅಧಿಕಾರ ರಾಜ್ಯ ಸರ್ಕಾರಗಳ ಕೈಯಲ್ಲಿ ಇದೆ. ಆದರೆ ಈಚಿನ ವರ್ಷಗಳಲ್ಲಿ ಬಹುತೇಕ ರಾಜ್ಯಗಳು ಇಂತಹ ಪ್ರಸ್ತಾವಗಳನ್ನು ತಿರಸ್ಕರಿಸುತ್ತಿವೆ. ಹೀಗಾಗಿ ಕೇಂದ್ರ ಸೇವೆಗೆ ಐಎಎಸ್ ಅಧಿಕಾರಿಗಳ ಕೊರತೆಯಾಗುತ್ತಿದೆ ಎಂದು ಕೇಂದ್ರ ಸರ್ಕಾರವು ಹೇಳಿದೆ.

ಕೇಂದ್ರ ಸರ್ಕಾರವು ಐಎಎಸ್ ಅಧಿಕಾರಿಗಳ ನೇಮಕಾತಿ ಪ್ರಮಾಣವನ್ನು ಏರಿಸಿದೆ. ಆದರೆ ರಾಜ್ಯ ಸರ್ಕಾರಗಳು ಅಧಿಕಾರಿಗಳನ್ನು ಕೇಂದ್ರ ಸೇವೆಗೆ ನಿಯೋಜನೆ ಮಾಡುವ ಪ್ರಸ್ತಾವವನ್ನು ತಿರಸ್ಕರಿಸುತ್ತಿವೆ. ಇದರಿಂದ ಕೇಂದ್ರ ಸೇವೆಗೆ ಲಭ್ಯವಿರುವ ಅಧಿಕಾರಿಗಳ ಕೊರತೆ ತೀವ್ರವಾಗಿದೆ. ಕೇಂದ್ರ ಸರ್ಕಾರದ ಸಚಿವಾಲಯಗಳು ಮತ್ತು ಇಲಾಖೆಗಳು ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಹೇಳಿದೆ.

ರಾಜ್ಯಗಳ ಸೇವೆಗಳಲ್ಲಿ ಇರುವ ಅಧಿಕಾರಿಗಳನ್ನು ಕೇಂದ್ರ ಸೇವೆಗೆ ನಿಯೋಜನೆ ಮಾಡಲು ಕೇಂದ್ರ ಸರ್ಕಾರ ಶೀಘ್ರವೇ ಅಂತಿಮ ನಿರ್ಧಾರ ತೆಗೆದುಕೊಳ್ಳುವಂತಿದ್ದರೆ, ಅಧಿಕಾರಿಗಳ ಕೊರತೆ ಉಂಟಾಗುವುದಿಲ್ಲ. ಹೀಗಾಗಿ ನಿಯಮಗಳಿಗೆ ಬದಲಾವಣೆ ತರಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಐಎಎಸ್ ಎಂಬುದು ಅಖಿಲ ಭಾರತ ಸೇವೆಗಳಲ್ಲಿ ಒಂದು. ಅಂತಹ ಅಧಿಕಾರಿಗಳು ಕೇವಲ ಒಂದು ರಾಜ್ಯದ ಸೇವೆಗೆ ಮಾತ್ರ ಸೀಮಿತವಾಗಬಾರದು. ರಾಜ್ಯಗಳು ಅಧಿಕಾರಿಗಳನ್ನು ಕೇಂದ್ರ ಸೇವೆಗೆ ನಿಯೋಜನೆ ಮಾಡದೇ ಇದ್ದರೆ, ಅಧಿಕಾರಿಗಳು ರಾಜ್ಯ ಸೇವೆಗಳಲ್ಲೇ ಉಳಿಯುತ್ತಾರೆ. ಇದು ಅಧಿಕಾರಿಗಳ ವೃತ್ತಿಬದುಕನ್ನು ಕುಂಠಿತಗೊಳಿಸುತ್ತದೆ ಎಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಹೇಳಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 27

ಕಂಬವಾದ ಶಿವ

ಮೊದಲಿನಿಂದ ಕೊನೆಯವರೆವಿಗೂ ಓಂಕಾರದ ಆಕಾರವುಳ್ಳ ಮತ್ತು ಐದು ಮಂಡಲಗಳಿಂದ ಕೂಡಿದ ಮತ್ತು ಐದು ಮಂಗಳಸ್ವರೂಪವೂ ಆದಂತಹ ರಥವನ್ನೇರಿದ ಶಿವನೊಂದಿಗೆ ಪಾರ್ವತಿ ತನ್ನ ಪುತ್ರರ ಜೊತೆ ಯುದ್ಧ ನಡೆಯುವ ಸ್ಥಳಕ್ಕೆ ಬಂದಿದ್ದಳು. ಶಿವ ಯುದ್ಧ ನಡೆಯುವ ಸ್ಥಳಕ್ಕೆ ಬಂದಾಗ ಬ್ರಹ್ಮ ಮತ್ತು ವಿಷ್ಣು ಇಬ್ಬರು ಭಯಂಕರವಾಗಿ ಕಾದಾಡುತ್ತಿದ್ದರು. ಪರಶಿವ ನೀಡಿದ ಪರಮಾಸ್ತ್ರಗಳನ್ನೆ ಹಿಡಿದು ಯುದ್ಧ ಮಾಡುತ್ತಿದ್ದರು. ಅವರಿಗೆ ಶಿವನ ಪರಮಾಸ್ತ್ರಗಳ ಭೀಕರತೆ ಅರಿವಿಲ್ಲದೆ, ಪರಸ್ಪರ ಪ್ರಯೋಗಿಸಿಬಿಟ್ಟಿದ್ದರು. ಕಾದಾಟದಲ್ಲಿ ಯಾರೊಬ್ಬರೂ ಗೆಲ್ಲುತ್ತಲೂ ಇರಲಿಲ್ಲ, ಸೋಲುತ್ತಲೂ ಇರಲಿಲ್ಲ. ಆದರೆ, ಅದರ ದುಷ್ಪರಿಣಾಮ ಜಗತ್ತಿನ ಮೇಲೆ ಬೀಳುತ್ತಿತ್ತು. ಆದ್ದರಿಂದ 'ಯುದ್ಧವನ್ನು ನಿಲ್ಲಿಸಿ, ಮತ್ತೆಂದೂ ಬ್ರಹ್ಮ-ನಾರಾಯಣರು ಕಿತ್ತಾಡದಂತೆ ನೋಡಿಕೊಳ್ಳುತ್ತೇನೆ' ಎಂದು ತನ್ನ ಹಿಂಬಾಲಿಸಿ ಬಂದಿದ್ದ ದೇವತೆಗಳಿಗೆ ಪರಮೇಶ್ವರ ಅಭಯ ನೀಡಿದ.

ವಿಷ್ಣು-ಬ್ರಹ್ಮರು ಯುದ್ಧ ಮಾಡುತ್ತಿರುವ ಸ್ಥಳದಿಂದ ಸ್ವಲ್ಪ ದೂರದಲ್ಲೇ ಶಿವ ತನ್ನ ಗಣಗಳು ಬಾರಿಸುತ್ತಿದ್ದ ರಣವಾದ್ಯವನ್ನು ನಿಲ್ಲಿಸುವಂತೆ ಸೂಚಿಸಿ, ನಿಶ್ಶಬ್ದವಾಗಿರುವಂತೆ ಹೇಳಿದ. ಯುದ್ಧಭೂಮಿಯಲ್ಲಿ ಈಶ್ವರ ಗೂಢವಾಗಿ ಆಕಾಶದಲ್ಲಿ ನಿಂತು, ಬ್ರಹ್ಮ-ವಿಷ್ಣು ಯುದ್ಧವನ್ನು ಸ್ವಲ್ಪಕಾಲ ನೋಡಿದ. ಅವರಿಬ್ಬರು ಒಬ್ಬರನ್ನೊಬ್ಬರು ಕೊಲ್ಲಲು, ಮಾಹೇಶ್ವರಾಸ್ತ್ರ ಮತ್ತು ಪಾಶುಪತಾಸ್ತ್ರಗಳನ್ನು ಪರಸ್ಪರ ಪ್ರಯೋಗಿಸಿ ಕಾದಾಡುತ್ತಿದ್ದರಿಂದ ಅಪಾಯಕಾರಿ ಅಸ್ತ್ರಗಳ ಜ್ವಾಲೆಯು ಮೂರು ಲೋಕಗಳನ್ನು ದಹಿಸಲು ಪ್ರಾರಂಭಿಸಿತು. ಹೀಗೆ ಅಕಾಲದಲ್ಲಿ ಜಗತ್ತು ನಾಶವಾಗುತ್ತಿರುವುದನ್ನು ನೋಡಿದ ನಿರಾಕಾರನಾದ ಉರಿಗೋಪದಿಂದ ಈಶ್ವರನು ಮಹಾ ಅಗ್ನಿರೂಪವಾದ ಸ್ತಂಭ(ಕಂಬ)ರೂಪನಾಗಿ ಯುದ್ಧ ಮಾಡುತ್ತಿದ್ದ ಬ್ರಹ್ಮ ಮತ್ತು ವಿಷ್ಣು ಮಧ್ಯದಲ್ಲಿ ನಿಂತ. ಶಿವ ಕಂಬವಾಗಿ ಆವಿರ್ಭವಿಸಿದ ಕೂಡಲೇ, ಲೋಕವನ್ನು ದಹಿಸುತ್ತಿದ್ದ ಮಾಹೇಶ್ವರಾಸ್ತ್ರ ಮತ್ತು ಪಾಶುಪತಾಸ್ತ್ರಗಳು ಮಹಾಗ್ನಿರೂಪವಾದ ಆ ಸ್ತಂಭದಲ್ಲಿ ಶಾಂತವಾಗಿ ಬಿದ್ದು ಮಾಯವಾದವು.

ಈ ರೀತಿಯಾಗಿ ಅಸ್ತ್ರಗಳನ್ನು ಶಾಂತಗೊಳಿಸಿದ ಅತ್ಯಾಶ್ಚರ್ಯವಾದ ಕಂಬವನ್ನು ನೋಡಿ, ಬ್ರಹ್ಮ-ವಿಷ್ಣು ಇಬ್ಬರೂ ಆಶ್ಚರ್ಯಚಕಿತರಾದರು. ತಮ್ಮ ಪರಮಾಸ್ತ್ರವನ್ನೆ ನಿಷ್ಕ್ರಿಯಗೊಳಿಸಿದ, ಅದ್ಭುತ ಆಕಾರವುಳ್ಳ ಈ ಸ್ತಂಭ ಯಾವುದು? ಇದು ಇಲ್ಲಿಗೆ ಹೇಗೆ ಬಂದಿತು? ಅಂತ ಪರಿಶೀಲಿಸಿದರು. ಅಗ್ನಿಸ್ವರೂಪವಾದ ಈ ಕಂಬವು ತಿಳಿವಳಿಕೆಗೆ ನಿಲುಕದಂತಹ ಸ್ವರೂಪವುಳ್ಳದಾಗಿದೆ. ಇದು ಇಲ್ಲಿ ಆವಿರ್ಭವಿಸಿದುದೇತಕ್ಕೆ? ಈ ಕಂಬದ ತಲೆ-ಬುಡ ನಮಗೆ ಕಾಣಿಸುತ್ತಲೇ ಇಲ್ಲವಲ್ಲಾ ಅಂತ ಪೇಚಾಡಿದರು. ಆಲೋಚಿಸಿದಷ್ಟು ನಿಗೂಢವಾಗುತ್ತಿದ್ದ ಕಂಬದ ರಹಸ್ಯ ಬಯಲಿಗೆಳೆಯುತ್ತೇವೆಂಬ ಗರ್ವದಿಂದ ಬ್ರಹ್ಮ ಮತ್ತು ವಿಷ್ಣು ಸ್ತಂಭದ ಆದಿ ಮತ್ತು ತುದಿಯನ್ನು ಪರೀಕ್ಷಿಸಲು ಹೊರಟರು.

'ನಾವು ಇಬ್ಬರೂ ಸೇರಿ ಒಂದೇ ಕಡೆ ಹೊರಟರೆ ರಹಸ್ಯ ತಿಳಿಯಲಾಗದು. ಆದುದರಿಂದ ನಾನು ಕಂಬದ ಬುಡದತ್ತ ಹೋಗಿ ನೋಡುತ್ತೇನೆ' ಎಂದು ವಿಷ್ಣುವು ವರಾಹಸ್ವರೂಪವನ್ನು ಧರಿಸಿ, ಬುಡದ ಕಡೆ ಹೊರಟ. ಬ್ರಹ್ಮ ಹಂಸರೂಪವನ್ನು ಧರಿಸಿ ಆ ಕಂಬದ ಮೇಲಿನ ತುದಿಯನ್ನು ನೋಡಲು ತೆರಳಿದ. ವರಾಹರೂಪವನ್ನು ಧರಿಸಿ ಹೊರಟ ಹರಿಯು ಪಾತಾಳಲೋಕವನ್ನು ಭೇದಿಸಿ ಬಹಳ ದೂರ ಹೋದ. ಆದರೂ ಆ ಸ್ತಂಭದ ಮೂಲ ನೆಲೆಯೇ ಅವನಿಗೆ ಕಾಣಿಸಲಿಲ್ಲ. ಆಳಕ್ಕೆ ಇಳಿದಷ್ಟು ಕಂಬದ ಬುಡ ವಿಸ್ತಾರವಾಗುತ್ತಲೇ ಇತ್ತು. ಇದರಿಂದ ತುಂಬಾ ಬಳಲಿಬೆಂಡಾದ ವರಾಹರೂಪಿಯಾದ ವಿಷ್ಣು, ತಾನು ಯುದ್ಧಮಾಡುತ್ತಿದ್ದ ಭೂಮಿಗೆ ಸುಸ್ತಾಗಿ ಹಿಂತಿರುಗಿದ.

ಅತ್ತ ಬ್ರಹ್ಮ ಹಂಸರೂಪದಿಂದ ಆಕಾಶಮಾರ್ಗದಲ್ಲಿ ಹೋಗುತ್ತಾ ಇದ್ದರೂ ಕಂಬದ ಮೇಲ್ತುದಿ ಕಾಣಲೇ ಇಲ್ಲ. ಹೀಗೆ ಬ್ರಹ್ಮ ಆಕಾಶದೆತ್ತರಕ್ಕೆ ಸಾಗುತ್ತಿದ್ದಾಗ ಮೇಲಿಂದ ಕೆಳಗೆ ಬೀಳುತ್ತಲಿದ್ದ ಅದ್ಭುತವಾದ ಕೇದಗೆ ಹೂವೊಂದನ್ನು ನೋಡಿದ. ಆ ಪುಷ್ಪವು ಸ್ವಲ್ಪವೂ ಬಾಡದೆ, ತುಂಬಾ ಸುವಾಸನೆಯುಳ್ಳದ್ದಾಗಿತ್ತು. ಕೇದಗೆಯ ಸೌಂದರ್ಯ ಮತ್ತು ಸುವಾಸನೆಗೆ ಬ್ರಹ್ಮ ಮನಸೋತು, ತಾನು ಕಂಬದ ತುದಿ ಹುಡುಕಲು ಬಂದ ಕಾರ್ಯವನ್ನೇ ಮರೆತುಬಿಟ್ಟ. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಸಂತರೊಬ್ಬರು ಧ್ಯಾನ ಮಾಡುತ್ತಿರುವ ಚಿತ್ರವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ‘ಹಿಮಾಲಯದ ಕೊರೆಯುವ ಚಳಿಯಲ್ಲಿ ಕುಳಿತು ಅವರು ಧ್ಯಾನ ಮಾಡುತ್ತಿದ್ದಾರೆ. ಅವರ ದೇಹವು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿದೆ. ಇದು ಸನಾತನ ಧರ್ಮದ ಶಕ್ತಿ’ ಎಂದು ಚಿತ್ರವನ್ನು ಬಿಂಬಿಸಲಾಗಿದೆ. ಟ್ವಿಟರ್‌ನಲ್ಲಿ ಈ ಚಿತ್ರಕ್ಕೆ 5,000ಕ್ಕೂ ಹೆಚ್ಚು ಲೈಕ್‌ಗಳು ದೊರೆತಿವೆ ಮತ್ತು ಹಲವಾರು ಬಾರಿ ಈ ಚಿತ್ರ ಶೇರ್ ಆಗಿದೆ.

ಇದು ಸುಳ್ಳು ಮಾಹಿತಿ ಎಂದು ದಿ ಕ್ವಿಂಟ್ ವರದಿ ಮಾಡಿದೆ. ಈ ಚಿತ್ರದಲ್ಲಿ ಇರುವವರು ‘1008 ಮಹಾಂತ್ ಬಾಬಾ ಭಲೇ ಗಿರಿ ಜಿ ಮಹಾರಾಜ್’ ಎಂಬುವವರು. ‘ಬಾಬಾ ಸರ್ವಾಂಗಿ’ ಎಂಬ ಅವರ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಅವರೇ ಈ ಚಿತ್ರವನ್ನು 2019ರ ಜೂ.18 ರಂದು ಪೋಸ್ಟ್ ಮಾಡಿದ್ದಾರೆ. ಅವರು ‘ಅಗ್ನಿ ತಪಸ್ಯ’ ಕೈಗೊಂಡಾಗ ಈ ಚಿತ್ರ ತೆಗೆಯಲಾಗಿದೆ. ಅವರ ದೇಹವನ್ನು ಬೂದಿಯಿಂದ ಮುಚ್ಚಲಾಗಿದೆಯೇ ಹೊರತು ಹಿಮದಿಂದ ಅಲ್ಲ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ಪೌರುಷಕ್ಕೆ ದೈವಬಲ

ಪುರುಷಬುದ್ಧಿಯೆ ಸಾಕು ವರಸಿದ್ಧಿಗೆಂದಲ್ಲ |
ಪರಮೇಶಕರುಣೆಯನವಶ್ಯವೆಂದಲ್ಲ ||
ಚರಣ ನಡೆವನಿತು ಕಣ್ಣರಿವನಿತು ದೂರ ನೀಂ |
ಚರಿಸದಿರೆ ಲೋಪವಲ? – ಮಂಕುತಿಮ್ಮ || 548 ||

ಪದ-ಅರ್ಥ: ವರಸಿದ್ಧಿಗೆಂದಲ್ಲ = ವರ (ಶ್ರೇಷ್ಠ) + ಸಿದ್ಧಿಗೆ(ಸಾಧನೆಗೆ) + ಎಂದಲ್ಲ, ಪರಮೇಶಕರುಣೆಯನವಶ್ಯವೆಂದಲ್ಲ = ಪರಮೇಶಕರುಣೆ + ಅನವಶ್ಯ(ಅವಶ್ಯವಲ್ಲದ್ದು) + ಎಂದಲ್ಲ, ನಡೆವನಿತು = ನಡೆವ + ಅನಿತು(ಸ್ವಲ್ಪ), ಕಣ್ಣರಿವನಿತು = ಕಣ್ಣು + ಅರಿವ + ಅನಿತು, ಚರಿಸದಿರೆ = ನಡೆಸದಿರೆ.

ವಾಚ್ಯಾರ್ಥ: ಶ್ರೇಷ್ಠವಾದ ಸಾಧನೆಗೆ ಕೇವಲ ಪುರುಷ ಬುದ್ಧಿಯೆ ಸಾಕು ಎಂದಲ್ಲ, ಭಗವಂತನ ಕರುಣೆ ಅವಶ್ಯವಿಲ್ಲವೆಂದಲ್ಲ, ಆದರೂ ದೇಹದಲ್ಲಿ ಶಕ್ತಿ ಇರುವಷ್ಟು, ದೃಷ್ಟಿ ತೋರಿದಷ್ಟು ದೂರವನ್ನು ನಾವು ನಡೆಯದಿದ್ದರೆ ಅದು ಲೋಪವಲ್ಲವೆ?

ವಿವರಣೆ: ನಮ್ಮಲ್ಲಿ ಎರಡೂ ತರಹದ ಜನರಿದ್ದಾರೆ. ಒಬ್ಬರು ಪೂರ್ತಿ ಪುರುಷ ಪ್ರಯತ್ನವನ್ನೇ ನಂಬಿದವರು. ದೈವವೆನ್ನುವುದೆಲ್ಲಿದೆ? ಏನಿದ್ದರೂ ಅದು ನಮ್ಮ ಪ್ರಯತ್ನ ಮಾತ್ರ. ಹೇಡಿಗಳು ದೈವವೆಂಬ ಇಲ್ಲದ್ದನ್ನು ನಂಬಿಕೊಂಡು ಸೋಮಾರಿಗಳಾಗುತ್ತಾರೆ ಎನ್ನುತ್ತಾರೆ. ಮತ್ತೆ ಕೆಲವರು, ನಾವೇನೇ ಮಾಡಿದರೂ, ಎಷ್ಟೇ ಕಷ್ಟಪಟ್ಟರೂ ದೈವ ತೀರ್ಮಾನಿಸಿದಂತೆಯೇ ಆಗುವುದು. ಸುಮ್ಮನೆ ಕಷ್ಟಪಟ್ಟರೇನು ಫಲ ಎನ್ನುತ್ತಾರೆ. ಎರಡೂ ಚಿಂತನೆಗಳಲ್ಲಿ ಸ್ವಲ್ಪ ಸತ್ಯವಿದೆ. ಆದರೆ ಎರಡೂ ಸೇರಿದಾಗ ಪರಿಪೂರ್ಣಸತ್ಯವಾಗುತ್ತದೆ. ಸುಭಾಷಿತ ಹೇಳುತ್ತದೆ –

ಯಥಾ ಹ್ಯೇಕೇನ ಚಕ್ರೇಣ ನ ರಥಸ್ಯ ಗತಿರ್ಭವೇತ್ |
ಏವಂ ಪುರುಷಾಕಾರೇಣ ವಿನಾ ದೈವಂ ನ ಸಿದ್ಧ್ಯತಿ ||

ಒಂದೇ ಒಂದು ಚಕ್ರದಿಂದ ರಥವು ಮುಂದೆ ಸಾಗಲಾರದು- ಹಾಗೆಯೇ, ಪುರುಷ ಪ್ರಯತ್ನವಿಲ್ಲದೆ ದೈವವೂ ಒಲಿಯುವುದಿಲ್ಲ

ಇದನ್ನು ಮತ್ತೊಂದು ಸುಭಾಷಿತ ಮುಂದುವರೆಸುತ್ತದೆ.

ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿ ಶಕ್ತಿ ಪರಾಕ್ರಮ: |
ಷಡೇತೇ ಯತ್ರವರ್ತಂತೆ ತತ್ರದೇವಾ: ಸಹಾಯಕೃತ್ ||

“ಯಾರಲ್ಲಿ ಉದ್ಯಮ (ಸೋಲರಿಯದ ಪ್ರಯತ್ನ), ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮವೆಂಬ ಆರು ಗುಣಗಳಿವೆಯೋ, ಅಂಥವರಿಗೆ ಮಾತ್ರ ಭಗವಂತನು ಸಹಾಯ ಮಾಡುತ್ತಾನೆ. ಶಕ್ತಿ ಇಲ್ಲದವನಿಗೆ ದೈವಬಲವೂ ಇಲ್ಲ”.

ಹೀಗೆಂದರೆ ಬರೀ ಪುರುಷಬಲದಿಂದಲೇ ಎಲ್ಲವೂ ಸಿದ್ಧಿಸಲಾರದು ಮತ್ತು ಬರೀ ದೈವವೆಂದು ಕೈಕಟ್ಟಿ ಕುಳಿತುಕೊಂಡು ಕರ್ತವ್ಯಹೀನನಾದರೆ ದೈವವೂ ಒಲಿಯದು. ದೈವ ತನ್ನ ಕೃಪೆಯನ್ನು ಯಾವಾಗಲಾದರೂ ತೋರಲಿ. ನಮ್ಮಲ್ಲಿರುವ ಬುದ್ಧಿಯಿಂದ ಶಕ್ತಿಯಿಂದ ಸಾಧ್ಯವಾದಷ್ಟು ಪ್ರಯತ್ನವನ್ನು ಮಾಡದಿದ್ದರೆ ಅದೊಂದು ಲೋಪವೇ ಆಗುತ್ತದೆ. ಇದನ್ನು ವಿವರಿಸಲು ಡಿ.ವಿ.ಜಿ ಒಂದು ಸೊಗಸಾದ ಉದಾಹರಣೆಯನ್ನು ಕೊಡುತ್ತಾರೆ. ಹಲವು ಮಂದಿ ಹಡಗಿನಲ್ಲಿ ಪ್ರಯಾಣಿಸುತ್ತಿದ್ದರು. ಆಗ ಬಿರುಗಾಳಿ ಎದ್ದು, ಸಮುದ್ರ ಕೆರಳಿ ಹಡಗು ಹೊಯ್ದಾಡತೊಡಗಿತು, ನೀರು ಒಳಗಡೆಗೆ ನುಗ್ಗಿ ಬಂದಿತು. ಜನರೆಲ್ಲ ಗುರಿಯಾಗಿ ಹಡಗಿನಲ್ಲಿದ್ದ ಪಾದ್ರಿಯ ಕಡೆಗೆ ಓಡಿದರು. ಒಂದೇ ಧ್ವನಿಯಲ್ಲಿ ಬೇಡಿದರು, “ಪ್ರಾರ್ಥನೆ ಮಾಡೋಣ. ನಮ್ಮನ್ನು ದೇವರೇ ಕಾಪಾಡಬೇಕು”, ಆಗ ಪಾದ್ರಿ ಹೇಳಿದ, “ಹಾಗೇನು? ನಾವೆಲ್ಲ ಪ್ರಾರ್ಥನೆಯನ್ನು ಮಾಡೋಣ. ಆದರೆ ಪ್ರಾರ್ಥನೆ ಮಾಡುತ್ತಲೇ ಹಡಗಿನಲ್ಲಿ ಬಂದ ನೀರನ್ನು ಪಂಪು ಹೊಡೆದು ಹೊರಗೆ ಹಾಕೋಣ. ಅದನ್ನು ಮಾತ್ರ ಬಿಡಬೇಡಿ”. ಎಂಥ ಚೆಂದದ ಮಾತು! ಯಾರು ತಮಗೆ ಸಹಾಯ ಮಾಡಿಕೊಳ್ಳುತ್ತಾರೋ ಅವರಿಗೆ ದೇವರು ಸಹಾಯ ಮಾಡುತ್ತೇನೆ. ದೈವದ ಸಹಾಯವಿಲ್ಲದೆ ಜಯ ಸಾಧ್ಯವಿಲ್ಲ. ಆದರೆ ಸ್ವಪ್ರಯತ್ನವಿಲ್ಲದೆ ದೈವದ ಸಹಾಯವೂ ದೊರೆಯುವುದಿಲ್ಲ. ತನ್ನ ಭಾರವನ್ನು ತಾನು ಹೊತ್ತು, ಉಳಿದದ್ದನ್ನು ದೈವಕ್ಕೆ ಬಿಡಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 25, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 11 ನೇ ದಿನ
ತಿಥಿ: (ಪೌಷ ಕೃಷ್ಣ) ಸಪ್ತಮಿ ಗಂ 07-49 ಉಪರಿ ಅಷ್ಟಮಿ ಗಂ. 30-26 ನಕ್ಷತ್ರ: ಚಿತ್ತಾ ಗಂ. 10-55 ಯೋಗ: ಧೃತಿ ಗಂ. 09-12, ಕರಣ: ಬವ ಗಂ. 07-49. ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 07-01 ಸೂರ್ಯಾಸ್ತ : 06-24 ಮುಸ್ಲಿಂ ದಿನಾಂಕ : 21 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 6, 13

ಮೇಷ: ದೈವಬಲ ಮತ್ತು ಹಿರಿಯರ ಆಶೀರ್ವಾದ ನಿಮ್ಮ ಪಾಲಿಗಿದೆ. ದಿನದ ಮೊದಲಲ್ಲಿ ಪ್ರಾರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳುವುದು. ಮಕ್ಕಳ ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ.

ವೃಷಭ: ವೃತ್ತಿರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದರಿಂದ ಮುಂದಿನ ಅಭಿವೃದ್ಧಿಗೆ ಪೂರಕವಾಗಲಿದೆ. ನರ ಸಂಬಂಧೀ ಕಾಯಿಲೆ ಹೊಂದಿದವರು ದೇಹ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಹೊಸ ವಾಹನ ಖರೀದಿ ಯೋಗ.

ಮಿಥುನ: ಇಂದು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಅದರಿಂದಾಗಿ ಮನೆಯಲ್ಲಿ ಸಂತಸ. ರಾಜಕೀಯ ಪಕ್ಷ ಸೇರಲು ಆಹ್ವಾನ ದೊರೆಯಲಿದೆ.

ಕರ್ಕಾಟಕ: ಸಭೆ ಸಮಾರಂಭಗಳಲ್ಲಿ ಮುಂದಾಳತ್ವ ವಹಿಸಿ ಕೀರ್ತಿ ಗೌರವವನ್ನು ಪಡೆದುಕೊಳ್ಳುವಿರಿ. ನಿಮ್ಮ ಉದಾರ ಮನೋಭಾವ ನಿಮಗೆ ಅನುಕೂಲ ಒದಗಿಸಲಿದೆ. ಸ್ನೇಹಿತರೊಂದಿಗಿನ ಸಮಯ ಮನಸ್ಸಿಗೆ ಉಲ್ಲಾಸ ತರಲಿದೆ.

ಸಿಂಹ: ಹಣ್ಣು, ತರಕಾರಿ ವ್ಯಾಪಾರಿಗಳಿಗಿರುವ ಹೆಚ್ಚಿನ ಲಾಭದಿಂದ ತಮ್ಮ ಮಾರಾಟವನ್ನು ಹೆಚ್ಚಿಸಿಕೊಳ್ಳುವುದರ ಬಗ್ಗೆ ವಿಮರ್ಶಿಸಿ. ಆರ್ಥಿಕ ಭದ್ರತೆಯಿಂದ ಕುಟುಂಬ ವ್ಯವಹಾರಗಳ ನಿರ್ವಹಣೆ ಸುಲಭವಾಗುವುದು.

ಕನ್ಯಾ: ಔಷಧಿ ಕಂಪನಿಗಳ ಮಾಲಿಕರಿಗೆ ಮತ್ತು ಮಾರಾಟ ಪ್ರತಿನಿಧಿಗಳಿಗೆ ಮಾರಾಟದಲ್ಲಿ ಹೆಚ್ಚಳವಿದ್ದು ಉತ್ತಮ ಲಾಭವನ್ನು ಹೊಂದುವರು. ಧಾರ್ಮಿಕ ಉಪನ್ಯಾಸಗಳನ್ನು ಕೇಳಿ ಆಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು.

ತುಲಾ: ರಾಜಕಾರಣಿಗಳಿಗೆ ಈ ದಿನ ತಮ್ಮ ಪಕ್ಷದ ಬಗೆಗಿನ ಪ್ರಚಾರಕ್ಕಾಗಿ ಉತ್ತಮ ಭಾಷಣ ನಡೆಸುವ ಸದಾವಕಾಶ ಸಿಗುವುದು. ದೇವರ ಕೆಲಸಗಳಿಗಾಗಿ ಹಣ ವ್ಯಯವಾದರೂ, ಆದಾಯದಲ್ಲಿ ಕೊರತೆಯೇನು ಬರಲಾರದು.

ವೃಶ್ಚಿಕ: ನಿಮ್ಮಲ್ಲಿ ಇದ್ದ ಪ್ರತಿಭೆಯನ್ನು ಇತರರು ಗಮನಿಸುವರು. ಆಸ್ತಿ ಕೊಳ್ಳುವ ನಿರ್ಧಾರವನ್ನು ಮಾಡುವಿರಿ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರಲಿವೆ. ಕೆಂಪು ಉಡುಪು ಶುಭದಾಯಕ.

ಧನು: ಇಂದು ಕೆಲಸ ಕಾರ್ಯಗಳಲ್ಲಿ ನಾಯಕತ್ವದ ಕೊರತೆ ಎದ್ದು ಕಾಣಲಿದೆ. ಕೆಲಸದ ಆಗುಹೋಗುಗಳನ್ನು ವಿಮರ್ಶಿಸಿಕೊಂಡು ತೀರ್ಮಾನಿಸಿ. ಮೂಳೆಗೆ ಸಂಬಂಧಿಸಿದಂತೆ ನೋವುಗಳು ಆಗದಿರುವ ರೀತಿಯಲ್ಲಿ ಎಚ್ಚರವಹಿಸಿ.

ಮಕರ: ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಆಲಸ್ಯ ಉಂಟಾಗಲಿದೆ. ಚಾಲಕ ವೃತ್ತಿಯನ್ನು ಮಾಡುವವರು ತುರ್ತು ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಿರಿ. ಆಫೀಸಿನ ಕೆಲಸಗಳಲ್ಲಿ ಕಡಿಮೆ ಒತ್ತಡದಿಂದ ಆರಾಮ.

ಕುಂಭ: ಈ ದಿನ ನಿಮ್ಮನ್ನು ಬಾಧಿಸುವ ಸಮಸ್ಯೆ ದೊಡ್ಡದಾದರೂ ಹೂ ಎತ್ತಿದಂತೆ ಬಗೆಹರಿಯಲಿದೆ. ಶತ್ರುಗಳ ಉಪಟಳ ಶಮನವಾಗುವುದು. ಅದರಿಂದಾಗಿ ಕೆಲಸ ಕಾರ್ಯಗಳು ನೀವೆಂದುಕೊಂಡಂತೆ ನೆರವೇರುವುದು.

ಮೀನ: ಕೆಲಸ ಕಾರ್ಯದಲ್ಲಿ ಗಡಿಬಿಡಿ ಮಾಡಬೇಡಿ. ಒತ್ತಡದ ಜೀವನದಿಂದ ಹೊರಬಂದು ಸಂತಸ ಇರಲಿದೆ. ಗಾರ್ಮೆಂಟ್‌ನಲ್ಲಿ ಉದ್ಯೋಗ ಸಿಗುವುದು. ದಾಂಪತ್ಯ ಜೀವನದಲ್ಲಿ ತಾಳ್ಮೆ, ಹೊಂದಾಣಿಕೆ ಮುಂದುವರಿಯಲಿದೆ.

ಪದಬಂಧ 4849

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮರೀಚಿಕೆ ಇಲ್ಲಿ ಕಾಣುತ್ತಿದೆ (5)
3. ಗಣಿ ತೋಡುತ್ತಲೇ ಕಲಿತಿರುವ ಲೆಕ್ಕ ಶಾಸ್ತ್ರ (3)
5. ಗಡಿಬಿಡಿಯಲ್ಲೇ ಸೇರಿದ ಎಲ್ಲೆ! (2)
6. ಸುಂದರವಾದ ಬೆಳಗು (4)
9. ಕಿರೀಟಧಾರಣಾ ಮಹೋತ್ಸವವಿದು (5)
12. ಈ ತರಹ ವರ್ಗ ಬಂದಿದೆ (4)
14. ಪುಸ್ತಕದ ಹಾಳೆ ಮಗ್ಗುಲು (2)
15. ಹಿತವಾದ ಮಾತು (3)
16. ಪ್ರಯೋಜನವಿಲ್ಲದ ಮಾತು (5)

ಮೇಲಿಂದ ಕೆಳಕ್ಕೆ
1. ಬಂಧ ವಿಮೋಚನೆಯಿದು (4)
2. ಕೆಟ್ಟ ಮನುಷ್ಯನನ್ನು ಹೀಗೆನ್ನಿ (3)
4. ಮೇಲು ಕೀಳು ಈ ತರಹ ಬಂದಿದೆ (4)
7. ಚಿಹ್ನೆ ಅಥವಾ ಪ್ರತಿರೂಪ (3)
8. ಸಭೆಯಲ್ಲಿ ಕುಳಿತಿರುವವನು (3)
9. ಆತಂಕದಿಂದ ಹಾರಿ ಬಂದಿರುವ ಚಿಟ್ಟೆ (3)
10. ಹೀಗೆ ಕಣ್ಮರೆಯಾಗುವುದು (4)
11. ಸಾಕ್ಷಿಕಟ್ಟೆಯನ್ನು ಹೀಗೂ ಹೇಳುವರು (4)
13. ಮುಂಗೂದಲು ಇಲ್ಲಿ ಕಾಣುತ್ತಿದೆ (3)



4848ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಂತಃಪಟ 3.ವನಸುಮ 5.ಚಮ್ಮಾರ 6.ಜಗಅ 08.ಜಠರ 9.ಕಲಹ 10.ತರಗು 12.ದಾನವ 14.ಶಯ್ಯಾಗೃಹ 15.ನರ್ಶದನಿ

ಮೇಲಿಂದ ಕೆಳಕ್ಕೆ: 1.ಅಂಡಜ 2.ಟಚ 3.ವರ 4.ಮತ್ಸರ 7.ಅಂತಃಕಲಹ 8.ಜನುಮದಾತ 9.ಕರ್ಕಶ 11.ಗುಮಾನಿ 12.ದಾಹ 13.ವನ

ಸುಡೊಕು 5235

4		3		2		6		1
	6	2					9	
				3			4	8
	4		3		1		7	
1	3	7				4		5
			4		7		1	
	2		5				3	
6		9				5		4
	5				2		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5234 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

₹ 1,490 ಕೋಟಿ ಸಂಗ್ರಹ: ಓಲಾ ಎಲೆಕ್ಟ್ರಿಕ್

ನವದೆಹಲಿ (ಪಿಟಿಐ): ಹೂಡಿಕೆದಾರರಿಂದ ₹ 1,490 ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಓಲಾ ಎಲೆಕ್ಟ್ರಿಕ್ ಕಂಪನಿಯು ಸೋಮವಾರ ತಿಳಿಸಿದೆ. ಇದರಿಂದಾಗಿ ಕಂಪನಿಯ ಒಟ್ಟಾರೆ ಮಾರುಕಟ್ಟೆ ಮೌಲ್ಯವು ₹ 37 ಸಾವಿರ ಕೋಟಿಗೆ ತಲುಪಿದೆ. ಬೈಕ್ ಮತ್ತು ಕಾರುಗಳನ್ನು ಕೂಡ ಮಾರುಕಟ್ಟೆಗೆ ಪರಿಚಯಿಸುವ ಆಲೋಚನೆ ಕಂಪನಿಗೆ ಇದೆ.

ಟೆಕ್ನೆ ಪ್ರೈವೇಟ್ ವೆಂಚರ್ಸ್, ಅಲ್ಪೈನ್ ಆಪರ್ಚುನಿಟಿ ಫಂಡ್, ಎಡೆಲ್ವಿಸ್ ಮತ್ತು ಇತರೆ ಹೂಡಿಕೆದಾರರಿಂದ ಬಂಡವಾಳ ಸಂಗ್ರಹಿಸಿರುವುದಾಗಿ ಕಂಪನಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	25509-32189
ಕೋಕ	21509-27779
ಫ್ಯಾಕ್ಟರಿ	13169-18819
ಹಳೆಚಾಲಿ	47569-49599
ಹೊಸಚಾಲಿ	37869-42069
ಪುತ್ತೂರು	
ಕೋಕ	11000-26000
ಹೊಸತು	27500-45000
ಕಾರ್ಕಳ	
ಹೊಸತು	40000-45000
ಹಳತು	46000-53000
ಸಿದ್ದಾಪುರ	
ಬಿಳಿಗೋಟು	20699-28669
ಚಾಲಿ	45899-48509
ಕೋಕ	21699-30699
ಹೊಸಚಾಲಿ	32089-40599
ಕೆಂಪುಗೋಟು	22299-33899
ರಾಶಿ	44689-48482
ತಟ್ಟಿಬೆಟ್ಟೆ	38289-45089
ಶಿರಸಿ	
ಬೆಟ್ಟೆ	26218-46069
ಬಿಳಿಗೋಟು	20399-40693
ಚಾಲಿ	33219-49112
ರಾಶಿ	42929-47641
ಯಲ್ಲಾಪುರ	
ಬಿಳಿಗೋಟು	26899-32119
ಕೋಕ	22087-32299
ಹಳೆಚಾಲಿ	44395-48469
ಹೊಸಚಾಲಿ	35699-41399
ಕೆಂಪುಗೋಟು	29295-36679
ರಾಶಿ	43719-51490
ತಟ್ಟಿಬೆಟ್ಟೆ	39789-42899
ರಾಮನಗರ ರೇಷ್ಮೆ	
ಮಿಶ್ರತಳಿ	400-670
ದ್ವಿತಳಿ	55-835

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15700	15900	243.65 ಸೆಂಟ್ಸ್
ಎಸಿ	7310	7000	7150	
ಆರ್‌ಪಿ	7000	7000	7200	ಲಂಡನ್
ಆರ್‌ಸಿ	4050	3900	3950	2227 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

24-1-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9750-9800
ದಪ್ಪ ಗುಜರಾತ್(ಹೊಸ)	8600-8650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1320)
ಒಂದು ವಾರದ ಡೆಲಿವರಿ	1325 (1315)
ಸೋಯಾ ಕಚ್ಚಾ	1180 (1180)
ಪಾಮ್ ವಾರದ ಡೆಲಿವರಿ	1185 (1186)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1210)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,650 (48,400)
ಬೆಳ್ಳಿ ಕೆ.ಜಿ	64,400 (64,700)

ಆವರಣದಲ್ಲಿ ಶನಿವಾರದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,617
ಇಂದಿನ ಅಂತ್ಯ	17,149
▼	468
ದಿನದ ಕನಿಷ್ಠ	16,997

ವಿನಿಮಯ ದರ

$ ಡಾಲರ್	74.60
£ ಪೌಂಡ್	100.93
€ ಯುರೊ	84.36
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1320 (1310)
ಸೋಯಾ (ರಿಫೈನ್ಡ್)	₹1230 (1230)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹1187 (1188)

ಅಮೆರಿಕದ ಫೆಡರಲ್ ರಿಸರ್ವ್ ತೀರ್ಮಾನದತ್ತ ಹೂಡಿಕೆದಾರರ ನೋಟ

ಷೇರುಪೇಟೆ: 2 ತಿಂಗಳ ದೊಡ್ಡ ಕುಸಿತ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ 1,546 ಅಂಶ ಕುಸಿಯಿತು. ಇದು ಎರಡು ತಿಂಗಳ ಅವಧಿಯಲ್ಲಿ ಒಂದೇ ದಿನದಲ್ಲಿ ಆದ ಅತಿದೊಡ್ಡ ಕುಸಿತ. ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನ ಪರಿಣಾಮವಾಗಿ, ದೇಶಿ ಮಾರುಕಟ್ಟೆಗಳಲ್ಲಿ ಕೂಡ ನಕಾರಾತ್ಮಕ ವಹಿವಾಟು ನಡೆಯಿತು.

ಸೆನ್ಸೆಕ್ಸ್‌ನಲ್ಲಿ ಸೋಮವಾರದ ವಹಿವಾಟು ನಕಾರಾತ್ಮಕವಾಗಿಯೇ ಆರಂಭವಾಯಿತು. ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ನೀಡಿದ ಕಾರಣದಿಂದಾಗಿ ವಹಿವಾಟಿನ ನಡುವಿನಲ್ಲಿ ಸೆನ್ಸೆಕ್ಸ್ 2,050 ಅಂಶಗಳವರೆಗೂ ಕುಸಿತ ಕಂಡಿತ್ತು. ನಂತರ ದಿನದ ವಹಿವಾಟಿನ ಕೊನೆಯ ಹೊತ್ತಿನಲ್ಲಿ ಒಂದಿಷ್ಟು ಚೇತರಿಕೆ ಕಂಡುಕೊಂಡು, 57,491 ಅಂಶಗಳಲ್ಲಿ ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 468 ಅಂಶ ಇಳಿಕೆ ಕಂಡು 17,149 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ.

ಸೆನ್ಸೆಕ್ಸ್ ಸತತ ಐದು ದಿನಗಳಿಂದ ಕುಸಿತದ ಹಾದಿಯಲ್ಲಿ ಇದೆ. ಸೆನ್ಸೆಕ್ಸ್‌ನಲ್ಲಿ ಟಾಟಾ ಸ್ಟೀಲ್ ಷೇರು ಮೌಲ್ಯವು ಗರಿಷ್ಠ ಶೇಕಡ 6ರಷ್ಟು ಕುಸಿತ ಕಂಡಿತು. 'ಕಳೆದ ಕೆಲವು ದಿನಗಳಿಂದ ಭಾರತದ ಷೇರು ಮಾರುಕಟ್ಟೆಗಳಲ್ಲಿ ಒತ್ತಡದ ವಹಿವಾಟು ನಡೆಯುತ್ತಿದೆ. ಈಚೆಗಿನ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಸೂಚ್ಯಂಕಗಳು ಶೇಕಡ 7ರಷ್ಟು ಇಳಿಕೆಯಾಗಿವೆ. ಬೇರೆ ಬೇರೆ ವಲಯಗಳಲ್ಲಿ ಇಳಿಕೆ ಆಗಿದೆ. ತೀರಾ ದುಬಾರಿ ಮೌಲ್ಯವನ್ನು ಪಡೆದುಕೊಂಡಿದ್ದ ಷೇರುಗಳು ಹಾಗೂ ಹೊಸಕಾಲದ, ಈಚೆಗೆ ಐಪಿಒ ಮೂಲಕ ಷೇರು ಮಾರುಕಟ್ಟೆ ಪ್ರವೇಶಿಸಿದ ಕೆಲವು ಕಂಪನಿಗಳ ಷೇರುಗಳ ಮೌಲ್ಯದಲ್ಲಿ ಹೆಚ್ಚು ಇಳಿಕೆ ಕಂಡುಬಂದಿದೆ' ಎಂದು ಜೂಲಿಯಸ್ ಬೇರ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಮಿಲಿಂದ್ ಮುಚ್ಚಾಲಾ ಹೇಳಿದ್ದಾರೆ.

'ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಷೇರುಗಳ ಮಾರಾಟ, ಡಿಸೆಂಬರ್ ತ್ರೈಮಾಸಿಕದಲ್ಲಿ ಕೆಲವು ಕಂಪನಿಗಳ ಫಲಿತಾಂಶ ಉತ್ತೇಜನಕಾರಿ ಆಗಿಲ್ಲದಿರುವುದು ಮತ್ತು ಬಜೆಟ್ ಪೂರ್ವದ ಆತಂಕವು ದೇಶಿ ಮಾರುಕಟ್ಟೆಗಳಲ್ಲಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ನೀಡಲು ಕಾರಣವಾದವು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹೂಡಿಕೆದಾರರು ಬಡ್ಡಿ ದರ ಹೆಚ್ಚಳದ ವಿಚಾರವಾಗಿ ಅಮೆರಿಕದ ಫೆಡರಲ್ ಬ್ಯಾಂಕ್ ಕೈಗೊಳ್ಳುವ ತೀರ್ಮಾನವನ್ನು ಎದುರು ನೋಡುತ್ತಿದ್ದಾರೆ ಎಂದು ನಾಯರ್ ತಿಳಿಸಿದ್ದಾರೆ. ಹಾಂಗ್‌ಕಾಂಗ್ ಮತ್ತು ಸೋಲ್‌ನ ಷೇರು ಮಾರುಕಟ್ಟೆಗಳು ಕೂಡ ನಕಾರಾತ್ಮಕವಾಗಿ ವಹಿವಾಟು ಕೊನೆಗೊಳಿಸಿವೆ. ಟೋಕಿಯೊ ಮತ್ತು ಶಾಂಘೈ ಮಾರುಕಟ್ಟೆಗಳು ಏರಿಕೆ ದಾಖಲಿಸಿವೆ.

₹ 19.50 ಲಕ್ಷ ಕೋಟಿ ಸಂಪತ್ತು ನಷ್ಟ

ನವದೆಹಲಿ (ಪಿಟಿಐ): ಐದು ದಿನಗಳಿಂದ ಸೆನ್ಸೆಕ್ಸ್ ಕುಸಿತದ ಹಾದಿಯಲ್ಲಿ ಇರುವ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 19.50 ಲಕ್ಷ ಕೋಟಿಯಷ್ಟು ಕರಗಿದೆ! ಐದು ವಹಿವಾಟು ದಿನಗಳಲ್ಲಿ ಸೆನ್ಸೆಕ್ಸ್ 3,817 ಅಂಶ ಇಳಿದಿದೆ.

ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಸೋಮವಾರದ ಅಂತ್ಯದ ಹೊತ್ತಿಗೆ ₹ 260 ಲಕ್ಷ ಕೋಟಿಗೆ ಇಳಿದಿದೆ. ಸೋಮವಾರ ಒಂದೇ ದಿನ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 9.13 ಲಕ್ಷ ಕೋಟಿಯಷ್ಟು ಕರಗಿದೆ.

ಈ ವರ್ಷದ ಜನವರಿ 17ರಂದು ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಸಾರ್ವಕಾಲಿಕ ದಾಖಲೆಯ ಮಟ್ಟವಾದ ₹ 280 ಲಕ್ಷ ಕೋಟಿಗೆ ಏರಿಕೆ ಆಗಿತ್ತು.

'ರಷ್ಯಾ ಮತ್ತು ಉಕ್ರೇನ್ ಗಡಿಯಲ್ಲಿನ ಬಿಗುವಿನ ಪರಿಸ್ಥಿತಿ ಕೂಡ ಮಾರುಕಟ್ಟೆಯಲ್ಲಿನ ಕುಸಿತಕ್ಕೆ ಕಾರಣವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇಕಡ 0.32ರಷ್ಟು ಹೆಚ್ಚಳವಾಗಿ 88.17 ಡಾಲರ್‌ಗೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 17 ಪೈಸೆ ಇಳಿಕೆಯಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

21ನೇ ವಾರ್ಷಿಕ ಚಿರಸ್ಮರಣೆ
6ನೇ ವಾರ್ಷಿಕ ಚಿರಸ್ಮರಣೆ

ಶ್ರೀ ಗುರುಮೂರ್ತಿ ರೆಡ್ಡಿ ಮತ್ತು ಶ್ರೀಮತಿ ಮುನಿತಾಯಮ್ಮ
(ಕಂಟ್ರಾಕ್ಟರ್) ಬೆಳ್ಳಂದೂರು
ನಿಧನ: 25.01.2001 ನಿಧನ: 27.05.2016
ದುಃಖತಪ್ತ ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

FOND REMEMBRANCE
10th Death Anniversary

S. P. GANESH
12 MAR 1926 – 25 JAN 2012
DEEPLY MOURNED BY FAMILY MEMBERS

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದಬ್ಬಿಮೆಣಸಿನಕಾಯಿಗೆ ದಾಖಲೆಯ ಬೆಲೆ

ಪ್ರಜಾವಾಣಿ ವಾರ್ತೆ

ಬ್ಯಾಡಗಿ: ಗದಗ ಬೆಟಗೇರಿಯ ರೈತ ಎಂ.ಬಿ. ಕರಿಬಿಸ್ಟಿ ಬೆಳೆದ ಎರಡು ಚೀಲ ಡಬ್ಬಿ ಮೆಣಸಿನಕಾಯಿ ಪ್ರತಿ ಕ್ವಿಂಟಲ್‌ಗೆ ₹82,011ರಂತೆ ಮಾರಾಟವಾಗಿ ದಾಖಲೆ ನಿರ್ಮಿಸಿದೆ.

ಇಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸೋಮವಾರ ಒಟ್ಟು 57,059 ಕ್ವಿಂಟಲ್ ಮೆಣಸಿನಕಾಯಿ ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ಮತ್ತೆ ಏರಿಕೆ ಕಂಡು ಬಂದಿದೆ.

ಪ್ರಸಕ್ತ ಹಂಗಾಮಿನಲ್ಲಿಯೇ ದಾಖಲೆಯ ಆವಕವಾಗಿದ್ದು, 4ನೇ ಬಾರಿಗೆ 2 ಲಕ್ಷಕ್ಕಿಂತ ಹೆಚ್ಚು ಮೆಣಸಿನ ಕಾಯಿ ಚೀಲಗಳನ್ನು ಮಾರಾಟಕ್ಕೆ ತರಲಾಗಿದೆ. ಕಳೆದ ಗುರುವಾರ 53,626 ಕ್ವಿಂಟಲ್ ಮೆಣಸಿನಕಾಯಿ ಆವಕವಾಗಿತ್ತು.

'ಕಳೆದ ಗುರುವಾರ 1 ಚೀಲ ಡಬ್ಬಿ ಮೆಣಸಿನಕಾಯಿ ಪ್ರತಿ ಕ್ವಿಂಟಲ್‌ಗೆ ₹71,009ರಂತೆ ಮಾರಾಟವಾಗಿತ್ತು. ಇಂತಹ ತಳಿ ಮೆಣಸಿನಕಾಯಿಗಳಿಂದ ಬೀಜವನ್ನು ಬೇರ್ಪಡಿಸಿ ಬಿತ್ತನೆಗೆ ಬಳಸಲಾಗುತ್ತದೆ. ಉತ್ತಮ ಗುಣಮಟ್ಟದ ಮೆಣಸಿನಕಾಯಿಗೆ ಬೇಡಿಕೆ ಹೆಚ್ಚಿದ್ದು, ಬೆಲೆಯಲ್ಲಿ ಸ್ಥಿರತೆ ಇದೆ. ಪ್ರತಿ ಕ್ವಿಂಟಲ್ ಕಡ್ಡಿ ಮೆಣಸಿನಕಾಯಿ ₹16,509, ಡಬ್ಬಿ ತಳಿ ₹19,899 ಹಾಗೂ ಗುಂಟೂರು ತಳಿ ₹6,199ರಂತೆ ಮಾರಾಟವಾಗಿದೆ. ಇಂದಿನ ಟೆಂಡರ್ ಪ್ರಕ್ರಿಯೆಯಲ್ಲಿ 340 ಖರೀದಿ ವರ್ತಕರು ಪಾಲ್ಗೊಂಡಿದ್ದರು. ಅವರು ಒಟ್ಟಾರೆ ₹2.60 ಲಕ್ಷ ದರವನ್ನು ಕೋಟ್ ಮಾಡಿದ್ದಾರೆ' ಎಂದು ಎಪಿಎಂಸಿ ಕಾರ್ಯದರ್ಶಿ ಎಸ್.ಬಿ.ನ್ಯಾಮಗೌಡ ತಿಳಿಸಿದರು.

'ಶೀಘ್ರವೇ ಟಾಟಾ ಸಮೂಹಕ್ಕೆ ಏರ್ ಇಂಡಿಯಾ ಹಸ್ತಾಂತರ'

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯನ್ನು ಈ ವಾರದ ಅಂತ್ಯದೊಳಗೆ ಟಾಟಾ ಸಮೂಹಕ್ಕೆ ಹಸ್ತಾಂತರಿಸುವ ಸಾಧ್ಯತೆ ಇದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಬಿಡ್ ಪ್ರಕ್ರಿಯೆಯ ಮೂಲಕ, ಏರ್ ಇಂಡಿಯಾವನ್ನು ಟಾಟಾ ಸಮೂಹದ ಅಂಗಸಂಸ್ಥೆ ಟೆಲೆಸ್ ಪ್ರೈವೇಟ್ ಲಿಮಿಟೆಡ್‌ಗೆ ಮಾರಾಟ ಮಾಡುವ ನಿರ್ಧಾರವನ್ನು ಅಕ್ಟೋಬರ್ 8ರಂದು ಘೋಷಿಸಿತು.

ಬಳಿಕ ಅಕ್ಟೋಬರ್ 11ರಂದು ವಿಮಾನಯಾನ ಕಂಪನಿಯನ್ನು ₹ 18 ಸಾವಿರ ಕೋಟಿಗೆ ಮಾರಾಟ ಮಾಡುವ ಆಸಕ್ತಿ ಇದೆ ಎಂಬ ಪತ್ರವನ್ನು ಕೇಂದ್ರ ಸರ್ಕಾರವು ಟಾಟಾ ಸಮೂಹಕ್ಕೆ ನೀಡಿತು. ಅಕ್ಟೋಬರ್ 25ರಂದು ಕೇಂದ್ರ ಸರ್ಕಾರ ಮತ್ತು ಟಾಟಾ ಸನ್ಸ್ ಷೇರು ಖರೀದಿ ಒಪ್ಪಂದಕ್ಕೆ ಸಹಿ ಹಾಕಿವೆ.

ಷೇರು ಹೂಡಿಕೆಯಲ್ಲಿ ಈ ತಪ್ಪು ಮಾಡಲೇಬೇಡಿ...

ಷೇರು ಮಾತು
ಶರತ್ ಎಂ.ಎಸ್.

ಷೇರುಗಳಲ್ಲಿ ಹೂಡಿಕೆ ಮಾಡುವಾಗ ಅರಿವಿಲ್ಲದೆ ನಷ್ಟ ಮಾಡಿಕೊಳ್ಳುವವರಿಗಿಂತ ಹುಂಬತನಕ್ಕೆ ಬಿದ್ದು, ವಿವೇಚನೆ ಮರೆತು ದುಡ್ಡು ಕಳೆದುಕೊಳ್ಳುವವರೇ ಹೆಚ್ಚು. ಹೀಗಾಗಬಾರದು ಅಂದರೆ, ಷೇರು ಹೂಡಿಕೆಯಲ್ಲಿ ಆಗುವ ಸಾಮಾನ್ಯ ತಪ್ಪುಗಳ ಬಗ್ಗೆ ಹೆಚ್ಚು ಅರಿತುಕೊಳ್ಳಬೇಕು.

ತುರ್ತು ಅಗತ್ಯದ ಹಣ ತೊಡಗಿಸುವುದು: ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟ ಶುರುವಾಗಿದೆ ಎಂದು ಪತ್ರಿಕೆಗಳು, ಸುದ್ದಿ ವಾಹಿನಿಗಳ ಮೂಲಕ ಮಾಹಿತಿ ಪಡೆದ ಕೂಡಲೇ ಅನೇಕರು ದಿಢೀರ್ ಶ್ರೀಮಂತರಾಗುವ ಹಗಲುಗನಸಿಗೆ ಬೀಳುತ್ತಾರೆ. ಮಕ್ಕಳ ಶಾಲೆ ಶುಲ್ಕಕ್ಕೆ ಕೂಡಿಟ್ಟಿರುವ ಹಣ, ಸಾಲ ಮರುಪಾವತಿಗೆ ಮೀಸಲಿಟ್ಟಿರುವ ನಗದು, ವಿಮೆ ಪ್ರೀಮಿಯಂಗಾಗಿ ಹೊಂದಿಸಿರುವ ಮೊತ್ತ, ತುರ್ತು ಅಗತ್ಯಗಳಿಗಾಗಿ ಕಾಯ್ದಿರಿಸಿರುವ ದುಡ್ಡನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲು ಮುಂದಾಗುತ್ತಾರೆ. ಇದು ಅತ್ಯಂತ ಅಪಾಯಕಾರಿ ನಿರ್ಧಾರ.

ತುರ್ತು ಅಗತ್ಯಗಳಿಗೆ ಮೀಸಲಿಟ್ಟ ಹಣವನ್ನು ಯಾವುದೇ ಕಾರಣಕ್ಕೂ ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಅದೃಷ್ಟ ಪರೀಕ್ಷೆಗೆ ಮುಂದಾಗಬಾರದು. ಷೇರು ಹೂಡಿಕೆಯಲ್ಲಿ ರಿಸ್ಕ್ ಹೆಚ್ಚಿಗೆ ಇರುವ ಕಾರಣ ಲಾಭದ ಸಾಧ್ಯತೆ ಎಷ್ಟಿದೆಯೋ ನಷ್ಟದ ಸಾಧ್ಯತೆಯೂ ಅಷ್ಟೇ ಇರುತ್ತದೆ. ತುರ್ತು ಅಗತ್ಯಕ್ಕೆ ಬೇಕಿರುವ ಹಣವನ್ನು ಉಳಿತಾಯ ಖಾತೆ, ಅಲ್ಪಾವಧಿ ಎಫ್‌.ಡಿ., ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಇಡುವುದು ಒಳಿತು.

ಕುಸಿದಾಗ ಷೇರು ಹೂಡಿಕೆ ಮಾಡುವ ಲೆಕ್ಕಾಚಾರ: 'ಷೇರುಪೇಟೆಯಲ್ಲಿ ಇನ್ನಷ್ಟು ಕುಸಿತವಾಗಲಿ, ಆಗ ಷೇರು ಖರೀದಿಸುತ್ತೇನೆ' ಎಂದು ಅನೇಕರು ಹೇಳುವುದನ್ನು ಕೇಳಿದ್ದೇನೆ. ಆದರೆ, ಅತ್ಯಂತ ಕಡಿಮೆ ಬೆಲೆಗೆ ಕಂಪನಿಯೊಂದರ ಷೇರು ಕೊಳ್ಳುವ ಮತ್ತು ಷೇರಿನ ಬೆಲೆ ಗರಿಷ್ಠ ಮಟ್ಟಕ್ಕೆ ಏರಿಕೆಯಾದಾಗ ಮಾರಾಟ ಮಾಡುವ ಲೆಕ್ಕಾಚಾರದ ನಿರ್ಧಾರ ಮಾಡಲು ಯಾವ ಮಾರುಕಟ್ಟೆ ತಜ್ಞರಿಗೂ ಸಾಧ್ಯವಿಲ್ಲ. ಈ ತಲೆಬುಡವಿಲ್ಲದ ಲೆಕ್ಕಾಚಾರಕ್ಕೆ ಬಿದ್ದು ಷೇರು ಮಾರುಕಟ್ಟೆ ಹೂಡಿಕೆ ನಿರ್ಧಾರಗಳನ್ನು ಮಾಡಬೇಡಿ. ಆರ್ಥಿಕವಾಗಿ ಉತ್ತಮವಾಗಿರುವ ಮತ್ತು ಭವಿಷ್ಯದಲ್ಲಿ ಬೆಳವಣಿಗೆಯ ಸಾಧ್ಯತೆ ತೋರುವ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಿ. ಕಂಪನಿಯೊಂದರಲ್ಲಿ ಹೂಡಿಕೆ ಮಾಡುವ ಮುನ್ನ ಷೇರುಗಳ ಮೂಲಭೂತ ವಿಶ್ಲೇಷಣೆ (ಫಂಡಮೆಂಟಲ್ ಅನಾಲಿಸಿಸ್) ಮಾಡಿಕೊಂಡು ಮುನ್ನಡೆಯಿರಿ. ಫಂಡಮೆಂಟಲ್ ಅನಾಲಿಸಿಸ್‌ನಿಂದ ಕಂಪನಿಯೊಂದರ ಷೇರಿನ ಆಂತರಿಕ ಮೌಲ್ಯ ಅಂದರೆ ನಿಜವಾದ ಮೌಲ್ಯ ಅರಿಯಲು ಸಾಧ್ಯವಿದೆ.

ಹಿಂದಿನ ಗಳಿಕೆ ಆಧಾರದಲ್ಲಿ ಭವಿಷ್ಯದ ಅಂದಾಜು: 'ಇವತ್ತು ಹೂಡಿಕೆ ಮಾಡುವವನು ನಿನ್ನೆ ಷೇರುಪೇಟೆಯಲ್ಲಿ ಉಂಟಾದ ಏರಿಕೆಯಿಂದ ಲಾಭ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಕಳೆದ 10 ವರ್ಷಗಳಲ್ಲಿ ಆ ಕಂಪನಿ ಇಷ್ಟು ಲಾಭಾಂಶ ಕೊಟ್ಟಿದೆ. ಮುಂದಿನ ಕೆಲವು ವರ್ಷಗಳಲ್ಲಿ ಇಷ್ಟು ಲಾಭ ಸಿಗಬಹುದು ಎಂದು ನಾವು ಹಲವು ರೀತಿಯಲ್ಲಿ ಲೆಕ್ಕಾಚಾರ ಮಾಡಬಹುದು. ಆದರೆ ಈ ಹಿಂದೆ ಲಾಭ ಗಳಿಸಿರುವ ಕಂಪನಿ ಮುಂದೆ ಹೆಚ್ಚು ಲಾಭ ಗಳಿಸದೇ ಇರಬಹುದು. ಈವರೆಗೆ ಹೆಚ್ಚು ಲಾಭ ಕೊಡದ ಕಂಪನಿ ಮುಂದೆ ಉತ್ತಮ ಲಾಭಾಂಶ ನೀಡಬಹುದು. ಲಾಭದ ಲೆಕ್ಕಾಚಾರ ಕಂಪನಿಯ ಪ್ರಸ್ತುತ ಬೆಳವಣಿಗೆ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಲು ಕಂಪನಿಯ ಬ್ಯಾಲನ್ಸ್ ಶೀಟ್ ನೋಡುವುದು ಮುಖ್ಯವಾಗುತ್ತದೆ.

ತಜ್ಞರ ಮೇಲೆ ಅತಿಯಾದ ವಿಶ್ವಾಸ: ನಿಮ್ಮ ಹೂಡಿಕೆಯನ್ನು ನಿಮ್ಮಷ್ಟು ಕಾಳಜಿಯಿಂದ ನಿರ್ವಹಿಸಲು ಯಾರಿಂದಲೂ ಸಾಧ್ಯವಿಲ್ಲ. ತಜ್ಞರಿಂದ ಸಲಹೆ ಸೂಚನೆಗಳನ್ನು ಪಡೆಯಿರಿ, ಆದರೆ ಅಂತಿಮವಾಗಿ ನೀವೇ ನಿರ್ಧಾರ ತೆಗೆದುಕೊಳ್ಳಿ. ನೆನಪಿರಲಿ, ಶ್ರೀಮಂತರಾದವರೆಲ್ಲರೂ ಅವರ ಹಣಕಾಸಿನ ನಿರ್ಧಾರಗಳನ್ನು ಅವರೇ ತೆಗೆದುಕೊಂಡಿದ್ದಾರೆ. ಮತ್ತೊಬ್ಬರ ಮೇಲೆ ಆ ಜವಾಬ್ದಾರಿ ಹೊರಿಸಿ ಸುಮ್ಮನಾಗಿಲ್ಲ. ಹೀಗೆ ಹಣಕಾಸಿನ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳುವಂತಾಗಬೇಕಾದರೆ ಅದಕ್ಕಾಗಿ ಒಂದಿಷ್ಟು ಕಲಿಕೆ ಮತ್ತು ಅಧ್ಯಯನ ಇರಬೇಕು. ಕಲಿಕೆಯಿಂದ ಮಾತ್ರ ಗಳಿಕೆ ಸಾಧ್ಯ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
URGENT REQD South Indian Female tamil cook experienced (veg & non veg) Home in Koramangala. Contact: 9739320225

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

OPPORTUNITY BANKING, office, Field work, Telecalling, Salary 16000/- - 24000/- SSLC, PUC Degree Pass/Fail. 7619689177.

ಕರ್ನಾಟಕದಾದ್ಯಂತ ಕಂಪನಿ /ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ.Any education ವಸತಿಯೂಟದೊಂದಿಗೆ Salary +OT. 17,800- 48,000/- 9538811211, 9538811200.

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000 -56,000/- ವಸತಿಯೂಟದೊಂದಿಗೆ 8197650569, 7204396011

Wanted
ಚಲನಚಿತ್ರ, ಧಾರಾವಾಹಿಗಾಗಿ ನಟ- ನಟಿ ಪೋಷಕರು, ಮಕ್ಕಳು ಅಭಿನಯಿಸಲು ಹೊಸ ಕಲಾವಿದರಿಗೆ ಅವಕಾಶವಿದೆ ಮೊದಲು ಭಾವಚಿತ್ರದೊಂದಿಗೆ ಸಂಪರ್ಕಿಸಿ: 9353637689, 9035541461

Part-Time Jobs
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology
ಕೆಲಸದ ನಂತರ ಕಾಣಿಕೆ. ಸ್ತ್ರೀ-ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ-ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ:9591580089.

ಸ್ತ್ರೀ ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರಪರಿಹಾರ 9148890039

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

★||ನಂ.1 ವಶೀಕರಣ ಸ್ಪೆಷಲಿಸ್ಟ್||★ ಉದ್ಯೋಗ, ವ್ಯಾಪಾರ,ಸಾಲದಭಾದೆ, ಸ್ತ್ರೀವಶೀಕರಣ, ಗಂಡಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1100 ರೂಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥಭಟ್. 9008968867

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಛಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

ವೈಯಕ್ತಿಕ

Lost

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಕಿನ್ನಿಗೋಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ದುರ್ಗಾಪ್ರಸಾದ್ ರವರ ಧರ್ಮಪತ್ನಿಯಾದ ಲತಾ ಪಿ ಸಾಲಿಯಾನ್ ಆದ ನಾನು ಬೆಂಗಳೂರು ಜಿಲ್ಲೆಯ ಕೆಂಗೇರಿ ಉಪನೊಂದಣಿ ಕಛೇರಿಯಲ್ಲಿ ನೊಂದಣಿಯಾಗಿರುವ ದಾಖಲಾತಿ ಸಂಖ್ಯೆ: BNG (U) -KNGR /2611/1999-2000 ನೊಂದಣಿ ದಿನಾಂಕ: 21/6/1999 ಮತ್ತು ಬಿಡಿಎ ಮೂಲ ರೆವಿನ್ಯೂ ಕಾರ್ಡ್ ನಂ. 273169, ನೀವೇಶನದ ಸಂಖ್ಯೆ 142 ಖಾತಾ ನಂ.26/2 ಸೂನ್ನೆನಹಳ್ಳಿ ಗ್ರಾಮದ ಸೂಲಿಕೆರೆ ಪಂಚಾಯ್ತಿ ಬೆಂಗಳೂರು ದಕ್ಷಿಣ ತಾಲ್ಲೂಕು 30X40 ಅಳತೆಯುಳ್ಳ ನೀವೇಶನ ಮತ್ತು ಸ್ವತ್ತಿನ ಮೂಲ ಕ್ರಯ ಪತ್ರವನ್ನು ಕಳೆದು ಕೊಂಡಿರುತ್ತೇನೆ ಈ ದಾಖಲಾತಿಗಳು ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ: 9945808298

ಪ್ರವಾಸ

Travel
★15.02.2022 ವಿಮಾನದಲ್ಲಿ★ 9ದಿನಗಳು ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ನೈಮಿಷ್ಯಾರಣ್ಯ ಪ್ರವಾಸ. ಆರ್. ಗಾಂಧಿ ಟೂರ್ಸ್. (ರಿ) 9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಚುಟುಕು ಸುದ್ದಿ

₹ 5,225 ಕೋಟಿ ಬಂಡವಾಳ ಸಂಗ್ರಹ: ಸ್ವಿಗ್ಗಿ

ಬೆಂಗಳೂರು (ರಾಯಿಟರ್ಸ್): ಆಹಾರ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ ಕಂಪನಿಯು ಹೂಡಿಕೆದಾರರಿಂದ ₹ 5,225 ಕೋಟಿ ಬಂಡವಾಳ ಸಂಗ್ರಹ ಮಾಡಿರುವುದಾಗಿ ಸೋಮವಾರ ತಿಳಿಸಿದೆ.

ದೇಶದಲ್ಲಿ ಆಹಾರ ಮತ್ತು ದಿನಸಿ ವಸ್ತುಗಳನ್ನು ತ್ವರಿತವಾಗಿ ವಿತರಣೆ ಮಾಡುವುದರಲ್ಲಿ ಕಂಪನಿಗಳ ಮಧ್ಯೆ ಪೈಪೋಟಿ ತೀವ್ರಗೊಂಡಿರುವುದರಿಂದ ಬಂಡವಾಳ ಸಂಗ್ರಹ ಮಾಡಿರುವುದಾಗಿ ಅದು ಹೇಳಿಕೊಂಡಿದೆ. ಅಮೆರಿಕದ ಇನ್‌ವೆಸ್ಕೊ ಒಳಗೊಂಡು ಬಾರನ್ ಕ್ಯಾಪಿಟಲ್ ಗ್ರೂಪ್, ಸುಮೇರು ವೆಂಚರ್, ಐಐಎಫ್‌ಎಲ್ ಮತ್ತು ಕೋಟಕ್ ನಿಂದ ಬಂಡವಾಳ ಸಂಗ್ರಹ ಮಾಡಿರುವುದಾಗಿ ತಿಳಿಸಿದೆ.

ಮೇಲ್ಮನವಿ ಸಲ್ಲಿಸಲು ಅಸ್ಸಾಂಜೆಗೆ 'ಸುಪ್ರೀಂ' ಅನುಮತಿ

ಲಂಡನ್ (ಪಿಟಿಐ): ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಅವರನ್ನು ಅಮೆರಿಕಕ್ಕೆ ಹಸ್ತಾಂತರಿಸುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಸುಪ್ರೀಂಕೋರ್ಟ್ ಸೋಮವಾರ ಅನುಮತಿ ನೀಡಿದೆ.

ಇರಾಕ್ ಮತ್ತು ಅಫ್ಗಾನಿಸ್ತಾನದ ಯುದ್ಧಗಳಿಗೆ ಸಂಬಂಧಿಸಿದ ಸಾವಿರಾರು ರಹಸ್ಯ ದಾಖಲೆಗಳ ಸೋರಿಕೆಗೆ ಸಂಬಂಧಿಸಿದಂತೆ ಅಸ್ಸಾಂಜೆ ಅಮೆರಿಕ ಸರ್ಕಾರಕ್ಕೆ ಬೇಕಾದ ಆರೋಪಿಯಾಗಿದ್ದಾರೆ. ಅಸ್ಸಾಂಜೆ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಅಪಾಯ ಇರುವುದರಿಂದ ಅವರನ್ನು ಅಮೆರಿಕಕ್ಕೆ ಕರೆದೊಯ್ಯಬಾರದು ಎಂದು ಅವರ ಪರ ವಕೀಲರು ವಾದಿಸಿದ್ದರು.

ಪೂರ್ವ ಯುರೋಪ್‌ಗೆ ಹಡಗು, ಯುದ್ಧ ವಿಮಾನ: ನ್ಯಾಟೊ

ಬ್ರಸೆಲ್ಸ್ (ಎಎಫ್‌ಪಿ): ಉತ್ತರ ಅಟ್ಲಾಂಟಿಕ್ ಒಕ್ಕೂಟದ (ನ್ಯಾಟೊ) ಮಿತ್ರ ರಾಷ್ಟ್ರಗಳು ಸೇನೆಯನ್ನು ಸಜ್ಜಾಗಿರಿಸಿದ್ದು ಪೂರ್ವ ಯುರೋಪಿನತ್ತ ಹಡಗುಗಳು ಮತ್ತು ಯುದ್ಧ ವಿಮಾನಗಳನ್ನು ಕಳುಹಿಸಿವೆ ಎಂದು ನ್ಯಾಟೊ ಸೋಮವಾರ ಹೇಳಿದೆ.

ಉಕ್ರೇನ್ ಸುತ್ತಲೂ ರಷ್ಯಾದ ಮಿಲಿಟರಿ ಪಡೆಗಳ ಜಮಾವಣೆಯಿಂದ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯನ್ನು ಮನಗಂಡು ರಕ್ಷಣೆಯನ್ನು ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ.

'ಎಲ್ಲಾ ಮಿತ್ರ ರಾಷ್ಟ್ರಗಳನ್ನು ಬಲಪಡಿಸುವ ಮೂಲಕ ಅವುಗಳನ್ನು ರಕ್ಷಿಸಲು ನ್ಯಾಟೊ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಭದ್ರತಾ ಕೊರತೆಯ ಯಾವುದೇ ಸಮಸ್ಯೆಗೆ ನಾವು ಯಾವಾಗಲೂ ಪ್ರತಿಕ್ರಿಯಿಸುತ್ತೇವೆ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜರನ್ಸ್ ಸ್ಟೋಲ್ಟೆನ್‌ಬರ್ಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರುಮೇನಿಯಾಗೆ ಸೈನ್ಯವನ್ನು ಕಳುಹಿಸಲು ಫ್ರಾನ್ಸ್ ಸಜ್ಜಾಗಿದೆ. ಅಮೆರಿಕ ಸಹ ಪೂರ್ವ ಯುರೋಪ್‌ನಲ್ಲಿ ತನ್ನ ಸೇನೆಯ ಉಪಸ್ಥಿತಿಯನ್ನು ಹೆಚ್ಚಿಸುತ್ತಿದೆ ಎಂದೂ ಹೇಳಿಕೆ ತಿಳಿಸಿದೆ. ಗಡಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸೈನಿಕರನ್ನು ಒಟ್ಟುಗೂಡಿಸುವ ಮೂಲಕ ರಷ್ಯವು ಉಕ್ರೇನ್ ಮೇಲೆ ಆಕ್ರಮಣ ಮಾಡುವ ಬೆದರಿಕೆ ಹಾಕುತ್ತಿದೆ ಎಂದು ಪಾಶ್ಚಾತ್ಯ ರಾಷ್ಟ್ರಗಳು ಆರೋಪಿಸಿವೆ. ಆದರೆ ರಷ್ಯಾ ಇದನ್ನು ನಿರಾಕರಿಸಿದೆ.

ನ್ಯಾಟೊದ ಪೂರ್ವ ದೇಶಗಳ ಸದಸ್ಯರು ಗಡಿಯಲ್ಲಿ ಭದ್ರತೆಗೆ ಮನವಿ ಮಾಡಿದ್ದಾರೆ. 'ಯುರೋಪಿನಲ್ಲಿ ರಷ್ಯನ್ ಮತ್ತು ಬೆಲಾರೂಸ್‌ನ ಮಿಲಿಟರಿಯನ್ನು ನ್ಯಾಟೊದ ಸೂಕ್ತ ಕ್ರಮಗಳ ಮೂಲಕ ಎದುರಿಸುವ ಹಂತವನ್ನು ನಾವು ತಲುಪುತ್ತಿದ್ದೇವೆ' ಎಂದು ಲಾಟ್ವಿಯಾದ ವಿದೇಶಾಂಗ ಸಚಿವ ಎಡ್ಗರ್ ರಿಂಕೆವಿಕ್ಸ್ ಟ್ವೀಟ್ ಮಾಡಿದ್ದಾರೆ.

ರಷ್ಯಾ 2014 ರಲ್ಲಿ ಕ್ರಿಮಿಯಾವನ್ನು ಉಕ್ರೇನ್‌ನಿಂದ ವಶಪಡಿಸಿಕೊಂಡಿತ್ತು. ನಂತರ ಉಕ್ರೇನ್‌ನ ಪ್ರತ್ಯೇಕತಾವಾದಿಗಳಿಗೆ ಬೆಂಬಲ ನೀಡತೊಡಗಿತ್ತು. ನಂತರ ಬಾಲ್ಟಿಕ್ ರಾಜ್ಯಗಳಲ್ಲಿ ನ್ಯಾಟೊ ಮಿತ್ರ ರಾಷ್ಟ್ರಗಳು ಸೇನೆಯನ್ನು ಬಲಪಡಿಸಿದವು. ಪ್ರಸ್ತುತ ರೊಮೇನಿಯಾ ಮತ್ತು ಬಲ್ಗೇರಿಯಾಕ್ಕೆ ಹೆಚ್ಚಿನ ಸೈನ್ಯವನ್ನು ನಿಯೋಜಿಸುವ ಕುರಿತು ಯೋಚಿಸುತ್ತಿದೆ.

ಸಂಕ್ಷಿಪ್ತ ಸುದ್ದಿ

ಪಾಕ್: ನ್ಯಾಯಮೂರ್ತಿ ಆಯೇಷಾ ಮಲಿಕ್ ಪ್ರಮಾಣ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಆಯೇಷಾ ಮಲಿಕ್ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಸುಪ್ರೀಂಕೋರ್ಟ್‌ನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮಲಿಕ್ ಅವರಿಗೆ ಮುಖ್ಯ ನ್ಯಾಯಮೂರ್ತಿ ಗುಲ್ಜಾರ್ ಅಹ್ಮದ್ ಪ್ರಮಾಣವಚನ ಬೋಧಿಸಿದರು. ಸಮಾರಂಭದಲ್ಲಿ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳು, ಅಟಾರ್ನಿ ಜನರಲ್, ವಕೀಲರು ಮತ್ತು ಕಾನೂನು ಮತ್ತು ನ್ಯಾಯ ಆಯೋಗದ ಅಧಿಕಾರಿಗಳು ಭಾಗವಹಿಸಿದ್ದರು.

ಸೈನಿಕರ ಬಂಡಾಯ, ಅಧ್ಯಕ್ಷ ರೋಚ್ ಮಾರ್ಕ್ ಬಂಧನ

ಔಗಡೌಗೌ (ಎಪಿ): ಬುರ್ಕಿನಾ ಫಾಸೊ ದೇಶದ ಸೈನಿಕರು ಬಂಡಾಯವೆದ್ದಿದ್ದಾರೆ. ಅಧ್ಯಕ್ಷ ರೋಚ್ ಮಾರ್ಕ್ ಕ್ರಿಶ್ಚಿಯನ್ ಕಾಬೋರ್ ಅವರನ್ನು ಬಂಧಿಸಲಾಗಿದೆ ಎಂದು ಬಂಡಾಯ ಸೈನಿಕರ ಪೈಕಿ ಇಬ್ಬರು ದೂರವಾಣಿ ಮುಖಾಂತರ ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ.

ಆದರೆ ರೋಚ್ ಮಾರ್ಕ್ ಅವರನ್ನು ಎಲ್ಲಿ ಇರಿಸಲಾಗಿದೆ ಎಂದು ಸೈನಿಕರು ಮಾಹಿತಿ ನೀಡಿಲ್ಲ. ಅವರು ಸುರಕ್ಷಿತವಾಗಿದ್ದಾರೆ ಎಂದಷ್ಟೆ ಹೇಳಿದ್ದಾರೆ.

ಅಧ್ಯಕ್ಷ ರೋಚ್ ಮಾರ್ಕ್ ಅವರ ನಿವಾಸದ ಬಳಿ ಭಾನುವಾರ ಗುಂಡಿನ ಸದ್ದು ಕೇಳಿ ಬಂದಿದೆ. ಸೋಮವಾರ ಬೆಳಗಿನ ಜಾವ ಅಧ್ಯಕ್ಷರ ಭವನದ ಮೇಲೆ ಹೆಲಿಕಾಪ್ಟರ್ ಹಾರುವ ಸದ್ದು ಕೇಳಿದೆ. ಭಾನುವಾರ ರಾತ್ರಿ ರಾಜಧಾನಿಯ ಬಹುತೇಕ ರಸ್ತೆಗಳು ಖಾಲಿಯಾಗಿದ್ದವು.

ಪಂಜಾಬ್: ಎಎಪಿ ಮುಖ್ಯಮಂತ್ರಿ ಅಭ್ಯರ್ಥಿ ಜೊತೆ ಮಾತುಕತೆ

ಒಳ್ಳೆ ದಿನಗಳ ಸನಿಹದಲ್ಲಿ ಪಂಜಾಬ್: ಮಾನ್

ನಟ, ರಾಜಕಾರಣಿ ಭಗವಂತ ಮಾನ್ (48) ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಎಎಪಿ (ಆಮ್ ಆದ್ಮಿ ಪಕ್ಷ) ಘೋಷಿಸಿರುವುದು, ಪಂಜಾಬ್‌ನಲ್ಲಿ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ ಎಂದು ಪಕ್ಷ ಹೇಳಿಕೊಂಡಿದೆ. ಗಮನ ಸೆಳೆಯುವ ಮಾತುಗಾರಿಕೆಯಿಂದ ಮಾನ್ ಅವರು ಪ್ರಶಂಸೆಗೆ ಒಳಗಾಗಿದ್ದಾರೆ. ಅಭಿವೃದ್ಧಿಯ ಕಾರ್ಯಸೂಚಿಯೊಂದಿಗೆ ಮಾನ್ ಅವರ 'ಜನನಾಯಕ' ಎಂಬ ವರ್ಚಸ್ಸನ್ನು ಪಂಜಾಬ್ ಗೆಲುವಿನ ಅಸ್ತ್ರವಾಗಿ ಎಎಪಿ ಪ್ರಯೋಗಿಸುತ್ತಿದೆ. 'ಪ್ರಜಾವಾಣಿ'ಯ ಗೌತಮ್ ಧೀರ್ ಜೊತೆ ಮಾತನಾಡಿರುವ ಮಾನ್, ಪಂಜಾಬ್ ಬದಲಾವಣೆಗಾಗಿ ಹಾತೊರೆಯುತ್ತಿದ್ದು, ರಾಜ್ಯದಲ್ಲಿ ಎಎಪಿ ಗೆಲುವು ಅನಿವಾರ್ಯ ಎಂದು ಹೇಳಿದ್ದಾರೆ

ಪ್ರಜಾವಾಣಿ ಸಂದರ್ಶನ

ಭಗವಂತ ಮಾನ್

• ಪಂಜಾಬ್‌ನ ಮತದಾರರು ನಿಮ್ಮನ್ನು ಅಥವಾ ಎಎಪಿಯನ್ನು ಈ ಹೊತ್ತಿನಲ್ಲಿ ಪರ್ಯಾಯ ಎಂದು ಏಕೆ ಪರಿಗಣಿಸಬೇಕು?

ದಶಕಗಳ ಕಾಲ ಪಂಜಾಬ್‌ನಲ್ಲಿ ಕಾಂಗ್ರೆಸ್ ಹಾಗೂ ಅಕಾಲಿದಳ–ಬಿಜೆಪಿ ಮೈತ್ರಿಕೂಟ ಆಳ್ವಿಕೆ ನಡೆಸಿವೆ. ಜನರ ಜೀವನದಲ್ಲಿ ಬದಲಾವಣೆ ತರುವಂತಹ ಯಾವುದೇ ಕೆಲಸಗಳನ್ನು ಈ ಎರಡೂ ಪಕ್ಷಗಳು ಮಾಡಿಲ್ಲ. ಪಂಜಾಬ್ ಈಗ ಬಿಕ್ಕಟ್ಟು ಎದುರಿಸುತ್ತಿದೆ. ಪಂಜಾಬ್‌ನ ಜನರು ಬದಲಾವಣೆಗೆ ಮನಸ್ಸು ಮಾಡಿದ್ದು, ಪಕ್ಷ ಹಾಗೂ ನಾಯಕತ್ವದ ಮೇಲೆ ವಿಶ್ವಾಸ ಇರಿಸಿದ್ದಾರೆ. ಜನಪರ ನೀತಿಗಳು ಹಾಗೂ ಭ್ರಷ್ಟಾಚಾರ ರಹಿತ ಆಡಳಿತದ ಮೂಲಕ ಪಂಜಾಬ್‌ಗೆ ಒಳ್ಳೆಯ ದಿನಗಳನ್ನು ಕೊಡುವ ನಮ್ಮ ಭರವಸೆಗೆ ಬದ್ಧರಾಗಿದ್ದೇವೆ.

• ಚುನಾವಣೆಯಲ್ಲಿ ಎಎಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದ್ದು, ಪಂಜಾಬ್‌ನಲ್ಲಿ ಅತಂತ್ರ ವಿಧಾನಸಭೆ ಏರ್ಪಡಲಿದೆ ಎಂದು ಅಂದಾಜಿಸಲಾಗಿದೆ. ಒಂದು ವೇಳೆ ಬಹುಮತ ದೊರೆಯದಿದ್ದಲ್ಲಿ, ಚುನಾವಣೋತ್ತರ ಮೈತ್ರಿಗೆ ಎಎಪಿ ಮುಕ್ತವಾಗಿದೆಯೇ?

ಪಂಜಾಬ್‌ನಲ್ಲಿ ಎಎಪಿ ಹಾಗೂ ಉಳಿದ ಎಲ್ಲ ಪಕ್ಷಗಳ ನಡುವೆ ಹಣಾಹಣಿಯಿದೆ. ರಾಜ್ಯದಲ್ಲಿ ಪೂರ್ಣ ಬಹುಮತ ದೊರೆಯುವುದಾಗಿ ನಮಗೆ ವಿಶ್ವಾಸವಿದೆ. ಜನರು ಈಗಾಗಲೇ ಬೇರೆ ಪಕ್ಷಗಳ ಆಡಳಿತವನ್ನು ನೋಡಿದ್ದು, ಬದಲಾವಣೆಗಾಗಿ ಮತ ಚಲಾಯಿಸಲಿದ್ದಾರೆ. 117ರ ಪೈಕಿ 80ಕ್ಕಿಂತಲೂ ಹೆಚ್ಚು ಕ್ಷೇತ್ರಗಳಲ್ಲಿ ನಮಗೆ ಗೆಲುವು ಸಿಗಲಿದೆ.

• ನಿಮ್ಮ ವಿರೋಧಿಗಳು ನಿಮ್ಮನ್ನು ಮದ್ಯವ್ಯಸನಿ ಎಂದು ಆರೋಪಿಸುತ್ತಾರೆ. ಇದಕ್ಕೆ ಹೇಗೆ ಪ್ರತಿಕ್ರಿಯಿಸುವಿರಿ?

ಇದು ಸುಳ್ಳು ಪ್ರಚಾರ. ನಮ್ಮ ಘೋಷಣೆಗಳು ಮತ್ತು ಎಎಪಿಯ ನೆಲೆ ಗಟ್ಟಿಯಾಗುತ್ತಿರುವುದನ್ನು ಅರಿತಿರುವ ರಾಜಕೀಯ ಪಕ್ಷಗಳು ಗಲಿಬಿಲಿಗೊಂಡಿವೆ. ರಾಜ್ಯವನ್ನು ಆಳಿದ್ದರೂ ನೀಡಿದ್ದ ಭರವಸೆಗಳನ್ನು ಈಡೇರಿಸಲು ಪಕ್ಷಗಳಿಂದ ಸಾಧ್ಯವಾಗಿಲ್ಲ. ಪಕ್ಷಗಳ ಬಳಿ ಸ್ಪಷ್ಟ ಕಾರ್ಯಸೂಚಿ ಇಲ್ಲ. ಸಂಸದನಾಗಿ ನಾನು ತಳಮಟ್ಟದಿಂದ ಮಾಡಿದ ಕೆಲಸಗಳನ್ನು ಜನರು ಗಮನಿಸಿದ್ದಾರೆ. ವಿರೋಧಿಗಳ ಆರೋಪಗಳು ನಿಜವಾಗಿದ್ದರೆ, 2014 ಮತ್ತು 2019ರ ಲೋಕಸಭಾ ಚುನಾವಣೆಗಳಲ್ಲಿ ಎರಡು ಬಾರಿ ಆಯ್ಕೆಯಾಗಲು ನನಗೆ ಸಾಧ್ಯವಾಗುತ್ತಿರಲಿಲ್ಲ.

• ಎಲ್ಲ ರಾಜಕೀಯ ಪಕ್ಷಗಳೂ ರಾಜ್ಯದ ಮಾದಕವಸ್ತು ಜಾಲವನ್ನು ಬಗ್ಗುಬಡಿಯುವ ಪಣ ತೊಟ್ಟಿವೆ. ನೀವು ಎಲ್ಲರಿಗಿಂತ ಹೇಗೆ ಭಿನ್ನವಾಗಿ ಕ್ರಮ ತೆಗೆದುಕೊಳ್ಳುವಿರಿ?

ಪ್ರೋತ್ಸಾಹವಿಲ್ಲದೆ ಯಾವುದೇ ಮಾದಕವಸ್ತು ವ್ಯಾಪಾರ ನಡೆಯುವುದಿಲ್ಲ. ಮಾದಕ ವ್ಯಸನ ಗಂಭೀರ ಆತಂಕವಾಗಿದೆ. ಸಾಕಷ್ಟು ಕಾನೂನುಗಳಿದ್ದರೂ, ಇದನ್ನು ಹತೋಟಿಗೆ ತರಲು ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ. ಪಂಜಾಬ್ ಅನ್ನು ಯಾವುದೇ ಕಳಂಕವಿಲ್ಲದ ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಲು ಎಎಪಿ ಬದ್ಧವಾಗಿದೆ.

• ಸಾಲದ ಬಲೆಯಿಂದ ಪಂಜಾಬ್ ಅನ್ನು ಮೇಲೆತ್ತಲು ಉಚಿತ ಕೊಡುಗೆಗಳ ಘೋಷಣೆಗಳು ಅಡ್ಡಿಯಾಗುವುದಿಲ್ಲವೇ?

ಎಎಪಿ ನೀಡಿದ ಎಲ್ಲ ಭರವಸೆಗಳು ಸಂಪನ್ಮೂಲ ಕ್ರೋಡೀಕರಣ ವಿಚಾರದಲ್ಲಿ ಸಮರ್ಥನೀಯ ಯೋಜನೆಗಳು. ಇವುಗಳನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಈಗಾಗಲೇ ಕೆಲಸಗಳನ್ನು ಶುರು ಮಾಡಿದ್ದೇವೆ. ದೆಹಲಿ ಸರ್ಕಾರದ ಮುಂಬರುವ ಬಜೆಟ್‌ಗೆ ನಾವು ಸಾರ್ವಜನಿಕರ ಅಭಿಪ್ರಾಯ ಪಡೆಯುತ್ತಿದ್ದೇವೆ. ಅಂತೆಯೇ, ನಮ್ಮ ಯೋಜನೆಗಳು ಜನರ ಒಪ್ಪಿಗೆಯೊಂದಿಗೆ ಚಾಲನೆ ಪಡೆಯುತ್ತವೆ. ಕಡಿಮೆ ಭರವಸೆ ನೀಡುವುದು ಮತ್ತು ನೀಡಿದ ಭರವಸೆಗಳನ್ನೆಲ್ಲಾ ಈಡೇರಿಸುವುದು ಸರಿಯಾದ ವಿಧಾನ. ಮರಳು ಮಾಫಿಯಾ ಮತ್ತು ಭ್ರಷ್ಟಾಚಾರವನ್ನು ಕೊನೆಗಾಣಿಸಲು ನಮಗೆ ಸಾಧ್ಯವಾಗುವುದಾದರೆ, ಅದರ ಲಾಭವನ್ನು ಸಾರ್ವಜನಿಕರಿಗೆ ಏಕೆ ವರ್ಗಾಯಿಸಬಾರದು? ಮಹಿಳೆಯರಿಗೆ ತಿಂಗಳಿಗೆ ನೀಡುವ ₹1,000 ಭತ್ಯೆಯು ಉಚಿತವಲ್ಲ, ಅದರಲ್ಲಿ ಅವರ ಸಾಮಾಜಿಕ ಭದ್ರತೆಯ ವಿಚಾರ ಅಡಗಿದೆ.

• ಪಂಜಾಬ್ ಬಗ್ಗೆ ನಿಮ್ಮ ದೂರದೃಷ್ಟಿ ಏನು? ನೀವು ಬಿಂಬಿಸುತ್ತಿರುವ ದೆಹಲಿ ಆಡಳಿತ ಮಾದರಿಯಿಂದ ಪಂಜಾಬ್‌ನಲ್ಲಿ ಬದಲಾವಣೆಗಳನ್ನು ನಿರೀಕ್ಷಿಸಬಹುದೇ?

ನಾವು ದುಡಿಯುವ ರಾಜನೀತಿಯಲ್ಲಿ ನಂಬಿಕೆ ಇರಿಸಿರುವವರು. ಪಕ್ಷ ಕೆಲಸ ಮಾಡಿದ್ದರೆ ಮಾತ್ರ ಮತ ನೀಡಿ ಎಂದು ನಾವು ದೆಹಲಿ ಚುನಾವಣೆಯ ವೇಳೆ ಜನರಿಗೆ ಹೇಳಿದ್ದೆವು. ರಾಜ್ಯದಲ್ಲಿ ನಮ್ಮ ಅಭಿವೃದ್ಧಿ ಮಾದರಿಯು ಜನಪರವಾಗಿ ಮತ್ತು ಪಂಜಾಬ್ ಪರವಾಗಿ ಇರಲಿದೆ. ಪಂಜಾಬ್‌ಗೆ ಪ್ರತ್ಯೇಕವಾದ ವಿಷಯಗಳಿವೆ. ದೆಹಲಿ ಆಡಳಿತದ ಅವಧಿಯಲ್ಲಿ ಆರೋಗ್ಯ ಮೂಲಸೌಕರ್ಯ ಮತ್ತು ಶಿಕ್ಷಣದಲ್ಲಿ ಆಗಿರುವ ಒಳ್ಳೆಯ ಬೆಳವಣಿಗೆಗಳನ್ನು ಇಲ್ಲಿ ಪುನರಾವರ್ತಿಸಬಹುದು.

'ಸಂತ ಮುಖ್ಯಮಂತ್ರಿ ಆಗುವಂತಿಲ್ಲ'

ಪ್ರಯಾಗರಾಜ್ (ಪಿಟಿಐ): ಒಬ್ಬ ಸಂತ ಮುಖ್ಯಮಂತ್ರಿ ಆಗುವುದು ಸಾಧ್ಯವಿಲ್ಲ. ಸಾಂವಿಧಾನಿಕ ಹುದ್ದೆಗಾಗಿ ಜಾತ್ಯತೀತತೆಯ ಪ್ರಮಾಣವಚನ ಸ್ವೀಕರಿಸಿದ ಬಳಿಕ ವ್ಯಕ್ತಿಯು 'ಧಾರ್ಮಿಕ'ವಾಗಿ ಉಳಿಯುವುದು ಸಾಧ್ಯವಿಲ್ಲ ಎಂದು ಪ್ರಮುಖ ಸಂತರಲ್ಲಿ ಒಬ್ಬರಾದ ಸ್ವಾಮಿ ಅವಿಮುಕ್ತೇಶ್ವರಾನಂದ ಅವರು ಹೇಳಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ.

ಗೋರಖಪುರದ ಗೋರಖನಾಥ ದೇವಾಲಯದ ಮಹಾಂತ ಮತ್ತು ಸಂತ ಆಗಿ ಯೋಗಿ ಆದಿತ್ಯನಾಥ ಅವರ ಸ್ಥಾನ ಏನು ಎಂಬ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ. 'ಯಾವುದೇ ವ್ಯಕ್ತಿಯು ಎರಡು ಪ್ರಮಾಣಕ್ಕೆ ಬದ್ಧವಾಗಿರಲು ಸಾಧ್ಯವಿಲ್ಲ. ಸಂತನೊಬ್ಬ ಮಹಾಂತ ಆಗಿರಬಹುದು, ಆದರೆ ಮುಖ್ಯಮಂತ್ರಿ ಅಥವಾ ಪ್ರಧಾನಿ ಆಗುವುದು ಸಾಧ್ಯವಿಲ್ಲ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇಸ್ಲಾಂನ ಖಲೀಫಾ ವ್ಯವಸ್ಥೆಯಲ್ಲಿ ಇದು ಸಾಧ್ಯ. ಅವರಲ್ಲಿ ಧಾರ್ಮಿಕ ಮುಖ್ಯಸ್ಥನು ರಾಜ್ಯದ ದೊರೆಯೂ ಆಗಿರುತ್ತಾನೆ ಎಂದು ಅವರು ವಿವರಿಸಿದ್ದಾರೆ. ಗಂಗಾ ತಟದಲ್ಲಿ ನಡೆ ಮಾಘ ಉತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಈ ಭಾರಿ ಮಾಘ ಉತ್ಸವವನ್ನು ನಿರ್ಲಕ್ಷಿಸಲಾಗಿದೆ. ಕೆಲವು ಸಂತರು ಸತ್ಯಾಗ್ರಹ ಮತ್ತು ಆತ್ಮಾಹುತಿಯಂತಹ ಬೆದರಿಕೆಯನ್ನೂ ಒಡ್ಡಿದ್ದಾರೆ. ರಾಜಕೀಯ ನಾಯಕರು ಚುನಾವಣೆಯ ಕೆಲಸದಲ್ಲಿ ಮುಳುಗಿದ್ದರೆ, ಅಧಿಕಾರಿಗಳು ಸರಿಯಾದ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೇ' ಎಂದು ಅವಿಮುಕ್ತೇಶ್ವರಾನಂದ ಪ್ರಶ್ನಿಸಿದ್ದಾರೆ.

ಎಲ್ಲ ರಾಜಕೀಯ ಪಕ್ಷಗಳು ಧಾರ್ಮಿಕ ವಿಚಾರದಲ್ಲಿ ಹಸ್ತಕ್ಷೇಪ ನಡೆಸುತ್ತಿವೆ. ಸಂತರ ಜತೆ ಸಂಪರ್ಕಕ್ಕೆ ಇದು ಸೀಮಿತವಾಗಿಲ್ಲ. ಧಾರ್ಮಿಕ ಹುದ್ದೆಗಳಲ್ಲಿ ಕೂಡ ತಮ್ಮವರನ್ನೇ ತಂದು ಕೂರಿಸಿ, ತಮ್ಮ ನಿಲುವುಗಳನ್ನು ಹರಡುವ ಯತ್ನ ನಡೆಯುತ್ತಿದೆ. ಧಾರ್ಮಿಕ ಗುರುಗಳು ಕೂಡ ತಮ್ಮದೇ ಭಾಷೆಯಲ್ಲಿ ಮಾತನಾಡಬೇಕು ಎಂದು ಕೆಲವು ವ್ಯಕ್ತಿಗಳು ಬಯಸುತ್ತಿದ್ದಾರೆ. ಹಾಗಾಗಿಯೇ, ಹಳೆಯ ಮಾದರಿಯಲ್ಲಿ ಧರ್ಮ ಪ್ರಸಾರ ಮಾಡುವವರನ್ನು ಕಂಡರೆ ಅವರಿಗೆ ಆಗುತ್ತಿಲ್ಲ. ಅಂತಹ ಧಾರ್ಮಿಕ ಗುರುಗಳನ್ನು ನಿವಾರಿಸುವ ಪ್ರಯತ್ನವೂ ನಡೆಯುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಅಮರಿಂದರ್ ಸಿಂಗ್ ಆರೋಪ

'ಸಿಧು ಪರವಾಗಿ ಪಾಕ್ ಪ್ರಧಾನಿ ಲಾಬಿ'

ಅಮರಿಂದರ್

ನವದೆಹಲಿ (ಪಿಟಿಐ): 'ನವಜೋತ್ ಸಿಂಗ್ ಸಿಧು ಅವರನ್ನು ಪಂಜಾಬ್ ಸರ್ಕಾರದ ಸಂಪುಟದಿಂದ ತೆಗೆದಾಗ, ಅವರನ್ನು ಮರಳಿ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಲಾಬಿ ನಡೆಸಿದ್ದರು' ಎಂದು ಪಂಜಾಬ್ ಲೋಕ ಕಾಂಗ್ರೆಸ್ ಅಧ್ಯಕ್ಷ ಕ್ಯಾಪ್ಟನ್ ಅಮರಿಂದರ್ ಸಿಂಗ್ ಆರೋಪಿಸಿದ್ದಾರೆ.

ಪಂಜಾಬ್ ಚುನಾವಣೆಗೆ ಅಮರಿಂದರ್ ಅವರ ಪಕ್ಷವು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದೆ. ಮೈತ್ರಿಕೂಟದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಸಂದರ್ಭದಲ್ಲಿ ಅವರು ಈ ಆರೋಪ ಮಾಡಿದ್ದಾರೆ.

'ಸಿಧು ಅವರನ್ನು ಸಚಿವ ಸ್ಥಾನದಿಂದ ಕೈಬಿಟ್ಟ ನಂತರ ನನಗೆ ಪಾಕಿಸ್ತಾನದ ಪ್ರಧಾನಿಯಿಂದ ಸಂದೇಶ ಬಂದಿತ್ತು. ಸಿಧು ಅವರು ನನ್ನ ಗೆಳೆಯ, ಅವರನ್ನು ಸಂಪುಟಕ್ಕೆ ಮರಳಿ ಸೇರಿಸಿಕೊಂಡರೆ ನನಗೆ ಸಂತೋಷವಾಗುತ್ತದೆ. ಸಿಧು ಕೆಲಸ ಮಾಡದೇ ಇದ್ದರೆ, ಆಗ ನೀವು ಅವರನ್ನು ತೆಗೆದುಹಾಕಬಹುದು ಎಂದು ಇಮ್ರಾನ್ ಖಾನ್ ಹೇಳಿದ್ದರು' ಎಂದು ಅಮರಿಂದರ್ ಆರೋಪಿಸಿದ್ದಾರೆ.

ಇಮ್ರಾನ್ ಖಾನ್ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕೆ ಸಿಧು ಹೋಗಿದ್ದರು. ಆಗ ಪಾಕ್ ಸೇನಾ ಮುಖ್ಯಸ್ಥ ಬಾಜ್ವಾ ಅವರನ್ನು ಸಿಧು ಅಪ್ಪಿಕೊಂಡಿದ್ದರು. ಆಗ ಆ ಬಗ್ಗೆ ಅಮರಿಂದರ್ ಆಕ್ಷೇಪ ವ್ಯಕ್ತಪಡಿಸಿದ್ದರು.

'ಅಮರಿಂದರ್ ಬಳಸಿದ ಗುಂಡು'

'ಅಮರಿಂದರ್ ಸಿಂಗ್ ಬಳಸಿ ಮುಗಿದುಹೋದ ಗುಂಡು' ಎಂದು ನವಜೋತ್ ಸಿಂಗ್ ಸಿಧು ಲೇವಡಿ ಮಾಡಿದ್ದಾರೆ. ಸಿಧುವನ್ನು ಸಂಪುಟಕ್ಕೆ ಮರಳಿ ಸೇರಿಸಿಕೊಳ್ಳಲು ಪಾಕಿಸ್ತಾನ ಪ್ರಧಾನಿ ಲಾಬಿ ನಡೆಸಿದ್ದರು ಎಂದು ಅಮರಿಂದರ್ ಮಾಡಿರುವ ಆರೋಪಕ್ಕೆ ಪ್ರತಿಯಾಗಿ ಅವರು ಹೀಗೆ ಹೇಳಿದ್ದಾರೆ.

ಪ್ರಜಾಮತ ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ

ಆಣೆ–ಪ್ರಮಾಣ ತಪ್ಪಿಲ್ಲ: ಜಾರಕಿಹೊಳಿ

ಬೆಳಗಾವಿ: 'ಶಾಸಕರಾಗಿ ಆಯ್ಕೆಯಾದ ಬಳಿಕ ಪಕ್ಷ ಬದಲಿಸುವುದಿಲ್ಲ ಎಂದು ಗೋವಾ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿಗಳಿಂದ ಆಣೆ–ಪ್ರಮಾಣ ಮಾಡಿಸಿಕೊಂಡಿರುವುದರಲ್ಲಿ ತಪ್ಪೇನಿಲ್ಲ. ಮೋಸ ಮಾಡದಿರಲೆಂಬ ದೃಷ್ಟಿಯಲ್ಲಿ ವಾಗ್ದಾನ ಪಡೆಯಲಾಗಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, 'ಕಳೆದ ಬಾರಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಕೆಲ ಶಾಸಕರು ಪಕ್ಷಕ್ಕೆ ಕೈಕೊಟ್ಟು ಬಿಜೆಪಿಗೆ ಸೇರಿದ್ದರು. ಈ ಮೂಲಕ ಪಕ್ಷಕ್ಕೆ ಹಾನಿ ಮಾಡಿದ್ದರು. ಈ ಬಾರಿಯೂ ಹಾಗಾಗದಂತೆ ನೋಡಿಕೊಳ್ಳಲು, ನಿಷ್ಠೆಯಿಂದ ಇರಲಿ ಎನ್ನುವ ನಿಟ್ಟಿನಲ್ಲಿ ಪ್ರಮಾಣ ಮಾಡಿಸಿದ್ದಾರೆ' ಎಂದರು.

ಉತ್ತರ ಪ್ರದೇಶ ಚುನಾವಣೆಯಲ್ಲಿ ಜಿನ್ನಾ, ಕಸಬ್, ಯಾಕೂಬ್ ಮೆಮನ್

ಅಖಿಲೇಶ್‌ಗೆ ಪಾಕಿಸ್ತಾನದ ಮೇಲೆ ಪ್ರೀತಿ: ಬಿಜೆಪಿ

ಪ್ರಜಾವಾಣಿ ವಾರ್ತೆ

ಅಖಿಲೇಶ್

ಲಖನೌ/ನವದೆಹಲಿ: ಉತ್ತರ ಪ್ರದೇಶ ಚುನಾವಣೆಗೆ ಈಗ ಪಾಕಿಸ್ತಾನ, ಮಹಮ್ಮದ್ ಅಲಿ ಜಿನ್ನಾ, ಯಾಕೂಬ್ ಮೆಮನ್ ಮತ್ತು ಅಜ್ಮಲ್ ಕಸಬ್‌ನನ್ನು ಎಳೆದು ತರಲಾಗಿದೆ. 'ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶ ಚುನಾವಣೆಗೆ ಪಾಕಿಸ್ತಾನ ಮತ್ತು ಮಹಮ್ಮದ್ ಅಲಿ ಜಿನ್ನಾ ಅವರನ್ನು ಪದೇ ಪದೇ ಎಳೆದು ತರುತ್ತಿದ್ದಾರೆ. ಇದು ಪಾಕಿಸ್ತಾನದ ಬಗ್ಗೆ ಅವರಿಗೆ ಇರುವ ಪ್ರೀತಿಯನ್ನು ತೋರಿಸುತ್ತದೆ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಲೇವಡಿ ಮಾಡಿದ್ದಾರೆ.

ಈಚೆಗೆ ಪತ್ರಿಕೆಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಅಖಿಲೇಶ್ ಯಾದವ್ ಅವರು, ಚೀನಾ ನಮ್ಮ ನಿಜವಾದ ಶತ್ರು. ಪಾಕಿಸ್ತಾನ ನಮ್ಮ ರಾಜಕೀಯ ಶತ್ರು ಎಂದು ಹೇಳಿದ್ದರು. ಈ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಪಾತ್ರಾ ಅವರು ಹೀಗೆ ಲೇವಡಿ ಮಾಡಿದ್ದಾರೆ.

'ಪಾಕಿಸ್ತಾನವು ಭಾರತದ ರಾಜಕೀಯ ಶತ್ರುವಷ್ಟೆ. ಬಿಜೆಪಿ ತನ್ನ ಮತ ರಾಜಕಾರಣಕ್ಕಾಗಿ ಪದೇ ಪದೇ ಪಾಕಿಸ್ತಾನವನ್ನು ಗುರಿ ಮಾಡಿ ಮಾತನಾಡುತ್ತದೆ. ನಮ್ಮ ನಿಜವಾದ ಶತ್ರುವಾದ ಚೀನಾ, ನಮ್ಮ ನೆಲವನ್ನು ಅತಿಕ್ರಮಿಸಿಕೊಳ್ಳುತ್ತಿದೆ' ಎಂದು ಅಖಿಲೇಶ್ ಯಾದವ್ ಹೇಳಿದ್ದರು.

'ಜಮ್ಮು–ಕಾಶ್ಮೀರದಲ್ಲಿ ನಮ್ಮ ಜನರು ಪ್ರತಿದಿನ ಉಗ್ರರ ಗುಂಡಿಗೆ ಬಲಿಯಾಗುತ್ತಿದ್ದಾರೆ. ಅವರ ನೋವು ಅಖಿಲೇಶ್‌ಗೆ ಅರ್ಥವಾಗುತ್ತದೆಯೇ? ಇದು ಅತ್ಯಂತ ದುರದೃಷ್ಟದ ಹೇಳಿಕೆ. ಈ ರೀತಿ ಹೇಳಿಕೆ ನೀಡುವ ಮೂಲಕ ಅಖಿಲೇಶ್ ಅವರು ದೇಶದ ಜನರನ್ನು ಅವಮಾನಿಸಿದ್ದಾರೆ. ಹೀಗಾಗಿ ಅವರು ದೇಶದ ಜನರ ಕ್ಷಮೆಯಾಚಿಸಬೇಕು' ಎಂದು ಪಾತ್ರಾ ಆಗ್ರಹಿಸಿದ್ದಾರೆ.

'ಬಿಜೆಪಿಯು ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತಿದೆ. ಈ ಇಬ್ಬರೂ ನಾಯಕರು ಮಾಡಿರುವ ಅಭಿವೃದ್ಧಿ ಕಾರ್ಯಗಳ ಹೆಸರಿನಲ್ಲಿ ನಾವು ಮತ ಕೇಳುತ್ತಿದ್ದೇವೆ. ಆದರೆ ಸಮಾಜವಾದಿ ಪಕ್ಷವು ಚುನಾವಣೆ ಎದುರಿಸಲು ಪಾಕಿಸ್ತಾನ ಮತ್ತು ಜಿನ್ನಾರನ್ನು ಅವಲಂಬಿಸಿದೆ' ಎಂದು ಪಾತ್ರಾ ಲೇವಡಿ ಮಾಡಿದ್ದಾರೆ.

'ಮುಂಬೈ ಬಾಂಬ್ ಸ್ಫೋಟದ ಸಂಚುಕೋರ ಯಾಕೂಬ್ ಮೆಮನ್ ಮತ್ತು ಮುಂಬೈ ದಾಳಿಯ ಅಜ್ಮಲ್ ಕಸಬ್‌ನನ್ನು ಗಲ್ಲಿಗೆ ಏರಿಸದೇ ಇದ್ದಿದ್ದರೆ, ಈ ಚುನಾವಣೆಯಲ್ಲಿ ಅವರಿಗೆ ಅಖಿಲೇಶ್ ಟಿಕೆಟ್ ನೀಡುತ್ತಿದ್ದರೇನೋ. ಅಥವಾ ಅವರನ್ನು ಕರೆದು ತಾರಾ ಪ್ರಚಾರಕರನ್ನಾಗಿ ಮಾಡುತ್ತಿದ್ದರೇನೊ' ಎಂದು ಪಾತ್ರಾ ಟೀಕಿಸಿದ್ದಾರೆ.

'ಈ ಚುನಾವಣೆ ಎಸ್‌ಪಿಯ ಎಕ್ಸ್‌ಪ್ರೆಸ್ ಹೆದ್ದಾರಿಗಳು ಮತ್ತು ಬಿಜೆಪಿಯ ಎಕ್ಸ್‌ಪ್ರೆಸ್ ಹೆದ್ದಾರಿಗಳ ನಡುವಣ ಯುದ್ಧ. ಬಿಜೆಪಿಯು ಪೂರ್ವಾಂಚಲ, ಬುಂದೇಲ್‌ಖಂಡ, ಗಂಗಾ ಮತ್ತು ಗೋರಖಪುರ ಎಕ್ಸ್‌ಪ್ರೆಸ್ ಹೆದ್ದಾರಿಗಳನ್ನು ನಿರ್ಮಿಸಿದೆ. ಆದರೆ ಎಸ್‌ಪಿಯದ್ದು ಗೂಂಡಾಗಿರಿ, ದಂಗೆ ಮತ್ತು ಮಾಫಿಯಾ ಎಕ್ಸ್‌ಪ್ರೆಸ್ ಹೆದ್ದಾರಿಗಳು. ಇವುಗಳ ಮಧ್ಯೆ ಮತದಾರರು ತಮಗೆ ಯಾವ ಹೆದ್ದಾರಿ ಬೇಕೆಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು' ಎಂದು ಪಾತ್ರಾ ಹೇಳಿದ್ದಾರೆ.

> **ಜಿನ್ನಾ ಬಗ್ಗೆ ಪ್ರೀತಿ ಹೊಂದಿರುವವರು ಪಾಕಿಸ್ತಾನವನ್ನು ಹೇಗೆ ನಿರಾಕರಿಸುತ್ತಾರೆ. ಅವರು ಪಾಕಿಸ್ತಾನವನ್ನು ಪ್ರೀತಿಸಲು ಮಾತ್ರ ಸಾಧ್ಯ**
> **ಸಂಬಿತ್ ಪಾತ್ರಾ,** ಬಿಜೆಪಿ ವಕ್ತಾರ

ಧ್ರುವೀಕರಣ ಯತ್ನ: ರೈತರಿಗೆ ರಾಕೇಶ್ ಟಿಕಾಯತ್ ಎಚ್ಚರಿಕೆ

ಅಲೀಗಡ (ಪಿಟಿಐ): ಸಮಾಜವನ್ನು ಧ್ರುವೀಕರಿಸುವ ಪ್ರಯತ್ನಗಳ ಬಗ್ಗೆ ರೈತರು ಎಚ್ಚರದಿಂದ ಇರಬೇಕು. ಹಿಂದೂ–ಮುಸ್ಲಿಂ ವಿಚಾರವನ್ನು ಮುನ್ನೆಲೆಗೆ ತಂದು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಸ್ಥಾಪಿತ ಹಿತಾಸಕ್ತಿಗಳು ಪ್ರಯತ್ನಿಸಬಹುದು ಎಂದು ಭಾರತೀಯ ಕಿಸಾನ್‌ಯ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ.

ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದರು.



ಟಿಕಾಯತ್

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಆಯ್ಕೆಯು ಎಷ್ಟು ಮಹತ್ವದ್ದು ಎಂಬುದರ ಬಗ್ಗೆ ರೈತರಿಗೆ ಪೂರ್ಣ ಅರಿವಿದೆ. ಅವರಿಗೆ ಯಾರೂ ಹೇಳಿಕೊಡುವ ಅಗತ್ಯ ಇಲ್ಲ ಎಂದರು.

'ಮುಂದಿನ ಕೆಲವು ವಾರಗಳಲ್ಲಿ ರಾಜಕೀಯ ಚರ್ಚೆಯಲ್ಲಿ ಹಿಂದೂ–ಮುಸ್ಲಿಂ, ಜಿನ್ನಾ ಮುಂತಾದವುಗಳು ಸಾಮಾನ್ಯವಾಗಿ ಕೇಳಿ ಬರಲಿವೆ. ಗಮನ ಬೇರೆಡೆಗೆ ಸೆಳೆಯುವ ಇಂತಹ ಪ್ರಯತ್ನಗಳ ಬಗ್ಗೆ ಎಚ್ಚರದಿಂದ ಇರಬೇಕು' ಎಂದು ಟಿಕಾಯತ್ ಅವರು ಹೇಳಿದ್ದಾರೆ.

ಹಿಂದೂ–ಮುಸ್ಲಿಂ ಮತ್ತು ಜಿನ್ನಾ ಮಾರ್ಚ್ 15ರವರೆಗೆ ಉತ್ತರ ಪ್ರದೇಶದ ಅಧಿಕೃತ ಅತಿಥಿಗಳಾಗಿ ಇರಲಿದ್ದಾರೆ ಎಂದೂ ಅವರು ವ್ಯಂಗ್ಯವಾಡಿದ್ದಾರೆ.

ರೈತರು ತಮ್ಮ ಉತ್ಪನ್ನಗಳನ್ನು ಅದಕ್ಕೆ ಮಾಡಿದ ವೆಚ್ಚದ ಅರ್ಧ ದರಕ್ಕೆ ಮಾರಾಟ ಮಾಡಬೇಕಾಗಿ ಬಂದಿದೆ. ಹೀಗಿರುವಾಗ, ಯಾರಿಗೆ ಮತ ನೀಡಬೇಕು ಎಂಬುದನ್ನು ಅವರಿಗೆ ಹೇಳಿಕೊಡುವ ಅಗತ್ಯವೇನೂ ಇಲ್ಲ ಎಂದು ಟಿಕಾಯತ್ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ

• ಎನ್‌ಪಿಪಿ ಏಕಾಂಗಿ ಸ್ಪರ್ಧೆ: ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಭಾಗವಾಗಿರುವ ನ್ಯಾಷನಲ್ ಪೀಪಲ್ಸ್ ಪಾರ್ಟಿಯು (ಎನ್‌ಪಿಪಿ) ಈ ಬಾರಿ ಚುನಾವಣೆಯಲ್ಲಿ ಯಾವುದೇ ಪಕ್ಷದ ಜತೆ ಚುನಾವಣಾಪೂರ್ವ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. 20 ಅಭ್ಯರ್ಥಿಗಳ ಪಟ್ಟಿಯನ್ನು ಪಕ್ಷವು ಸೋಮವಾರ ಪ್ರಕಟಿಸಿದೆ. 2017ರ ಚುನಾವಣೆಯಲ್ಲಿ ಪಕ್ಷವು ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಪಡೆದಿತ್ತು. 60 ಸದಸ್ಯ ಬಲದ ವಿಧಾನಸಭೆಯ ಕನಿಷ್ಠ 40 ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಪಕ್ಷ ಹೇಳಿದೆ.

• ಆತ್ಮಾಹುತಿ ಯತ್ನ: ಉತ್ತರ ಪ್ರದೇಶದ ಮೀರನ್‌ಪುರ ವಿಧಾನಸಭಾ ಕ್ಷೇತ್ರದ ಎಎಪಿ ಅಭ್ಯರ್ಥಿ ಜೋಗಿಂದರ್ ಸಿಂಗ್ ಅವರು ಮುಝಫ್ಫರ್‌ನಗರ ಜಿಲ್ಲಾಧಿಕಾರಿ ಕಚೇರಿ ಎದುರು ಆತ್ಮಾಹುತಿಗೆ ಯತ್ನಿಸಿದ್ದಾರೆ. ಜೋಗಿಂದರ್ ಅವರ ನಾಮಪತ್ರವನ್ನು ಚುನಾವಣಾಧಿಕಾರಿಯು ತಿರಸ್ಕರಿಸಿದ್ದು ಆತ್ಮಾಹುತಿ ಯತ್ನಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ.

• ಬಿಜೆಪಿ ಮೈತ್ರಿಕೂಟದ ಸೀಟು ಹಂಚಿಕೆ: ಪಂಜಾಬ್‌ನಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟದ ಸೀಟು ಹಂಚಿಕೆ ಅಂತಿಮವಾಗಿದೆ. ಬಿಜೆಪಿ 65 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಅಮರಿಂದರ್ ಸಿಂಗ್ ನೇತೃತ್ವದ ಪಂಜಾಬ್ ಲೋಕ ಕಾಂಗ್ರೆಸ್‌ಗೆ 37 ಕ್ಷೇತ್ರ ನೀಡಲಾಗಿದೆ. ಶಿರೋಮಣಿ ಅಕಾಲಿ ದಳ (ಸಂಯುಕ್ತ) ಪಕ್ಷ 17 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ

• ಕಣ್ಣೀರಿಟ್ಟ ಕಾರ್ಯಕರ್ತ: ಉತ್ತರ ಪ್ರದೇಶದ ಚಂದೌಸಿ ಕ್ಷೇತ್ರದಿಂದ ಸ್ಪರ್ಧಿಸಲು ಸಮಾಜವಾದಿ ಪಕ್ಷದ ಟಿಕೆಟ್ ಸಿಗದ ಕಾರಣಕ್ಕೆ ಸತೀಶ್ ಪ್ರೇಮಿ ಅವರು ಕಣ್ಣೀರಿಟ್ಟಿದ್ದಾರೆ. 'ಪಕ್ಷಕ್ಕಾಗಿ 25 ವರ್ಷಗಳಿಂದ ದುಡಿದಿದ್ದೇನೆ. ಹಾಗಿದ್ದರೂ ಟಿಕೆಟ್ ಸಿಕ್ಕಿಲ್ಲ' ಎಂದು ಅವರು ಬೇಸರ ತೋಡಿಕೊಂಡಿದ್ದಾರೆ. ಪಕ್ಷ ಹಣಕ್ಕೆ ಮಾತ್ರ ಬೆಲೆ ಕೊಡುತ್ತಿದೆ ಎಂದು ಆರೋಪಿಸಿದ್ದಾರೆ.

• ಕಾಂಗ್ರೆಸ್ ತಾರಾ ಪ್ರಚಾರಕರು: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ 30 ತಾರಾ ಪ್ರಚಾರಕರ ಪಟ್ಟಿಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿದೆ. ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಪಕ್ಷದ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾದ ಕನ್ಹಯ್ಯಾ ಕುಮಾರ್ ಅವರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಪಕ್ಷದ ನಾಯಕತ್ವದ ವಿರುದ್ಧ ಮಾತನಾಡಿದ್ದ ಜಿ–23 ಗುಂಪಿನಲ್ಲಿದ್ದ ಗುಲಾಂ ನಬಿ ಆಜಾದ್, ಭೂಪಿಂದರ್ ಸಿಂಗ್ ಹೂಡಾ, ರಾಜ್ ಬಬ್ಬರ್ ಅವರನ್ನೂ ಸೇರಿಸಿಕೊಳ್ಳಲಾಗಿದೆ. ಅಶೋಕ್ ಗೆಹಲೋತ್ ಸರ್ಕಾರದ ವಿರುದ್ಧ ಬಂಡಾಯ ಎದ್ದಿದ್ದ ಸಚಿನ್ ಪೈಲಟ್ ಅವರಿಗೂ ಸ್ಥಾನ ಸಿಕ್ಕಿದೆ

ಎಎಪಿ ಪ್ರಚಾರ ಅಭಿಯಾನಕ್ಕೆ ಚಾಲನೆ: 'ಸಾಧನೆ'ಯ ವಿಡಿಯೊ ಹಂಚಿಕೊಳ್ಳಲು ಕರೆ

'ಕೇಜ್ರಿವಾಲ್‌ಗೆ ಒಂದು ಅವಕಾಶ ಕೊಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಎಎಪಿಯ ಪ್ರಚಾರದ ಕೇಂದ್ರ ಬಿಂದುವಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮನ್ನು ಬಿಂಬಿಸಿಕೊಂಡಿದ್ದಾರೆ. ಏಕ್ ಮೌಕಾ ಕೇಜ್ರಿವಾಲ್ ಕೊ (ಕೇಜ್ರಿವಾಲ್‌ಗೆ ಒಂದು ಅವಕಾಶ) ಎಂಬ ಪ್ರಚಾರ ಅಭಿಯಾನಕ್ಕೆ ಅವರು ಚಾಲನೆ ನೀಡಿದ್ದಾರೆ. ತಮ್ಮ ಆಳ್ವಿಕೆಯಲ್ಲಿ ದೆಹಲಿಯ ಜನರ ಜೀವನ ಹೇಗೆ ಪರಿವರ್ತನೆಯಾಗಿದೆ ಎಂಬುದನ್ನು ತೋರಿಸುವ ವಿಡಿಯೊಗಳನ್ನು ಪ್ರಕಟಿಸುವಂತೆಯೂ ಅವರು ದೆಹಲಿ ಜನರನ್ನು ಕೋರಿದ್ದಾರೆ.

ತಮ್ಮ ಸರ್ಕಾರದ ಕ್ರಮಗಳಿಂದ ಜನರಿಗೆ ಹೇಗೆ ಲಾಭ ಆಗಿದೆ ಎಂಬುದನ್ನು ತೋರಿಸುವ ವಿಡಿಯೊಗಳನ್ನು ಟ್ವಿಟರ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವಂತೆ ಅವರು ವಿನಂತಿ ಮಾಡಿಕೊಂಡಿದ್ದಾರೆ. ಎಎಪಿಗೆ ಒಂದು ಅವಕಾಶ ಕೊಡುವಂತೆ ತಮ್ಮ ಪರಿಚಿತರಿಗೆ ವಾಟ್ಸ್‌ಆ್ಯಪ್ ಮೂಲಕ ಸಂದೇಶ ಕಳುಹಿಸುವಂತೆಯೂ ಅವರು ಹೇಳಿದ್ದಾರೆ. ಅತಿಹೆಚ್ಚು ಜನರು ನೋಡಿದ ವಿಡಿಯೊವನ್ನು ಪ್ರಕಟಿಸಿದ 50 ಮಂದಿಯನ್ನು ಭೋಜನಕ್ಕೆ ಆಹ್ವಾನಿಸುವುದಾಗಿಯೂ ಕೇಜ್ರಿವಾಲ್ ಭರವಸೆ ನೀಡಿದ್ದಾರೆ.

ಉಚಿತ ವಿದ್ಯುತ್ ಮತ್ತು ಉಚಿತ ನೀರು ಪೂರೈಕೆಯಂತಹ ಹಲವು ಸೌಲಭ್ಯಗಳನ್ನು ದೆಹಲಿ ಸರ್ಕಾರವು ನೀಡಿದೆ. ಪಂಜಾಬ್, ಉತ್ತರ ಪ್ರದೇಶ, ಗೋವಾ ಮತ್ತು ಉತ್ತರಾಖಂಡದ ಜನರಿಗೆ ಇದನ್ನು ತಿಳಿಸಿ, ಎಎಪಿಗೆ ಬೆಂಬಲ ನೀಡುವಂತೆ ವಿನಂತಿಸಿ ಎಂದು ಕೇಜ್ರಿವಾಲ್ ಹೇಳಿದ್ದಾರೆ.

'ಜನರು ನಮ್ಮ ಮೇಲೆ ವಿಶ್ವಾಸ ಇರಿಸಿದ್ದರಿಂದ ಮತ್ತು ಸರ್ಕಾರ ರಚಿಸಲು ಅವಕಾಶ ಕೊಟ್ಟದ್ದರಿಂದ ದೆಹಲಿಯನ್ನು ಪರಿವರ್ತಿಸಲು ನಮಗೆ ಸಾಧ್ಯವಾಯಿತು. ದೆಹಲಿ ಜನರಿಗೆ ಕೊಟ್ಟ ಪ್ರತೀ ಭರವಸೆಯನ್ನೂ ಸರ್ಕಾರವು ಈಡೇರಿಸಿದೆ. ದೆಹಲಿಯ ಶಾಲೆಗಳು, ಆಸ್ಪತ್ರೆಗಳು, ರಸ್ತೆಗಳು ನೀರು ಮತ್ತು ವಿದ್ಯುತ್ ಪೂರೈಕೆ ಎಲ್ಲದಕ್ಕೂ ಜಾಗತಿಕ ಖ್ಯಾತಿ ಸಿಕ್ಕಿದೆ. ದೆಹಲಿಯ ಜನರ ರೀತಿಯಲ್ಲಿಯೇ ಬೇರೆ ರಾಜ್ಯಗಳ ಜನರು ನಮ್ಮ ಮೇಲೆ ವಿಶ್ವಾಸವಿಟ್ಟು ಅವಕಾಶ ಕೊಟ್ಟರೆ ದೇಶದ ಇತರ ರಾಜ್ಯಗಳಲ್ಲಿಯೂ ದೆಹಲಿ ಮಾದರಿಯನ್ನು ಜಾರಿಗೆ ತರುತ್ತೇವೆ' ಎಂದ ಕೇಜ್ರಿವಾಲ್ ಹೇಳಿದ್ದಾರೆ.

ಪಂಜಾಬ್‌ನಲ್ಲಿ ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರಮುಖ ಪ್ರತಿಸ್ಪರ್ಧಿಯಾಗಿ ಎಎಪಿ ಹೊರ ಹೊಮ್ಮಿದೆ. ಗೋವಾ, ಉತ್ತರಾಖಂಡ ಮತ್ತು ಉತ್ತರ ಪ್ರದೇಶದಲ್ಲಿಯೂ ಪಕ್ಷವು ಸ್ಪರ್ಧಿಸುತ್ತಿದೆ. ಗೋವಾದಲ್ಲಿ ಬಿಜೆಪಿ ವಿರೋಧಿ ಪಕ್ಷಗಳಲ್ಲಿ ಒಮ್ಮತ ಇಲ್ಲ. ಹಾಗಾಗಿ ಅಲ್ಲಿ ಉತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿ ಎಎಪಿ ಇದೆ. ಉತ್ತರಾಖಂಡದಲ್ಲಿ ಎಎಪಿ ಸ್ಪರ್ಧಿಸಿದೆ. ಆದರೆ, ಅಲ್ಲಿ ಅಂತಹ ನಿರೀಕ್ಷೆ ಏನೂ ಇಲ್ಲ ಎಂದು ಸಮೀಕ್ಷೆಗಳು ಹೇಳಿವೆ.

ಕೇಜ್ರಿವಾಲ್ ಅವರು ಕಳೆದ ಕೆಲವು ತಿಂಗಳಿಂದ ಗೋವಾ, ಪಂಜಾಬ್ ಮತ್ತು ಉತ್ತರಾಖಂಡದಲ್ಲಿ ಪ್ರಚಾರ ನಡೆಸಿದ್ದಾರೆ.

ಪಕ್ಷದ ಸ್ವಯಂಸೇವಕರು ಮನೆ ಮನೆ ಪ್ರಚಾರ ನಡೆಸಬೇಕು. ಎಲ್ಲ ಪಕ್ಷಗಳ ಬೆಂಬಲಿಗರ ಮನೆಗೂ ಭೇಟಿ ಕೊಡಬೇಕು. ದೆಹಲಿ ಸರ್ಕಾರ ಏನು ಮಾಡಿದೆ ಎಂಬುದನ್ನು ವಿವರಿಸಬೇಕು ಎಂದು ಕೇಜ್ರಿವಾಲ್ ಈ ಹಿಂದೆ ಕರೆ ಕೊಟ್ಟಿದ್ದರು.

> **ಚುನಾವಣೆಗೆ ವೆಚ್ಚ ಮಾಡಲು ನನ್ನಲ್ಲಿ ಕೋಟ್ಯಂತರ ರೂಪಾಯಿ ಇಲ್ಲ. ನನ್ನ ಅತ್ಯಂತ ಮೌಲಿಕ ಆಸ್ತಿ ಎಂದರೆ ದೆಹಲಿಯ ಜನರ ಬೆಂಬಲ**
> **ಅರವಿಂದ ಕೇಜ್ರಿವಾಲ್**
> ದೆಹಲಿ ಮುಖ್ಯಮಂತ್ರಿ

ಪಂಜಾಬ್‌ನ ವಿವಿಧೆಡೆ ಅರವಿಂದ ಕೇಜ್ರಿವಾಲ್ ಅವರ ಪೋಸ್ಟರ್ ಹಾಕಲಾಗಿದೆ ಪಿಟಿಐ ಚಿತ್ರ

ನುಡಿ–ಕಿಡಿ



ನೀವು (ಬಿಜೆಪಿ) ಜನರನ್ನು ಬೆದರಿಸಿ ಮತ ಪಡೆಯುತ್ತೀರಿ. ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಮತ ಪಡೆದಿದ್ದೀರಿ. ಆದರೆ, ಪ್ರಶ್ನೆ ಏನೆಂದರೆ, ಪ್ರತಿಫಲವಾಗಿ ಮತದಾರರಿಗೆ ಏನು ಸಿಕ್ಕಿತು? ನಿಮಗೆ ಅಧಿಕಾರ ಸಿಕ್ಕಿತು. ಮತದಾರರಿಗೆ ಸಿಕ್ಕಿತೇ? ಬಿಜೆಪಿ ಹಿಂದೂಗಳ ಬಗ್ಗೆ ಮಾತನಾಡುತ್ತದೆ. ಆದರೆ, ಹಿಂದೂಗಳು ಸಾಧಿಸಿದ್ದೇನು? ಬಿಜೆಪಿಗೆ ಲಾಭ ಆಗಿದೆಯೇ ಹೊರತು ಮತದಾರರಿಗೆ ಅಲ್ಲ

ಭೂಪೇಶ್ ಬಘೇಲ್, ಉತ್ತರ ಪ್ರದೇಶ ಕಾಂಗ್ರೆಸ್ ಚುನಾವಣಾ ವೀಕ್ಷಕ

ಬಿಜೆಪಿ ಜತೆ ಮೈತ್ರಿಯಲ್ಲಿದ್ದು 25 ವರ್ಷ ವ್ಯರ್ಥ ಮಾಡಿದೆವು ಎಂದು ಉದ್ಧವ್ ಠಾಕ್ರೆ ಹೇಳಿದ್ದಾರೆ. ಈ ಮೂಲಕ ಅವರು ತಮ್ಮ ತಂದೆಯ ನಿರ್ಧಾರದ ಬಗ್ಗೆ ಪ್ರಶ್ನೆ ಎತ್ತುತ್ತಿದ್ದಾರೆ

ಸಂಬಿತ್ ಪಾತ್ರಾ, ಬಿಜೆಪಿ ವಕ್ತಾರ

ಎಸ್‌ಪಿ ಶಾಸಕ ಸುಭಾಷ್ ಬಿಜೆಪಿಗೆ

ನವದೆಹಲಿ (ಪಿಟಿಐ): ಸಮಾಜವಾದಿ ಪಕ್ಷದ ಶಾಸಕ ಸುಭಾಷ್ ರಾಯ್ ಸೋಮವಾರ ಬಿಜೆಪಿ ಸೇರಿದರು.

ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ, ದಿನೇಶ್ ಶರ್ಮಾ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್ ಅವರು ರಾಯ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಜಲಾಲ್‌ಪುರ ಕ್ಷೇತ್ರದ ಶಾಸಕರಾದ ರಾಯ್ ಈ ಮೊದಲು ಬಿಜೆಪಿ ಸದಸ್ಯರಾಗಿದ್ದರು. ಅವರನ್ನು ಪಕ್ಷಕ್ಕೆ ಸ್ವಾಗತಿಸಿದ ಸ್ವತಂತ್ರ ದೇವ್ ಸಿಂಗ್, ರಾಯ್‌ಗೆ ಇದು 'ಘರ್ ವಾಪಸಿ' ಎಂದು ಹೇಳಿದರು.

ಬಿಜೆಪಿ ಸೇರಿದ ಸುಭಾಷ್ ರಾಯ್ (ಬಲ)

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇದೆ. ಶಾಂತಿ ಮತ್ತು ರಾಷ್ಟ್ರೀಯತೆಯ ಸ್ಫೂರ್ತಿ ಇದೆ. ಈ ಎಲ್ಲಾ ಕಾರಣಕ್ಕೆ ರಾಯ್ ಬಿಜೆಪಿ ಸೇರಿದ್ದಾರೆ' ಎಂದು ಅವರು ಹೇಳಿದರು.

29 ಸಾಧಕರಿಗೆ 'ರಾಷ್ಟ್ರೀಯ ಬಾಲ ಪುರಸ್ಕಾರ'

ನವದೆಹಲಿ (ಪಿಟಿಐ): ಕರ್ನಾಟಕದ ಭರತನಾಟ್ಯ ಕಲಾವಿದ 17 ವರ್ಷದ ರೆಮೊನಾ ಇವೆಟೆ ಪೆರಿರಿಯಾ ಮತ್ತು ಪಿಯಾನೊ ಕಲಾವಿದ 14 ವರ್ಷದ ಸೈಯದ್ ಫತೀನ್ ಅಹ್ಮದ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ 29 ಮಕ್ಕಳಿಗೆ ಪ್ರಧಾನಿ ನರೇಂದ್ರ ಮೋದಿ 'ರಾಷ್ಟ್ರೀಯ ಬಾಲ ಪುರಸ್ಕಾರ' ಪ್ರಶಸ್ತಿ ನೀಡಿ ಗೌರವಿಸಿದರು.

ಬ್ಲಾಕ್ ಚೈನ್ ತಂತ್ರಜ್ಞಾನದಲ್ಲಿ ಪುರಸ್ಕೃತರಿಗೆ ಡಿಜಿಟಲ್ ಪ್ರಮಾಣಪತ್ರ ವಿತರಿಸಿದ ಬಳಿಕ ಪ್ರಧಾನಿ ನಂತರ ಅವರೊಂದಿಗೆ ವರ್ಚುವಲ್ ವೇದಿಕೆಯಲ್ಲಿ ಸಂವಾದ ನಡೆಸಿದರು. ಪ್ರಶಸ್ತಿ ₹ 1 ಲಕ್ಷ ನಗದು, ಪದಕವನ್ನು ಒಳಗೊಂಡಿದೆ.

ಸಾಂಸ್ಕೃತಿಕ ಕ್ಷೇತ್ರದ ಸಾಧನೆಯನ್ನು ಗುರುತಿಸಿ ಕರ್ನಾಟಕದ ಇಬ್ಬರನ್ನೂ ಗೌರವಿಸಲಾಗಿದೆ. ಕೋವಿಡ್ ಕುರಿತು ಜನರಿಗೆ ಎಚ್ಚರಿಸುವ ಮೊಬೈಲ್ ಅಪ್ಲಿಕೇಷನ್ ರೂಪಿಸಿದ್ದ ಬಿಹಾರದ 13 ವರ್ಷದ ಬಾಲಕ ಪಾಲ್ ಸಾಕ್ಷಿ, ಪಾರ್ಕಿನ್‌ಸನ್ ಕಾಯಿಲೆ ಇದ್ದವರಿಗೆ ನಡುಕದ ಪ್ರಮಾಣ ತಗ್ಗಿಸುವ, ಪರಿಕರ ಅನ್ವೇಷಿಸಿದ್ದ ಮಹಾರಾಷ್ಟ್ರದ 15 ವರ್ಷದ ಬಾಲಕಿ ಜೂಹಿ ಅಭಿಜಿತ್ ಕೇಸ್ಕರ್, ಕ್ಯಾಲಿಗ್ರಫಿಯಲ್ಲಿ 100 ಶೈಲಿಯ ಬರವಣಿಗೆಯಲ್ಲಿ ಸಿದ್ಧಹಸ್ತನಾಗಿದ್ದ ರಾಜಸ್ಥಾನದ 13 ವರ್ಷದ ಬಾಲಕ ಒಳಗೊಂಡಂತೆ ಆರು ವಿವಿಧ ಕ್ಷೇತ್ರಗಳಲ್ಲಿ ಒಟ್ಟು 29 ಮಕ್ಕಳಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಯುವಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ನೀತಿ: ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, ಸರ್ಕಾರ ತನ್ನ ಎಲ್ಲ ನೀತಿಗಳನ್ನು ಯುವಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸುತ್ತಿದೆ ಎಂದರು. ಕೇಂದ್ರದ 'ವೋಕಲ್ ಫಾರ್ ಲೋಕಲ್' ಅಭಿಯಾನವನ್ನು ಬೆಂಬಲಿಸಬೇಕು ಎಂದೂ ಪುರಸ್ಕೃತರಿಗೆ ಸಲಹೆ ಮಾಡಿದರು.

ನೇತಾಜಿ ಅವರ ಹಾಲೊಗ್ರಾಂ ಪ್ರತಿಮೆ ಅನಾವರಣಗೊಳಿಸಿದ್ದನ್ನು ಉಲ್ಲೇಖಿಸಿ, 'ನೇತಾಜಿ ಅವರಿಂದ ನಾವು ಪಡೆಯುವ ಅತಿ ದೊಡ್ಡ ಸ್ಫೂರ್ತಿ ಎಂದರೆ ಕರ್ತವ್ಯ ಮತ್ತು ದೇಶಮೊದಲು ಎಂಬ ಪ್ರಜ್ಞೆ. ದೇಶಕ್ಕಾಗಿ ನೀವು ಕೂಡಾ ನಿಮ್ಮದೇ ಕರ್ತವ್ಯದ ಹಾದಿಯಲ್ಲಿ ಸಾಗಬೇಕು' ಎಂದು ಪುರಸ್ಕೃತರಿಗೆ ಸಲಹೆ ಮಾಡಿದರು.

ಕೋವಿಡ್ ಲಸಿಕೆ ಅಭಿಯಾನದಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಶ್ಲಾಘಿಸಿದ ಅವರು, ಮಕ್ಕಳು ತಮ್ಮ ಆಧುನಿಕ ಮತ್ತು ವೈಜ್ಞಾನಿಕ ಚಿಂತನೆಯನ್ನು ಈ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ. ಜನವರಿ 3ರಿಂದ ದೇಶದಲ್ಲಿ 4 ಕೋಟಿಗೂ ಹೆಚ್ಚು ಮಕ್ಕಳು ಲಸಿಕೆ ಪಡೆದಿದ್ದು, ಸಮಾಜಕ್ಕೆ ಪ್ರೇರಣೆಯಾಗಿದ್ದಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಬಾಲ ಪುರಸ್ಕಾರ ಪ್ರಶಸ್ತಿ ಪುರಸ್ಕೃತರ ಜತೆ ಸಂವಾದ ನಡೆಸಿದರು

ಮುಖ್ಯಾಂಶಗಳು

- **ಪ್ರಶಸ್ತಿ ಪುರಸ್ಕೃತರಲ್ಲಿ ಕರ್ನಾಟಕದ ಇಬ್ಬರು ಮಕ್ಕಳು**
- **ಪ್ರಶಸ್ತಿ ₹ 1 ಲಕ್ಷ ನಗದು, ಪದಕವನ್ನು ಒಳಗೊಂಡಿದೆ**
- **ಡಿಜಿಟಲ್ ಸ್ವರೂಪದಲ್ಲಿ ಪ್ರಮಾಣಪತ್ರ ವಿತರಣೆ, ಸಂವಾದ**

ದ್ವೇಷ ಭಾಷಣ: ಎರಡು ಹಿಂದೂ ಸಂಘಟನೆಗಳ ಅರ್ಜಿ

ನವದೆಹಲಿ (ಪಿಟಿಐ): ಹರಿದ್ವಾರ ಮತ್ತು ದೆಹಲಿಯಲ್ಲಿ ಮುಸಲ್ಮಾನರ ವಿರುದ್ಧ ದ್ವೇಷ ಭಾಷಣ ಮಾಡಿದ್ದು, ತನಿಖೆ ನಡೆಸಲು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಪ್ರಕರಣದಲ್ಲಿ ತಮ್ಮನ್ನೂ ಪ್ರತಿವಾದಿಗಳನ್ನಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿ ಎರಡು ಹಿಂದೂ ಸಂಘಟನೆಗಳು ಅರ್ಜಿ ಸಲ್ಲಿಸಿವೆ.

ಹಿಂದೂ ಸೇನಾ ಮತ್ತು ಹಿಂದೂ ಫ್ರಂಟ್ ಫಾರ್ ಜಸ್ಟೀಸ್ ಸಂಘಟನೆಗಳು ಈ ಅರ್ಜಿ ಸಲ್ಲಿಸಿವೆ. ಈ ಪ್ರಕರಣದ ಸಂಬಂಧ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಈಗಾಗಲೇ ಕೇಂದ್ರ ಸರ್ಕಾರ, ಉತ್ತರಾಖಂಡ ಸರ್ಕಾರ ಮತ್ತು ದೆಹಲಿ ಪೊಲೀಸ್ ಇಲಾಖೆಗೆ ನೋಟಿಸ್ ಜಾರಿ ಮಾಡಿದೆ.

ದ್ವೇಷ ಭಾಷಣ ಪ್ರಕರಣಕ್ಕೆ ಸಂಬಂಧಿಸಿ ತನಿಖೆಗೆ ನಿರ್ದೇಶಿಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮಜರುಗಿಸಬೇಕು ಎಂದು ಕೋರಿ ಪತ್ರಕರ್ತ ಖುರ್ಬಾನ್ ಅಲಿ, ಪಟ್ನಾ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಮತ್ತು ಹಿರಿಯ ವಕೀಲರಾದ ಅಂಜನಾ ಪ್ರಕಾಶ್ ಅವರು ಅರ್ಜಿ ಸಲ್ಲಿಸಿದ್ದರು.

ಹಿಂದೂಸೇನಾ ಸಂಸ್ಥೆಯ ಅಧ್ಯಕ್ಷ ವಿಷ್ಣುಗುಪ್ತಾ ಅವರು ವಕೀಲ ಬರುನ್ ಕುಮಾರ್ ಸಿನ್ಹಾ ಮೂಲಕ ಅರ್ಜಿ ಸಲ್ಲಿಸಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿ: ಎಂಟರ ಘಟ್ಟಕ್ಕೆ ಸಿಟ್ಸಿಪಾಸ್ ಲಗ್ಗೆ

ಆಗರ್‌ಗೆ ಮೆಡ್ವೆಡೆವ್ ಸವಾಲು

ಮೆಲ್ಬರ್ನ್ (ಎಎಫ್‌ಪಿ): ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಮತ್ತು ಕೆನಡಾದ ಫೆಲಿಕ್ಸ್ ಆಗರ್ ಅಲಿಯಾಸಿಮ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಎಂಟರ ಘಟ್ಟದಲ್ಲಿ ಮುಖಾಮುಖಿಯಾಗುವರು. ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಲ್ಲಿ ಒಬ್ಬರೆನಿಸಿಕೊಂಡಿರುವ ಮೆಡ್ವೆಡೆವ್ ಸೋಮವಾರ ನಡೆದ ಪ್ರಬಲ ಪೈಪೋಟಿಯಲ್ಲಿ ಅಮೆರಿಕದ ಮ್ಯಾಕ್ಸಿಮ್ ಕ್ರೆಸಿ ಸವಾಲನ್ನು ಮೀರಿದರು. ಮಾಜಿ ಫೈನಲಿಸ್ಟ್, ಕ್ರೊವೇಷ್ಯಾದ ಮರಿನ್ ಸಿಲಿಕ್ ಅವರ ದಿಟ್ಟ ಆಟಕ್ಕೆ ಉತ್ತರ ನೀಡಿ ಫೆಲಿಕ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಾರ್ಗರೆಟ್ ಕೋರ್ಟ್ ಅರೆನಾದಲ್ಲಿ ನಡೆದ ಹಣಾಹಣಿಯಲ್ಲಿ ಮೆಡ್ವೆಡೆವ್ ಅವರಿಗೆ ಮ್ಯಾಕ್ಸಿಮ್ ಕ್ರೆಸಿ ಭಾರಿ ಪೈಪೋಟಿ ನೀಡಿದರು. ಪಂದ್ಯದ ನಡುವೆ ನೋವಿಗೆ ಚಿಕಿತ್ಸೆ ಪಡೆದುಕೊಂಡ ಮೆಡ್ವೆಡೆವ್ ಒಂದು ಹಂತದಲ್ಲಿ ತಾಳ್ಮೆಯನ್ನೂ ಕಳೆದುಕೊಂಡರು. ಕೊನೆಗೆ 6-2, 7-6 (4), 6 (4)-7, 7-5ರಲ್ಲಿ ಜಯ ಗಳಿಸಿದರು.

2018ರ ಫೈನಲ್‌ನಲ್ಲಿ ರೋಜರ್ ಫೆಡರರ್ ವಿರುದ್ಧ ಸೋತ ಮರಿನ್ ಸಿಲಿಕ್ ಅವರು ಜಾನ್ ಕೇನ್ ಅರೆನಾದಲ್ಲಿ ನಡೆದ ಹಣಾಹಣಿಯ ಪ್ರತಿ ಹಂತದಲ್ಲೂ ಜಿದ್ದಾಜಿದ್ದಿಯ ಪೈಪೋಟಿ ನೀಡಿದರು. 3 ತಾಸು 35 ನಿಮಿಷ ನಡೆದ, ನಾಲ್ಕು ಸೆಟ್‌ಗಳ ವರೆಗೆ ಸಾಗಿದ ಪಂದ್ಯದಲ್ಲಿ ಅಲಿಯಾಸಿಮ್ 2-6, 7-6 (9/7), 6-2, 7-6 (7/4)ರಲ್ಲಿ ಗೆಲುವು ಸಾಧಿಸಿದರು. ನಾಲ್ಕನೇ ಶ್ರೇಯಾಂಕಿತ, ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ 4-6, 6-4, 4-6, 6-3, 6-4ರಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ ವಿರುದ್ಧ ಜಯ ಗಳಿಸಿದರು.

ಮಹಿಳಾ ವಿಭಾಗದಲ್ಲಿ ರೊಮೇನಿಯಾದ ಸಿಮೋನಾ ಹಲೆಪ್ ಎದುರು ಭರ್ಜರಿ ಆಟವಾಡಿದ ಫ್ರಾನ್ಸ್‌ನ ಅಲಿಜ್ ಕಾರ್ನೆಟ್ 6-4, 3-6, 6-4ರಲ್ಲಿ ಜಯ ಸಾಧಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಅಮೆರಿಕದ ಡ್ಯಾನಿಯೆಲಿ ಕಾಲಿನ್ಸ್ ಎದುರು ಸೆಣಸುವರು. ಬೆಲ್ಜಿಯಂನ ಎಲಿಸ್ ಮರ್ಟೆನ್ಸ್ ಅವರನ್ನು 4-6, 6-4, 6-4ರಲ್ಲಿ ಮಣಿಸಿದ ಕಾಲಿನ್ಸ್ ಈ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಅಮೆರಿಕದ ಮೂರನೇ ಆಟಗಾರ್ತಿ ಎನಿಸಿಕೊಂಡರು. ಮ್ಯಾಡಿಸನ್ ಕೀಸ್ ಮತ್ತು ಜೆಸಿಕಾ ಪೆಗುಲಾ ಭಾನುವಾರ ಈ ಸಾಧನೆ ಮಾಡಿದ್ದರು. ಎರಡನೇ ಶ್ರೇಯಾಂಕಿತೆ ಅರಿನಾ ಸಬಲೆಂಕಾ ಅವರನ್ನು ಕಯಾ ಕನೆಪಿ 5-7, 6-2, 7-6 (10/7)ರಲ್ಲಿ ಮಣಿಸಿದರು.

ಸಿನರ್, ಇಗಾ ಸ್ವಾಟೆಕ್‌ಗೆ ಗೆಲುವು: ಸ್ಥಳೀಯ ಆಟಗಾರ ಅಲೆಕ್ಸ್ ಡಿ ಮಿನಾರ್ ಎದುರು ಜಯ ಗಳಿಸಿದ ಇಟಲಿಯ ಜನಿಕ್ ಸಿನರ್ ಮೊದಲ ಬಾರಿ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಎಂಟರ ಘಟ್ಟ ಪ್ರವೇಶಿಸಿದರು. ಸೋಮವಾರದ ಪಂದ್ಯದಲ್ಲಿ ಅವರು 7-6(3), 6-3, 6-4ರಲ್ಲಿ ಗೆದ್ದರು. ಏಳನೇ ಶ್ರೇಯಾಂಕಿತೆ ಪೋಲೆಂಡ್‌ನ ಇಗಾ ಸ್ವಾಟೆಕ್ ರೊಮೇನಿಯಾದ ಸೊರಾನ ಸಿರ್ಸ್ಟಿಯಾ ಎದುರು 5-7 6-3 6-3ರಲ್ಲಿ ಗೆದ್ದು ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇರಿಸಿದರು.

2020ರ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದಿರುವ 20ರ ಹರಯದ ಸ್ವಾಟೆಕ್ ಅವರಿಗೆ 31 ವರ್ಷದ ಸೊರಾನ ಭರ್ಜರಿ ಹೊಡೆತಗಳ ಮೂಲಕ ಭಾರಿ ಸ್ಪರ್ಧೆಯೊಡ್ಡಿದರು. ಆದರೆ ಪಟ್ಟು ಬಿಡದೆ ಆಡಿದ ಸ್ವಾಟೆಕ್ ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮ್ಯಾಕ್ಸಿಮ್ ಕ್ರೆಸಿ ವಿರುದ್ಧದ ಪಂದ್ಯದಲ್ಲಿ ಚೆಂಡನ್ನು ರಿಟರ್ನ್ ಮಾಡಿದ ಡ್ಯಾನಿಲ್ ಮೆಡ್ವೆಡೆವ್ –ಎಎಫ್‌ಪಿ ಚಿತ್ರ

ಲಸಿಕೆ ವೈಯಕ್ತಿಕ ಆಯ್ಕೆ: ಹ್ಯುಬ್ಲೊ

ಜೂರಿಚ್ (ರಾಯಿಟರ್ಸ್): ನೊವಾಕ್ ಜೊಕೊವಿಚ್ ಅವರ ಪ್ರಾಯೋಜಕರಾದ ಹ್ಯುಬ್ಲೊ ಕೈಗಡಿಯಾರದ ಕಂಪನಿ, ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದು ಅಥವಾ ಬಿಡುವುದು ವೈಯಕ್ತಿಕ ವಿಚಾರ ಎಂದು ಸೋಮವಾರ ಹೇಳಿದೆ.

ಲಸಿಕೆ ಹಾಕಿಸಿಕೊಳ್ಳದೆ ದೇಶ ಪ್ರವೇಶಿಸಿದ್ದರಿಂದಾಗಿ ನೊವಾಕ್ ಜೊಕೊವಿಚ್ ಅವರಿಗೆ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಅವಕಾಶ ನೀಡಿರಲಿಲ್ಲ. ಅವರ ವೀಸಾವನ್ನು ಎರಡು ಬಾರಿ ರದ್ದು ಮಾಡಿ ದೇಶದಿಂದ ಹೊರಹಾಕಲಾಗಿತ್ತು. ಈ ಘಟನೆಗೆ ಸಂಬಂಧಿಸಿ ಮೊದಲ ಬಾರಿ ಪ್ರತಿಕ್ರಿಯೆ ನೀಡಿರುವ ಹ್ಯುಬ್ಲೊ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಕಾರ್ಡೊ ಗ್ವಡಲುಪೆ ಅವರು ಜೊಕೊವಿಚ್ ಅವರ ಅನುಭವವನ್ನು ಅವರಿಂದಲೇ ಕೇಳಿಸಿಕೊಳ್ಳಲು ಕಾತರರಾಗಿರುವುದಾಗಿ ಹೇಳಿದ್ದಾರೆ.

‘ಸ್ಪಾಟ್ ಫಿಕ್ಸಿಂಗ್‌ಗಾಗಿ ಕೊಕೇನ್ ತಿನ್ನಿಸಿದ’

ಬ್ರೆಂಡನ್ ಟೇಲರ್

ನವದೆಹಲಿ (ಪಿಟಿಐ): ‘ಸೌಹಾರ್ದ ಮಾತುಕತೆಗೆ ಕರೆದ ಭಾರತದ ಉದ್ಯಮಿಯೊಬ್ಬರು ಕೊಕೇನ್ ನೀಡಿದ ನಂತರ ಸ್ಪಾಟ್ ಫಿಕ್ಸಿಂಗ್‌ಗೆ ಸಹಕಾರ ನೀಡುವಂತೆ ಬೆದರಿಕೆ ಹಾಕಿದ್ದರು. ಈ ವಿಷಯವನ್ನು ಬಹಿರಂಗಗೊಳಿಸದ್ದಕ್ಕೆ ನಾನು ಐಸಿಸಿಯ ನಿಷೇಧ ಶಿಕ್ಷೆಗೆ ಒಳಗಾಗಬೇಕಾಯಿತು’ ಎಂದು ಜಿಂಬಾಬ್ವೆ ಕ್ರಿಕೆಟ್ ತಂಡದ ಮಾಜಿ ನಾಯಕ ಬ್ರೆಂಡನ್ ಟೇಲರ್ ಹೇಳಿದ್ದಾರೆ.

ಅರಿವಿಲ್ಲದೇ ಎಸಗಿದ ತಪ್ಪಿನ ಬಗ್ಗೆ ಸಾಮಾಜಿಕ ತಾಣಗಳಲ್ಲಿ ಸೋಮವಾರ ಮಾಹಿತಿ ನೀಡಿರುವ ಅವರು ಉದ್ಯಮಿಯ ಹೆಸರು ಬಹಿರಂಗೊಳಿಸಲಿಲ್ಲ. ‘ಜಿಂಬಾಬ್ವೆಯಲ್ಲಿ ಟ್ವೆಂಟಿ20 ಲೀಗ್ ಒಂದನ್ನು ಆಯೋಜಿಸುವ ಕುರಿತು ಮಾತನಾಡುವುದಕ್ಕಿದೆ ಎಂದು ಹೇಳಿ 2019ರ ಅಕ್ಟೋಬರ್ ತಿಂಗಳಲ್ಲಿ ಭಾರತಕ್ಕೆ ಕರೆಸಿಕೊಂಡ ಉದ್ಯಮಿ ರಾತ್ರಿ ವೇಳೆ ಕೊಕೇನ್ ನೀಡಿದ್ದ. ₹ 11 ಲಕ್ಷ ಮೊತ್ತವನ್ನೂ ನೀಡಿದ್ದ. ಏನೆಂದು ತಿಳಿಯದೆ ಕೊಕೇನ್ ಸೇವಿಸಿದ್ದೆ. ಅದರ ವಿಡಿಯೊ ಮಾಡಿದ್ದ ಆತ ಮರುದಿನ ಅದನ್ನು ತೋರಿಸಿ ಸ್ಪಾಟ್ ಫಿಕ್ಸಿಂಗ್‌ಗೆ ಒಪ್ಪಿಕೊಳ್ಳದೇ ಇದ್ದರೆ ವಿಡಿಯೊವನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುವುದಾಗಿ ಬೆದರಿಕೆ ಹಾಕಿದ್ದರು’ ಎಂದು ಟೇಲರ್ ಹೇಳಿದ್ದಾರೆ.

‘ಅಂದು ತೆಗೆದುಕೊಂಡ ಕೊಕೇನ್ ನನ್ನನ್ನು ಬಹಳ ಕಾಡಿತ್ತು. ಅದರಿಂದಾಗಿ ಈಗಲೂ ಹೊಟ್ಟೆಯಲ್ಲಿ ತಳಮಳವಿದೆ. ಉದ್ಯಮಿ ಸೇರಿ ಆರು ಮಂದಿಯ ತಂಡ ನನ್ನನ್ನು ಸುತ್ತುವರಿದಿತ್ತು. ಅವರು ಹೇಳಿದಂತೆ ಕೇಳದೇ ಇದ್ದರೆ ಜೀವಕ್ಕೆ ಅಪಾಯವಿತ್ತು. ಆದರೆ ಅಂದಿನ ಆ ಘಟನೆ ನನ್ನ ವೃತ್ತಿಜೀವನವನ್ನೇ ಹಾಳುಮಾಡಿತು’ ಎಂದು ಕಳೆದ ವರ್ಷ ನಿವೃತ್ತಿ ಘೋಷಿಸಿರುವ 35 ವರ್ಷದ ಟೇಲರ್ ಹೇಳಿದ್ದಾರೆ. ಹರಾರೆಯಲ್ಲಿ ಜನಿಸಿದ ಆಟಗಾರ 205 ಏಕದಿನ, 34 ಟೆಸ್ಟ್ ಮತ್ತು 45 ಟ್ವೆಂಟಿ20 ಪಂದ್ಯಗಳನ್ನು ಆಡಿದ್ದಾರೆ.

ಪ್ರಶಸ್ತಿ ವಿಜೇತ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಸಂಭ್ರಮ: (ಮೊದಲ ಸಾಲು: ಎಡದಿಂದ) ಜಯಶ್ರೀ ಇ, ಫಿಜಮ್ ಅಂಜಲಿ ಚಾನು, ತಾನಿಯಾ ಕಾಂತಿ, ವುಂಗ್ಲಾಮ್ಚಿಂಗ್, ಪಿ. ಕಾವ್ಯಾ, ಐಶ್ವರ್ಯ ಎ, ಕ್ಷೇತ್ರಿಮಯುಮ್ ಮಾರ್ಗರೇಟ್ ದೇವಿ, ಫಿಜಾಮ್ ಆಶಿಲಾ ಚಾನು, ಸುಶ್ಮಿತಾ ಲೆಪ್ಚಾ ಮತ್ತು ರೂಪಾಲಿ ಚೌರಿ. (ಮಧ್ಯದ ಸಾಲು) ಮೊನಾಲಿಸಾ, ಆರುಷಿ ಸಂತೋಷ್, ಸಿಬಾನಿ ಶರ್ಮಾ, ಖುನುಮಯುಮ್ ನಿರ್ಮಲಾ ದೇವಿ, ಸಮುಂದೇಶ್ವರಿ, ಸೋನಿಯಾ ರಾಣಾ, ತನು, ಅಮೃತವರ್ಷಿಣಿ ಪಿ, ಫಂಜೌಬಮ್ ನಿರ್ಮಲಾ ದೇವಿ ಮತ್ತು ಜುಡಿತ್ ಸೋನಾಲಿ ಜಾನ್. (ಹಿಂದಿನ ಸಾಲು) ಬಿಮೋಲ್ ಬಾಲಾ, ಸರವಣ ಧರ್ಮನ್ ಡಿ (ಸಹಾಯಕ ಕೋಚ್), ಕೃಷ್ಣ ಕಾಳಿದಾಸನ್ (ಮುಖ್ಯ ಕೋಚ್), ಲಕ್ಷ್ಮಣ್ ಭಟ್ಟಾರೈ (ಮ್ಯಾನೇಜರ್), ರಘು ಕುಮಾರ್ ಮತ್ತು ಜೋನ್ಸ್ – ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿ. ಕಾವ್ಯಾ ಗಳಿಸಿದ ಎರಡು ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಮಹಿಳಾ ಲೀಗ್ ಫುಟ್‌ಬಾಲ್ ಟೂರ್ನಿಯ ಎರಡನೇ ಲೆಗ್ ಪಂದ್ಯದಲ್ಲಿ ಜಯ ಗಳಿಸಿತು.

ಟೂರ್ನಿಯುದ್ದಕ್ಕೂ ಅಮೋಘ ಸಾಮರ್ಥ್ಯ ತೋರುತ್ತ ಬಂದಿದ್ದ ಕಿಕ್‌ಸ್ಟಾರ್ಟ್ ಎಫ್‌ಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿತ್ತು. ಮಿಸಾಕ ಯುನೈಟೆಡ್ ರನ್ನರ್ ಅಪ್ ಆಗಿತ್ತು. ಟ್ರೋಫಿಗಾಗಿ ಎರಡು ಲೆಗ್ ಪಂದ್ಯಗಳನ್ನು ಆಡಿಸಲಾಗಿತ್ತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 3–1ರಿಂದ ಮಿಸಾಕ ಯುನೈಟೆಡ್ ತಂಡವನ್ನು ಸೋಲಿಸಿತು. ಕಾವ್ಯಾ 35 ಮತ್ತು 55ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ನಿರ್ಮಲಾ ದೇವಿ (16ನೇ ನಿಮಿಷ) ತಂಡದ ಜಯಕ್ಕೆ ಕಾಣಿಕೆ ನೀಡಿದರು.

ಮಿಸಾಕ ತಂಡದ ಪರ ಏಕೈಕ ಗೋಲನ್ನು ಲಾಲ್ ಬಿಯಾಕ್ ಡಿಕಿ (75ನೇ ನಿಮಿಷ) ಗಳಿಸಿದರು.

ಟೂರ್ನಿಯಲ್ಲಿ ಒಟ್ಟು 15 ಗೋಲು ದಾಖಲಿಸಿದ ಕಾವ್ಯಾ, ಲೀಗ್‌ನ ಶ್ರೇಷ್ಠ ಆಟಗಾರ್ತಿ ಗೌರವ ಗಳಿಸಿದರು. ಕಿಕ್‌ಸ್ಟಾರ್ಟ್ ಎಫ್‌ಸಿಯ ಸೋನಿಯಾ ರಾಣಾ ‘ಶ್ರೇಷ್ಠ ಡಿಫೆಂಡರ್’, ಮಿಸಾಕ ಯುನೈಟೆಡ್‌ನ ರಮ್ಮಾ ರಾಮ್‌ಜಿ ‘ಶ್ರೇಷ್ಠ ಮಿಡ್‌ಫೀಲ್ಡರ್’ ಮತ್ತು ಅದೇ ತಂಡದ ನೂರುಲ್ ಅಜುರಿನ್ ‘ಶ್ರೇಷ್ಠ ಗೋಲ್‌ಕೀಪರ್’ ಪುರಸ್ಕಾರ ಪಡೆದರು.

ಪ್ರಶಸ್ತಿ ವಿಜೇತ ಕಿಕ್‌ಸ್ಟಾರ್ಟ್ ಎಫ್‌ಸಿ ಮತ್ತು ರನ್ನರ್‌ಅಪ್ ಮಿಸಾಕ ಯುನೈಟೆಡ್ ತಂಡಗಳಿಗೆ ಕೆಎಸ್‌ಎಫ್‌ಎ ಅಧ್ಯಕ್ಷ, ಶಾಸಕ ಎನ್.ಎ. ಹ್ಯಾರಿಸ್ ಟ್ರೋಫಿ ವಿತರಿಸಿದರು.

ಈ ಸಂದರ್ಭದಲ್ಲಿ ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ ಎಂ. ಸತ್ಯನಾರಾಯಣ ಮತ್ತು ಡೆಪ್ಯುಟಿ ಪ್ರಧಾನ ಕಾರ್ಯದರ್ಶಿ ಅಸ್ಲಂ ಖಾನ್ ಹಾಜರಿದ್ದರು.

ಹಾರ್ದಿಕ್, ಜಡೇಜ ಹೆಸರು ಪ್ರಸ್ತಾಪಿಸಿದ ಕೋಚ್ ದ್ರಾವಿಡ್

ಸಮತೋಲನದ ತಂಡ ಅಗತ್ಯ

ರಾಹುಲ್ ದ್ರಾವಿಡ್

ಕೇಪ್‌ಟೌನ್ (ಪಿಟಿಐ): ಭಾರತದ ಏಕದಿನ ಕ್ರಿಕೆಟ್ ತಂಡವು ಸಮತೋಲನವನ್ನು ಹೊಂದಿಲ್ಲ ಎಂದು ಹೇಳಿರುವ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಹಾರ್ದಿಕ್ ಪಾಂಡ್ಯ ಮತ್ತು ರವೀಂದ್ರ ಜಡೇಜ ಅವರಂಥ ಆಟಗಾರರ ಅನುಪಸ್ಥಿತಿ ತಂಡವನ್ನು ಕಾಡುತ್ತಿದೆ ಎಂದು ಅಭಿಪ್ರಾಯಪಟ್ಟರು.

ದಕ್ಷಿಣ ಆಫ್ರಿಕಾ ಎದುರು ಭಾನುವಾರ ರಾತ್ರಿ ಕೊನೆಗೊಂಡ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ 0–3ರಿಂದ ಸೋತಿತ್ತು. ಪಂದ್ಯದ ನಂತರ ಮಾತನಾಡಿದ ದ್ರಾವಿಡ್ ‘ಆರು, ಏಳು ಮತ್ತು ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬಲ್ಲ ಆಲ್‌ರೌಂಡ್ ಆಟಗಾರರ ಪೈಕಿ ಕೆಲವರು ಈ ಸರಣಿಯಲ್ಲಿ ಆಡಲಿಲ್ಲ. ಮುಂದಿನ ಸರಣಿಗಳಿಗೆ ಅವರು ಲಭ್ಯ ಇರುತ್ತಾರೆ’ ಎಂದರು.

ಹಾರ್ದಿಕ್ ಪಾಂಡ್ಯ ಅವರು ಫಿಟ್‌ನೆಸ್ ಸಮಸ್ಯೆಯಿಂದ ಬಳಲುತ್ತಿದ್ದು ರವೀಂದ್ರ ಜಡೇಜ ಅವರಿಗೆ ಮೊಣಕಾಲಿನಲ್ಲಿ ನೋವು ಕಾಣಿಸಿಕೊಂಡ ಕಾರಣ ಈ ಸರಣಿಗೆ ತಂಡವನ್ನು ಆಯ್ಕೆ ಮಾಡುವಾಗ ಲಭ್ಯ ಇರಲಿಲ್ಲ.

‘ಹಾರ್ದಿಕ್ ಮತ್ತು ಜಡೇಜ ತಂಡಕ್ಕೆ ಮರಳಿದ ನಂತರ ತಂಡ ಬಲಿಷ್ಠವಾಗಲಿದೆ. ಆಗ ನಮ್ಮ ತಂತ್ರ ಮತ್ತು ಆಟದ ಶೈಲಿಯನ್ನು ಬದಲಿಸಿಕೊಳ್ಳಲು ಸಾಧ್ಯವಾಗಲಿದೆ’ ಎಂದ ಅವರು ‘ಈ ಸರಣಿಯಲ್ಲಿ ಕೆ.ಎಲ್. ರಾಹುಲ್ ತಮ್ಮ ನಾಯಕತ್ವದ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸಿದ್ದಾರೆ’ ಎಂದರು.

‘ಏಕದಿನ ಸರಣಿಯ ಮೂರೂ ಪಂದ್ಯಗಳಲ್ಲಿ ತಂಡ ಬ್ಯಾಟಿಂಗ್ ವೈಫಲ್ಯ ಕಂಡಿದೆ. 20 ಮತ್ತು 40ನೇ ಓವರ್‌ಗಳ ನಡುವೆ ಈ ಸಮಸ್ಯೆ ಹೆಚ್ಚಾಗಿ ಕಾಡಿದೆ. ಕೆಲವು ಕೆಟ್ಟ ಹೊಡೆತಗಳಿಗೆ ಕೈ ಹಾಕಿ ವಿಕೆಟ್ ಕಳೆದುಕೊಂಡಿದ್ದೇವೆ. ಅಂಥ ಲೋಪಗಳು ಕಾಣಿಸಿಕೊಳ್ಳದೇ ಇದ್ದಿದ್ದರೆ ತಂಡ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತಿತ್ತು’ ಎಂದು ದ್ರಾವಿಡ್ ನುಡಿದರು.

ಸ್ಮಿತ್ ಕೃತಜ್ಞತೆ: ಕೋವಿಡ್ ಆತಂಕದ ನಡುವೆಯೂ ಟೆಸ್ಟ್ ಮತ್ತು ಏಕದಿನ ಸರಣಿ ಯಶಸ್ವಿಯಾಗಲು ನೆರವಾದ ಬಿಸಿಸಿಐ ಮತ್ತು ಭಾರತದ ಆಟಗಾರರಿಗೆ ಕೃತಜ್ಞತೆಗಳು ಸಲ್ಲಬೇಕು ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ನಿರ್ದೇಶಕ ಗ್ರೇಮ್ ಸ್ಮಿತ್ ಹೇಳಿದ್ದಾರೆ.

ಸಂಭ್ರಮದ ಕ್ಷಣವೊಂದರಲ್ಲಿ ಭಾರತ ಏಕದಿನ ತಂಡದ ಆಟಗಾರರು – ಪಿಟಿಐ ಚಿತ್ರ

ಭಾರತ ಏಕದಿನ ತಂಡಕ್ಕೆ ದಂಡ

ನಿಗದಿತ ಅವಧಿಯೊಳಗೆ ಬೌಲಿಂಗ್ ಪೂರ್ಣಗೊಳಿಸದ ಭಾರತ ಏಕದಿನ ತಂಡದ ಮೇಲೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ದಂಡ ಹಾಕಿದೆ. ಕೊನೆಯ ಏಕದಿನ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಇನ್ನೂ ಎರಡು ಓವರ್ ಬಾಕಿ ಉಳಿದಿತ್ತು. ಆದ್ದರಿಂದ ಪಂದ್ಯದ ರೆಫರಿ ಆ್ಯಂಡಿ ಪೈಕ್ರಾಫ್ಟ್ ದಂಡ ವಿಧಿಸಲು ನಿರ್ಧರಿಸಿದರು.

ಫೀಲ್ಡ್ ಅಂಪೈರ್ ಮರಾಯಸ್ ಎರಾಸ್ಮಸ್ ಮತ್ತು ಬೋಂಗನಿ ಜೆಲೆ, ಮೂರನೇ ಅಂಪೈರ್ ಅಲಾವುದೀನ್ ಪಾಲೇಕರ್, ನಾಲ್ಕನೇ ಅಂಪೈರ್ ಅಡ್ರಿಯನ್ ಹೋಲ್ಡ್‌ಸ್ಟಾಕ್ ಅವರು ನಿಧಾನಗತಿಯ ಬೌಲಿಂಗ್ ವಿವರವನ್ನು ಗಮನಕ್ಕೆ ತಂದಿದ್ದರು.

ಮಗಳ ಚಿತ್ರ ಪ್ರಕಟಿಸಬೇಡಿ: ಕೊಹ್ಲಿ

ಒಂದು ವರ್ಷ ವಯಸ್ಸಿನ ಮಗಳು ವಮಿಕಾಳ ಚಿತ್ರ ಅಥವಾ ವಿಡಿಯೊವನ್ನು ಸಾಮಾಜಿಕ ತಾಣಗಳಲ್ಲಿ ಪೋಸ್ಟ್ ಮಾಡಬೇಡಿ ಎಂದು ಭಾರತ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ಮತ್ತು ಪತ್ನಿ, ನಟಿ ಅನುಷ್ಕಾ ಶರ್ಮಾ ಕೋರಿದ್ದಾರೆ. ಕೇಪ್‌ಟೌನ್‌ನಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಕೊಹ್ಲಿ ಅರ್ಧಶತಕ ಗಳಿಸಿದ ಸಂದರ್ಭದಲ್ಲಿ ಸಂಭ್ರಮಿಸಿದ ಅನುಷ್ಕಾ ಅವರು ಎತ್ತಿಕೊಂಡಿದ್ದ ವಮಿಕಾಳ ಚಿತ್ರ ಮತ್ತು ವಿಡಿಯೊ ತುಣುಕುಗಳು ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿದ್ದವು.

ಈ ಹಿನ್ನೆಲೆಯಲ್ಲಿ ಇನ್‌ಸ್ಟಾಗ್ರಾಮ್ ಪೋಸ್ಟ್ ಮಾಡಿರುವ ದಂಪತಿ ‘ಮಗಳ ಚಿತ್ರಗಳನ್ನು ಪ್ರಕಟಿಸಬೇಡಿ ಎಂದು ಈ ಹಿಂದೆಯೇ ಕೋರಿದ್ದೆವು. ಈಗ ಮತ್ತೆ ಮನವಿ ಮಾಡುತ್ತಿದ್ದೇವೆ. ದಯವಿಟ್ಟು ಆಕೆಯ ಚಿತ್ರಗಳು ಮತ್ತು ವಿಡಿಯೊವನ್ನು ಪೋಸ್ಟ್ ಮಾಡಬೇಡಿ. ಸಾಮಾಜಿಕ ತಾಣಗಳ ಬಗ್ಗೆ ತಿಳಿವಳಿಕೆ ಬಂದ ನಂತರ ಆಕೆಯೇ ಅವುಗಳನ್ನು ಬಳಸಲು ಶುರು ಮಾಡುತ್ತಾಳೆ ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಗೌರವ

2021ರಲ್ಲಿ ಭಾರತ ತಂಡವು ನಿರೀಕ್ಷಿತ ಸಾಮರ್ಥ್ಯ ತೋರುವಲ್ಲಿ ಸಾಧ್ಯವಾಗದಿದ್ದರೂ ಮಂದಾನ ಅವರ ರನ್ ಗಳಿಕೆ ಏರುಮುಖವಾಗಿತ್ತು.

ಸ್ಮೃತಿ ವರ್ಷದ ಆಟಗಾರ್ತಿ

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ವರ್ಷದ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ. 2021ನೇ ಸಾಲಿನಲ್ಲಿ ಎಲ್ಲ ಮಾದರಿಯ ಕ್ರಿಕೆಟ್‌ನಲ್ಲಿ ಗಳಿಸಿದ ರನ್ ಆಧಾರದಲ್ಲಿ ಅವರಿಗೆ ಈ ಗೌರವ ಸಂದಿದೆ.

ಐಸಿಸಿಯ ಉನ್ನತ ಗೌರವಕ್ಕೆ ಮಂದಾನ, ರಾಚೆಲ್ ಹೇಹೋ ಫ್ಲಿಂಟ್, ಟಾಮಿ ಬಿಮೊಂಟ್, ಲಿಜೆಲ್ಲಿ ಲೀ, ಗೇಬಿ ಲೆವಿಸ್ ನಾಮನಿರ್ದೇಶನಗೊಂಡಿದ್ದರು ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಮೃತಿ ಮಂದಾನ

ಭಾರತ ಟಿ20 ತಂಡದ ಉಪನಾಯಕಿ ಆಗಿರುವ ಮಂದಾನ, ಐಸಿಸಿ ಪ್ರಶಸ್ತಿ ಗೆದ್ದ ಭಾರತದ ಎರಡನೇ ಆಟಗಾರ್ತಿಯಾಗಿದ್ದಾರೆ. 2007ರಲ್ಲಿ ವೇಗಿ ಜೂಲನ್ ಗೋಸ್ವಾಮಿ ಅವರು ಶ್ರೇಯಕ್ಕೆ ಭಾಜನರಾಗಿದ್ದರು.

ನಿಗದಿತ ಓವರ್‌ಗಳ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆದಿದ್ದ ಸರಣಿಯಲ್ಲಿ ಭಾರತದ ಗೆಲುವಿನಲ್ಲಿ ಮಂದಾನ ಪ್ರಮುಖ ಪಾತ್ರ ವಹಿಸಿದ್ದರು. ಎರಡನೇ ಏಕದಿನದಲ್ಲಿ 158 ರನ್ ಗುರಿ ಬೆನ್ನತ್ತಿದ್ದಾಗ ಮಂದಾನ 80 ರನ್ ಗಳಿಸಿದ್ದರು. ಟ್ವೆಂಟಿ–20 ಸರಣಿಯ ಅಂತಿಮ ಪಂದ್ಯದಲ್ಲಿ ಅಜೇಯ 48 ರನ್ ಗಳಿಸಿ ಗೆಲುವಿನಲ್ಲಿ ಮುಖ್ಯ ಪಾತ್ರ ವಹಿಸಿದ್ದರು.

ಇಂಗ್ಲೆಂಡ್ ವಿರುದ್ಧ ಡ್ರಾದಲ್ಲಿ ಕೊನೆಗೊಂಡಿದ್ದ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಅವರು 78 ರನ್ ಗಳಿಸಿದ್ದರು. ಭಾರತ ತಂಡವು ಆಡಿದ್ದ ಮೊದಲ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಶತಕ ಬಾರಿಸುವ ಮೂಲಕ ಮಂದಾನ ಗಮನ ಸೆಳೆದಿದ್ದರು.

ಬಾಬರ್ ವರ್ಷದ ಏಕದಿನ ಆಟಗಾರ: ಪಾಕಿಸ್ತಾನ ತಂಡದ ಬಾಬರ್ ಆಜಂ ಅವರು ಐಸಿಸಿ ವರ್ಷದ ಏಕದಿನ ಆಟಗಾರ ಪುರಸ್ಕಾರ ಪಡೆದಿದ್ದರೆ, ದಕ್ಷಿಣ ಆಫ್ರಿಕಾದ ಮರಾಯಿಸ್ ಎರಾಸ್ಮಸ್ ಅವರು ವರ್ಷದ ಅಂಪೈರ್ ಗೌರವ ಪಡೆದಿದ್ದಾರೆ. 2016 ಹಾಗೂ 2017ರಲ್ಲೂ ಎರಾಸ್ಮಸ್ ಅವರಿಗೆ ಈ ಗೌರವ ಸಂದಿತ್ತು.

ರೂಟ್, ಶಾಹೀನ್ ಶಾ ಅಫ್ರಿದಿಗೆ ಗೌರವ: ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಜೊ ರೂಟ್ ಅವರು ವರ್ಷದ ಟೆಸ್ಟ್ ಆಟಗಾರ ಎನಿಸಿಕೊಂಡರು. ಭಾರತದ ರವಿಚಂದ್ರನ್ ಅಶ್ವಿನ್ ಸೇರಿದಂತೆ ಹಲವರನ್ನು ಅವರು ಹಿಂದಿಕ್ಕಿದರು.

ಪಾಕಿಸ್ತಾನದ ಎಡಗೈ ವೇಗಿ ಶಾಹೀನ್ ಶಾ ಅಫ್ರಿದಿ ಅವರು ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ಹೆಸರಿನಲ್ಲಿ ನೀಡುವ ‘ಐಸಿಸಿ ವರ್ಷದ ಪುರುಷ ಕ್ರಿಕೆಟಿಗ’ ಗೌರವ ಗಳಿಸಿದರು. ದಕ್ಷಿಣ ಆಫ್ರಿಕಾ ತಂಡದ ಆರಂಭಿಕ ಬ್ಯಾಟರ್ ಲಿಜೆಲ್ಲಿ ಲೀ ಅವರು ವರ್ಷದ ಏಕದಿನ ಆಟಗಾರ್ತಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಪ್ರೊ ಕಬಡ್ಡಿ: ಮಣಿಂದರ್ ‘ಸೂಪರ್’ ಆಟಕ್ಕೆ ಒಲಿದ ಜಯ

ಬೆಂಗಾಲ್, ಪುಣೇರಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತೊಮ್ಮೆ ‘ಸೂಪರ್’ ಆಟ ಪ್ರದರ್ಶಿಸಿದ ನಾಯಕ ಮಣಿಂದರ್ ಸಿಂಗ್ ಬೆಂಗಾಲ್ ವಾರಿಯರ್ಸ್‌ಗೆ ಜಯ ತಂದುಕೊಟ್ಟರು. ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್‌ನ ಸೋಮವಾರದ ಪಂದ್ಯದಲ್ಲಿ ಮಣಿಂದರ್ ಗಳಿಸಿದ 13 ಪಾಯಿಂಟ್‌ಗಳ ಬಲದಿಂದ ಬೆಂಗಾಲ್ 41–22ರಲ್ಲಿ ಜೈಪುರ್ ಪಿಂಕ್ ಪ್ಯಾಂಥರ್ಸ್ ಎದುರು ಜಯ ಗಳಿಸಿತು.

ಜೈಪುರ್ ತಂಡದ ಅರ್ಜುನ್ ದೇಶ್ವಾಲ್ ಕೂಡ ಸೂಪರ್ ಟೆನ್ ಸಾಧನೆ ಮಾಡಿದರು. ಆದರೆ ಇತರ ರೇಡರ್‌ಗಳಿಂದ ಮತ್ತು ಟ್ಯಾಕ್ಲಿಂಗ್ ವಿಭಾಗದಿಂದ ಅವರಿಗೆ ನಿರೀಕ್ಷೆಗೆ ತಕ್ಕ ಸಹಕಾರ ಸಿಗಲಿಲ್ಲ. ಬೆಂಗಾಲ್ ಆಲ್‌ರೌಂಡ್ ಆಟದ ಮೂಲಕ ಮಿಂಚಿತು. ಡಿಫೆನ್ಸ್ ವಿಭಾಗದ ರಣ್ ಸಿಂಗ್ 4 ಪಾಯಿಂಟ್ ಗಳಿಸಿದರೆ ವಿಶಾಲ್ ಮಾನೆ ಮತ್ತು ಅಬೋಜರ್ ಮಿಘಾನಿ ತಲಾ 2 ಪಾಯಿಂಟ್ ಕಲೆ ಹಾಕಿದರು.

ಜೈಪುರ್ ತಂಡ ದೀಪಕ್ ಹೂಡಾ ಅವರ ಅನುಪಸ್ಥಿತಿಯಲ್ಲಿ ಕಣಕ್ಕೆ ಇಳಿದಿತ್ತು. ಹೀಗಾಗಿ ರೇಡಿಂಗ್ ವಿಭಾಗದಲ್ಲಿ ಅರ್ಜುನ್ ದೇಶ್ವಾಲ್ ಅವರ ಜವಾಬ್ದಾರಿ ಹೆಚ್ಚಿತ್ತು. ಅವರು 3 ಬೋನಸ್ ಪಾಯಿಂಟ್ ಸೇರಿದಂತೆ 10 ಪಾಯಿಂಟ್ ಗಳಿಸಿದರು. ಅಮಿತ್ ನಗಾರ್ 6 ಪಾಯಿಂಟ್ ಕಲೆ ಹಾಕಿದರು. ಬೆಂಗಾಲ್ ಪರ ಮೊಹಮ್ಮದ್ ನಬಿಭಕ್ಷ್ 6 ಪಾಯಿಂಟ್ ಗಳಿಸಿದರೆ ಸುಕೇಶ್ ಹೆಗಡೆ 4 ಪಾಯಿಂಟ್ ಕಲೆ ಹಾಕಿದರು.

ರಾತ್ರಿ ನಡೆದ ಮತ್ತೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ 42–25ರಲ್ಲಿ ದಬಂಗ್ ಡೆಲ್ಲಿಯನ್ನು ಮಣಿಸಿತು. ಪುಣೇರಿ ಪರ ಮೋಹಿತ್ ಗೋಯತ್ 10 ಪಾಯಿಂಟ್ ಗಳಿಸಿದರು. ಅಸ್ಲಾಂ ಇನಾಮದಾರ್ 8, ನಿತಿನ್ ತೋಮರ್ ಮತ್ತು ಡಿಫೆಂಡರ್ ಸೋಮ್‌ವೀರ್ ತಲಾ 6 ಪಾಯಿಂಟ್ ಕಲೆ ಹಾಕಿದರು. ಡೆಲ್ಲಿ ತಂಡಕ್ಕಾಗಿ ಆಲ್‌ರೌಂಡರ್ ವಿಜಯ್ 8, ರೇಡರ್ ನೀರಜ್ ನರ್ವಾಲ್ 6, ಆಲ್‌ರೌಂಡರ್ ಸಂದೀಪ್ ನರ್ವಾಲ್ 5 ಪಾಯಿಂಟ್ಸ್ ಗಳಿಸಿದರು.

ಮಂಗಳವಾರ ಹರಿಯಾಣ ಸ್ಟೀಲರ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳು ಸೆಣಸಲಿವೆ. ರಾತ್ರಿ 7.30ಕ್ಕೆ ಪಂದ್ಯ ನಡೆಯಲಿದೆ.

ಕೋವಿಡ್: ಪಂದ್ಯಗಳ ಮರುನಿಗದಿ

‘ಎರಡು ತಂಡಗಳ ಕೆಲವು ಆಟಗಾರರಲ್ಲಿ ಕೋವಿಡ್ ಖಚಿತಪಟ್ಟ ಕಾರಣ ಆ ತಂಡಗಳು ತಾವಾಡುವ ಪಂದ್ಯಗಳಿಗೆ ಅಗತ್ಯವಿರುವ ಆಟಗಾರರನ್ನು ಕಣಕ್ಕಿಳಿಸುವುದು ಕಷ್ಟಕರವಾಗಿದೆ. ಆಟಗಾರರ ಆರೋಗ್ಯ ಮತ್ತು ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕೆಲವು ಪಂದ್ಯಗಳನ್ನು ಮರುನಿಗದಿ ಮಾಡಲಾಗಿದೆ’ ಎಂದು ಪ್ರೊ ಕಬಡ್ಡಿ ಲೀಗ್ ಆಯೋಜಕ ಕಂಪನಿ ಮಶಾಲ್ ಸ್ಪೋರ್ಟ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಕೋವಿಡ್ ಖಚಿತಪಟ್ಟಿರುವ ಆಟಗಾರರ ಪ್ರತ್ಯೇಕವಾಸಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದೂ ಪ್ರಕಟಣೆ ತಿಳಿಸಿದೆ.

ಮರು ನಿಗದಿಯಾಗಿರುವ ಪಂದ್ಯಗಳ ಪ್ರಕಾರ 25ರಿಂದ 28ರವರೆಗೆ ಪ್ರತಿದಿನ ಒಂದು ಪಂದ್ಯ ನಡೆಯಲಿದ್ದರೆ, 29 ಮತ್ತು 30ರಂದು ದಿನವೊಂದಕ್ಕೆ ಎರಡು ಪಂದ್ಯಗಳು ನಡೆಯಲಿವೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	14	8	5	1	46
ದಬಂಗ್ ಡೆಲ್ಲಿ	13	7	4	2	43
ಬೆಂಗಾಲ್ ವಾರಿಯರ್ಸ್	14	7	6	1	41
ಪಟ್ನಾ ಪೈರೇಟ್ಸ್	11	7	3	1	40
ಯುಪಿ ಯೋಧಾ	13	5	5	3	39
ಹರಿಯಾಣ ಸ್ಟೀಲರ್ಸ್	13	6	5	2	39
ಯು ಮುಂಬಾ	12	4	3	5	36
ಜೈಪುರ ಪಿಂಕ್ ಪ್ಯಾಂಥರ್ಸ್	13	5	6	2	35
ತಮಿಳ್ ತಲೈವಾಸ್	12	3	3	6	34
ಪುಣೇರಿ ಪಲ್ಟನ್	13	6	7	-	32
ಗುಜರಾತ್ ಜೈಂಟ್ಸ್	11	3	5	3	28
ತೆಲುಗು ಟೈಟನ್ಸ್	13	1	10	2	19

ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಏಷ್ಯಾಕಪ್ ಮಹಿಳಾ ಹಾಕಿ: ಸೆಮಿಗೆ ಭಾರತ

ಮಸ್ಕತ್ (ಪಿಟಿಐ): ಗುರ್ಜಿತ್ ಕೌರ್ ಗಳಿಸಿದ ಹ್ಯಾಟ್ರಿಕ್, ಮೋನಿಕಾ ಮತ್ತು ಜ್ಯೋತಿ ಗಳಿಸಿದ ತಲಾ ಎರಡು ಗೋಲುಗಳ ಬಲದಿಂದ ಭಾರತ ತಂಡವು ಏಷ್ಯಾಕಪ್ ಮಹಿಳಾ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು. ಇದರೊಂದಿಗೆ ಸೆಮಿಫೈನಲ್‌ಗೆ ತಲುಪಿತು.

ಸೋಮವಾರ ನಡೆದ ‘ಎ’ ಗುಂಪಿನ ಹಣಾಹಣಿಯಲ್ಲಿ ಭಾರತದ ಆಟಗಾರ್ತಿಯರು 9–1ರಿಂದ ಸಿಂಗಪುರ ತಂಡಕ್ಕೆ ಸೋಲುಣಿಸಿದರು.

ಗುರ್ಜಿತ್ 8, 37 ಮತ್ತು 48ನೇ ನಿಮಿಷಗಳಲ್ಲಿ ಕೈಚಳಕ ತೋರಿದರೆ, ಮೋನಿಕಾ (6 ಮತ್ತು 7ನೇ ನಿ.), ಜ್ಯೋತಿ (43, 58ನೇ ನಿ.) ಮಿಂಚಿದರು. ವಂದನಾ ಕಟಾರಿಯಾ (8ನೇ ನಿ.) ಮತ್ತು ಮರಿಯಾನ ಕುಜುರ್ (10ನೇ ನಿ.) ತಂಡದ ಪರ ತಲಾ ಒಂದು ಗೋಲು ಹೊಡೆದರು. 43ನೇ ನಿಮಿಷದಲ್ಲಿ ಸಿಂಗಪುರದ ತೊಹ್ ಲಿನ್ ಮಿನ್ ತಂಡದ ಏಕೈಕ ಗೋಲು ಹೊಡೆದರು.

ಬುಧವಾರ ನಾಲ್ಕರ ಘಟ್ಟದಲ್ಲಿ ಭಾರತ ತಂಡವು ಕೊರಿಯಾ ಸವಾಲು ಎದುರಿಸಲಿದೆ. ಮತ್ತೊಂದು ಪಂದ್ಯದಲ್ಲಿ ಮಲೇಷ್ಯಾ, ಚೀನಾ ತಂಡವನ್ನು ಎದುರಿಸಲಿದೆ.

ಗುರ್ಜಿತ್ ಕೌರ್ –ಪಿಟಿಐ ಸಂಗ್ರಹ ಚಿತ್ರ

ಒಗ್ಬೆಚೆ ಹ್ಯಾಟ್ರಿಕ್; ಎಚ್‌ಎಫ್‌ಸಿಗೆ ಜಯ

ವಾಸ್ಕೊ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎಂಟನೇ ಆವೃತ್ತಿಯಲ್ಲಿ ಅಮೋಘ ಸಾಧನೆ ಮಾಡುತ್ತಿರುವ ಬಾರ್ತೊಲೊಮೆ ಒಗ್ಬೆಚೆ ಸೋಮವಾರ ಮತ್ತೊಮ್ಮೆ ಮಿಂಚಿದರು. ಹ್ಯಾಟ್ರಿಕ್ ಸಾಧನೆ ಮಾಡಿದ ಅವರು ಹೈದರಾಬಾದ್ ಎಫ್‌ಸಿ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟರು.

ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹೈದರಾಬಾದ್ 4–0ಯಿಂದ ಎಸ್‌ಸಿ ಈಸ್ಟ್ ಬೆಂಗಾಲ್ ವಿರುದ್ಧ ಜಯ ಗಳಿಸಿತು. 22ನೇ ನಿಮಿಷದಲ್ಲಿ ಮೊದಲ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟ ಬಾರ್ತೊಲೊಮೆ 44 ಮತ್ತು 74ನೇ ನಿಮಿಷಗಳಲ್ಲೂ ಚೆಂಡನ್ನು ಗುರಿ ಮುಟ್ಟಿಸಿದರು. 45ನೇ ನಿಮಿಷದಲ್ಲಿ ಅನಿಕೇತ್ ಜಾಧವ್ ಗೋಲು ಗಳಿಸಿದರು.

ಈ ಗೆಲುವಿನೊಂದಿಗೆ ಹೈದರಾಬಾದ್ ಎಫ್‌ಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಮುಂಬೈಗೆ ನಾರ್ತ್‌ಈಸ್ಟ್ ಸವಾಲು: ಫತೋರ್ಡದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ಮತ್ತು ನಾರ್ತ್ ಈಸ್ಟ್ ಯುನೈಟೆಡ್ ಪಂದ್ಯಗಳು ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಇಂಗ್ಲೆಂಡ್‌ಗೆ ಮಣಿದ ವೆಸ್ಟ್ ಇಂಡೀಸ್

ಬ್ರಿಜ್‌ಟೌನ್ (ಎಪಿ): ಕೊನೆಯ ಓವರ್‌ನಲ್ಲಿ 28 ರನ್ ಕಬಳಿಸಿದರೂ ಗೆಲುವಿನ ದಡ ಸೇರಲು ವೆಸ್ಟ್ ಇಂಡೀಸ್ ತಂಡಕ್ಕೆ ಸಾಧ್ಯವಾಗಲಿಲ್ಲ. ಭಾನುವಾರ ರಾತ್ರಿ ಇಲ್ಲಿ ನಡೆದ ಇಂಗ್ಲೆಂಡ್ ಎದುರಿನ ಎರಡನೇ ಟ್ವೆಂಟಿ20 ಪಂದ್ಯದಲ್ಲಿ ತಂಡ ಒಂದು ರನ್‌ನಿಂದ ಸೋತಿತು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 8ಕ್ಕೆ 171 ರನ್ ಗಳಿಸಿತ್ತು. ಎದುರಾಳಿಗಳು 13 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 78 ರನ್ ಗಳಿಸಿದ್ದಾಗ ಇಂಗ್ಲೆಂಡ್ ಸುಲಭ ಗೆಲುವಿನ ಭರವಸೆಯಲ್ಲಿತ್ತು. ನಂತರ ಚೇತರಿಸಿಕೊಂಡ ವೆಸ್ಟ್ ಇಂಡೀಸ್ 111 ರನ್ ಗಳಿಸುವಷ್ಟರಲ್ಲಿ ಮತ್ತೊಂದು ವಿಕೆಟ್ ಕಳೆದುಕೊಂಡಿತು. ಆದರೂ ಪಟ್ಟುಬಿಡದ ಬಾಲಂಗೋಚಿಗಳ ಸಾಹಸದಿಂದ ದಿಟ್ಟ ಹೋರಾಟ ತೋರಿತು.

10ನೇ ಕ್ರಮಾಂಕದ ಬ್ಯಾಟರ್ ಅಕೀಲ್ ಹೊಸೇನ್ ಕೊನೆಯ ಮೂರು ಎಸೆತಗಳಲ್ಲಿ ಮೂರು ಸಿಕ್ಸರ್ ಸಿಡಿಸಿದರು. 16 ಎಸೆತಗಳಲ್ಲಿ 44 ರನ್ (3 ಬೌಂಡರಿ, 4 ಸಿಕ್ಸರ್) ಗಳಿಸಿ ಅವರು ಔಟಾಗದೆ ಉಳಿದರು. ಆಲ್‌ರೌಂಡರ್ ರೊಮಾರಿಯೊ ಶೆಫರ್ಡ್ 28 ಎಸೆತಗಳಲ್ಲಿ 44 ರನ್ (1 ಬೌಂ, 5 ಸಿ) ಗಳಿಸಿ ಅಜೇಯರಾಗಿ ಉಳಿದರು. ಅವರಿಬ್ಬರು 72 ರನ್ ಸೇರಿಸಿದರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಸೋಮವಾರ ನಡೆದ ಆರಂಭಿಕ ಸ್ಟಾಲ್ ಡ್ರಾ ನೈಟ್‌ನಲ್ಲಿ (ಎಡದಿಂದ) ಬಿಟಿಸಿ ಚೇರ್ಮನ್ ಕೆ. ಉದಯ್ ಈಶ್ವರನ್, ಚಿತ್ರನಟಿ ದೀಪಿಕಾ ದಾಸ್ ಮತ್ತು ಯುಬಿಎಲ್ ಗ್ರೂಪ್‌ನ ವಿಭಾಗ ವ್ಯವಸ್ಥಾಪಕ (ಕ್ರಾಫ್ಟ್ ಆ್ಯಂಡ್ ವೆರೈಟಿ) ಮನೀಷ್ ಖುರಾನಾ ಅವರು ‘ಕಿಂಗ್‌ಫಿಶರ್ ಅಲ್ಟ್ರಾ ಡರ್ಬಿ ಬೆಂಗಳೂರು ಟ್ರೋಫಿ’ಯನ್ನು ಅನಾವರಣಗೊಳಿಸಿದರು. ಡರ್ಬಿಯ ಒಟ್ಟು ಬಹುಮಾನ ಮೊತ್ತ ₹ 1 ಕೋಟಿ 39.35 ಲಕ್ಷ ಆಗಿದ್ದು, ಗಣರಾಜ್ಯೋತ್ಸವ ದಿನ ನಡೆಯಲಿದೆ. ಏಳು ಕುದುರೆಗಳು ಸ್ಪರ್ಧಿಸಲಿದ್ದು, ಜುಕರೆಲ್ಲಿ ‘ಫೇವರೀಟ್’ ಎನಿಸಿದೆ.

ಒಡಿಶಾ ಓಪನ್: ಸೈನಾ ಕಣಕ್ಕೆ

ಕಟಕ್ (ಪಿಟಿಐ): ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ, ಭಾರತದ ಸೈನಾ ನೆಹ್ವಾಲ್, ಮಂಗಳವಾರ ಆರಂಭವಾಗುವ ಒಡಿಶಾ ಓಪನ್ ಟೂರ್ನಿಯಲ್ಲಿ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಸೈನಾ ಅವರಿಗೆ ಅಗ್ರಶ್ರೇಯಾಂಕ ನೀಡಲಾಗಿದೆ. ಪರುಪಳ್ಳಿ ಕಶ್ಯಪ್ ಪುರುಷರ ಸಿಂಗಲ್ಸ್‌ನಲ್ಲಿ ಮೊದಲ ಶ್ರೇಯಾಂಕ ಪಡೆದಿದ್ದಾರೆ. ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ.

17 ದೇಶಗಳ 300ಕ್ಕೂ ಹೆಚ್ಚು ಬ್ಯಾಡ್ಮಿಂಟನ್ ಪಟುಗಳು ಭಾಗವಹಿಸಲಿದ್ದಾರೆ.

ಬೆಂಗಳೂರು ರೇಸ್

ಪ್ರೈಸ್‌ಲೆಸ್ ಗೋಲ್ಡ್ ಗೆಲ್ಲುವ ನಿರೀಕ್ಷೆ

148 ದಿ ಬೆಂಗಳೂರು ರೇಸ್ ಕೋರ್ಸ್ 159ನೇ ಸ್ಮರಣಾರ್ಥ ಟ್ರೋಫಿ

ಮಂಗಳವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಪ್ರೈಸ್‌ಲೆಸ್ ಗೋಲ್ಡ್ ಈ ರೇಸ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಆಂಟನೊರಿ 5, ಲವ್ 9, ರಾಯಲ್ ಥಂಡರ್ 4
2ನೇ ರೇಸ್: ಜೆನರಲ್ ಪ್ಯಾಟನ್ 1, ಸ್ಟೋನ್ ಹೌಸ್ 2, ಇಂಪೆಲ್ಲಿಂಗ್ ಪವರ್ 5
3ನೇ ರೇಸ್: ಪಿಂಕ್ ಜಾಸ್ಮೈನ್ 3, ಸ್ಯಾಕ್ರಮೆಂಟ್ 2, ಎಲೆಕ್ಟ್ರಿಕ್ ಬ್ಲೂ 5
4ನೇ ರೇಸ್: ಇಂಪೀರಿಯಲ್ ಪವರ್ 3, ಡಿಸ್ರಪ್ಟರ್ 1, ಫಾರೆಸ್ಟಿ 2
5ನೇ ರೇಸ್: ಟ್ರಾನ್‌ಕ್ವಿಲೊ 5, ಪ್ಲೇಸ್ ವೆಂಡೋಮ್ 9, ಸ್ಟಾರ್ ಗ್ಲೋರಿ 3
6ನೇ ರೇಸ್: ಪ್ರೈಸ್‌ಲೆಸ್ ಗೋಲ್ಡ್ 2, ನಾರ್ಥರನ್ ಅಲೈಯನ್ಸ್ 1
7ನೇ ರೇಸ್: ಗ್ಯಾರಮಾಂಡ್ 6, ಡ್ರಸಿಲ್ಲಾ 5, ಕ್ಯಾರಕಸ್ 8
8ನೇ ರೇಸ್: ಕಾಪರ್ ಸನ್‌ರೈಸ್ 8, ಕೇಪಬಲ್ 6, ಮಿನಿವರ್ ರೋಸ್ 1

ಉತ್ತಮ ಬೆಟ್: ಗ್ಯಾರಮಾಂಡ್

ಜಾಕ್‌ಪಾಟ್	1ನೇ ಟ್ರಿಬಲ್‌ಗೆ	2ನೇ ಟ್ರಿಬಲ್
4,5,6,7,8	3,4,5	6,7,8

ಚೆಸ್ ಟೂರ್ನಿ: ವಿದಿತ್‌ಗೆ ಗೆಲುವು

ವಿಜ್ಕ್ ಆನ್ ಜಿ, ನೆದರ್ಲೆಂಡ್ಸ್ (ಪಿಟಿಐ): ಭಾರತದ ವಿದಿತ್ ಸಂತೋಷ್ ಗುಜರಾತಿ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಗೆಲುವಿನ ಲಯಕ್ಕೆ ಮರಳಿದರು. ಆದರೆ ಆರ್. ಪ್ರಜ್ಞಾನಂದ ಮತ್ತೆ ನಿರಾಸೆ ಅನುಭವಿಸಿದರು.

ಏಳನೇ ಸುತ್ತಿನಲ್ಲಿ ಎಡವಿದ್ದ ವಿದಿತ್ ಅವರು ಎಂಟನೇ ಸುತ್ತಿನ ಪಂದ್ಯದಲ್ಲಿ ಸ್ವೀಡನ್‌ನ ನಿಲ್ಸ್ ಗ್ರ್ಯಾಂಡೆಲಿಯಸ್ ಅವರನ್ನು ಮಣಿಸಿದರು. ಪ್ರಜ್ಞಾನಂದ ಅವರು ಅಜರ್‌ಬೈಜಾನ್‌ನ ಶಖರಿಯಾರ್ ಮಮೆದ್ಯಾರೊವ್ ಎದುರು ಸೋಲು ಅನುಭವಿಸಿದರು.

ವಿದಿತ್ ಮತ್ತು ನೆದರ್ಲೆಂಡ್ಸ್‌ನ ಅನೀಶ್ ಗಿರಿ (ತಲಾ 5 ಪಾಯಿಂಟ್ಸ್) ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.